Visit us in **BANGALORE:** Vittal Mallya Road — VIDA EXPERIENCE CENTRE, 7428411021 | Bommanahalli — VIDA HUB RT KRISHNA AUTO, 8762865999 | Banashankari — SAI MOTORS, 7428412219 | J P Nagar — SAI MOTORS, 9035024284 | Kanakapura Main Road — SAI MOTORS, 8904677394 | Yeshwanthpur — SAI BIKES, 7428411869 | Nagarabhavi — SAI BIKES PREMIA, 7428412128 | Banaswadi Ring Road — BHAGATH MOTORS, 7428408355 | K R Puram — BHAGATH MOTORS, 9900349199 | Electronic City — RT KRISHNA AUTOS, 9865262136 | Rajajinagar — MAX MOTORS, 7428409766 | Magadi Main Road — POORNA MOTORS, 7428409953 | Lal Bagh Main Road — PRAKASH MOTORS, 7428410886 | Magadi Road — RT KRISHNA AUTOS, 8762058999 | Bellary Road — BIMAL MOTORS, 7428408801 | Singsandra — RT KRISHNA AUTOS PREMIA, 7428411368 | BTM Layout — V3S MOTORS, 9035007999 | **TUMKUR:** Sira Gate — SAI WHEELZ, 9289922986 | BH Road — SAI WHEELZ, 7676016623 | Kunigal — SAI WHEELZ, 9164972652 | Tiptur — SAI WHEELZ, 9164840456. **Certified range by Govt. certified agency. Real-world range of 110 km. Certified and Real-world range may vary depending on riding style, road/vehicle conditions, and vehicle models.

PHILIPS
Mixer Grinder
ಫಿಲಿಪ್ಸ್ ಮಿಕ್ಸರ್ ಗ್ರೈಂಡರನ್ನು ನಾವು ಶಿಫಾರಸು ಮಾಡುತ್ತಿಲ್ಲ.
ಶ್ರುತಿ ಶಿಫಾರಸು ಮಾಡುತ್ತಿದ್ದಾರೆ.
ಗೆಲ್ಲಿರಿ ಕ್ಯಾಶ್‌ಬ್ಯಾಕ್ ₹5000* ದವರೆಗೆ
ಶ್ರುತಿ
★★★★★
HL7778 ನಿಮ್ಮದಾಗಿಸಿಕೊಳ್ಳಿ !!
ನಾನು ಈವರೆಗೆ ಖರೀದಿಸಿರುವ ಅತ್ಯಂತ ಪವರ್‌ಫುಲ್ ಮಿಕ್ಸರ್‌ಗಳ ಪೈಕಿ ಇದೊಂದಾಗಿದೆ!! ಇದರ ಎರಡೇ ಪಲ್ಸ್‌ಗಳಲ್ಲಿ ನೀವು ಟೊಮ್ಯಾಟೊಗಳನ್ನು ನುಣ್ಣಗೆ ಅರೆಯಬಹುದಾಗಿದೆ. ಅಲ್ಲದೆ, ಇದು ತುಂಬ ಶಬ್ದ ಉಂಟುಮಾಡುವುದಿಲ್ಲ !! ನಾನು ಇದನ್ನು ಖರೀದಿಸಿ ನಿಜಕ್ಕೂ ತುಂಬ ಸಂತುಷ್ಟಳಾಗಿದ್ದೇನೆ. ನೀವು ಕಣ್ಣುಮುಚ್ಚಿ HL7778 ಖರೀದಿಸಬಹುದಾಗಿದೆ.
70 ಲಕ್ಷ ಭಾರತೀಯ ಮನೆಗಳಲ್ಲಿ ಫಿಲಿಪ್ಸ್ ಮಿಕ್ಸರ್ ಗ್ರೈಂಡರ್ ಪ್ರೀತಿಪಾತ್ರವಾಗಿದೆ. ನೀವೇತಕ್ಕೆ ಕಾಯುತ್ತಿದ್ದೀರಿ?
ಆಧುನಿಕ ಡಿಸೈನ್
ಗಂಟುಗಂಟಾಗಿರದ ಗ್ರೈಂಡಿಂಗ್
5 ವರ್ಷಗಳು ಮೋಟರ್ ಮೇಲೆ 5 ವರ್ಷಗಳ ವಾರಂಟಿ
215 ಮಾನದಂಡಗಳ ಅಂತರ್ಗತ ಪರೀಕ್ಷೆಸಲಾಗಿದೆ
ಟೋಲ್‌ಫ್ರೀ ನಂ. 1800 572 1800
ಎಲ್ಲ ಅಗ್ರಣಿ ಅಪ್ಲಾಯನ್ಸ್ ಸ್ಟೋರ್‌ಗಳಲ್ಲಿ ದೊರೆಯುತ್ತದೆ
ಸ್ಕ್ಯಾನ್ ಮಾಡಿ
@philipshomelivingindia
@philipshomelivingindia
@smartcookingbyphilips
www.domesticappliances.philips.co.in

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561 203

ದೂರವಾಣಿ : 080-29562046

ಸಂಖ್ಯೆ: DPA/TP/CLU/20/2024-25 ದಿನಾಂಕ:08.08.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ	ವಿಸ್ತೀರ್ಣ (ಎ-ಗು)	ಬೆಂ.ಅ.ರಾ.ವಿ.ನಿ.ಪ್ರ. ಯೋ.ಪ್ರಾಧಿಕಾರದ ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಪಿ.ಶ್ರೀನಿವಾಸ್ ಬಿನ್ ಪಿ.ರಾಮಕೃಷ್ಣ	ಯಲಹಂಕ	ಹೆಸರಘಟ್ಟ	ಶ್ಯಾನುಭೋಗನಹಳ್ಳಿ	88/6	0–01	ವ್ಯವಸಾಯ	ವಸತಿ
2.	ಶ್ರೀ ಎಲ್.ವೇಣು ಗೋಪಾಲ್ ರೆಡ್ಡಿ ಬಿನ್ ಅಯ್ಯಪ್ಪರೆಡ್ಡಿ	ಯಲಹಂಕ	ಹೆಸರಘಟ್ಟ	ಶ್ಯಾನುಭೋಗನಹಳ್ಳಿ	88/7	0–02.25	ವ್ಯವಸಾಯ	ವಸತಿ
3.	ಶ್ರೀಮತಿ ಬಂಡಾರು ಧನಲಕ್ಷ್ಮೀ ಕೋಂ ಬಂಡಾರು ರಾಮಬಾಬು	ಯಲಹಂಕ	ಹೆಸರಘಟ್ಟ	ಶ್ಯಾನುಭೋಗನಹಳ್ಳಿ	88/8	0–03.25	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ಭೂ ಉಪಯೋಗ ಬದಲಾವಣೆ ಮಾಡಿಸಿ ಅಭಿವೃದ್ಧಿಪಡಿಸಲು ಸ್ವಯಂ ಇಚ್ಛಿಸಿದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದ್ದು, ಸದರಿ ಬಡಾವಣೆಯ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ ಮೂಲಭೂತ ವಸತಿ ಬೇಡಿಕೆಗಳನ್ನು ಪೂರೈಸುವ ಕಾರ್ಯ ಹಾಗೂ ಬಡಾವಣೆಯ ಮೂಲಭೂತ ಸೌಕರ್ಯ ಚಟುವಟಿಕೆಯಿಂದಾಗಿ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

'ಸಿಎಂ ವಿರುದ್ಧದ ಷಡ್ಯಂತ್ರ ವಿಫಲಗೊಳಿಸಿ'

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪುರೋಹಿತಶಾಹಿಗಳ ಕುಟಿಲ ತಂತ್ರ-ಗಾರಿಕೆಗಳನ್ನು ರಾಜ್ಯದ ಜನರು ವಿಫಲಗೊಳಿಸಬೇಕು ಎಂದು ಚಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ ಕರೆ ನೀಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಡಾ ಹಗರಣದ ಬಗ್ಗೆ ತನಿಖೆ ನಡೆಸಲು ಪಿ.ಎನ್. ದೇಸಾಯಿ ನೇತೃತ್ವದ ತನಿಖಾ ಆಯೋಗ ರಚಿಸಲಾಗಿದೆ. ಈ ಆಯೋಗ ರಚಿಸಿರುವುದಕ್ಕೆ ರಾಜ್ಯಪಾಲರಿಗೆ ಅಸಮಾಧಾನವಿದ್ದರೆ ಅದನ್ನು ಬಗೆಹರಿಸಿಕೊಳ್ಳಬಹುದಿತ್ತು' ಎಂದರು.

ವಿಜೇತರು

ರಾಜ್ಯಮಟ್ಟದ ಅಂತರ್‌ಶಾಲಾ ಚರ್ಚಾಸ್ಪರ್ಧೆ 'ವರ್ಬ್ಯಾಟಲ್'ನ 20ನೇ ಆವೃತ್ತಿಯ ಫೈನಲ್ ಸ್ಪರ್ಧೆ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ₹1 ಲಕ್ಷ ನಗದು ಬಹುಮಾನ ನೀಡಲಾಯಿತು. ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್, ವರ್ಬ್ಯಾಟಲ್ ರೂವಾರಿ ದೀಪಕ್ ತಿಮ್ಮಯ್ಯ, ಪತ್ರಕರ್ತ ಹನುಮೇಶ್ ಕೆ. ಯಾವಗಲ್, ಟಿವಿ ಹೌಸ್ ಸಂಸ್ಥೆ ಮುಖ್ಯಸ್ಥ ವಿನಾಯಕ ರಾಮಕೃಷ್ಣ ಉಪಸ್ಥಿತರಿದ್ದರು.

ದೂರಸಂವಹನ ಇಲಾಖೆ
ಸಂವಹನಗಳ ಸಚಿವಾಲಯ
ಭಾರತ ಸರ್ಕಾರ

सत्यमेव जयते

ಪಂಡಿತ್ ದೀನದಯಾಳ್ ಉಪಾಧ್ಯಾಯ ಟೆಲಿಕಾಂ ಎಕ್ಸಲೆನ್ಸ್ ಅವಾರ್ಡ್ 2024 ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ದೂರಸಂವಹನ ಇಲಾಖೆ (ಸಂವಹನಗಳ ಸಚಿವಾಲಯ, ಭಾರತ ಸರ್ಕಾರ) ಇವರು, ಕಳೆದ 3 ವರ್ಷಗಳಲ್ಲಿ ದೂರಸಂವಹನ ಆವಿಷ್ಕಾರ, ಕೌಶಲ್ಯ, ಸೇವೆಗಳು, ಉತ್ಪಾದನಾ ಕ್ಷೇತ್ರಗಳಲ್ಲಿ ಮತ್ತು ಕೃಷಿ, ವಾಣಿಜ್ಯ, ಆರೋಗ್ಯ, ಶಿಕ್ಷಣ ಮುಂತಾದ ವಿಭಿನ್ನ ಕ್ಷೇತ್ರಗಳಲ್ಲಿ ದೂರಸಂವಹನ ಆಧಾರಿತ ಕ್ಷೇತ್ರಿಯ ಪರಿಹಾರಕ್ಕಾಗಿ ತಂತ್ರಾಂಶಗಳ ಅಳವಡಿಕೆ ಕ್ಷೇತ್ರದಲ್ಲಿ ಗಮನಾರ್ಹ ಮತ್ತು ಅಸಾಧಾರಣ ಕೊಡುಗೆಗಳನ್ನು ನೀಡಿರುವ ಭಾರತದ ನಾಗರಿಕರಿಂದ ಮತ್ತು ಭಾರತದಲ್ಲಿ ನೋಂದಣಿ ಆಗಿರುವ ಅಥವಾ ಕೇಂದ್ರ/ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳಿಂದ ರೂಪಿಸಲ್ಪಟ್ಟಿರುವ ಸಂಘ/ಸಂಸ್ಥೆಗಳಿಂದ **ಪಂಡಿತ್ ದೀನದಯಾಳ್ ಉಪಾಧ್ಯಾಯ ಟೆಲಿಕಾಂ ಎಕ್ಸಲೆನ್ಸ್ ಅವಾರ್ಡ್ 2024 ಪ್ರಶಸ್ತಿಗಾಗಿ** ಆನ್‌ಲೈನ್ ನಾಮನಿರ್ದೇಶನಗಳನ್ನು ಆಹ್ವಾನಿಸಿದ್ದಾರೆ.

2. ಪ್ರತಿಯೊಂದು ಪ್ರಶಸ್ತಿಯಲ್ಲಿ ತಲಾ ಒಂದು ಶಾಲು, ಪ್ರಮಾಣಪತ್ರ/ಸ್ಮರಣಿಕೆ ಮತ್ತು ತಲಾ ಪ್ರಶಸ್ತಿಗೆ ಎರಡು ಲಕ್ಷ ರೂಪಾಯಿ ನಗದು ಬಹುಮಾನ. ಪ್ರಶಸ್ತಿ ಸಮಿತಿಯಿಂದ ಆಯ್ಕೆಗೊಳ್ಳುವ ಸೂಕ್ತ ಅಭ್ಯರ್ಥಿಗಳ ನಿಬಂಧನೆಯ ಮೇರೆಗೆ, ಐದಕ್ಕಿಂತ ಹೆಚ್ಚು ಪ್ರಶಸ್ತಿಗಳನ್ನು ನೀಡಲಾಗುವುದಿಲ್ಲ.
3. ಪ್ರಶಸ್ತಿ ವಿಜೇತರು ತಮ್ಮ ಸ್ಥಳದಿಂದ ಪ್ರಶಸ್ತಿ ಪ್ರದಾನ ಮಾಡಲಾಗುವ ನಿಲ್ದಾಣದವರೆಗಿನ ತಮ್ಮ ಹೋಗಿ ಬರುವ ವಿಮಾನ ಪ್ರಯಾಣ ವೆಚ್ಚವನ್ನು ರಿಇಂಬರ್ಸ್ ಪಡೆದುಕೊಳ್ಳಬಹುದು ಮತ್ತು ಸಾಂದರ್ಭಿಕ ಖರ್ಚು ವೆಚ್ಚಗಳಿಗಾಗಿ ಒಟ್ಟಾರೆ ರೂ. 7500/– ಕೂಡ ಪಾವತಿಸಲಾಗುತ್ತದೆ.
4. **ರಾಷ್ಟ್ರೀಯ ಪ್ರಶಸ್ತಿ ಪೋರ್ಟಲ್ https://www.awards.gov.in ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.** ನಾಮನಿರ್ದೇಶನಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 30ನೇ ಸೆಪ್ಟಂಬರ್, 2024 ರಂದು 2359 ಗಂಟೆ ಆಗಿರುತ್ತದೆ.
5. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು https://www.awards.gov.in ವೆಬ್‌ಸೈಟ್‌ನಲ್ಲಿರುವ 'ರೆಗ್ಯುಲೇಶನ್ಸ್' ಲಿಂಕ್ ಪರಿಶೀಲಿಸಿರಿ.

ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಸಂಪರ್ಕಿಸಿ:
ನಿರ್ದೇಶಕರು (ಎಸ್‌ಡಿ&ಇ), ಡಿಒಟಿ, ಕೊಠಡಿ ನಂ. 216, 2ನೇ ಮಹಡಿ, ಮಹಾನಗರ ದೂರಸಂಚಾರ ಭವನ, ಜವಾಹರಲಾಲ್ ನೆಹರೂ ಮಾರ್ಗ, ಹಳೆ ಮಿಂಟೋ ರಸ್ತೆ, ನವದೆಹಲಿ–110002.
ಮೊಬೈಲ್: 9868114666, ಇಮೇಲ್: dirsde-dot@gov.in

CBC 06201/11/0004/2425

ವೈಟ್ ಟಾಪಿಂಗ್ ಕಾಮಗಾರಿ ಸಂಚಾರ ಮಾರ್ಗ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌.ಟಿ. ನಗರ ಮುಖ್ಯ-ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಸಲು ಉದ್ದೇಶಿಸಲಾಗಿದ್ದು ರವೀಂದ್ರನಾಥ್ ಟ್ಯಾಗೋರ್ ವೃತ್ತದಿಂದ (ಗುಂಡೂರಾವ್ ಜಂಕ್ಷನ್) ಆರ್‌ಟಿ ನಗರ ಮುಖ್ಯರಸ್ತೆಗೆ ಸಂಚಾರ ನಿರ್ಬಂಧಿಸಲಾಗಿದೆ. ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ.

- ಜಯಮಹಲ್ ಮುಖ್ಯರಸ್ತೆಯಿಂದ ಆರ್‌.ಟಿ. ನಗರ ಮುಖ್ಯರಸ್ತೆ ಹಾಗೂ ಸಿಬಿಐ ಮುಖ್ಯರಸ್ತೆಗೆ ಚಲಿಸುವ ಬಿಎಂಟಿಸಿ ಬಸ್‌ಗಳು ಸಿಕ್ಯೂಎಎಲ್ ಕ್ರಾಸ್ ಮೂಲಕ ಮೇಕ್ರಿ ವೃತ್ತದಲ್ಲಿ ಬಲಕ್ಕೆ ತಿರುವು ಪಡೆದುಕೊಳ್ಳಬೇಕು. ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರಸ್ತೆಯಿಂದ ಸಿಬಿಐ ಕೆಳಸೇತುವೆ ಬಳಿ ಮತ್ತೆ ಬಲಕ್ಕೆ ತಿರುವು ಪಡೆದು ಆರ್‌.ಟಿ. ನಗರ ಮುಖ್ಯರಸ್ತೆ ಹಾಗೂ ಸಿಬಿಐ ಮುಖ್ಯರಸ್ತೆಗೆ ಸಂಚರಿಸಬಹುದಾಗಿದೆ.
- ಜಯಮಹಲ್ ಮುಖ್ಯರಸ್ತೆಯಿಂದ ಕಾವಲ್ ಬೈರಸಂದ್ರ ಹಾಗೂ ಸುಲ್ತಾನ್‌ಪಾಳ್ಯ ಕಡೆಗೆ ಚಲಿಸುವ ವಾಹನಗಳು ಸಿಕ್ಯೂಎಎಲ್ ಕ್ರಾಸ್ ಬಳಿ ಬಲಕ್ಕೆ ತಿರುವು ಪಡೆದುಕೊಂಡು ವಾಟರ್‌ಟ್ಯಾಂಕ್ ಜಂಕ್ಷನ್ ಕಡೆಯಿಂದ ದೇವೇಗೌಡ ರಸ್ತೆಯ(ಪಿ. ಆರ್‌.ಟಿ.ಸಿ) ಮೂಲಕ ದಿಣ್ಣೂರು ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದುಕೊಂಡು ಸುಲ್ತಾನ್‌ಪಾಳ್ಯ ಹಾಗೂ ಕಾವಲ್‌ಬೈರಸಂದ್ರ ಕಡೆಗೆ ಚಲಿಸಬಹುದು.
- ವಾಟರ್‌ಟ್ಯಾಂಕ್ ಜಂಕ್ಷನ್, ರಾಧಾಕೃಷ್ಣ ಚಿತ್ರಮಂದಿರ ಹಾಗೂ ಮಠದಹಳ್ಳಿ ಕಡೆಯಿಂದ ಆರ್‌.ಟಿ. ನಗರ ಮುಖ್ಯರಸ್ತೆ ಹಾಗೂ ಸಿಬಿಐ ಮುಖ್ಯರಸ್ತೆಗೆ ಚಲಿಸುವ ಇತರೆ ವಾಹನಗಳು ರವೀಂದ್ರನಾಥ್ ಟ್ಯಾಗೋರ್ ವೃತ್ತದಿಂದ (ಗುಂಡೂರಾವ್ ಜಂಕ್ಷನ್) ಬಳಿ ಎಡ ತಿರುವು ಪಡೆದು ತರಳಬಾಳು ರಸ್ತೆ ಮೂಲಕ ಬಳ್ಳಾರಿ ಮುಖ್ಯರಸ್ತೆಗೆ ಬಂದು ಎಡ ತಿರುವು ಪಡೆದುಕೊಳ್ಳಬೇಕು. ನಂತರ, ಮೇಕ್ರಿ ವೃತ್ತದ ಬಳಿ ಯು–ಟರ್ನ್ ಪಡೆದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರಸ್ತೆಯಿಂದ ಸಿಬಿಐ ಕೆಳಸೇತುವೆ ಬಳಿ ಬಲಕ್ಕೆ ತಿರುವು ಪಡೆದುಕೊಂಡು ಆರ್‌ಟಿ ನಗರ ಮುಖ್ಯರಸ್ತೆ ಹಾಗೂ ಸಿಬಿಐ ಮುಖ್ಯರಸ್ತೆಗೆ ಸಂಚರಿಸಬಹುದು ಎಂದು ನಗರ ಸಂಚಾರ ಪೊಲೀಸರು ತಿಳಿಸಿದ್ದಾರೆ.

ಟಿಮ್‌ಕೆನ್ ಇಂಡಿಯಾ ನಿಯಮಿತ

TIMKEN

CIN - L29130KA1996PLC048230

ನೋಂದಣಿ ಕಛೇರಿ: 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100
ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ-ಮೇಲ್ : tilinvestor@timken.com ವೆಬ್‌ಸೈಟ್ : www.timken.com/en-in

ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಜೂನ್ 30, 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ. ದಶಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	30/06/2024 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	30/06/2023 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	31/03/2024 ಕ್ಕೆ ಕೊನೆಗೊಂಡ ವಾರ್ಷಿಕ (ಪರಿಶೋಧಿತವಾದ)
1.	ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ)	7,956.02	7,269.29	29,503.06
2.	ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ)	1,298.31	1,228.12	5,242.14
3.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ)	1,298.31	1,228.12	5,242.14
4.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ)	963.05	901.37	3,921.42
5.	ಈ ಅವಧಿಯ ಒಟ್ಟು ಸಮಗ್ರ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆ ನಂತರ)}	956.13	888.37	3,913.76
6.	ಈಕ್ವಿಟಿ ಷೇರು ಬಂಡವಾಳ	752.19	752.19	752.19
7.	ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/– ರಂತೆ) (ನಿರಂತರ ಕಾರ್ಯಾಚರಣೆಗಳಿಗೆ) ಮೂಲತವಾದ ಮತ್ತು ದುರ್ಬಲಗೊಳಿಸಿದ *ವಾರ್ಷಿಕವಲ್ಲದ	12.80*	11.98*	52.13

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕದ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com) ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿ ವೀಕ್ಷಿಸಬಹುದು.

ಮಂಡಳಿಯ ಆದೇಶದಂತೆ
ಸಹಿ/– ಸಂಜಯ್ ಕೌಲ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN : 05159352

8 ಆಗಸ್ಟ್, 2024

AstraZeneca
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್

CIN: L24231KA1979PLC003563
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560045
ದೂ.: +91 80 6774 8000. ವೆಬ್: www.astrazeneca.com/india

30ನೇ ಜೂನ್ 2024ಕ್ಕೆ ಕೊನೆಗೊಂಡ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಹೇಳಿಕೆ

ರೂ. ಮಿಲಿಯನ್‌ಗಳಲ್ಲಿ (ಪ್ರತಿ ಷೇರಿನ ಗಳಿಕೆಯ ಡೇಟಾ ಹೊರತುಪಡಿಸಿ)

ಕ್ರ. ಸಂ.	ವಿವರಗಳು	30/06/2024ಕ್ಕೆ ಕೊನೆಗೊಂಡ 3 ತಿಂಗಳಿಗೆ	30/06/2023ಕ್ಕೆ ಕೊನೆಗೊಂಡ 3 ತಿಂಗಳಿಗೆ ಹಿಂದಿನ ಅವಧಿಯಂತೆ	31/03/2024ಕ್ಕೆ ವರ್ಷಕ್ಕೆ ಕೊನೆಗೊಂಡ
		ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	3,958.7	3,035.7	13,303.3
2	ತೆರಿಗೆಗೆ ಮುನ್ನ ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	(151.6)	714.0	2,195.4
3	ತೆರಿಗೆ ಕಳೆದು, ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	(117.9)	538.6	1,615.1
4	ತೆರಿಗೆ ಕಳೆದು, ಅವಧಿಗೆ ಸಮಗ್ರ ಆದಾಯ	(110.5)	543.2	1,625.1
5	ಈಕ್ವಿಟಿ ಷೇರು ಬಂಡವಾಳ	50.0	50.0	50.0
6	ಇತರ ಈಕ್ವಿಟಿ	–	–	7,069.2
7	ಪ್ರತಿ ಷೇರಿಗೆ ಮೂಲ ಮತ್ತು ಡೈಲ್ಯೂಟೆಡ್ ಗಳಿಕೆ (ತಲಾ 2 ರೂ.ನಂತೆ)	(4.72)	21.54	64.60

ಟಿಪ್ಪಣಿ:

1. ಮೇಲಿನದು 2015 ರ ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಾವಳಿ 33 ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜುಗಳಿಗೆ ಸಲ್ಲಿಸಲಾದ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ವಿವರವಾದ ಹೇಳಿಕೆಗಳ ಸಾರವಾಗಿದೆ. ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಪೂರ್ಣ ಹೇಳಿಕೆ ಸ್ಟಾಕ್ ಎಕ್ಸ್‌ಚೇಂಜುಗಳ www.nseindia.com ಮತ್ತು www.bseindia.com ಮತ್ತು ಕಂಪನಿಯ www.astrazeneca.com/india ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ.
2. ಕಂಪನಿಗಳ ಕಾಯಿದೆ, 2013 [ಕಂಪನಿಗಳ (ಭಾರತೀಯ ಲೆಕ್ಕಪರಿಶೋಧಕ ಮಾನದಂಡಗಳು) ನಿಯಮಗಳು, 2015 (ತಿದ್ದುಪಡಿಮಾಡಿದಂತೆ)] ರ ಸೆಕ್ಷನ್ 133 ಅಡಿಯಲ್ಲಿ ಸೂಚಿಸಿರುವಂತಹ ಮತ್ತು ಅನ್ವಯವಾಗುವಂತಹ ಭಾರತೀಯ ಲೆಕ್ಕಪರಿಶೋಧಕ ಮಾನದಂಡಗಳು ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಇತರ ಲೆಕ್ಕಪತ್ರ ತತ್ವಗಳ ಅನುಸಾರ ಅಪರಿಶೋಧಿತ ಹಣಕಾಸು ಫಲಿತಾಂಶಗಳ ಹೇಳಿಕೆಗಳನ್ನು ಸಿದ್ಧಪಡಿಸಲಾಗಿದೆ.
3. ಈ ಹಿಂದೆ ಕಂಪನಿಯು 16 ನವೆಂಬರ್ 2023 ರಂದು ತನ್ನ ಉತ್ಪಾದನಾ ನಿವೇಶನದಿಂದ ನಿರ್ಗಮಿಸುವ ಇಂಗಿತವನ್ನು ಪ್ರಕಟಿಸಿತ್ತು. ಅದರ ಮುಂದುವರಿಕೆಯಾಗಿ ಕಂಪನಿಯು ಉತ್ಪಾದನಾ ನಿವೇಶನವನ್ನು, ಸಂಪೂರ್ಣ ಕಾರ್ಯಾಚರಣೆಯಾಗುತ್ತಿರುವಂತೆಯೇ, ಒಂದು ಕಾಂಟ್ರ್ಯಾಕ್ಟ್ ಮ್ಯಾನುಫ್ಯಾಕ್ಚರಿಂಗ್ ಆರ್ಗನೈಸೇಷನ್‌ಗೆ ಮಾರಾಟ ಮಾಡುವ ಆಯ್ಕೆಯನ್ನು ಅನ್ವೇಷಿಸಿತು. ಕಂಪನಿಗೆ ಸೂಕ್ತವಾದ ಆಯ್ಕೆ ಸಿಗಲಿಲ್ಲ. ಈಗ 21 ಜೂನ್ 2024 ರಂದು ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಒಂದು ಪ್ರಕಟಣೆ ನೀಡಿ ಮ್ಯಾನುಫ್ಯಾಕ್ಚರಿಂಗ್ ನಿವೇಶನಕ್ಕೆ ಒಬ್ಬ ಖರೀದಿದಾರರನ್ನು ಹುಡುಕಿ ಕಾಲಾನುಕ್ರಮದಲ್ಲಿ ನಿರ್ಗಮಿಸುವುದಾಗಿ ತಿಳಿಸಿದೆ. ನಿರ್ಗಮನಕ್ಕೆ 12 ತಿಂಗಳುಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಎಂದು ಅಂದಾಜಿಸಲಾಗಿದೆ. ಪರಿಣಾಮವಾಗಿ, ಸಂಬಂಧಪಟ್ಟ ಭಾರತೀಯ ಲೆಕ್ಕಪರಿಶೋಧಕ ಮಾನದಂಡಗಳ ಪ್ರಕಾರ, ತನ್ನ ಉತ್ಪಾದನಾ ನಿವೇಶನದ ಮುಚ್ಚುವಿಕೆಗೆ ಸಂಬಂಧಿಸಿದಂತೆ 30 ಜೂನ್ 2024 ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ 575.6 ಮಿಲಿಯನ್ ರೂಗಳ ಮೊತ್ತದ ಪ್ರಾವಿಷನ್ ಅನ್ನು ಅಸಾಧಾರಣ ಐಟಂ ಎಂದು ತೋರಿಸಿದೆ.
4. ಕಂಪನಿಯು ಪ್ರಸ್ತುತ ತ್ರೈಮಾಸಿಕದಿಂದ: ಹಣಕಾಸಿನ ಫಲಿತಾಂಶಗಳ ಹೇಳಿಕೆಯಲ್ಲಿ ಲಕ್ಷ ರೂಪಾಯಿಗಳಿಗೆ ರೌಂಡ್ ಆಫ್ ಮಾಡುವುದರ ಬದಲು ಮಿಲಿಯನ್ ರೂಪಾಯಿಗಳಿಗೆ ರೌಂಡ್ ಆಫ್ ಮಾಡಲು ನಿರ್ಧರಿಸಿದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್‌ಗಾಗಿ

ಸಂಜೀವ್ ಕುಮಾರ್ ಪಾಂಚಾಲ್
ಮ್ಯಾನೇಜಿಂಗ್ ಡೈರೆಕ್ಟರ್
DIN: 09823879

ಸ್ಥಳ: ಬೆಂಗಳೂರು
ದಿನಾಂಕ: 08ನೇ ಆಗಸ್ಟ್, 2024

ಚಾಲಕ ಸಾವು

ಮುಳಬಾಗಿಲು: ರಾಷ್ಟ್ರೀಯ ಹೆದ್ದಾರಿ 75 ಕಪ್ಪಲಮಡಗು ಬಳಿ ಗುರುವಾರ ರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೆಂಗಳೂರಿನ ಬಿಎಂಟಿಸಿ ವಿಭಾಗದಲ್ಲಿ ಚಾಲಕರಾಗಿದ್ದ ತಾಲ್ಲೂಕಿನ ಪೆತ್ತಾಂಡ್ಲಹಳ್ಳಿಯ ನಿವಾಸಿ ಬಾಲಕೃಷ್ಣ (40) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೇಲ್ಮನವಿಗೆ ಜನವಾದಿ ಮಹಿಳಾ ಸಂಘಟನೆ ಆಗ್ರಹ

ಬೆಂಗಳೂರು: 'ಮಂಗಳೂರು ಹೋಂ ಸ್ಟೇ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ 39 ಆರೋಪಿಗಳು ಖುಲಾಸೆಗೊಂಡಿದ್ದು, ವಿಚಾರಣಾ ನ್ಯಾಯಾಲಯದ ತೀರ್ಮಾನ ಪ್ರಶ್ನಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಬೇಕು' ಎಂದು ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ.

'2012 ಜುಲೈ 2ರಂದು ಮಂಗಳೂರಿನ 'ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇ'ನಲ್ಲಿದ್ದ ಯುವತಿಯರ ಮೇಲೆ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ತೀವ್ರ ಹಲ್ಲೆ ಮಾಡಿದ್ದರು. ನ್ಯಾಯಾಲಯವು ಅವರನ್ನೆಲ್ಲಾ ಖುಲಾ-ಸೆಗೊಳಿಸಿರುವುದಕ್ಕೆ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ಆತಂಕ ವ್ಯಕ್ತಪಡಿಸುತ್ತದೆ. ಇಲ್ಲಿ ಸರ್ಕಾರದ ವೈಫಲ್ಯವಿದೆ' ಎಂದು ಸಂಘಟನೆಯ ರಾಜ್ಯ ಸಮಿತಿ ಅಧ್ಯಕ್ಷೆ ಡಾ. ಮೀನಾಕ್ಷಿ ಬಾಳಿ ದೂರಿದ್ದಾರೆ.

'ಮಹಿಳಾ ಸ್ವಾತಂತ್ರ್ಯದ ವಿರೋಧಿ, ಪ್ರಗತಿ ವಿರೋಧಿ ಹಿಂದುತ್ವ ವಾದ ವನ್ನು ಮುಂದೊತ್ತಲು ಪ್ರಯತ್ನ ಮಾಡುತ್ತಿರುವ ಶಕ್ತಿಗಳಿಂದ ಈ ದಾಳಿ ನಡೆದಿತ್ತು. ಅಪರಾಧಿಗಳಿಗೆ ಶಿಕ್ಷೆಯ ಬದಲು ರಕ್ಷಣೆ ನೀಡುವಂತೆ ಭಾಸವಾಗುತ್ತಿರುವ ನಡೆಯನ್ನು ಸರಿಪಡಿಸಲು ಸರ್ಕಾರ, ಮೇಲ್ಮನವಿ ಸಲ್ಲಿಸಿ ಯುವತಿಯರ ಮೇಲೆ ದೈಹಿಕ ಹಾಗೂ ಸಾಂವಿಧಾನಿಕ ಹಲ್ಲೆ ಮಾಡಿದವರಿಗೆ ಶಿಕ್ಷೆ ಕೊಡಿಸಬೇಕು' ಎಂದು ಸಂಘಟನೆಯ ಪ್ರಧಾನ ಕಾರ್ಯದರ್ಶಿ ದೇವಿ ಆಗ್ರಹಿಸಿದ್ದಾರೆ.

Form No. 18
Notice for appearance in Appeals Order 41 Rule 14 CPC and Rules 1, 2, 4 and 11 of Chapter IV Karnataka High Court Rules
IN THE HIGH COURT OF KARNATAKA AT BENGALURU
MFA No. 3365/2020 (FC-DB)

Appellant/s : **SRI TUMMALAPALLI VIDYASAGAR,** S/o Late T. Ramaiah Chary, Aged about 46 years, R/at H No. 5-101, Sriram Colony, Jalapally Saroornagar Mandal, Ranga Reddy District, Andhra Pradesh-508213. Camp at Bangalore.
By Sri. G.S. Balagangadhar, Advocate

VS

Respondent/s : **SMT. T. RAMADEVI,** W/o Sri Tummalapalli Vidyasagar, Aged about 45 years, R/at No. 390, 42nd Cross, VIII Block, Jayanagar, Bangalore-560082.
Appeal From the Judgement/Award/Order passed on 22.11.2019 PASSED IN M.C. NO. 996/2008 on the file of I ADDL. PRINCIPAL JUDGE FAMILY COURT BENGALURU.

To: RESPONDENT
Respondent : SMT. T. RAMADEVI, W/o Sri Tummalapalli Vidyasagar, Aged about 45 years, R/at No.390, 42nd Cross, VIII Block, Jayanagar, Bangalore-560082.
Whereas the aforementioned Appeal preferred has been registered by this Court.
NOTICE IS HEREBY given to you to appear in this Court in person or through an Advocate duly instructed or through some one authorized by law to act for you in this case **on 29/08/2024 at 10.30 a.m.,** in case you intend to contest the appeal. If you fail so to appear, the appeal will be dealt with, heard and decided in your absence.
Given under my hand and the seal of this court on 22nd day of July 2024.

BY ORDER OF THE COURT
ASSISTANT REGISTRAR

SANSERA ENGINEERING LIMITED

SANSERA ideas@work

CIN: L34103KA1981PLC004542
Registered Address: Plant-7, No.143/A, Jigani Link Road, Bommasandra Industrial Area, Bengaluru - 560105, **Phone:** 080 27839081/82/83; **Fax:** 080 27839309;
Email: rajesh.modi@sansera.in; **Website:** www.sansera.in

CONSOLIDATED UNAUDITED FINANCIAL RESULTS FOR THE QUARTER ENDED 30 JUNE 2024

(Rs. in Million except EPS)

Sl. No.	Particulars	Quarter ended 30-06-2024 (Unaudited)	Quarter ended 31-03-2024 (Unaudited)	Quarter ended 30-06-2023 (Unaudited)	Year ended 31-03-2024 (Audited)
1	Revenue from Operations	7,439.33	7,458.45	6,600.66	28,114.32
2	Net Profit/(Loss) for the period (before Tax, Exceptional and/or Extraordinary items)	686.20	649.99	609.83	2,562.97
3	Net Profit/(Loss) for the period before Tax (after Exceptional and/or Extraordinary items)	686.20	649.99	609.83	2,562.97
4	Net Profit/(Loss) for the period after Tax (after Exceptional and/or Extraordinary items)	501.43	464.65	451.70	1,875.49
5	Total Comprehensive Income for the period [comprising Profit/(Loss) for the period (after tax) and Other Comprehensive Income (after tax)]	495.74	456.09	455.14	1,868.87
6	Equity Share Capital	108.00	107.23	106.65	107.23
7	Reserves (excluding Revaluation Reserve) as shown in the Audited Balance Sheet of the previous year				13,366.73
8	Earnings per share (of Rs. 2/- each)				
	1. Basic:	9.24	8.60	8.43	34.83
	2. Diluted:	9.16	8.52	8.30	34.40

Notes:

a. The above is an extract of the detailed format of quarterly and year ended financial results filed with the stock exchanges under Regulation 33 of the SEBI (Listing Obligations & Disclosure Requirements) Regulations, 2015. The full format of the unaudited quarterly and audited year ended financial results are available on the websites of the stock exchange(s) i.e., www.bseindia.com / www.nseindia.com and the Company i.e., www.sansera.in.

b. The above consolidated financial results of the group were reviewed by the Audit Committee and approved by the Board of Directors at their meeting held on August 8, 2024. The financial results for the quarter ended 30 June 2024 have been reviewed by the statutory auditors and have issued an unmodified report.

c. Standalone financial information of the Company pursuant to regulation 47(1)(b) of SEBI (LODR) Regulations, 2015.

Particulars	Quarter ended 30-06-2024 (Unaudited)	Quarter ended 31-03-2024 (Unaudited)	Quarter ended 30-06-2023 (Unaudited)	Year ended 31-03-2024 (Audited)
Revenue from Operations	6,814.88	6,858.87	5,881.54	25,481.95
Profit before Tax	679.42	681.08	591.96	2,563.20
Profit after Tax	502.81	501.71	439.59	1,899.60

For and on behalf of the Board of Directors
Sd/-
S. Sekhar Vasan
Chairman and Managing Director
DIN: 00361245

Date: 08 August 2024
Place: Bengaluru

Adfactors 245

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/MISC/ಸಾ.ಪ್ರ/2024–25 ದಿನಾಂಕ : 08.08.2024

"ಸಾರ್ವಜನಿಕ ಪ್ರಕಟಣೆ"

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 4(ಎ) (1)ರನ್ವಯ ಸರ್ಕಾರದಿಂದ ಅಧಿಸೂಚನೆ ಸಂಖ್ಯೆ:ನಅಇ 36 ಬಿಎಂಆರ್ 2016, ದಿನಾಂಕ : 24.06.2016 ರಂತೆ' ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/36/ ಬಿಎಂಆರ್/2014 ದಿನಾಂಕ: 21.10.2016ರ ಅಧಿಸೂಚನೆಯಲ್ಲಿ ಕಲಂ 4(ಸಿ) (1)ರ ಅಡಿಯಲ್ಲಿ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶವು ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ 47 ಗ್ರಾಮಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ 65 ಗ್ರಾಮಗಳು, ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 79 ಗ್ರಾಮಗಳು, ಹೊಸಕೋಟೆ ತಾಲ್ಲೂಕಿನ 51 ಗ್ರಾಮಗಳು, ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ 32 ಗ್ರಾಮಗಳು, ಮಾಗಡಿ ತಾಲ್ಲೂಕಿನ 36 ಗ್ರಾಮಗಳು ಮತ್ತು ರಾಮನಗರ ತಾಲ್ಲೂಕಿನ 21 ಗ್ರಾಮಗಳು ಒಟ್ಟು 331 ಗ್ರಾಮಗಳನ್ನು ಒಳಗೊಂಡಂತೆ ವಿಸ್ತೀರ್ಣ 101952.76 ಹೆಕ್ಟೇರ್ (1019.52 ಚ.ಕಿ.ಮೀ) ಇರುತ್ತದೆ.

ಉಪನಗರ ವರ್ತುಲ ರಸ್ತೆ (STRR) ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ತಯಾರಿಕೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಭೂಪರಿವರ್ತಿತ ಜಮೀನುಗಳನ್ನು ಅಭಿವೃದ್ಧಿಪಡಿಸುವ ಮುಂಚೆ ಅಂದರೆ ವಿನ್ಯಾಸ ಅಭಿವೃದ್ಧಿ ಸಂಬಂಧ ವಿನ್ಯಾಸ ನಕ್ಷೆ, ಕಟ್ಟಡ ನಿರ್ಮಾಣ ಸಂಬಂಧ ಪ್ರಾರಂಭಿಕ ಪ್ರಮಾಣ ಪತ್ರವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಡಿಯಲ್ಲಿ ಈ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಭೂಪರಿವರ್ತಿತ ಜಮೀನುಗಳಲ್ಲಿ ಲೇಔಟ್ ನಿರ್ಮಾಣ/ ವಿನ್ಯಾಸ ಅಭಿವೃದ್ಧಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ರನ್ವಯ ಈ ಪ್ರಾಧಿಕಾರದಿಂದ ಕಡ್ಡಾಯವಾಗಿ ಅನುಮೋದನೆ ಪಡೆಯಬೇಕಾಗಿರುತ್ತದೆ. ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಲೇಔಟ್ ನಿರ್ಮಾಣ/ ವಿನ್ಯಾಸ ಅಭಿವೃದ್ಧಿಪಡಿಸುವುದು ಅನಧಿಕೃತ ನಿವೇಶನಗಳನ್ನು ರಚನೆ ಮಾಡಿದಂತೆ ಆಗುತ್ತದೆ. ಅಂತಹ ಅನಧಿಕೃತ ಲೇಔಟ್‌ಗಳನ್ನು ನೆಲಸಮಗೊಳಿಸಿ ಮೂಲ ಸ್ಥಿತಿಗೆ ತರಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(4)ರಲ್ಲಿ ಅವಕಾಶ ಕಲ್ಪಿಸಿರುವುದನ್ನು ಅನಧಿಕೃತ ಲೇಔಟ್ ನಿರ್ಮಾಣಗಾರರ ಗಮನಕ್ಕೆ ತರಲಾಗಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 76M ರ ಪ್ರಕಾರ ನೀವು ಬೇರೆ ಯಾವುದೇ ಅನುಮತಿ ಪಡೆದಿದ್ದರು, ಈ ಪ್ರಾಧಿಕಾರದಿಂದ ಅನುಮತಿ ಪಡೆಯದಿದ್ದರೆ, ಅದು ಕಾನೂನಿನಂತೆ ಪಡೆದ ಅನುಮತಿಯಾಗಿರುವುದಿಲ್ಲ. ಆದ್ದರಿಂದ ಲೇಔಟ್ ನಿರ್ಮಾಣ / ವಿನ್ಯಾಸ ಅಭಿವೃದ್ಧಿ/ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಪ್ರಾಧಿಕಾರದಿಂದ ಕಡ್ಡಾಯವಾಗಿ ಅನುಮತಿ ಪಡೆಯಲು ಸೂಚಿಸಲಾಗಿದೆ.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಖಾಸಗಿಯವರು ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕರು ನಿವೇಶನಗಳನ್ನು ಕ್ರಯಕ್ಕೆ ಪಡೆಯುವ ಮೊದಲು ಪ್ರಾಧಿಕಾರದಿಂದ ವಿನ್ಯಾಸ ನಕ್ಷೆ ಅನುಮೋದನೆ ಆಗಿರುವುದನ್ನು ಖಚಿತಪಡಿಸಿಕೊಂಡು ನಿವೇಶನ ಖರೀದಿಸಲು ತಿಳಿಸಲಾಗಿದೆ.

ಈ ಪ್ರಾಧಿಕಾರದಿಂದ ಅನುಮೋದನೆಯಾಗದ ವಿನ್ಯಾಸಗಳಲ್ಲಿ ಹಾಗೂ ಈ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆದು ನಿವೇಶನಗಳನ್ನು ಬಿಡುಗಡೆ ಪಡೆಯದ ನಿವೇಶನಗಳನ್ನು ಸಾರ್ವಜನಿಕರು ಖರೀದಿಸಬಾರದೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಅಂತಹ ನಿವೇಶನಗಳ ಖರೀದಿಯಿಂದ ಮುಂದೆ ಆಗಬಹುದಾದ ಯಾವುದೇ ತೊಂದರೆಗಳಿಗೆ ನಿವೇಶನ ಖರೀದಿದಾರ ಸಂಪೂರ್ಣ ಜವಾಬ್ದಾರರಾಗಿರುತ್ತದೆ.

ಅನುಮೋದಿತ ವಿನ್ಯಾಸದಲ್ಲಿನ ಸಾರ್ವಜನಿಕ ಉಪಯೋಗಕ್ಕಾಗಿ ಕಾಯ್ದಿರಿಸಿರುವ ರಸ್ತೆಗಳು, ಉದ್ಯಾನವನ ಹಾಗೂ ಬಯಲು ಪ್ರದೇಶ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಜಾಗಗಳು ಸಾರ್ವಜನಿಕ ಆಸ್ತಿಗಳಾಗಿದ್ದು, ಅವುಗಳನ್ನು ಅತಿಕ್ರಮಿಸುವುದು, ಅನಧಿಕೃತವಾಗಿ ಬಳಸುವುದು ಕಾನೂನು ಬಾಹಿರವಾಗಿರುತ್ತದೆ. ಆದಕಾರಣ ಅವುಗಳನ್ನು ಅತಿಕ್ರಮಿಸಿದಲ್ಲಿ ಅಥವಾ ಅನಧಿಕೃತವಾಗಿ ಉಪಯೋಗಿಸುತ್ತಿದ್ದಲ್ಲಿ ಕೂಡಲೇ ಸ್ವಯಂ ತೆರವುಗೊಳಿಸಿಕೊಳ್ಳಲು ತಿಳಿಸಲಾಗಿದೆ.

ಮುಂದುವರೆದು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಸತಿ/ ವಸತಿಯೇತರ ವಿನ್ಯಾಸ ನಕ್ಷೆ ಅನುಮೋದನೆ ಪಡೆಯಲು ಯಾವುದೇ ಕನಿಷ್ಠ ವಿಸ್ತೀರ್ಣದ ಮಿತಿ ಇರುವುದಿಲ್ಲ.

ಆದ್ದರಿಂದ, ಈ ಮೇಲ್ಕಂಡ ಅಂಶಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಅನಧಿಕೃತ ಲೇಔಟ್ ನಿರ್ಮಾಣದಾರರ ಹಾಗೂ ನಿವೇಶನ ಖರೀದಿದಾರರ ಗಮನಕ್ಕೆ ತರಲಾಗಿದೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

DIPR/CP/1398/Zen/2024-25

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕಾರ್ಮಿಕ ಶಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–27.

ಸಂಖ್ಯೆ: ಬೆಂಮಸಾಸಂ/ಕೇಕ/ಕಾರ್ಮಿಕ/823/2024–25 ದಿನಾಂಕ: 09/08/2024

ಅಲ್ಪಾವಧಿ ಬಿಡ್ ಟೆಂಡರ್ ಪ್ರಕಟಣೆ ಸಂಖ್ಯೆ–02/2024–25
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಮಸಾಸಂಸ್ಥೆಯು ವಿವಿಧ ಘಟಕ/ಕಾರ್ಯಾಗಾರಗಳಲ್ಲಿನ ಕಾರ್ಮಿಕರ ಕ್ಯಾಂಟೀನ್‌ನನ್ನು **02 (ಎರಡು) ವರ್ಷಗಳ ಅವಧಿಗೆ** ಪರವಾನಗಿ ಶುಲ್ಕ ರಹಿತ ಆಧಾರದ ಮೇಲೆ ಪರವಾನಗಿ ನೀಡಲು ಆಸಕ್ತ ವ್ಯಕ್ತಿಗಳಿಂದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ. ಭದ್ರತಾ ಠೇವಣಿ ಮೊತ್ತ **ರೂ.50,000/–** ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾಗಿರುತ್ತದೆ. ಜೊತೆಗೆ ಆಯ್ಕೆಯಾದ ಬಿಡ್‌ದಾರರು ವಿದ್ಯುತ್ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ. ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **16.08.2024 , 5:00** ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **19.08.02024, 12:30** ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ **http://kppp.karnataka.gov.in** ಗೆ ಲಾಗಾನ್ ಆಗಿ ಅಥವಾ ಇ–ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 080–46010000; 23010901; 22371090; 22340060; 22340948 ಅಥವಾ 080–22537591 & 080–22537592. ಇ–ಮೇಲ್: **clwo@mybmtc.com** ಗೆ ಸಂಪರ್ಕಿಸಬಹುದು.

ಸಹಿ/–ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ (ಟೆಂಡರ್ ಕರೆಯುವ ಪ್ರಾಧಿಕಾರಿ)

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ
ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ಭಾರತ ಸರ್ಕಾರ

ಜೀವನೋಪಾಯ ಮತ್ತು ಉದ್ಯೋಗ (ಸ್ಮೈಲ್) ಯೋಜನೆಯ, ಉಪ ಯೋಜನೆ 'ಕೇಂದ್ರಿಯ ಕ್ಷೇತ್ರವಾರು ತೃತೀಯಲಿಂಗಿ ವ್ಯಕ್ತಿಗಳ ಸಮಗ್ರ ಪುನರ್ವಸತಿ ಮತ್ತು ಕ್ಷೇಮಾಭಿವೃದ್ಧಿ' ಅಡಿಯಲ್ಲಿ ಜೀವನೋಪಾಯ ಮತ್ತು ಉದ್ಯೋಗದ ಅಳಿವಿನಂಚಿನಲ್ಲಿರುವವರ ಬೆಂಬಲಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಅಧ್ಯಯನಕ್ಕಾಗಿ ಇ–ಟೆಂಡರ್ ಆಹ್ವಾನ ಪ್ರಕಟಣೆಯ ಮಾಹಿತಿ ಜ್ಞಾಪಕ ಪತ್ರ

ಈ ಯೋಜನೆಯಲ್ಲಿ ತೃತೀಯಲಿಂಗಿ ವ್ಯಕ್ತಿಗಳ ಕ್ಷೇಮಾಭಿವೃದ್ಧಿಗೆ ಸಂಬಂಧಿತ ಹಲವಾರು ಸಮಗ್ರ ಕ್ರಮಗಳು ಅಡಕಗೊಂಡಿವೆ. ಈ ಯೋಜನೆಯ ಉದ್ದೇಶ ಕೆಳಗಿನಂತಿರುತ್ತದೆ:

(i) 9ನೇ ತರಗತಿ ಮತ್ತು ಮೇಲ್ಪಟ್ಟ ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ತೃತೀಯ ಲಿಂಗಿ ವಿದ್ಯಾರ್ಥಿಗಳಿಗೆ, ಅವರ ಶಿಕ್ಷಣ ಪೂರ್ಣಗೊಳಿಸಿಕೊಳ್ಳಲು ಹಣಕಾಸು ನೆರವು ನೀಡುವುದು ಮೊದಲ ಉದ್ದೇಶ.

(ii) ತೃತೀಯ ಲಿಂಗಿ ವಿದ್ಯಾರ್ಥಿಗಳು, ಸಮಾಜದಲ್ಲಿ ಗೌರವದಿಂದ ತಮ್ಮ ಶಿಕ್ಷಣ ಪೂರೈಸಿಕೊಳ್ಳಲು ಅನುಭವಿಸುತ್ತಿರುವ ದೈಹಿಕ, ಆರ್ಥಿಕ, ಮನೋವೈಜ್ಞಾನಿಕ, ಮಾನಸಿಕ ಅಡೆತಡೆಗಳನ್ನು ಸಮರ್ಥವಾಗಿ ಎದುರಿಸಿ, ತಮ್ಮನ್ನು ತಾವು ಒಂದು ಗೌರವಾನ್ವಿತ ಸ್ಥಾನದಲ್ಲಿ ಗುರುತಿಸಿಕೊಳ್ಳಲು ಮತ್ತು ತಮ್ಮ ಜೀವನೋಪಾಯವನ್ನು ಸ್ವತಃ ತಾವೇ ಸಂಪಾದಿಸುವಂತಾಗುವ ನಿಟ್ಟಿನಲ್ಲಿ ಅವರ ಉನ್ನತ ವಿದ್ಯಾಭ್ಯಾಸಕ್ಕೆ ಬೆಂಬಲ ನೀಡುವುದು.

ದಿನಾಂಕ ಮತ್ತು ಸಮಯ ಕುರಿತಾದ ಪ್ರಮುಖ ವೇಳಾಪಟ್ಟಿ ಮಾಹಿತಿ:

ಕ್ರ.ಸಂ.	ವಿವರಗಳು	ದಿನಾಂಕ ಮತ್ತು ಸಮಯ
1.	ಎನ್‌ಐಟಿ ಪ್ರಕಟಣೆ	22.07.2024 ರಂದು 1000 ಗಂಟೆ
2.	ಬಿಡ್–ಪೂರ್ವ ಸಭೆ	05.08.2024 ರಂದು 1000 ಗಂಟೆ
3.	ಇ–ಟೆಂಡರ್ ಸಲ್ಲಿಸುವ ಆರಂಭ ದಿನಾಂಕ ಮತ್ತು ಸಮಯ	22.07.2024 ರಂದು 1000 ಗಂಟೆ
4.	ಇ–ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	22.08.2024 ರಂದು 1700 ಗಂಟೆ

ಹೆಚ್ಚಿನ ಮಾಹಿತಿಗಾಗಿ ಮತ್ತು ಇ–ಟೆಂಡರ್ ಆಹ್ವಾನ ಪ್ರಕಟಣೆಗಾಗಿ, ದಯವಿಟ್ಟು ಭೇಟಿ ಕೊಡಿ https://socialjustice.gov.in ಮತ್ತು https://gem.gov.in

CBC 38101/11/0007/2425

ವರ್ತೂರು ಸಮೀಪದ ಅಪಾರ್ಟ್‌ಮೆಂಟ್‌ನ ಈಜುಕೊಳದಲ್ಲಿ ಮಗು ಸಾವು ಪ್ರಕರಣ

ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವರ್ತೂರು ಸಮೀಪದ ಅಪಾರ್ಟ್‌ಮೆಂಟ್‌ನ ಈಜು ಕೊಳದಲ್ಲಿ ಹೆಣ್ಣು ಮಗುವೊಂದು ಬಿದ್ದು ಸಾವನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ವಿರುದ್ಧ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಪ್ರಕರಣ ರದ್ದುಗೊಳಿಸುವಂತೆ ಕೋರಿ ಗುಂಜೂರಿನ, 'ಪ್ರೆಸ್ಟೀಜ್ ಲೇಕ್ ಸೈಡ್ ಹ್ಯಾಬಿಟ್ಯಾಟ್ ಹೋಮ್ ಓನರ್ಸ್ ಅಸೋಸಿಯೇಷನ್' ಅಧ್ಯಕ್ಷ ದೇಬಶಿಶ್ ಸಿನ್ಹಾ ಸೇರಿದಂತೆ ಒಟ್ಟು ಆರು ಜನ ಪದಾಧಿಕಾರಿಗಳು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿದಾರರ ಮನವಿಯನ್ನು ಭಾಗಶಃ ಮಾನ್ಯ ಮಾಡಿದೆ.

ಮುಖ್ಯಾಂಶಗಳು

- ಅರ್ಜಿ ಭಾಗಶಃ ಮಾನ್ಯ
- ಅಸೋಸಿಯೇಷನ್‌ಗಳು ಮಕ್ಕಳ ಪ್ರಾಣ ರಕ್ಷಣೆಗೆ ನಿಗಾ ವಹಿಸಲು ತಾಕೀತು
- ಸೂಕ್ತ ರಕ್ಷಣೆ ಒದಗಿಸಿ

ಇದೇ ವೇಳೆ ಅರ್ಜಿದಾರರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 304 ಮತ್ತು 149ರಡಿ ಹೊರಿಸಿದ್ದ ಆರೋಪಗಳನ್ನು ರದ್ದುಪಡಿಸಿದೆ. ಆದರೆ, ವಿಚಾರಣಾ ನ್ಯಾಯಾಲಯ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 482 ಅಡಿ ತನಗೆ ಲಭ್ಯವಿರುವ ಅಧಿಕಾರ ಬಳಸಿ, ಅರ್ಜಿದಾರರ ವಿರುದ್ಧ ಐಪಿಸಿ 304ಎಡಿ ನಿರ್ಲಕ್ಷದಿಂದ ಸಾವು ಆರೋಪ ಹೊರಿಸಲು ಅವಕಾಶ ಕಲ್ಪಿಸಿದೆ.

'ಅಪಾರ್ಟ್‌ ಮೆಂಟ್‌ಗಳಲ್ಲಿನ ಸುರಕ್ಷತೆ ಹೊಣೆ ಅಸೋಸಿಯೇಷನ್‌ನ ಜವಾಬ್ದಾರಿಯಾಗಿದೆ. ಅರ್ಜಿ ದಾರರು ಅಪಾರ್ಟ್‌ಮೆಂಟ್ ಸಮುಚ್ಚಯದ ಉಸ್ತುವಾರಿ ನೋಡಿ ಕೊಳ್ಳುತ್ತಿರುವುದನ್ನು ಒಪ್ಪಿಕೊಂಡಿರುವ ಕಾರಣದಿಂದ ಮತ್ತು ಮೇಲ್ನೋಟಕ್ಕೆ ಅವರ ನಿರ್ಲಕ್ಷ್ಯ ಕಂಡು ಬಂದಿದೆ. ಈ ಕಾರಣದಿಂದ ಅವರ ವಿರುದ್ಧ ಕಲಂ 304 ಅಡಿ ಹೊರಿಸಿರುವ ಆರೋಪ ರದ್ದು ಮಾಡಲಾಗುವುದು' ಎಂದು ನ್ಯಾಯಪೀಠ ಆದೇಶಿಸಿದೆ.

'ಅಸೋಸಿಯೇಷನ್ ಹೊಣೆ'

ವಿಚಾರಣೆಯಲ್ಲಿ ಅರ್ಜಿದಾರರ ಪರ ವಾದ ಮಂಡಿಸಿದ್ದ ವಕೀಲರು, 'ಅರ್ಜಿದಾರರಿಗೆ ಆ ಮಗು ಸಾಯಲಿ ಎಂಬ ಯಾವುದೇ ಉದ್ದೇಶವಿರಲಿಲ್ಲ. ಬೆಂಗಳೂರು ನಗರದ ಯಾವ ಅಪಾರ್ಟ್‌ಮೆಂಟ್‌ನ ಈಜುಕೊಳಗಳಲ್ಲೂ ಗಾರ್ಡ್‌ಗಳು ಇರುವುದಿಲ್ಲ. ಈ ಪ್ರಕರಣದ ನ್ಯಾಯಿಕ ಪ್ರಕ್ರಿಯೆ ಮುಂದುವರಿಸಿದರೆ ಅದು ಕಾನೂನಿನ ದುರ್ಬಳಕೆ ಆಗಲಿದೆ' ಎಂದು ಪ್ರತಿಪಾದಿಸಿದ್ದರು.

ಇದನ್ನು ವಿರೋಧಿಸಿದ್ದ ಪ್ರಾಸಿಕ್ಯೂಷನ್ ಪರ ವಕೀಲರು, 'ಅರ್ಜಿದಾರರ ನಿರ್ಲಕ್ಷ್ಯವೇ ಮಗುವಿನ ಸಾವಿಗೆ ಕಾರಣವಾಗಿದೆ. ಮರಣೋತ್ತರ ಪರೀಕ್ಷಾ ವರದಿಯಲ್ಲಿ ಮಗು ಕೊಳಕ್ಕೆ ಬಿದ್ದು ನೀರು ಕುಡಿದಿರುವುದೇ ಸಾವಿಗೆ ಕಾರಣ ಎಂದು ಉಲ್ಲೇಖಿಸಲಾಗಿದೆ. ಘಟನೆಯು ಅಪಾರ್ಟ್‌ಮೆಂಟ್ ಸಮುಚ್ಚಯದ ಆವರಣದೊಳಗೆ ನಡೆದಿರುವುದರಿಂದ ಅದಕ್ಕೆ ಅಸೋಸಿಯೇಷನ್ ಪದಾಧಿಕಾರಿಗಳೇ ಹೊಣೆಗಾರರು' ಎಂದು ನ್ಯಾಯಪೀಠಕ್ಕೆ ಮನವರಿಕೆ ಮಾಡಿದ್ದರು.

ಈಜುಕೊಳದ ಬಳಿ ಯಾವುದೇ ಗಾರ್ಡ್ ಇಲ್ಲದಿರುವುದರಿಂದಲೇ ಘಟನೆ ನಡೆದಿದೆ. ಈ ನಿರ್ಲಕ್ಷ್ಯಕ್ಕೆ ಅರ್ಜಿದಾರರು ಹೊಣೆ ಹೊರಬೇಕು. ಇನ್ನು ಮುಂದೆ ಇಂತಹ ಘಟನೆಗಳನ್ನು ತಪ್ಪಿಸಲು ಅಪಾರ್ಟ್‌ಮೆಂಟ್‌ಗಳ ಈಜುಕೊಳಗಳ ಬಗ್ಗೆ ಸೂಕ್ತ ರಕ್ಷಣಾ ವ್ಯವಸ್ಥೆ ಕೈಗೊಳ್ಳಬೇಕು.
ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಅರ್ಜಿದಾರರ ಪರ ಹಿರಿಯ ವಕೀಲ ಸಂದೇಶ್ ಜೆ.ಚೌಟ ವಾದ ಮಂಡಿಸಿದ್ದರು. ಹೈಕೋರ್ಟ್ ವಕೀಲ ಎನ್‌.ಎಸ್‌.ಶ್ರೀರಾಜ್ ಗೌಡ ವಕಾಲತ್ತು ವಹಿಸಿದ್ದರು. ಪ್ರಾಸಿಕ್ಯೂಷನ್ ಪರ ಪಿ.ತೇಜೇಶ್ ವಾದ ಮಂಡಿಸಿದ್ದರು.

ಪ್ರಕರಣವೇನು?: ರಾಜೇಶ್ ಕುಮಾರ್ ದಮೆರ್ಲಾ ಅವರ ಪುಟ್ಟ ಮಗಳು 2023ರ ಡಿಸೆಂಬರ್ 28ರಂದು ಅಪಾರ್ಟ್ ಮೆಂಟ್ ಸಂಕೀರ್ಣದಲ್ಲಿರುವ ಆವರಣದಲ್ಲಿನ ಈಜು ಕೊಳಕ್ಕೆ ಬಿದ್ದು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಳು.

ಈ ಹಿನ್ನೆಲೆಯಲ್ಲಿ ದಮೆರ್ಲಾ, 'ನನ್ನ ಮಗಳ ಸಾವಿಗೆ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ನಿರ್ಲಕ್ಷ್ಯವೇ ಕಾರಣ' ಎಂದು ಆರೋಪಿಸಿ ಅಸೋಸಿಯೇಷನ್ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪೊಲೀಸರು ತನಿಖೆ ನಡೆಸಿ ಅಸೋಸಿಯೇಷನ್ ಅಧ್ಯಕ್ಷ ಮತ್ತು ಪದಾಧಿಕಾರಿಗಳ ವಿರುದ್ಧ ವಿಚಾರಣಾ (2ನೇ ಹೆಚ್ಚುವರಿ ಎಸಿಎಂಎಂ) ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಇದನ್ನು ಪ್ರಶ್ನಿಸಿ ಆರೋಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ಕೆನರಾ ಬ್ಯಾಂಕ್‌ನ ತಿರುವನಂತಪುರಂ ವಲಯದ ಮುಖ್ಯಸ್ಥ ಹಾಗೂ ಪ್ರಧಾನ ವ್ಯವಸ್ಥಾಪಕ ಪ್ರದೀಪ್ ಕೆ.ಎಸ್. ಅವರು, ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಡಿ.ಡಿ ಹಸ್ತಾಂತರಿಸಿದರು

ವಯನಾಡ್ ಸಂತ್ರಸ್ತರಿಗೆ ಕೆನರಾ ಬ್ಯಾಂಕ್‌ನಿಂದ ₹1 ಕೋಟಿ ದೇಣಿಗೆ

ಬೆಂಗಳೂರು: ಭಾರಿ ಮಳೆಯಿಂದ ಭೂಕುಸಿತ ಸಂಭವಿಸಿ ತೊಂದರೆಗೆ ಸಿಲುಕಿರುವ ಕೇರಳದ ವಯನಾಡ್ ಜಿಲ್ಲೆಯ ಸಂತ್ರಸ್ತರಿಗೆ ನೆರವು ಮತ್ತು ಪುನರ್ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ಕೇರಳದ ಮುಖ್ಯಮಂತ್ರಿ ಪರಿಹಾರ ನಿಧಿಗೆ ₹1 ಕೋಟಿ ದೇಣಿಗೆ ನೀಡಿದೆ.

ಬ್ಯಾಂಕ್‌ನ ತಿರುವನಂತಪುರಂ ವಲಯದ ಮುಖ್ಯಸ್ಥ ಹಾಗೂ ಪ್ರಧಾನ ವ್ಯವಸ್ಥಾಪಕ ಪ್ರದೀಪ್ ಕೆ.ಎಸ್. ಅವರು, ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಡಿ.ಡಿ ಯನ್ನು ಹಸ್ತಾಂತರಿಸಿದರು.

'ವಯನಾಡ್ ಘಟನೆಯು ಹೃದಯ ಹಿಂಡುವಂತದ್ದು. ಸಂತ್ರಸ್ತರಿಗೆ ಹೆಚ್ಚಿನ ಸಹಾಯ ಮಾಡಲು ಸಿದ್ಧರಿದ್ದೇವೆ' ಎಂದು ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆ. ಸತ್ಯನಾರಾಯಣ ರಾಜು ಹೇಳಿದ್ದಾರೆ.

ಇ.ಡಿ ಕಸ್ಟಡಿಗೆ ವರ್ಮಾ: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಗರಣದ ಎರಡನೇ ಆರೋಪಿ ಹೈದರಾಬಾದ್‌ನ ಸತ್ಯನಾರಾಯಣ ವರ್ಮಾ ಅವರನ್ನು ಇದೇ 13ರಂದು ಜಾರಿ ನಿರ್ದೇಶನಾಲಯದ (ಇ.ಡಿ) ಕಸ್ಟಡಿಗೆ ನೀಡುವಂತೆ ಎಸ್‌ಐಟಿಗೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಜಾರಿ ನಿರ್ದೇಶನಾಲಯ ಸಲ್ಲಿಸಿದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗ-ಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಇ.ಡಿ ಪರ ಹಾಜರಾಗಿದ್ದ ಪಿ.ಪ್ರಸನ್ನ ಕುಮಾರ್, 'ವರ್ಮಾ ವಿರುದ್ಧ ಇ.ಡಿ ನ್ಯಾಯಾಲಯ ಬಾಡಿ ವಾರಂಟ್ ಜಾರಿ ಮಾಡಿರುವುದು ಬಾಕಿ ಇರುವಾಗ ಅವರನ್ನು ಎಸ್‌ಐಟಿ ವಶಕ್ಕೆ ಒಪ್ಪಿಸಬೇಕು. ಇಂದೂ ವಿಶೇಷ ನ್ಯಾಯಾಲಯ ಬಾಡಿ ವಾರಂಟ್ ಜಾರಿ ಮಾಡಿದೆ. ಆದರೆ, ಈ ಮೊದಲಿನ ಬಾಡಿ ವಾರಂಟ್ ಆದೇಶವನ್ನು ಎಸ್‌ಐಟಿ ಉಲ್ಲಂಘಿಸಿದೆ' ಎಂದು ಆಕ್ಷೇಪಿಸಿದರು.

ಎಸ್‌ಐಟಿ ಪರ ಹಾಜರಾಗಿದ್ದ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ 'ವರ್ಮಾ ಅವರೇ ಹಗರಣದ ಪ್ರಮುಖ ವ್ಯಕ್ತಿ. ಪ್ರಕರಣ ದಲ್ಲಿ ಈತನಕ ₹49 ಕೋಟಿ ಜಪ್ತಿ ಮಾಡಲಾಗಿದೆ. ಇನ್ನೂ ₹30 ಕೋಟಿಗೂ ಹೆಚ್ಚಿನ ಮೊತ್ತ ಜಪ್ತಿ ಮಾಡಬೇಕಿದೆ. ವರ್ಮಾ ಅವರ ಕಸ್ಟಡಿ ಅವಧಿಯು ಇದೇ 12ರಂದು ಮುಗಿಯುತ್ತದೆ. ನಂತರ ಇ.ಡಿ ವಶಕ್ಕೆ ತೆಗೆದು ಕೊಳ್ಳಬಹುದು' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, 'ಇ.ಡಿ ವಿಶೇಷ ನ್ಯಾಯಾಲಯ ಬಾಡಿ ವಾರಂಟ್ ಆದೇಶ ಹೊರಡಿಸಿರುವಾಗ ಪುನಃ ಪೊಲೀಸ್ ಕಸ್ಟಡಿ ಆದೇಶವನ್ನು ಹೇಗೆ ಮಾಡ ಲಾಗುತ್ತದೆ? ಉದ್ದೇಶಪೂರ್ವ-ಕವಾಗಿ ಎಸ್‌ಐಟಿ ವರ್ಮಾ ಅವರನ್ನು ಪೊಲೀಸ್ ಕಸ್ಟಡಿಗೆ ತೆಗೆದುಕೊಂಡಿದೆ. ಇದೆಲ್ಲವೂ ಇ.ಡಿ ವಶದಿಂದ ತಪ್ಪಿಸಿ-ಕೊಳ್ಳುವ ತಂತ್ರ' ಎಂದು ಅಸಮಾಧಾನ ವ್ಯಕ್ತಪಡಿಸಿ ವಿಚಾರಣೆಯನ್ನು ಆಗಸ್ಟ್ 21ಕ್ಕೆ ಮುಂದೂಡಿತು. ಸತ್ಯನಾರಾಯಣ ವರ್ಮಾ ವಿರುದ್ಧ ಜಾರಿ ನಿರ್ದೇಶನಾಲಯ ಇಸಿಐಆರ್ (ಎನ್‌ಫೋರ್ಸ್‌ಮೆಂಟ್ ಕೇಸ್ ಇನ್‌ಫಾರ್ಮೇಶನ್ ರಿಪೋರ್ಟ್) ದಾಖಲಿಸಿದೆ.

ಬೆಸ್ಕಾಂಗೆ ಹೈಕೋರ್ಟ್ ಖಡಕ್ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯುತ್ ಬಿಲ್ ಸೇರಿ ವಿವಿಧ ಶುಲ್ಕಗಳನ್ನು ಆನ್‌ಲೈನ್ (ಯುಪಿಐ) ಮೂಲಕ ಸ್ವೀಕರಿಸದೇ ಇರಲು ಕಾರಣ ಏನು ಎಂಬುದಕ್ಕೆ ಇದೇ 23ರ ವೇಳೆಗೆ ವಿವರಣೆ ನೀಡಿ ಪ್ರಮಾಣ ಪತ್ರ ಸಲ್ಲಿಸಲು ವಿಫಲವಾದರೆ ನ್ಯಾಯಾಲಯಕ್ಕೆ ಖುದ್ದು ಹಾಜರಾಗಬೇಕಾಗುತ್ತದೆ' ಎಂದು ಹೈಕೋರ್ಟ್, ಬೆಂಗಳೂರು ವಿದ್ಯುತ್ ಸರಬರಾಜು ನಿಗಮದ (ಬೆಸ್ಕಾಂ) ವ್ಯವಸ್ಥಾಪಕ ನಿರ್ದೇಶಕರಿಗೆ ಖಡಕ್ ಎಚ್ಚರಿಕೆ ನೀಡಿದೆ.

ಈ ಸಂಬಂಧ ಹೊಸಕೋಟೆ ನಿವಾಸಿ ಸೀತಾಲಕ್ಷ್ಮಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎನ್‌.ಎಸ್‌.ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬೆಸ್ಕಾಂ ಪರ ವಕೀಲರು, 'ಹೈಕೋರ್ಟ್ ಈ ಹಿಂದೆ ನೀಡಿರುವ ಸೂಚನೆಯಂತೆ ವಿದ್ಯುತ್ ಬಿಲ್ ಸೇರಿ ವಿವಿಧ ಶುಲ್ಕಗಳನ್ನು ಯುಪಿಐ ಮೂಲಕ ಸ್ವೀಕರಿಸುವ ವ್ಯವಸ್ಥೆ ಜಾರಿಗೊಳಿಸುವ ವಿಚಾರವಾಗಿ ಪ್ರಮಾಣಪತ್ರ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದಕ್ಕೆ ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, 'ಇದು ಕೊನೆಯ ಅವಕಾಶ. ಇದೇ 23ರ ವೇಳೆಗೆ ಪ್ರಮಾಣ ಪತ್ರ ಸಲ್ಲಿಸಬೇಕು. ತಪ್ಪಿದರೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು ಮುಂದಿನ ವಿಚಾರಣೆಗೆ ಖುದ್ದು ಹಾಜರಾಗಿ ಸ್ಪಷ್ಟನೆ ನೀಡಬೇಕಾಗುತ್ತದೆ' ಎಂದು ಎಚ್ಚರಿಸಿ ವಿಚಾರಣೆ ಮುಂದೂಡಿತು.

ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಪೀಠ ಈ ಹಿಂದಿನ ವಿಚಾರಣೆಯಲ್ಲಿ, 'ಇಡೀ ಜಗತ್ತು ಡಿಜಿಟಲ್ ಕ್ಷೇತ್ರದಲ್ಲಿ ದಾಪುಗಾಲಿಡುತ್ತಿರುವಾಗ, ನೀವು ಮಾತ್ರ ಆನ್‌ಲೈನ್ ಪಾವತಿಗಳನ್ನು ಯಾಕೆ ಸ್ವೀಕರಿಸುತ್ತಿಲ್ಲ? ಎಂಬ ಬಗ್ಗೆ ಪ್ರಮಾಣಪತ್ರ ಸಲ್ಲಿಸಿ' ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿಸಿತ್ತು.

ಪ್ರಕರಣವೇನು?: 'ವಾಣಿಜ್ಯ ವಿದ್ಯುತ್ ಬಳಕೆ ಪ್ರಮಾಣ ಹೆಚ್ಚಾಗಿರುವ ಕಾರಣ ಸಾಮರ್ಥ್ಯ ಪ್ರಮಾಣವನ್ನು ಹೆಚ್ಚಿಸಿ' ಎಂದು ಅರ್ಜಿದಾರರು ಸಹಾಯಕ ಎಕ್ಸಿಕ್ಯೂಟಿವ್ ಎಂಜಿನಿಯರ್ ಅವರಿಗೆ ಮನವಿ ಮಾಡಿದ್ದರು. ಇದಕ್ಕೆ ಎಂಜಿನಿಯರ್, ₹16 ಸಾವಿರ ಪಾವತಿಸುವಂತೆ ತಿಳಿಸಿದ್ದರು. ಇದರನ್ವಯ ಅರ್ಜಿದಾರರು ನಗದು ಪಾವತಿಸಲು ಕಚೇರಿಗೆ ತೆರಳಿದಾಗ, ಡಿಡಿ ಅಥವಾ ಆರ್‌ಟಿಜಿಎಸ್ ಮೂಲಕ ಹಣ ಪಾವತಿಸುವಂತೆ ಸೂಚಿಸಿದ್ದರು. 'ನನಗೆ 65 ವರ್ಷವಾಗಿದ್ದು, ಓಡಾಡಲು ಸಾಧ್ಯವಿಲ್ಲ. ಹಾಗಾಗಿ, ಆನ್‌ಲೈನ್ ಮೂಲಕ ಹಣ ಪಾವತಿಸುತ್ತೇನೆ' ಎಂದು ಅರ್ಜಿದಾರರು ತಿಳಿಸಿದ್ದರು. ಆದರೆ ಎಂಜಿನಿಯರ್, ಇದಕ್ಕೆ ಅವಕಾಶ ನೀಡಿರಲಿಲ್ಲ.

'ಚಿಲ್ಲರೆ' ವಿಷಯ: ನಿರ್ವಾಹಕ ಅಮಾನತು

ಬೆಂಗಳೂರು: ಪ್ರಯಾಣಿಕರೊಬ್ಬರಿಗೆ ₹5 ಚಿಲ್ಲರೆ ವಾಪಸ್ ನೀಡುವ ವಿಚಾರ ದಲ್ಲಿ ಅನುಚಿತವಾಗಿ ವರ್ತಿಸಿದ ಬಿಎಂಟಿಸಿ ನಿರ್ವಾಹಕನನ್ನು ಅಮಾನತು ಮಾಡಲಾಗಿದೆ.

ಮಂಗಳವಾರ ರಾತ್ರಿ 9.40ಕ್ಕೆ ಬಿಎಂಟಿಸಿ ಘಟಕ–32ರ ಬಸ್‌ನಲ್ಲಿ ಅಭಿನವ್‌ರಾಜ್ ಪ್ರಯಾಣಿಸುತ್ತಿದ್ದರು. ಅವರಿಗೆ ನಿರ್ವಾಹಕ ಶ್ರೀನಿವಾಸ್ ₹5 ಚಿಲ್ಲರೆ ನೀಡಬೇಕಿತ್ತು. ಅದನ್ನು ಕೇಳಿದ್ದಕ್ಕಾಗಿ ಮಾರತ್‌ಹಳ್ಳಿ ಬಳಿ ಅನುಚಿತ ವಾಗಿ ವರ್ತಿಸಿದ್ದರು ಎಂದು ಪ್ರಯಾಣಿಕ ದೂರಿದ್ದರು.

ನಿರ್ವಾಹಕ ಅನುಚಿತವಾಗಿ ವರ್ತಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಅವರನ್ನು ಅಮಾನತು ಮಾಡಲಾಗಿದೆ ಎಂದು ಮುಖ್ಯ ಸಂಚಾರ ವ್ಯವಸ್ಥಾಪಕ ತಿಳಿಸಿದ್ದಾರೆ.

ಬುಕ್‌ಬ್ರಹ್ಮ ಸಾಹಿತ್ಯ ಉತ್ಸವದಲ್ಲಿ ನಡೆದ 'ಅಮ್ಮನ ಭಾಷೆಯಿಂದ ಅನ್ನದ ಭಾಷೆ' ಗೋಷ್ಠಿಯಲ್ಲಿ ಲೇಖಕ ವಿಕ್ರಮ ವಿಸಾಜಿ, ಪುರುಷೋತ್ತಮ ಬಿಳಿಮಲೆ, ಮೂಡ್ನಾಕೂಡು ಚಿನ್ನಸ್ವಾಮಿ ಮತ್ತು ಸಬಿಹಾ ಭೂಮಿಗೌಡ ಭಾಗವಹಿಸಿದ್ದರು (ಎಡ ಚಿತ್ರ). 'ಎಐ ಯುಗ–ಕ್ಲಾಸಿಕ್‌ಗಳ ಅಂತ್ಯವೇ?' ಗೋಷ್ಠಿಯಲ್ಲಿ ದೀಪಾ ಗಣೇಶ್ ಮಾತನಾಡಿದರು. ಪೂರ್ಣಿಮಾ ಮಾಳಗಿಮನಿ, ಕೃಷ್ಣಮೂರ್ತಿ ಹನೂರು ಮತ್ತು ರಾಜೇಂದ್ರ ಚೆನ್ನಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬುಕ್ ಬ್ರಹ್ಮ ಸಾಹಿತ್ಯೋತ್ಸವ: ತುಳು–ಕೊಂಕಣಿ–ಕೊಡವ–ಬ್ಯಾರಿ ಭಾಷೆ ಬಗ್ಗೆ ಭಾಷಾ ತಜ್ಞರ ಅಭಿಮತ

'ಸವಾಲುಗಳ ಮಧ್ಯೆ ಆಡು ಭಾಷೆ ವಿಸ್ತರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಭಾಷೆಯ ಜತೆಗೆ ರಾಜಿ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಕೊಂಕಣಿ ಹೊರತುಪಡಿಸಿ ಇಲ್ಲಿನ ಉಳಿದ ಭಾಷೆಗಳಿಗಿವೆ. ಭಾಷಾ ಅಕಾಡೆಮಿಗಳ ಸ್ಥಾಪನೆ ಸೇರಿ ವಿವಿಧ ಕ್ರಮಗಳಿಂದ ತುಳು, ಕೊಡವ ಮತ್ತು ಬ್ಯಾರಿ ಭಾಷೆಗಳ ಬಳಕೆಯ ವ್ಯಾಪ್ತಿ ವಿಸ್ತರಿಸಿಕೊಳ್ಳುತ್ತಿದೆ...'

ಬುಕ್ ಬ್ರಹ್ಮ ಸಾಹಿತ್ಯೋತ್ಸವದಲ್ಲಿ ನಡೆದ 'ತುಳು–ಕೊಂಕಣಿ–ಕೊಡವ–ಬ್ಯಾರಿ ಸೊಗಡು' ಗೋಷ್ಠಿಯಲ್ಲಿ ಭಾಷಾ ತಜ್ಞರ ಮನದಾಳದ ಮಾತುಗಳಿವು.

ಬ್ಯಾರಿ ಭಾಷೆ ಬಗ್ಗೆ ಮಾತನಾಡಿದ ಬಿ.ಎ. ಮುಹಮ್ಮದ್ ಅಲಿ, 'ಬ್ಯಾರಿ ಭಾಷೆ ಉಳಿಸಲು ಸಾಮುದಾಯಿಕ ಪ್ರಯತ್ನಗಳು ನಡೆದಿವೆ. ಬ್ಯಾರಿಗಳಿಗೆ 1,500 ವರ್ಷಗಳ ಇತಿಹಾಸವಿದೆ. ಈ ಭಾಷೆ ಬಳಸುವವರು ಸುಮಾರು 25 ಲಕ್ಷ ಜನರಿದ್ದಾರೆ. ಕೊಂಕಣಿ ಭಾಷೆಗೆ ಹೋಲಿಸಿದರೆ ಬ್ಯಾರಿ, ಕೊಡವ ಹಾಗೂ ತುಳು ಭಾಷೆಗಳು ಬಹಳ ಕೆಳಗಿವೆ' ಎಂದರು.

ತುಳು ಭಾಷೆ ಕುರಿತು ವಿಜಯಾ ಶೆಟ್ಟಿ ಸಾಲೆತ್ತೂರು, 'ತುಳು ಭಾಷೆಯನ್ನು ಸುಮಾರು 20 ಲಕ್ಷದಷ್ಟು ಜನರು ಮಾತನಾಡುತ್ತಾರೆ. ಪಶ್ಚಿಮಘಟ್ಟದಿಂದ ಅರಬ್ಬಿ ಸಮುದ್ರದವರೆಗಿನ ಪ್ರದೇಶ ತುಳುನಾಡು. ಈ ಪ್ರದೇಶವನ್ನು ಕನ್ನಡಿಗರು ಆಳ್ವಿಕೆ ಮಾಡಿದರು. ಇದರಿಂದ ಅಲ್ಲಿಯವರು ಕನ್ನಡದಲ್ಲಿಯೇ ಬರೆದರು. ರಾಜಾಶ್ರಯ ಇಲ್ಲದೆ ನಮ್ಮ ಭಾಷೆ ಸೊರಗಿತು' ಎಂದು ಬೇಸರ ವ್ಯಕ್ತಪಡಿಸಿದರು.

ಕೊಂಕಣಿ ಬಗ್ಗೆ ಮಾತನಾಡಿದ ರೇಮಂಡ್ ಡಿಕೂನಾ ತಾಕೊಡೆ, 'ಕೊಂಕಣಿ ಭಾಷೆಯು ಗೋವಾ ರಾಜ್ಯದ ಅಧಿಕೃತ ಭಾಷೆಯಾಗಿದೆ. ನಮ್ಮ ರಾಜ್ಯದಲ್ಲಿ ಈ ಭಾಷೆಗೆ ಅಕಾಡೆಮಿಯಿದೆ. ಕೊಂಕಣಿಯಲ್ಲಿ ಅಪಾರ ಸಾಹಿತ್ಯವಿದೆ. ಈ ಭಾಷೆಯನ್ನು ಉಳಿಸಿ, ಬೆಳೆಸಲು ಎಲ್ಲ ಕೆಲಸಗಳು ನಡೆಯುತ್ತಿವೆ' ಎಂದು ಹೇಳಿದರು.

ಕೊಡವ ಭಾಷೆ ಕುರಿತು ಮಾತನಾಡಿದ ರೇಖಾ ವಸಂತ, 'ಕೊಡವ ಭಾಷೆ ಮತ್ತು ಸಂಸ್ಕೃತಿಗೆ 2,000 ವರ್ಷಕ್ಕಿಂತ ಹೆಚ್ಚು ದೀರ್ಘ ಇತಿಹಾಸವಿದೆ. ಕೊಡವ ಅಕಾಡೆಮಿ ಸ್ಥಾಪನೆ ಬಳಿಕ ಈ ಭಾಷೆ ಕಲಿಸುವ ಪ್ರಯತ್ನ ಹೆಚ್ಚಿತು. ಅಮೆರಿಕ, ಇಂಗ್ಲೆಂಡ್‌ನಲ್ಲಿ ಕೊಡವ ಸಂಘವಿದ್ದು, ಭಾಷೆ ಬಳಕೆಯ ವ್ಯಾಪ್ತಿ ಹೆಚ್ಚುತ್ತಿದೆ' ಎಂದು ಅವರು ತಿಳಿಸಿದರು.

ಗೋಷ್ಠಿಯಲ್ಲಿ ವಿಜಯಾ ಶೆಟ್ಟಿ ಸಾಲೆತ್ತೂರು ಮಾತನಾಡಿದರು. ರೇಖಾ ವಸಂತ, ಬಿ.ಎ. ಮುಹಮ್ಮದ್ ಅಲಿ ಹಾಗೂ ರೇಮಂಡ್ ಡಿಕೂನಾ ತಾಕೊಡೆ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಮಾತೃಭಾಷೆ ಉಳಿವಿಗೆ ಇಚ್ಛಾಶಕ್ತಿ ಅಗತ್ಯ

ಬೆಂಗಳೂರು: ಅನ್ನ ಕೊಡುವ ಭಾಷೆಯಾಗಿ ಕನ್ನಡ ಉಳಿಯಬೇಕಾದರೆ ಕನ್ನಡ ಶಾಲೆಗಳು ಉಳಿಯಬೇಕು, ಭಾಷೆ ಉಳಿವಿಗೆ ದೊಡ್ಡ ಜನಾಂದೋಲನವಾಗಬೇಕು, ಸಮಾನ ಶಿಕ್ಷಣ ನೀತಿ ಜಾರಿಯಾಗಬೇಕು ...

ಬುಕ್ ಬ್ರಹ್ಮ ಸಾಹಿತ್ಯೋತ್ಸವದಲ್ಲಿ ಶುಕ್ರವಾರ ನಡೆದ 'ಅಮ್ಮನ ಭಾಷೆಯಿಂದ ಅನ್ನದ ಭಾಷೆ' – ಕುರಿತ ಗೋಷ್ಠಿಯಲ್ಲಿ ವ್ಯಕ್ತವಾದ ಅಭಿಪ್ರಾಯಗಳಿವು.

ಬೇರೆ ಭಾಷೆಗಳಿಗೆ ಹೋಲಿಸಿದರೆ 40 ವರ್ಷಗಳಲ್ಲಿ ಕನ್ನಡ ಭಾಷೆಯ ಬೆಳವಣಿಗೆ ತೀವ್ರ ಆತಂಕ ಹುಟ್ಟಿಸುವಂತಿದೆ. 1971 ರಿಂದ 2011ರ ಭಾಷಾ ಜನಗಣತಿ ಪ್ರಕಾರ ಹಿಂದಿ ಶೇ 66ರಷ್ಟಿದ್ದರೆ, ಕನ್ನಡ ಶೇ 3.73ರಷ್ಟು ಬೆಳವಣಿಗೆಯಾಗುತ್ತಿದೆ. ಭಾಷೆಯ ಉಳಿವಿಗೆ ಬಹುದೊಡ್ಡ ಜನಾಂದೋಲನವೇ ನಡೆಯಬೇಕಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

'ರಾಜ್ಯ ಸರ್ಕಾರ ಇತ್ತೀಚೆಗೆ 1439 ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಸರ್ಕಾರ ಆರಂಭಿಸಿದ ಮೇಲೆ 850 ಕನ್ನಡ ಶಾಲೆಗಳು ಮುಚ್ಚಿದವು. ಹೀಗಾದಾಗ, ಕನ್ನಡ ಭಾಷೆ ಉಳಿಯಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

ಕವಿ ಮೂಡ್ನಾಕೂಡು ಚಿನ್ನಸ್ವಾಮಿ, 'ಕನ್ನಡ ಮೊದಲಿನಿಂದಲೂ ಜ್ಞಾನದ ಭಾಷೆಯಾಗಿದೆ. ಉಳಿವಿನ ಸಮಸ್ಯೆ ಕನ್ನಡದ್ದಷ್ಟೇ ಅಲ್ಲ, ಜಗತ್ತಿನ ಎಲ್ಲ ಭಾಷೆಗಳ ಸಮಸ್ಯೆ. ಆದರೆ, ಕನ್ನಡ ಭಾಷೆಗೆ ಸಾವಿಲ್ಲ, ಅದು ಬೆಳೆಯುತ್ತದೆ' ಎಂದು ಕವಿ ಪ್ರತಿಪಾದಿಸಿದರು.

ಲೇಖಕಿ ಸಬಿಹಾ ಭೂಮಿಗೌಡ ಹಾಗೂ ಲೇಖಕ ವಿಕ್ರಮ್ ವಿಸಾಜಿ ಉಪಸ್ಥಿತರಿದ್ದರು.

'ಕಥೆ ಸೃಷ್ಟಿಸಬಹುದು, ಭಾವನೆಗಳನ್ನಲ್ಲ'

ಬೆಂಗಳೂರು: 'ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ (ಎಐ) ನೆರವಿನಿಂದ ಕಥೆಗಳನ್ನು ಸುಲಭವಾಗಿ ಸೃಷ್ಟಿಸಬಹುದು. ಆದರೆ, ನಮ್ಮಲ್ಲಿನ ಭಾವನೆಗಳನ್ನು ಅಲ್ಲಿ ಕಾಣಲು ಸಾಧ್ಯವಿಲ್ಲ. ಆದ್ದರಿಂದ ಸಾಹಿತ್ಯ ಕ್ಷೇತ್ರದಲ್ಲಿ ಈ ತಂತ್ರಜ್ಞಾನವು ಅದ್ಭುತ ಸೃಷ್ಟಿಸುವ ವಿಶ್ವಾಸವಿಲ್ಲ...'

ಇವು ಸಾಹಿತ್ಯ ಕ್ಷೇತ್ರದ ಪ್ರಮುಖರ ಮಾತುಗಳು. ಇಲ್ಲಿ ಶುಕ್ರವಾರ ನಡೆದ 'ಬುಕ್ ಬ್ರಹ್ಮ ಸಾಹಿತ್ಯೋತ್ಸವ'ದ 'ಎಐ ಯುಗ–ಕ್ಲಾಸಿಕ್‌ಗಳ ಅಂತ್ಯವೇ?' ಗೋಷ್ಠಿಯಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಎಐ ತಂತ್ರಜ್ಞಾನ ಬೀರಬಹುದಾದ ಪರಿಣಾಮಗಳ ಬಗ್ಗೆ ಚರ್ಚಿಸಲಾಯಿತು.

ವಿಮರ್ಶಕ ರಾಜೇಂದ್ರ ಚೆನ್ನಿ, 'ಎಐ ತಂತ್ರಜ್ಞಾನ ಈಗಾಗಲೇ ನಮ್ಮ ಜೀವನವನ್ನು ಪ್ರವೇಶಿಸಿದೆ. ಈ ವೇಳೆ ಅದರ ಕಾರ್ಯವೈಖರಿ ಬಗ್ಗೆ ಒಂದೆಡೆ ಸಂಭ್ರಮವಿದ್ದರೆ, ಇನ್ನೊಂದೆಡೆ ಕಳವಳ ವ್ಯಕ್ತವಾಗುತ್ತಿದೆ. ಮನುಷ್ಯನ ಬುದ್ಧಿಮತ್ತೆಗೆ ಸರಿಸಮನಾದ ಸಾಮರ್ಥವನ್ನು ಎಐ ಹೊಂದಿದೆಯೆ ಎಂಬುದರ ಬಗ್ಗೆ ಸಾಕ್ಷ್ಯಗಳು ಸಿಕ್ಕಿಲ್ಲ. ಸಾಹಿತ್ಯ ಕೃತಿಗಳು ಬರಹಗಾರರ ಅನುಭವದಿಂದ ಹುಟ್ಟುತ್ತವೆಯೇ ಹೊರತು, ದತ್ತಾಂಶಗಳಿಂದಲ್ಲ. ಆದ್ದರಿಂದ ಲೇಖಕರು ಸೃಷ್ಟಿಸಿದ ಸಾಹಿತ್ಯದಷ್ಟು ಎಐ ರಚಿಸುವ ಕೃತಿ ಪರಿಣಾಮ ಬೀರುವುದಿಲ್ಲ' ಎಂದು ಹೇಳಿದರು.

ವಿದ್ವಾಂಸ ಕೃಷ್ಣಮೂರ್ತಿ ಹನೂರು ಮಾತನಾಡಿ, 'ಪಂಪನಿಂದ ಈವರೆಗೆ ಸೃಷ್ಟಿಯಾದ ಸಾಹಿತ್ಯವನ್ನು ಗಮನಿಸಿದರೆ ಭಾಷಾ ವೈವಿಧ್ಯವನ್ನು ಗುರುತಿಸಬಹುದು. ಸಾಹಿತ್ಯವು ಭಾವುಕ ಜಗತ್ತಾದರೆ, ಎಐ ಲೌಕಿಕ ಜಗತ್ತಾಗಿದೆ. ಸಹಜ ಬುದ್ಧಿಗೆ ಇರುವ ಋಜುತ್ವ ಎಐಗೆ ಇದೆಯೆ? ಕವಿ ಯಾವುದೇ ಒಂದು ಪದ ಬಳಸುವಾಗಲೂ ಸಾಕಷ್ಟು ಎಚ್ಚರಿಕೆ ವಹಿಸುತ್ತಾನೆ. ಆದರೆ, ಎಐ ತೋಚಿದ ಪದಗಳನ್ನು ಜೋಡಿಸಿ, ನಮ್ಮ ಮುಂದೆ ಇಡುತ್ತದೆ' ಎಂದರು.

ಲೇಖಕಿಯರಾದ ಪೂರ್ಣಿಮಾ ಮಾಳಗಿಮನಿ, ದೀಪಾ ಗಣೇಶ್ ಉಪಸ್ಥಿತರಿದ್ದರು.

ಗಮನ ಸೆಳೆದ ಪುಸ್ತಕ ಮಳಿಗೆಗಳು

ಬೆಂಗಳೂರು: ಬುಕ್ ಬ್ರಹ್ಮ ಸಾಹಿತ್ಯೋತ್ಸವದಲ್ಲಿ ಮೂರು ವೇದಿಕೆಗಳಲ್ಲಿ ಗಹನವಾದ ಚರ್ಚೆಗಳು ಒಂದೆಡೆ ನಡೆದರೆ, ಇನ್ನೊಂದೆಡೆ ಸಾಲು ಸಾಲು ಪುಸ್ತಕ ಮಳಿಗೆಗಳು ಸಾಹಿತ್ಯಾಸಕ್ತರ ಓದಿನ ದಾಹ ತಣಿಸಲು ವಿವಿಧ ಭಾಷೆಗಳ ಪುಸ್ತಕಗಳನ್ನು ಹೊತ್ತು ತಂದಿದ್ದವು.

ಕನ್ನಡ, ತಮಿಳು, ಮಲಯಾಳಂ, ತೆಲುಗು ಮತ್ತು ಇಂಗ್ಲಿಷ್ ಭಾಷೆಯ ಪುಸ್ತಕಗಳನ್ನು ಹೊಂದಿದ್ದ 39 ಮಳಿಗೆಗಳು ಉತ್ಸವದಲ್ಲಿ ಇವೆ. ಕೆಲವು ಮಳಿಗೆಗಳಲ್ಲಿ ಲೇಖಕರೇ ಪುಸ್ತಕ ಮಾರುತ್ತಿದ್ದದ್ದು ವಿಶೇಷ.

ಕನ್ನಡದ ಪ್ರಮುಖ ಪ್ರಕಾಶನ ಸಂಸ್ಥೆಗಳ ಮಳಿಗೆಗಳ ಜತೆಗೆ ಶಿಕ್ಷಣ ಸಂಸ್ಥೆಗಳ ಮಳಿಗೆಗಳೂ ಇದ್ದವು.

ಮಳಿಗೆಗಳ ಬಳಿ ಪುಸ್ತಕಗಳ ಬಿಡುಗಡೆಗೆ ಪ್ರತ್ಯೇಕ ವೇದಿಕೆಯನ್ನೂ ಸಿದ್ಧಪಡಿಸಲಾಗಿತ್ತು.

ಸುದ್ದಿ 2 ನಿಮಿಷ

'ಆರ್‌ಎಸ್‌ಎಸ್‌ನಲ್ಲಿ ಕೋಮುದ್ವೇಷದ ಕತೆ'

ಬೆಂಗಳೂರು: 'ಆರ್‌ಎಸ್‌ಎಸ್‌ನ ಶಾಖೆಯಲ್ಲಿ ಕೋಮುದ್ವೇಷದ ಕತೆಗಳನ್ನು ಹೇಳಿಕೊಡಲಾಗುತ್ತಿತ್ತು. ಹೀಗಾಗಿ ಮಕ್ಕಳನ್ನು ಶಾಖೆಗೆ ಕಳುಹಿಸುವುದನ್ನು ನಿಲ್ಲಿಸಿದೆ' ಎಂದು ಸಾಹಿತಿ ಡಾ.ವಿಜಯಾ ಹೇಳಿದರು.

'ಆತ್ಮಕತೆಯ ಕಥೆ' ಗೋಷ್ಠಿಯಲ್ಲಿ ಸಭಿಕರೊಬ್ಬರು, ವಿಜಯಾ ಅವರ 'ಕುದಿ ಎಸರು' ಕೃತಿಯಲ್ಲಿ ಆರ್‌ಎಸ್‌ಎಸ್ ಶಾಖೆಯ ಉಲ್ಲೇಖವಿರುವ ಬಗ್ಗೆ ಪ್ರಶ್ನಿಸಿದರು. 'ಶಾಖೆಯಲ್ಲಿ ಚೆನ್ನಾಗಿ ಆಟವಾಡಿಸುತ್ತಾರೆ ಮತ್ತು ಕಥೆಗಳನ್ನು ಹೇಳುತ್ತಾರೆ ಎಂದು ಮಕ್ಕಳು ಹೇಳುತ್ತಿದ್ದರು. ಆ ಕಥೆಗಳನ್ನು ಮಕ್ಕಳಿಂದ ಕೇಳಿಸಿಕೊಂಡೆ. ಅವು ಕೋಮುಭಾವನೆಗಳನ್ನು ಉದ್ದೀಪಿಸುವ ಕಥೆಗಳಾಗಿದ್ದವು. ಇದನ್ನೇ ನನ್ನ ಆತ್ಮಕತೆಯಲ್ಲಿ ಉಲ್ಲೇಖಿಸಿದ್ದೇನೆ' ಎಂದು ವಿಜಯಾ ಹೇಳಿದರು.

'ಭಾರತದ ಸಂದರ್ಭದಲ್ಲಿ ಗಾಂಧೀಜಿ ಅವರ ಸತ್ಯಾನ್ವೇಷಣೆ ಎಂಬ ದೇಶಕಟ್ಟುವ ಮತ್ತು ದೇಶದ ಬರ್ಬರತೆಯನ್ನು ಬಿಚ್ಚಿಡುವ ಅಂಬೇಡ್ಕರ್ ಅವರ ಬಹಿಷ್ಕೃತ ಭಾರತ ಎಂಬ ಆತ್ಮಕತೆಗಳಿವೆ. ಅಂತಹ ಆತ್ಮಕತೆಗಳನ್ನು ಮತ್ತೆ ಬರೆಯಲು ಸಾಧ್ಯವಿಲ್ಲ. ಹಿಟ್ಲರ್ ಒಂದು ಭೀಕರವಾದ ಆತ್ಮಕತೆ ಬರೆದಿದ್ದ. ಭಾರತದ ಈಗಿನ ಸಂದರ್ಭದಲ್ಲಿ ಹಿಟ್ಲರ್‌ನ ಆತ್ಮಕತೆ ಯಂತಹದನ್ನು ಬರೆಯುವವರು ನೂರಾರು ಮಂದಿ ಇದ್ದಾರೆ' ಎಂದು ಕತೆಗಾರ ಮೊಗಳ್ಳಿ ಗಣೇಶ್ ಕಳವಳ ವ್ಯಕ್ತಪಡಿಸಿದರು.

ಸಿನಿಮಾ ಹಾಡುಗಳು ಬದುಕಿನ ಬಿಂಬ

ಬೆಂಗಳೂರು: ಸಿನಿಮಾ ಗೀತೆಗಳು ಮತ್ತು ಸಿನಿಮಾಗೆ ಅಳವಡಿಸುವ ಕವಿತೆಗಳಿಗೆ ಅವುಗಳದ್ದೇ ಆದ ಆಯಾಮಗಳಿದ್ದು, ಇವೆರಡನ್ನೂ ಪ್ರತ್ಯೇಕವಾಗಿಯೇ ನೋಡಬೇಕು...

'ಬೆಳ್ಳಿತೆರೆ: ಕವಿತೆ ಹಾಡಾದಾಗ' ಗೋಷ್ಠಿಯಲ್ಲಿ ವ್ಯಕ್ತವಾದ ಅಭಿಪ್ರಾಯಗಳಿವು.

ಸಾಹಿತಿ ಜಯಂತ ಕಾಯ್ಕಿಣಿ, 'ಸಿನಿಮಾ ಹಾಡುಗಳು ನಮ್ಮ ಜೀವನದ ಹಿನ್ನೆಲೆ ಸಂಗೀತ ಇದ್ದಂತೆ. ಕವಿತೆಯಲ್ಲಿ ಸುಖ, ದುಃಖ, ತತ್ವ, ಜ್ಞಾನ, ಸಂಘರ್ಷ ಎಲ್ಲವೂ ಇರುತ್ತವೆ. ಸಿನಿಮಾ ಗೀತೆ ಸನ್ನಿವೇಶ, ಸಂದರ್ಭಕ್ಕೆ ತಕ್ಕಂತೆ ರಚನೆಯಾಗಿರುತ್ತದೆ. ಹಾಗಾಗಿ, ಸಿನಿಮಾ ಗೀತೆಯನ್ನು ಬೇರೆ ದೃಷ್ಟಿಕೋನದಲ್ಲೇ ನೋಡಬೇಕು' ಎಂದರು.

ಸಿನಿಮಾ ನಿರ್ದೇಶಕ ಪಿ. ಶೇಷಾದ್ರಿ, 'ಸಿನಿಮಾ ಗೀತೆ ಮತ್ತು ಸಾಹಿತ್ಯ ಎರಡೂ ಸಿನಿಮಾದ ಅವಿಭಾಜ್ಯ ಅಂಗ. ಕವಿಗಳು ಬರೆದ ಗೀತೆಗಳನ್ನು ಬಳಸಿಕೊಳ್ಳುತ್ತಾ ಸಿನಿಮಾ ತನ್ನ ಶ್ರೀಮಂತಿಕೆಯನ್ನು ವಿಸ್ತರಿಸಿಕೊಂಡಿದೆ' ಎಂದರು.

ಲೇಖಕ ಎನ್.ಎಸ್. ಶ್ರೀಧರ್ ಮೂರ್ತಿ, 'ಸಿನಿಮಾ ಮತ್ತು ಸಾಹಿತ್ಯ ನೂರು ವರ್ಷಗಳಿಂದ ಜೊತೆಯಾಗಿ ಸಾಗುತ್ತಿವೆ' ಎಂದರು.

ಸಾಹಿತ್ಯೋತ್ಸವದಲ್ಲಿ ದೃಶ್ಯೋತ್ಸವ...

ಬೆಂಗಳೂರು: ಸಾಹಿತ್ಯೋತ್ಸವದಲ್ಲಿ ಚಿತ್ರಕಲಾ ಪ್ರದರ್ಶನವನ್ನೂ ಆಯೋಜಿಸಲಾಗಿದೆ.

ಚಿತ್ರಕಲಾ ಪ್ರದರ್ಶನದಲ್ಲಿಮುದ್ರಣ ಕಲೆ, ವುಡ್ ಕಟ್ ಚಿತ್ರ, ಸಮಕಾಲೀನ ಕಲೆ, ಎಚಿಂಗ್ ಚಿತ್ರಕಲೆ, ಚಿಕಣಿ ಚಿತ್ರಕಲೆ, ಲಿಥೊಗ್ರಫಿ, ಪರಿಕಲ್ಪನಾ ಕಲೆಗಳ ಕಲಾಕೃತಿಗಳಿಗೆ ಕಲಾಸಕ್ತರು ಮೆಚ್ಚುಗೆ ವ್ಯಕ್ತಪಡಿಸಿದರು.

ಡಾನ್ಸ್: ತಿಹಾರ್ ಜೈಲಿನ ಅಧಿಕಾರಿ ಅಮಾನತು

ನವದೆಹಲಿ (ಪಿಟಿಐ): ತಿಹಾರ್ ಜೈಲಿನ ಅಧಿಕಾರಿ ದೀಪಕ್ ಶರ್ಮಾ ಪಾರ್ಟಿಯೊಂದರಲ್ಲಿ ಪಿಸ್ತೂಲ್ ಝಳಪಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬೆನ್ನಲ್ಲೇ, ಅವರನ್ನು ಕೆಲಸದಿಂದ ಅಮಾನತು ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

18 ಸೆಕೆಂಡ್ ವಿಡಿಯೊದಲ್ಲಿ, ಮಂಡೋಲಿ ಕಾರಾಗೃಹದ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿ ದೀಪಕ್ ಶರ್ಮಾ ಅವರು ರಾಜಕೀಯ ನಾಯಕರೊಬ್ಬರು ಏರ್ಪಡಿಸಿದ್ದ ಪಾರ್ಟಿಯಲ್ಲಿ ಪಿಸ್ತೂಲ್ ಹಿಡಿದು ಡಾನ್ಸ್ ಮಾಡಿರುವ ದೃಶ್ಯವಿದೆ.

ಪಾರ್ಟಿಯಲ್ಲಿ ಗಾಳಿಯಲ್ಲಿ ಗುಂಡು ಹಾರಿಸಲಾಯಿತು ಎಂದೂ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ದುರ್ವರ್ತನೆ ಕಾರಣದಿಂದ ಶರ್ಮಾ ಅವರನ್ನು ಅಮಾನತು ಮಾಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬ್ಯಾಂಕ್ ಖಾತೆ: ನಾಲ್ವರ ನಾಮಿನಿಗೆ ಅವಕಾಶ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಶುಕ್ರವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಬ್ಯಾಂಕಿಂಗ್ ಕಾನೂನು (ತಿದ್ದುಪಡಿ) ಮಸೂದೆ–2024 ಮಂಡಿಸಿದ್ದಾರೆ.

ಠೇವಣಿದಾರರು ಬ್ಯಾಂಕ್ ಖಾತೆಗೆ ನಾಲ್ವರನ್ನು ನಾಮಿನಿಯಾಗಿ ಸೇರ್ಪಡೆ ಗೊಳಿಸುವುದು ಸೇರಿ ಬ್ಯಾಂಕಿಂಗ್ ನಿಯಮಾವಳಿಗಳಲ್ಲಿ ಹಲವು ಬದಲಾವಣೆಗೆ ಈ ಮಸೂದೆಯು ಅವಕಾಶ ಕಲ್ಪಿಸಲಿದೆ.

ಪ್ರಸ್ತುತ ಬ್ಯಾಂಕ್ ಖಾತೆಗೆ ಒಬ್ಬರನ್ನು ನಾಮಿನಿ ಮಾಡಲು ಅವಕಾಶವಿದೆ. ಏಕಕಾಲದಲ್ಲಿ ನಾಲ್ವರನ್ನು ವಾರಸುದಾರರನ್ನಾಗಿ ಮಾಡಲು ಮಸೂದೆಯು ಅವಕಾಶ ನೀಡಿದೆ. ಠೇವಣಿದಾರರು ಮತ್ತು ಹೂಡಿಕೆದಾರರ ಹಿತ ಕಾಪಾಡಲು ಸರ್ಕಾರವು ಈ ಕ್ರಮಕ್ಕೈಗೊಂಡಿದೆ ಎಂದು ಹೇಳಲಾಗಿದೆ. ಬ್ಯಾಂಕ್‌ನಲ್ಲಿರುವ ಠೇವಣಿ, ಚಿನ್ನಾಭರಣ, ದಾಖಲೆ ಪತ್ರಗಳು ಹಾಗೂ ಲಾಕರ್‌ಗಳಿಗೆ ಕಾನೂನಿನಡಿ ಠೇವಣಿದಾರರು ತಮ್ಮ ಉತ್ತರಾಧಿಕಾರಿಗಳ ನೇಮಕಕ್ಕೆ ಅವಕಾಶ ಒದಗಿಸಲಿದೆ. ವಾರಸುದಾರರಿಲ್ಲದ ಲಾಭಾಂಶ, ಷೇರು, ಬಡ್ಡಿ ಅಥವಾ ಬಾಂಡ್‌ಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾಯಿಸಲು ಅನುವು ಮಾಡಿಕೊಡುತ್ತದೆ.

ಬ್ರೆಜಿಲ್ ವಿಮಾನ ಪತನ 62 ಸಾವು

ಸಾವೊ ಪೌಲೊ (ಎಪಿ/ ಎಎಫ್‌ಪಿ): ಬ್ರೆಜಿಲ್‌ನ ಕಸ್ಕಾವೇಲ್ ನಗರದಿಂದ ಸೌವೊ ಪೌಲೊ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುತ್ತಿದ್ದ ವಿಮಾನವೊಂದು ವಿನೆದೊ ನಗರದ ಜನವಸತಿ ಪ್ರದೇಶದಲ್ಲಿ ಶುಕ್ರವಾರ ಪತನಗೊಂಡಿದ್ದು, 62 ಮಂದಿ ಮೃತಪಟ್ಟಿದ್ದಾರೆ.

ವೊಪಾಸ್ ವಿಮಾನಯಾನ ಸಂಸ್ಥೆಗೆ ಸೇರಿದ ವಿಮಾನದಲ್ಲಿ 58 ಪ್ರಯಾಣಿಕರು ಮತ್ತು ನಾಲ್ವರು ಸಿಬ್ಬಂದಿಯಿದ್ದರು. ದುರಂತದಲ್ಲಿ ಯಾರೂ ಬದುಕುಳಿದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನ ಬಿದ್ದ ಸ್ಥಳದಲ್ಲಿ ಬೆಂಕಿ ಮತ್ತು ಹೊಗೆ ಏಳುತ್ತಿರುವ ದೃಶ್ಯವನ್ನು ಬ್ರೆಜಿಲ್‌ನ 'ಗ್ಲೋಬೊ ನ್ಯೂಸ್' ಸುದ್ದಿವಾಹಿನಿ ಪ್ರಸಾರ ಮಾಡಿದೆ. ವಿಮಾನ ಪತನಗೊಳ್ಳುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ನಗರದಲ್ಲಿ ಇಂದು

ನ್ಯಾಷನಲ್ ಬಯೊ ಎಂಟರ್‌ಪ್ರನರ್‌ಶಿಪ್ ಸ್ಪರ್ಧೆಯ 'ಗ್ರ್ಯಾಂಡ್ ಫೈನಲ್': ಅತಿಥಿಗಳು: ಪ್ರಿಯಾಂಕ್ ಖರ್ಗೆ, ಏಕ್‌ರೂಪ್ ಕೌರ್, ಪ್ರಶಾಂತ್ ಪ್ರಕಾಶ್, ವಿಜಯಚಂದ್ರು, ಜಿತೇಂದ್ರ ಕುಮಾರ್, ಆಯೋಜನೆ: ಸಿ–ಕ್ಯಾಂಪ್, ಸ್ಥಳ: ಲಲಿತ್ ಅಶೋಕ್, ಬೆಂಗಳೂರು, ಬೆಳಿಗ್ಗೆ 9

'ಗಾಡ್ಗೀಳ್ ವರದಿ ಜಾರಿ ಮಾಡಲು ಇನ್ನೂ ಎಷ್ಟೆಷ್ಟು ಬಲಿ ಬೇಕು?' ಜೀವಲೋಕದ ಹಕ್ಕೊತ್ತಾಯಕ್ಕಾಗಿ ಚರ್ಚೆ ಮತ್ತು ಸಂವಾದ: ಭಾಗವಹಿಸುವವರು: ಮಾಧವ ಗಾಡ್ಗೀಳ್ (ಆನ್‌ಲೈನ್ ಮೂಲಕ), ಟಿ.ವಿ. ರಾಮಚಂದ್ರ, ನಾಗೇಶ ಹೆಗಡೆ, ಆಯೋಜನೆ: ಪರಿಸರಕ್ಕಾಗಿ ನಾವು, ಸ್ಥಳ: ಕಸ್ತೂರಬಾ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 9.30

ವರ್ಷಾ ಎಂ. ಭರತನಾಟ್ಯ ರಂಗಪ್ರವೇಶ: ಅತಿಥಿಗಳು: ನಂದಿನಿ ಕೆ. ಮೆಹ್ತಾ, ಶೇಷಾದ್ರಿ ಅಯ್ಯಂಗಾರ್, ತೇಜಸ್ವಿನಿ ಸಂಕೇಶ್ವರ್, ಸ್ಥಳ: ಸೇವಾ ಸದನ್ ಆಡಿಟೋರಿಯಂ, 14ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10

ಅಂತರ್ ಮಾಧ್ಯಮ ಕ್ರೀಡಾಕೂಟ 'ಪ್ರೆಸ್‌ಕ್ಲಬ್ ಇಂಡಿಪೆಂಡೆನ್ಸ್ ಕಪ್': ಉದ್ಘಾಟನೆ: ಕೆ.ವಿ. ಪ್ರಭಾಕರ್, ಅಧ್ಯಕ್ಷತೆ: ಆರ್. ಶ್ರೀಧರ, ಅತಿಥಿಗಳು: ಸೆಂಥಿಲ್ ಕುಮಾರ್ ಎಂ., ನಾಗಭೂಷಣ ಎಲ್.ಎನ್., ಗುರುಸ್ವಾಮಿ, ಕಾಂತರಾಜು, ಮಹೇಂದ್ರ ಎಂ.ಬಿ., ಆಯೋಜನೆ: ಬೆಂಗಳೂರು ಪ್ರೆಸ್‌ಕ್ಲಬ್, ಸ್ಥಳ: ಕೆ.ಜಿ.ಎಸ್. ಕ್ಲಬ್ ಆವರಣ, ಕಬ್ಬನ್ ಪಾರ್ಕ್, ಬೆಳಿಗ್ಗೆ 10

ಭಾರತೀ ಕಾಸರಗೋಡು ಅವರ 'ವಿ.ದೊರೆಸ್ವಾಮಿ ಅಯ್ಯಂಗಾರ್ ಪ್ರೈಡ್ ಆಫ್ ಮೈಸೂರು' ಕೃತಿ ಬಿಡುಗಡೆ ಕಾರ್ಯಕ್ರಮ: ಬಿಡುಗಡೆ: ಎಂ.ಜಿ. ಮಂಜುನಾಥ್, ಅತಿಥಿಗಳು: ಪದ್ಮಾ ಗುರುದತ್, ಡಿ. ಬಾಲಕೃಷ್ಣ, ಶಿವು ಶೆಣೈ, ಅಧ್ಯಕ್ಷತೆ: ಎ.ವಿ. ಆನಂದ್, ಆಯೋಜನೆ: ಸಿಂಧುಭೈರವಿ ಕಲಾಕುಟೀರ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಬೆಳಿಗ್ಗೆ 10.30

ಸೆಲೆಬ್ರೇಟ್ ಸೈನ್ಸ್: ಆಯೋಜನೆ: ಇಂಡಿಯಾ ಮಾರ್ಚ್ ಫಾರ್ ಸೈನ್ಸ್ ಕರ್ನಾಟಕ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10.30

ವಜ್ರಮಹೋತ್ಸವ ವರ್ಷಾಚರಣೆ ಪ್ರಯುಕ್ತ ಮಹಿಳಾ ಉದ್ಯಮಿದಾರರ ಸಮಾಗಮ ಮತ್ತು ಸಂವಾದ, ಸಹಕಾರಿ ಸಂತೆ: ಉದ್ಘಾಟನೆ: ಶೋಭಾ ಕರಂದ್ಲಾಜೆ, ಅಧ್ಯಕ್ಷತೆ: ರವಿ ಸುಬ್ರಹ್ಮಣ್ಯ, ಸಂತೆ, ಮಾರಾಟ ಮೇಳ ಉದ್ಘಾಟನೆ: ಮೀನಾಕ್ಷಿ ಗಡ್, ಅತಿಥಿಗಳು: ಜಿ. ಪದ್ಮಾವತಿ, ಸುದರ್ಶನ್ ಚನ್ನಂಗಿಹಳ್ಳಿ, ಆರ್. ಶಿವಕುಮಾರ್, ಎಂ.ಆರ್. ವೆಂಕಟೇಶ್, ಆಯೋಜನೆ: ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್, ಸ್ಥಳ: ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

'ಸ್ಕ್ಯಾರ್ ಇಟ್ ಅಪ್', 'ಧ್ರುವದಿಂದ ಧ್ರುವಕ್ಕೆ', 'ಫುಡ್ ಫೋಟೊಗ್ರಫಿ' ಛಾಯಾಚಿತ್ರ ಪ್ರದರ್ಶನ: ಆಯೋಜನೆ: ಯೂತ್ ಫೋಟೊಗ್ರಾಫಿಕ್ ಸೊಸೈಟಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಎಂಕೆಪಿಎಂ ಆರ್‌ವಿ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್ 2ನೇ ಪದವಿ ಪ್ರದಾನ ಸಮಾರಂಭ: ಅತಿಥಿ: ನ್ಯಾ. ಅರವಿಂದ್ ಕುಮಾರ್, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ: ಎಂಕೆಪಿಎಂ ಆರ್‌ವಿ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್, ಸ್ಥಳ ಕಾಲೇಜಿನ ಮಂಗಳ ಮಂಟಪ, ಬೆಳಿಗ್ಗೆ 11

ರಮಾ ಶರ್ಮಾ ಅವರ 'ಆ ಮಧುರ ಕ್ಷಣಗಳು' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಬಿ.ಎಲ್. ಶಂಕರ್, ಪುಸ್ತಕ ಬಿಡುಗಡೆ: ಜಯಂತಿ ಮನೋಹರ್, ಪುಸ್ತಕ ಪರಿಚಯ: ಗಿರಿಜಾ ಹರೀಶ್, ಉಪಸ್ಥಿತಿ: ಶಶಿಧರ್ ರಾವ್, ರಮಾ ಶರ್ಮ, ಆಯೋಜನೆ: ಸ್ನೇಹ ಬುಕ್ ಹೌಸ್, ಸ್ಥಳ: ಚಿತ್ರಕಲಾ ಪರಿಷತ್, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 11

ಇಕೆಬಾನ, ಪುಷ್ಪಭಾರತಿ, ಪುಷ್ಪರಂಗೋಲಿ, ತರಕಾರಿ ಕೆತ್ತನೆ, ಡಚ್ ಹೂವಿನ ಜೋಡಣೆ, ಒಣಹೂ ಜೋಡಣೆ, ಥಾಯ್ ಆರ್ಟ್, ಜಾನೂರು ಮತ್ತು ಬೊನ್ಸಾಯ್ ಗಿಡಗಳ ಪ್ರದರ್ಶನ: ಉದ್ಘಾಟನೆ: ಸುಧಾರಾಣಿ, ಅತಿಥಿ: ದು. ಸರಸ್ವತಿ, ಆಯೋಜನೆ: ರಾಜ್ಯ ಸರ್ಕಾರ, ತೋಟಗಾರಿಕೆ ಇಲಾಖೆ, ಕೆಎಸ್‌ಡಿಎಚ್, ಸ್ಥಳ: ಎಂ.ಎಚ್. ಮರಿಗೌಡ ಸ್ಮಾರಕ ಭವನ, ಲಾಲ್‌ಭಾಗ್, ಮಧ್ಯಾಹ್ನ 1

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

'ಸವಿಗಾನಯಾನ–2024' ಸವಿಗಾನ ಲಹರಿ: ಅತಿಥಿಗಳು: ಕಾ.ವೆಂ. ಶ್ರೀನಿವಾಸಮೂರ್ತಿ, ಕೆ.ವಿ. ರಘುರಾಮ. ಗೀತಗಾಯನ: ಆನಂದ ಮಾದಲಗೆರೆ, ಮೃತ್ಯುಂಜಯ ದೊಡ್ಡವಾಡ, ಬಂಡ್ಲಳ್ಳಿ ವಿಜಯಕುಮಾರ್, ಇಂಚರ ಪ್ರವೀಣ್ ಕುಮಾರ್, ವಾದ್ಯವೃಂದ: ಸೃಷ್ಟಿ ಉಮೇಶ್, ರಾಜ್‌ಕಿರಣ್ ರಾಜಾರಾಮ್, ರವಿಕಿರಣ್ ರಾಜಾರಾಮ್, ಸೃಷ್ಟಿ ಶ್ರೀನಿವಾಸ್. ಆಯೋಜನೆ: ಸವಿಗಾನಲಹರಿ ಸಗುಮ ಸಂಗೀತ ಶಾಲೆ, ವಿಜಯನಗರ ಸಾಂಸ್ಕೃತಿ ಕಲಾಕೇಂದ್ರ, ಸ್ಥಳ: ಉರ್ವ ಸಭಾಂಗಣ, ಉಪಕಾರ್ ಕ್ಲಬ್‌ಹೌಸ್ ಆವರಣ, ಉಲ್ಲಾಳು, ಮಧ್ಯಾಹ್ನ 3

'ಜಾತಿ ವರ್ಗೀಕರಣ–ಎಷ್ಟು ಸಮಂಜಸ? ವೈಜ್ಞಾನಿಕ' ಜೆ.ಎಸ್. ಸದಾನಂದರೊಂದಿಗೆ ಮಾತುಕತೆ: ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ಕೆಂಪೇಗೌಡನಗರ, ಸಂಜೆ 4.30

ವಜ್ರಮಹೋತ್ಸವ ಸಂಭ್ರಮ, ಮಹಿಳಾ ಸಂಗೀತ ಕಾರ್ಯಕ್ರಮ: ಭಾಗವಹಿಸುವವರು: ಅನುರಾಧಾ ಮಧುಸೂದನ್, ಜ್ಯೋತ್ಸ್ನ ಮಂಜುನಾಥ್, ರಂಜನಿ ವೆಂಕಟೇಶ್, ಸುಮನಾ ಚಂದ್ರಶೇಖರ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6ಕ್ಕೆ

'ಜೀವನ ಆವರ್ತನ' ವಿಶಿಷ್ಟ ಸಂಗೀತ ಸಂಜೆ: ಭಾಗವಹಿಸುವವರು: ದಿವಾಕರ್ ಕಶ್ಯಪ್, ಹರೀಶ್ ನರಸಿಂಹ, ಸ್ಮಿತಾ ವಸಂತ್, ರಶ್ಮಿ ಹರೀಶ್, ವಸಂತ ಕುಮಾರ್, ದುಶ್ಯಂತ್, ಗುರುರಾಜ್ ಎಚ್., ಗುರುರಾಜ್, ಜಿ.ಪಿ. ರಾಮಣ್ಣ, ಸುಧಾಕರ್, ಆಯೋಜನೆ: ಕಲಾಶ್ರೀ ಫೌಂಡೇಶನ್, ಸ್ಥಳ: ಸೇವಾ ಸದನ್ ಆಡಿಟೋರಿಯಂ, ಎಂಎಲ್‌ಎ ಕಾಲೇಜು, ಎದುರು, 14ನೇ ಕ್ರಾಸ್, ಮಲ್ಲೇಶ್ವರ, ಸಂಜೆ 6.30

'ಅಣು ರೇಣು ತೃಣ ಕಾಷ್ಠ' ನಾಟಕ ಪ್ರದರ್ಶನ: ಪ್ರಸ್ತುತಿ: ಪ್ರವರ ಥಿಯೇಟರ್, ಸ್ಥಳ: ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ, ಮಲ್ಲತ್ತಹಳ್ಳಿ, ಸಂಜೆ 7

ಯಕ್ಷ ಕಾರ್ತಿಕ–2024, 'ಭೂಕೈಲಾಸ', 'ದಕ್ಷಯಜ್ಞ', 'ಭಸ್ಮಾಸುರ' ಯಕ್ಷಗಾನ ಪ್ರದರ್ಶನ: ಆಯೋಜನೆ: ಪೆರ್ಡೂರು ಮೇಳ ಮತ್ತು ಅತಿಥಿ ಕಲಾವಿದರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ 9.55

स्वास्थ्य एवं परिवार कल्याण मंत्रालय
MINISTRY OF HEALTH AND FAMILY WELFARE
सत्यमेव जयते

ಪ್ರತಿ ವ್ಯಕ್ತಿಯ ಸಂಕಲ್ಪ
ಫಿಲಾರಿಯಾಸಿಸ್ (ಹಾತಿಪಾಂವ್)
ಮುಕ್ತ ಭಾರತ

"ಸರ್ವರಿಗೂ ಆರೋಗ್ಯ– ಇದೇ ನಮ್ಮ ಸಂಕಲ್ಪ"

ಆಗಸ್ಟ್ 10, ಫಿಲಾರಿಯಾಸಿಸ್ ವಿರುದ್ಧ ದೇಶವು ಹೋರಾಡುವ ಮಹತ್ವದ ದಿನವಾಗಿದೆ

ಸೊಳ್ಳೆ ಕಚ್ಚುವಿಕೆಯಿಂದ ಫಿಲಾರಿಯಾಸಿಸ್ ಹರಡುತ್ತದೆ; ಇದು ಕಚ್ಚಿದ 5–15 ವರ್ಷಗಳ ಬಳಿಕ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ; ಇದರಿಂದಾಗಿ ಹಾಥಿಪಾಂವ್ ಮತ್ತು ಹೈಡ್ರೊಸೀಲ್ ಊತ ಉಂಟಾಗುತ್ತದೆ.

ಆಗಸ್ಟ್ 10, 2024 ರಿಂದ 6 ರಾಜ್ಯಗಳ (ಬಿಹಾರ, ಜಾರ್ಖಂಡ, ಕರ್ನಾಟಕ, ಒಡಿಶಾ, ತೆಲಂಗಾಣ ಮತ್ತು ಉತ್ತರಪ್ರದೇಶ) 63 ಜಿಲ್ಲೆಗಳಾದ್ಯಂತ 2 ವಾರಗಳ ಕಾಲ ಮಾಸ್ ಡ್ರಗ್ ಅಡ್ಮಿನಿಸ್ಟ್ರೇಶನ್ (ಎಂಡಿಎ) ಶಿಬಿರ ನಡೆಸಲಾಗುತ್ತದೆ.

ಇಂದಿನಿಂದ, ಆರೋಗ್ಯ ಕಾರ್ಯಕರ್ತರು ನಿಮ್ಮ ಮನೆಗೆ ಭೇಟಿ ನೀಡುತ್ತಾರೆ ಮತ್ತು ನಿಮಗೆ ಫಿಲಾರಿಯಾಸಿಸ್ ತಡೆಗಟ್ಟುವ ಔಷಧಿ ನೀಡುತ್ತಾರೆ, ಕಡ್ಡಾಯವಾಗಿ ಔಷಧಿ ಪಡೆಯಿರಿ.

ಈ ಔಷಧಿಗಳು ನಿಮ್ಮ ಸಮೀಪದ ಸರ್ಕಾರಿ ಎಂಡಿಎ ಬೂತ್‌ನಲ್ಲಿ ಕೂಡ ಉಚಿತವಾಗಿ ಲಭಿಸುತ್ತವೆ.

ಹೆಚ್ಚಿನ ಮಾಹಿತಿಗಾಗಿ, ನಿಮ್ಮ ಸಮೀಪದ ಆರೋಗ್ಯ ಕೇಂದ್ರವನ್ನು ಮತ್ತು ಆಶಾ ದಿದಿಯರನ್ನು ಸಂಪರ್ಕಿಸಿರಿ

ನಾವೆಲ್ಲ ಒಟ್ಟಾಗಿ ಭಾರತ ದೇಶವನ್ನು ಫಿಲಾರಿಯಾಸಿಸ್ ಮುಕ್ತಗೊಳಿಸೋಣ

cbc 17102/13/0007/2425

mohfw.gov.in @MoHFWIndia @MoHFW_INDIA @mohfwindia mohfwindia @mohfw_india @mohfw_india @dohfw.india

ದೊಡ್ಡಬೆಳವಂಗಲದ ಎಂಎಸ್‌ಜಿಪಿ ಸಂಸ್ಥೆ ವಿರುದ್ಧ ತ್ಯಾಜ್ಯ ಸಾಗಣೆ ಗುತ್ತಿಗೆದಾರರಿಂದ ಸಿ.ಎಂ.ಗೆ ದೂರು

'ನಿಯಮ ಉಲ್ಲಂಘನೆ: ಮಣ್ಣು ಸೇರಿದ ತ್ಯಾಜ್ಯ'

● ಆರ್. ಮಂಜುನಾಥ್

ದೊಡ್ಡಬಳ್ಳಾಪುರ ತಾಲ್ಲೂಕಿನ ಚಿಗರೇನಹಳ್ಳಿ ಸಮೀಪದಲ್ಲಿ ಸಂಸ್ಕರಿಸದ ಕಸವನ್ನು ಬೆಟ್ಟದಂತೆ ಸುರಿಯಲಾಗಿದ್ದು, ಅದರಿಂದ ಸಮೀಪದ ಹೊಂಡದಲ್ಲಿನ ನೀರು ಕಲುಷಿತಗೊಂಡಿದೆ

ಬೆಂಗಳೂರು: ನಗರದಿಂದ ಸಾಗಣೆಯಾದ ಮಿಶ್ರ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಂಗಡಿಸಿ, ಗೊಬ್ಬರ ತಯಾರಿಸಬೇಕಿದ್ದ ಸಂಸ್ಥೆ, ನಿಯಮ ಉಲ್ಲಂಘಿಸಿ ಅಧಿಕೃತವಾಗಿ ಹೆಚ್ಚು ಕಸವನ್ನು ಮಣ್ಣಿನಲ್ಲಿ ಹೂಳಿದೆ.

ತ್ಯಾಜ್ಯ ಸಂಸ್ಕರಣೆ ಹಾಗೂ ಅವೈಜ್ಞಾನಿಕ ವಿಲೇವಾರಿಯಿಂದ ದೊಡ್ಡಬೆಳವಂಗಲದ ಚಿಗರೇನಹಳ್ಳಿ ಗ್ರಾಮಸ್ಥರ ಆಕ್ರೋಶಕ್ಕೆ ಗುರಿಯಾಗಿರುವ ಎಂಎಸ್‌ಜಿಪಿ 'ಇನ್‌ಫ್ರಾಟೆಕ್' ಸಂಸ್ಥೆ ವಿರುದ್ಧ, ನಗರದಿಂದ ತ್ಯಾಜ್ಯ ಸಾಗಣೆ ಮಾಡುವ ಗುತ್ತಿಗೆದಾರರ ಸಂಘವೂ ನಿಯಮ ಉಲ್ಲಂಘನೆಯ ಆರೋಪ ಮಾಡಿದೆ.

ಎಂಎಸ್‌ಜಿಪಿ 'ಇನ್‌ಫ್ರಾಟೆಕ್' ಸಂಸ್ಥೆ ಘನ ತ್ಯಾಜ್ಯ ಸಂಸ್ಕರಣೆ, ಭೂಭರ್ತಿಯಲ್ಲಿ ಹಲವು ನಿಯಮಗಳನ್ನು ಉಲ್ಲಂಘಿಸಿರುವ ಆರೋಪದ ಕುರಿತು ತನಿಖೆ ನಡೆಸಬೇಕು ಎಂದು ಬೆಂಗಳೂರು ಮಹಾನಗರ ತ್ಯಾಜ್ಯ ಮತ್ತು ಲಾರಿ ಮಾಲೀಕರು, ಗುತ್ತಿಗೆದಾರರ ಸಂಘ ಮನವಿ ಸಲ್ಲಿಸಿದೆ.

'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲದ ಚಿಗರೇನಹಳ್ಳಿಯಲ್ಲಿ ಘನತ್ಯಾಜ್ಯ ಸಂಸ್ಕರಣೆ ಹಾಗೂ ಭೂಭರ್ತಿಗೆ ಸ್ಥಳ ಒದಗಿಸಲಾಗಿದ್ದು ಎಂಎಸ್‌ಜಿಪಿ 'ಇನ್‌ಫ್ರಾಟೆಕ್' ಸಂಸ್ಥೆಯೊಂದಿಗೆ ಬಿಬಿಎಂಪಿ ಒಪ್ಪಂದ ಮಾಡಿಕೊಂಡಿದೆ. ಶೇ 50ಕ್ಕೂ ಹೆಚ್ಚು ತ್ಯಾಜ್ಯವನ್ನು ಭೂಭರ್ತಿ ಮಾಡಲಾಗಿದೆ. ಅಧಿಕೃತವಾಗಿಯೂ ಪಾಲಿಕೆಗೆ ನಷ್ಟವಾಗಿದೆ. ಈ ಬಗ್ಗೆ ಲೋಕಾಯುಕ್ತ ಅಥವಾ ಸಿಐಡಿ ತನಿಖೆ ನಡೆಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ಅವರು ಪತ್ರ ಬರೆದಿದ್ದಾರೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಲಿಮಿಟೆಡ್‌ನ (ಬಿಎಸ್‌ಡಬ್ಲ್ಯುಎಂಎಲ್) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಿಗೂ ಈ ದೂರಿನ ಪ್ರತಿ ಸಲ್ಲಿಸಿದ್ದಾರೆ.

'ಘನತ್ಯಾಜ್ಯ ಸಂಸ್ಕರಣೆ ಘಟಕದಲ್ಲಿ ಶೇ 15ರಷ್ಟು ಹೆಚ್ಚು ತ್ಯಾಜ್ಯವನ್ನು ಭೂಭರ್ತಿ ಮಾಡುವಂತಿಲ್ಲ ಎಂಬ ನಿಯಮವಿದೆ. ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ನೋಟಿಸ್ ನೀಡಿದ್ದರೂ ಎಂಎಸ್‌ಜಿಪಿ, 4.60 ಲಕ್ಷ ಟನ್‌ನಿಂದ 5.60 ಲಕ್ಷ ಟನ್‌ನಷ್ಟು ತ್ಯಾಜ್ಯವನ್ನು ಮಣ್ಣಿನಲ್ಲಿ (ಮಡ್ ಕ್ಯಾಪ್) ಹೂಳಿದೆ. ಪ್ರತಿ ನಿತ್ಯ 500 ಟನ್ ಮಿಶ್ರ ತ್ಯಾಜ್ಯ ಸಂಸ್ಕರಣೆ ಸಾಮರ್ಥ್ಯದ ಘಟಕವನ್ನು 2014ರಿಂದ 2022ರವರೆಗೆ ನಿರ್ವಹಣೆ ಮಾಡಿದ್ದ ಎಂಎಸ್‌ಜಿಪಿ, ಸುಮಾರು 11.05 ಲಕ್ಷ ಮೆಟ್ರಿಕ್ ಟನ್ ತ್ಯಾಜ್ಯವನ್ನು ಬಿಬಿಎಂಪಿಯಿಂದ ಪಡೆದುಕೊಂಡಿದೆ. ಇದರಲ್ಲಿ ಶೇ 50ಕ್ಕೂ ಹೆಚ್ಚು ಪ್ರಮಾಣದ ತ್ಯಾಜ್ಯವನ್ನು ಸಂಸ್ಕರಣೆ ಮಾಡದೆ ಮಣ್ಣಿನಲ್ಲಿ ಹೂಳಿದೆ' ಎಂದು ದೂರಿದ್ದಾರೆ.

'ಪರಿಸರ ಮಾಲಿನ್ಯ ಉಂಟು ಮಾಡುತ್ತಿರುವ ಎಂಎಸ್‌ಜಿಪಿ ವಿರುದ್ಧ ಬಿಬಿಎಂಪಿ ಮುಖ್ಯ ಎಂಜಿನಿಯರ್ ಅವರು ಬೆಳವಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ (150/2021) ದಾಖಲಿಸಿದ್ದಾರೆ. ಇದು ಒಪ್ಪಂದ ಉಲ್ಲಂಘನೆಯಾಗಿದೆ. ಟಿಪ್ಪಿಂಗ್ ಶುಲ್ಕ ಹಾಗೂ ಅಂತಿಮ ತ್ಯಾಜ್ಯ ರಹಿತದಲ್ಲಿ ಶೇ 15ರಷ್ಟು ಮೊತ್ತವನ್ನು ಉಳಿಸಿಕೊಂಡು, ಗುತ್ತಿಗೆ ಅವಧಿ ಮುಗಿದ ನಂತರದ 180 ತಿಂಗಳಲ್ಲಿ ಅದನ್ನು ಮಾಸಿಕವಾಗಿ ನೀಡಬೇಕು. ಆದರೆ, ಶೇ 100ರಷ್ಟೂ ಹಣವನ್ನು ಈಗಾಗಲೇ ಪಾವತಿಸಲಾಗಿದೆ' ಎಂದು ದಾಖಲೆ ಸಹಿತ ಮಾಹಿತಿ ನೀಡಿದ್ದಾರೆ.

ಕೊಳವೆಬಾವಿಯಲ್ಲಿ ರಾಸಾಯನಿಕ, ಒಣಗಿರುವ ತೋಟಗಳು

ಚಿಗರೇನಹಳ್ಳಿ ಗ್ರಾಮದಲ್ಲಿ ಜಪಾನ್ ಮಾದರಿಯ ಆಧುನಿಕ ಯಂತ್ರಗಳನ್ನು ಬಳಸಿಕೊಂಡು ಕಸವನ್ನು ಗೊಬ್ಬರವಾಗಿಸಲು 2014ರಲ್ಲಿ ಎಂಎಸ್‌ಜಿಪಿ ತ್ಯಾಜ್ಯ ಸಂಸ್ಕರಣೆ ಘಟಕ ಪ್ರಾರಂಭವಾಯಿತು. ನಂತರ ಎರಡೇ ವರ್ಷಕ್ಕೆ ಅಂತರ್ಜಲ ಸೇರಿದಂತೆ ಸುತ್ತಮುತ್ತಲಿನ ಪರಿಸರವನ್ನೇ ನಾಶ ಮಾಡಲಾರಂಭಿಸಿತು. ಕಸದ ರಾಶಿಯಿಂದ ಹೊರಬರುವ ದ್ರವ ತ್ಯಾಜ್ಯದಿಂದ ಚಿಗರೇನಹಳ್ಳಿ ಗ್ರಾಮದ ರೈತರ ಕೊಳವೆ ಬಾವಿಗಳಲ್ಲಿ ರಾಸಾಯನಿಕಯುಕ್ತ ನೀರು ಬರುತ್ತಿದೆ. ಅಡಿಕೆ, ಬಾಳೆ ತೋಟಗಳು ಒಣಗಿವೆ. ಕುಡಿಯುವ ನೀರಿಗೆ ತತ್ವಾರ ಇಂದಿಗೂ ತಪ್ಪಿಲ್ಲ ಎಂದು ಸ್ಥಳೀಯರು ದೂರುತ್ತಾರೆ.

'ಚಿಗರೇನಹಳ್ಳಿಯಲ್ಲಿ ಎಂಎಸ್‌ಜಿಪಿ ತ್ಯಾಜ್ಯ ವಿಲೇವಾರಿ ಘಟಕದ ಅವಾಂತರ ಮಿತಿ ಮೀರಿದೆ. ಈ ಭಾಗದ ಜನರು ಜೀವನ ನಡೆಸುವುದೇ ಕಷ್ಟವಾಗಿದೆ' ಎಂದು ದೊಡ್ಡಬೆಳವಂಗಲ ಗ್ರಾಮದ ವಿಜಯಕುಮಾರ್, ಸಿ.ಎಚ್.ರಾಮಕೃಷ್ಣ ದೂರಿದರು. 'ಶಾಸಕರು, ಜನಪ್ರತಿನಿಧಿಗಳು ಸೇರಿದಂತೆ ಅಧಿಕಾರಿಗಳಿಗೂ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಭರವಸೆ ಇನ್ನೂ ಈಡೇರಿಲ್ಲ' ಎಂದರು.

'ಉಲ್ಲಂಘನೆ ಆಗಿಲ್ಲ, ತನಿಖೆ ಮಾಡಲಿ'

'ದೇಶದಲ್ಲಿ ಸ್ವಂತ ಜಾಗದಲ್ಲಿ ಸಂಸ್ಕರಣೆ ಘಟಕ ನಡೆಸುತ್ತಿರುವ ಸಂಸ್ಥೆ ನಮ್ಮದು ಮಾತ್ರ. ಉತ್ತಮ ಗುಣಮಟ್ಟದ ಗೊಬ್ಬರವನ್ನು ಒದಗಿಸುತ್ತಿದ್ದೇವೆ. ಸರ್ಕಾರದೊಂದಿಗಿನ ಒಪ್ಪಂದದಂತೆಯೇ ನಿರ್ವಹಿಸಲಾಗುತ್ತಿದೆ. ಕೆಲವು ಸಮಯದಲ್ಲಿ ವ್ಯತ್ಯಾಸಗಳಾಗುತ್ತವೆ. ಆರೋಪಗಳು ಸುಳ್ಳಾಗಿದ್ದು, ನಮ್ಮದು ಮುಕ್ತವಾಗಿರುವ ಘಟಕ, ಯಾರು ಯಾವಾಗ ಬೇಕಾದರೂ ಬಂದು ತನಿಖೆ ಮಾಡಿಕೊಳ್ಳಲಿ' ಎಂದು ಎಂಎಸ್‌ಜಿಪಿ 'ಇನ್‌ಫ್ರಾಟೆಕ್' ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ಪ್ರವೀಣ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಆತ್ಮಹತ್ಯೆ ಪ್ರಕರಣ ಮಹಿಳೆ ಗುರುತು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಸಾಯಿ ರೆಸಿಡೆನ್ಸಿಯ ಬಾಲ್ಕನಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ ಮಹಿಳೆಯ ಗುರುತು ಪತ್ತೆಯಾಗಿದೆ.

ಚನ್ನಪಟ್ಟಣದ ಜಯಶ್ರೀ (46) ಆತ್ಮಹತ್ಯೆ ಮಾಡಿಕೊಂಡವರು.

ಮಹಿಳೆ ಧರಿಸಿದ್ದ ವಸ್ತ್ರದ ಜೇಬಿನಲ್ಲಿ ಬಸ್ ಮತ್ತು ಸಿನಿಮಾ ಟಿಕೆಟ್ ಮಾತ್ರ ಪತ್ತೆ ಆಗಿದ್ದವು. ಅವರ ಗುರುತಿನ ಚೀಟಿ ಸಿಕ್ಕಿರಲಿಲ್ಲ. ಭಾನುವಾರ ನವರಂಗ್ ಥಿಯೇಟರ್ ನಲ್ಲಿ ಅವರು ಸಿನಿಮಾ ವೀಕ್ಷಿಸಿ ಬಿಎಂಟಿಸಿ ಬಸ್‌ನಲ್ಲಿ ಮೆಜೆಸ್ಟಿಕ್‌ನಿಂದ ಮಲ್ಲೇಶ್ವರಕ್ಕೆ ಬಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

'ವೈಯಕ್ತಿಕವಲ್ ನಿವಾಸಿಯಾದ ಜಯಶ್ರೀ ಅವರು ಚನ್ನಪಟ್ಟಣದ ವ್ಯಕ್ತಿಯೊಬ್ಬರನ್ನು ಮದುವೆ ಆಗಿದ್ದರು. ದಂಪತಿಗೆ ಮೂವರು ಮಕ್ಕಳಿದ್ದಾರೆ. ಕುಟುಂಬಸ್ಥರ ಜತೆಗೆ ಮನಸ್ತಾಪ ಉಂಟಾಗಿತ್ತು. ಅದೇ ಬೇಸರದಲ್ಲಿ ಮನೆಬಿಟ್ಟು ಬಂದಿದ್ದರು. ಚನ್ನಪಟ್ಟಣದ ಅರಮಿಟ್ಟು ನಗರಕ್ಕೆ ಬಂದಿದ್ದ ಅವರು ಮೆಜೆಸ್ಟಿಕ್‌ನಲ್ಲೇ ರಾತ್ರಿ ನಿದ್ರಿಸಿದ್ದರು. ಅಲ್ಲದೇ ಸಿನಿಮಾ ವೀಕ್ಷಣೆ ಮಾಡಿದ್ದರು. ಮಂಗಳವಾರ ಬೆಳಿಗ್ಗೆ ಮಲ್ಲೇಶ್ವರಕ್ಕೆ ಬಂದಿದ್ದರು. ಅಪಾರ್ಟ್‌ಮೆಂಟ್‌ನಲ್ಲಿ ಸಿಸಿ ಟಿವಿ ಕ್ಯಾಮೆರಾ ಹಾಗೂ ಭದ್ರತಾ ಸಿಬ್ಬಂದಿ ಇಲ್ಲದಿರುವುದನ್ನು ಗಮನಿಸಿದ್ದರು. ನಂತರ, ಕಟ್ಟಡದೊಳಕ್ಕೆ ಪ್ರವೇಶಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

ವಿಧಾನಸೌಧಕ್ಕೆ ಅಕ್ರಮ ಪ್ರವೇಶ: ಗುತ್ತಿಗೆದಾರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವಾಲಯದಲ್ಲಿ ಆಪ್ತ ಸಹಾಯಕನಾಗಿ ಕೆಲಸ ಮಾಡುತ್ತಿರುವುದಾಗಿ ಹೇಳಿಕೊಂಡು ನಕಲಿ ಗುರುತಿನ ಚೀಟಿ ತೋರಿಸಿ ವಿಧಾನಸೌಧಕ್ಕೆ ಪ್ರವೇಶ ಪಡೆದು ಓಡಾಟ ನಡೆಸುತ್ತಿದ್ದ ಗುತ್ತಿಗೆದಾರರೊಬ್ಬರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಳಗಾವಿ ಜಿಲ್ಲೆ ಗೋಕಾಕ್ ತಾಲ್ಲೂಕಿನ ಜಯನಗರದ ನಿವಾಸಿ ಶ್ರೀಶೈಲ ಜಕ್ಕಣ್ಣನವರ್ ಬಂಧಿತ ಆರೋಪಿ.

'ಎಂ.ಎ ಪದವಿ ಪಡೆದಿರುವ ಜಕ್ಕಣ್ಣನವರ್ ಗುತ್ತಿಗೆದಾರರಾಗಿದ್ದಾರೆ. ಗುತ್ತಿಗೆ ಸಂಬಂಧಿತ ಕೆಲಸಕ್ಕಾಗಿ ಆಗಾಗ್ಗೆ ವಿಧಾನಸೌಧಕ್ಕೆ ಬರುತ್ತಿದ್ದರು. ಪಾಸ್ ಇಲ್ಲದೇ ವಿಧಾನಸೌಧದ ಒಳಕ್ಕೆ ಪ್ರವೇಶ ಪಡೆಯಲು ಪರದಾಡುತ್ತಿದ್ದರು. ಇದರಿಂದ ತಪ್ಪಿಸಿಕೊಳ್ಳಲು ಸಚಿವಾಲಯದಲ್ಲಿ ಆಪ್ತ ಸಹಾಯಕನಾಗಿ ಕೆಲಸ ಮಾಡುತ್ತಿರುವುದಾಗಿ ಹೇಳಿಕೊಂಡು ನಕಲಿ ಗುರುತಿನ ಚೀಟಿ ತೋರಿಸಿ ವಿಧಾನಸೌಧದ ಆವರಣ ಪ್ರವೇಶಿಸುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಆಗಸ್ಟ್ 5ರಂದು ನಕಲಿ ಗುರುತಿನ ಚೀಟಿ ತೋರಿಸಿ ತೆರಳುತ್ತಿದ್ದಾಗ ಅನುಮಾನಗೊಂಡ ಭದ್ರತಾ ಸಿಬ್ಬಂದಿ ಆರೋಪಿಯನ್ನು ತಡೆದು ವಿಚಾರಣೆ ನಡೆಸಿದರು. ಗುರುತಿನ ಚೀಟಿ ಪರಿಶೀಲಿಸಿದರು. ಆಗ ಅದು ನಕಲಿ ಎಂದು ಗೊತ್ತಾಯಿತು. ಬಳಿಕ ಜಕ್ಕಣ್ಣನವರ್ ಅವರನ್ನು ಬಂಧಿಸಲಾಯಿತು' ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಕಚೇರಿಯಲ್ಲಿ ಕೆಲಸ ಮಾಡಿಸಿಕೊಡುವುದಾಗಿ ಕೆಲವು ವ್ಯಕ್ತಿಗಳಿಗೆ ಈ ವ್ಯಕ್ತಿ ವಂಚಿಸಿರುವ ಆರೋಪವೂ ಇದೆ. ಆದರೆ, ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಲಭ್ಯವಾಗಿಲ್ಲ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು

ಡೇಟಿಂಗ್ ಆ್ಯಪ್‌ನಲ್ಲಿ ಪರಿಚಿತಳಾದ ಮಹಿಳೆಯಿಂದ ಕೃತ್ಯಕ್ಕೆ ಸಹಕಾರ

ಮನೆಯಲ್ಲಿ ಚಿನ್ನ ಕದ್ದು ಸಿಕ್ಕಿ ಬಿದ್ದ ಇಬ್ಬರು ಕಳ್ಳರು

ಪ್ರಜಾವಾಣಿ ವಾರ್ತೆ

ನಾರಾಯಣಸ್ವಾಮಿ

ನವೀನಾ

ಬೆಂಗಳೂರು: ತನ್ನ ತಾಯಿ ಕೆಲಸ ಮಾಡುತ್ತಿದ್ದ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ವ್ಯಕ್ತಿ ಹಾಗೂ ಕೃತ್ಯದಲ್ಲಿ ಆತನಿಗೆ ಸಹಕರಿಸಿದ್ದ ಮಹಿಳೆಯನ್ನು ಆಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾರಾಯಣಸ್ವಾಮಿ ಹಾಗೂ ನವೀನಾ ಎಂಬುವರನ್ನು ಬಂಧಿಸಿ, ₹ 20.74 ಲಕ್ಷ ಮೌಲ್ಯದ 333 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದುಕೊಳ್ಳಲಾಗಿದೆ.

ಐ.ಟಿ. ಕಂಪನಿ ಉದ್ಯೋಗಿ ಲಕ್ಕಸಂದ್ರದ ನಿವಾಸಿ ಸೈಯದ್ ರೆಹಮಾನ್ ಅವರು ಕುಟುಂಬ ಸಮೇತ ದುಬೈನಲ್ಲಿ ವಾಸವಾಗಿದ್ದಾರೆ. ಇವರ ಮನೆಯಲ್ಲಿ ಆರೋಪಿ ನಾರಾಯಣಸ್ವಾಮಿ ಅವರ ತಾಯಿ 20 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಸಿದ್ದಾಪುರದಲ್ಲಿ ವಾಸವಾಗಿರುವ ತಾಯಿಗೆ ಹೆಚ್ಚು ಕೆಲಸವಿದ್ದ ಸಂದರ್ಭದಲ್ಲಿ ಮಾತ್ರ ಈತ ರೆಹಮಾನ್ ಮನೆಗೆ ಹೋಗುತ್ತಿದ್ದ. ಬಳಿಕ ತನ್ನ ಕೆಲಸ ಮುಗಿಸಿಕೊಂಡು ಬರುತ್ತಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನಾರಾಯಣಸ್ವಾಮಿಗೆ ಇಬ್ಬರು ಮಕ್ಕಳಿದ್ದಾರೆ. ಪಾರ್ಶ್ವವಾಯುವಿನಿಂದ ಬಳಲುತ್ತಿರುವ ಪತ್ನಿಗೆ ಚೆನ್ನೈನಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದಾನೆ. ಆರೋಪಿ ನವೀನಾ ಪತಿ ಕೆಲ ವರ್ಷಗಳ ಹಿಂದೆ ಮೃತಪಟ್ಟಿದ್ದು, ಇಬ್ಬರು ಮಕ್ಕಳಿದ್ದಾರೆ. ವರ್ಷದ ಹಿಂದೆ 'ಡೇಟಿಂಗ್ ಆ್ಯಪ್'ನಲ್ಲಿ ನವೀನಾ ಮತ್ತು ನಾರಾಯಣಸ್ವಾಮಿ ಪರಿಚಿತರಾಗಿದ್ದರು. ಇಬ್ಬರೂ ಮದುವೆಯಾಗಿದ್ದಾರೆ. ಜೀವನ ನಿರ್ವಹಣೆಗೆ ಹಣ ಸಂಪಾದಿಸಲು ಕಳ್ಳತನ ಮಾಡುವಂತೆ ನಾರಾಯಣಸ್ವಾಮಿಗೆ ನವೀನಾ ಸೂಚಿಸಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ.

ದುಬೈಗೆ ತೆರಳುವ ಮುನ್ನ ಮಾಲೀಕರು ಬೀಗದ ಕೀ ಅನ್ನು ತನ್ನ ಸಂಬಂಧಿಕರಿಗೆ ಕೊಟ್ಟಿದ್ದರು. ಮನೆ ಕೆಲಸದಾಕೆ ನಿತ್ಯ ಬಂದು ಮನೆ ಸ್ವಚ್ಛ ಮಾಡುತ್ತಿದ್ದರು. ಆಗ ತಾಯಿ ಜತೆ ಬಂದಿದ್ದ ನಾರಾಯಣಸ್ವಾಮಿ, ಮನೆ ಸ್ವಚ್ಛ ಮಾಡುವ ವೇಳೆ ಚಿನ್ನಾಭರಣ ಕಳವು ಮಾಡಿದ್ದ. ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಕಳವು ಮಾಡಿದ್ದ ಆಭರಣಗಳನ್ನು ಎರಡನೇ ಪತ್ನಿಗೆ ನೀಡಿರುವುದಾಗಿ ತಿಳಿಸಿದ್ದ. ಆಕೆ ಗಿರವಿ ಇಟ್ಟಿದ್ದ 135 ಗ್ರಾಂ. ತೂಕದ ಚಿನ್ನದ ಸರವನ್ನು ವಶಪಡಿಸಿಕೊಳ್ಳಲಾಯಿತು. ಅಲ್ಲದೇ ನವೀನಾ ಸಂಬಂಧಿಕರು ವಿವಿಧ ಫೈನಾನ್ಸ್ ಕಂಪನಿಗಳಲ್ಲಿ ಅಡವಿಟ್ಟಿದ್ದ ಸುಮಾರು 198 ಗ್ರಾಂ. ತೂಕದ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಡಿ.ಪಿಯಲ್ಲಿ ಫೋಟೊ ಹಾಕಿ ಸಿಕ್ಕಿಬಿದ್ದ ಮನೆ ಕೆಲಸದಾಕೆ!

ರೇಣುಕಾ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲಿ ಕಳವು ಮಾಡಿದ್ದ ಚಿನ್ನದ ನೆಕ್ಲೆಸ್ ಅನ್ನು ಧರಿಸಿಕೊಂಡು ವಾಟ್ಸ್‌ಆ್ಯಪ್ ಡಿ.ಪಿಯಲ್ಲಿ ಫೋಟೊ ಹಾಕಿಕೊಂಡಿದ್ದ ಆರೋಪಿಯನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಾರತ್ತಹಳ್ಳಿಯ ನಿವಾಸಿ ರೇಣುಕಾ (38) ಬಂಧಿತೆ. ಆರೋಪಿಯಿಂದ ₹5 ಲಕ್ಷ ಮೌಲ್ಯದ 80 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮಾರತ್ತಹಳ್ಳಿಯ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದರಲ್ಲಿ ಆರೋಪಿ ಹಲವು ತಿಂಗಳಿಂದ ಮನೆಗೆಲಸ ಮಾಡುತ್ತಿದ್ದರು. ಮಾಲೀಕರ ಗಮನಕ್ಕೆ ಬಾರದಂತೆ ಕಬೋರ್ಡ್‌ನಲ್ಲಿದ್ದ ಚಿನ್ನದ ನೆಕ್ಲೆಸ್ ಅನ್ನು ಕಳವು ಮಾಡಿದ್ದರು. ಕೆಲವು ದಿನಗಳ ಹಿಂದೆ ಕಬೋರ್ಡ್ ಪರಿಶೀಲನೆ ನಡೆಸಿದಾಗ ನೆಕ್ಲೆಸ್ ಇರಲಿಲ್ಲ. ಮನೆಯಲ್ಲಿ ಕೆಲಸ ಮಾಡುತ್ತಿದ್ದ ರೇಣುಕಾ ಸೇರಿದಂತೆ ನಾಲ್ವರು ಕೆಲಸಗಾರರ ಮೇಲೆ ಅನುಮಾನ ವ್ಯಕ್ತಪಡಿಸಿ, ಮಾಲೀಕರು ಎಚ್‌ಎಎಲ್ ಠಾಣೆ ಪೊಲೀಸರಿಗೆ ದೂರು ನೀಡಿದ್ದರು.

'ಪೊಲೀಸರು ನಾಲ್ವರು ಕೆಲಸಗಾರರನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿದ್ದರು. ಆದರೆ, ಸುಳಿವು ಸಿಕ್ಕಿರಲಿಲ್ಲ. ಇತ್ತೀಚೆಗೆ ರೇಣುಕಾ ಕದ್ದ ನೆಕ್ಲೆಸ್ ಅನ್ನು ಧರಿಸಿಕೊಂಡು ಫೋಟೊ ತೆಗೆಸಿ ಅದನ್ನು ತನ್ನ ಡಿ.ಪಿಯಲ್ಲಿ ಹಾಕಿಕೊಂಡಿದ್ದರು. ಇದನ್ನು ಗಮನಿಸಿದ ಮನೆ ಮಾಲೀಕರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದರು. ಆಗ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ನಿಜ ಬಾಯ್ಬಿಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಸಾಯಲು ಕಟ್ಟಡ ಏರಿದ್ದ ವ್ಯಕ್ತಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇಷಾದ್ರಿಪುರ ಕಾಲೇಜು ಹಿಂಭಾಗದಲ್ಲಿರುವ ನಿರ್ಮಾಣ ಹಂತದ ಕಟ್ಟಡದ 5ನೇ ಮಹಡಿ ಏರಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸುತ್ತಿದ್ದ ವ್ಯಕ್ತಿಯನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಹಾಗೂ ಅಗ್ನಿಶಾಮಕದಳದ ಸಿಬ್ಬಂದಿ ಗುರುವಾರ ರಕ್ಷಿಸಿದ್ದಾರೆ.

ದೇವನಹಳ್ಳಿ ನಿವಾಸಿ ಮಂಜುನಾಥ್ (27) ಆತ್ಮಹತ್ಯೆಗೆ ಯತ್ನಿಸಿದ ಯುವಕ.

ಗುರುವಾರ ಬೆಳಿಗ್ಗೆ ಸುಮಾರು 9ರ ಸುಮಾರಿಗೆ ನಿರ್ಮಾಣ ಹಂತದ ಕಟ್ಟಡವನ್ನೇರಿದ್ದ ಮಂಜುನಾಥ್, 'ನಾನು ಇಲ್ಲಿಂದ ಬಿದ್ದು ಸಾಯುತ್ತೇನೆ. ನನ್ನ ಪತ್ನಿ ಬಿಟ್ಟು ಹೋಗಿರುವ ದುಃಖದಲ್ಲಿದ್ದೇನೆ. ಕಟ್ಟಡದಿಂದ ಜಿಗಿಯುತ್ತೇನೆ' ಎಂದು ಗೋಳಾಡಿದರು.

ಈ ವಿಚಾರ ತಿಳಿದು ಸ್ಥಳಕ್ಕೆ ಬಂದ ಶೇಷಾದ್ರಿಪುರ ಪೊಲೀಸರು, ಅಗ್ನಿಶಾಮಕ ದಳ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿಕೊಂಡು ಮಂಜುನಾಥ್ ಅವರನ್ನು ಮನವೊಲಿಸಿ ಕೆಳಕ್ಕೆ ಇಳಿಸಿದರು.

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ್‌ಗೆ ಮದುವೆಯಾಗಿದ್ದು, ಕೌಟುಂಬಿಕ ವಿಚಾರವಾಗಿ ಪತ್ನಿ ದೂರವಾಗಿದ್ದರು. ಅದರಿಂದ ಆತ ಮಾನಸಿಕ ಖಿನ್ನತೆಗೊಳಗಾಗಿದ್ದರು ಎನ್ನಲಾಗಿದೆ.

ಮುಖಕ್ಕೆ ಉಗಿದಿದ್ದ ಆಟೊ ಚಾಲಕನ ಬಂಧನ

ಪ್ರಜಾವಾಣಿ ವಾರ್ತೆ

ಕಿರಣ್

ಬೆಂಗಳೂರು: ಮಾರತ್‌ಹಳ್ಳಿಯ ಯಮಲೂರು ಸಿಗ್ನಲ್ ಬಳಿ ಕಾರು ಚಾಲಕನ ಮುಖಕ್ಕೆ ಉಗಿದು ದುರ್ವತನೆ ತೋರಿದ್ದ ಆರೋಪದಡಿ ಆಟೊ ಚಾಲಕನನ್ನು ಎಚ್‌ಎಎಲ್ ಠಾಣಾ ಪೊಲೀಸರು ಬಂಧಿಸಿ, ನಂತರ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಯಮಲೂರಿನ ಕಿರಣ್ (34) ಬಂಧಿತ. 'ಆಗಸ್ಟ್ 5ರಂದು ಮಾರತ್‌ಹಳ್ಳಿ ಜಂಕ್ಷನ್‌ನ ಸಿಗ್ನಲ್ ಬಳಿ ಕಾರಿನಲ್ಲಿ ದೂರುದಾರ ಅಲೆಕ್ಸ್ ಬಾಬಿ ತೆರಳುತ್ತಿದ್ದರು. ಅದೇ ಮಾರ್ಗದಲ್ಲಿ ಕಿರಣ್ ಆಟೊದಲ್ಲಿ ಬರುತ್ತಿದ್ದರು. ಮುಂದೆ ಸಾಗಲು ಅವಕಾಶ ನೀಡಲಿಲ್ಲ ಎಂಬ ಕಾರಣಕ್ಕೆ ಆಟೊ ಚಾಲಕ ಗಲಾಟೆ ನಡೆಸಿ, ಕಾರಿನ ಮಿರರ್‌ಗೆ ಹೊಡೆದು ದುರ್ವತನೆ ತೋರಿದ್ದ. ಅಲ್ಲದೇ ಚಾಲಕನ ಮುಖಕ್ಕೆ ಉಗಿದು ಬೆದರಿಕೆ ಹಾಕಿದ್ದ. ಕಾರಿನಲ್ಲಿದ್ದವರು ಈ ದೃಶ್ಯವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಸಾಮಾಜಿಕ ಮಾಧ್ಯಮದಲ್ಲಿ ಆ ವಿಡಿಯೊ ಹಂಚಿಕೊಂಡು, ಆರೋಪಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ವಿಡಿಯೊ ಪರಿಶೀಲಿಸಿ ಆರೋಪಿಯನ್ನು ಬಂಧಿಸಿ ಬಿಡುಗಡೆ ಮಾಡಲಾಗಿದೆ. ಅಲ್ಲದೇ ಎಚ್ಚರಿಕೆ ನೀಡಿ ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಡ್ರಗ್ಸ್ ಪೂರೈಕೆ: 54 ಪೆಡ್ಲರ್‌ಗಳ ಬಂಧನ- ಮಾದಕ ವಸ್ತು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಜುಲೈ ತಿಂಗಳಲ್ಲಿ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ 54 ಪೆಡ್ಲರ್‌ಗಳನ್ನು ವಿವಿಧ ಠಾಣೆ ಪೊಲೀಸರು ಬಂಧಿಸಿದ್ದಾರೆ. ಅಲ್ಲದೇ, ಅಪಾರ ಪ್ರಮಾಣದ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, 'ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿ ಒಟ್ಟು 38 ಪ್ರಕರಣ ದಾಖಲು ಮಾಡಲಾಗಿದೆ. ನಾಲ್ವರು ವಿದೇಶಿ ಪ್ರಜೆಗಳೂ ಸೇರಿ 54 ಮಂದಿಯನ್ನು ಬಂಧಿಸಲಾಗಿದೆ. ಬಂಧಿತರಿಂದ 114 ಕೆ.ಜಿ ಗಾಂಜಾ, 176 ಗ್ರಾಂ ಅಫೀಮು, 745 ಗ್ರಾಂ ಕೊಕೇನ್, 4 ಕೆ.ಜಿ ಎಂಡಿಎಂಎ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

'ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣಕ್ಕೂ ಬಿಗಿಯಾದ ಕ್ರಮ ಕೈಗೊಳ್ಳಲಾಗುತ್ತಿದೆ. ಮಟ್ಕಾ, ಕ್ರಿಕೆಟ್ ಬೆಟ್ಟಿಂಗ್, ಅಕ್ರಮ ಮದ್ಯ ಮಾರಾಟ, ಮಾನವ ಕಳ್ಳ ಸಾಗಣೆ ಸೇರಿದಂತೆ ವಿವಿಧ ಅಕ್ರಮ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದವರ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ. ಒಟ್ಟು 226 ಪ್ರಕರಣ ದಾಖಲಿಸಿಕೊಂಡು, 326 ಮಂದಿ ಬಂಧಿಸಲಾಗಿದೆ' ಎಂದು ಹೇಳಿದರು.

'ಕೊಲೆ, ಸುಲಿಗೆ, ಕೊಲೆ ಯತ್ನ, ಹಲ್ಲೆ, ಮನೆ ಕಳವು ಕೃತ್ಯದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ 43 ಆರೋಪಿಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ತಲೆಮರೆಸಿಕೊಂಡಿದ್ದ 9 ರೌಡಿಗಳನ್ನೂ ಬಂಧಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಕಸ ಎಸೆದ ವಿಚಾರಕ್ಕೆ ಕೊಲೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಮಾದನಾಯಕನಹಳ್ಳಿಯಲ್ಲಿ ಶುಕ್ರವಾರ ಬೆಳಿಗ್ಗೆ ವೃದ್ಧರೊಬ್ಬರ ಕತ್ತು ಸೀಳಿ ಕೊಲೆ ಮಾಡಲಾಗಿದೆ.

ಮಾದನಾಯಕನಹಳ್ಳಿ ನಿವಾಸಿ ಸಿದ್ದಪ್ಪ(70) ಕೊಲೆಯಾದವರು.

ಕೃತ್ಯ ಎಸಗಿದ ಆರೋಪದ ಅಡಿ ಶಿರಾದ ಪುನೀತ್(22) ಎಂಬುವವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಿದ್ದಪ್ಪ, ಕೆಲವು ವರ್ಷಗಳ ಹಿಂದೆ ನಿವೃತ್ತರಾಗಿದ್ದರು. ಅವರಿಗೆ ಗುಟ್ಕಾ ಜಗಿಯುವ ಅಭ್ಯಾಸ ಇತ್ತು. ಗುಟ್ಕಾ ಜಗಿದ ಮೇಲೆ ರಸ್ತೆಯಲ್ಲಿ ಉಗುಳುತ್ತಿದ್ದರು. ಅಲ್ಲದೇ ಕಸವನ್ನು ರಸ್ತೆ ಬದಿಯಲ್ಲಿ ಎಸೆಯುತ್ತಿದ್ದರು ಎನ್ನಲಾಗಿದೆ.

ವಶಕ್ಕೆ ಪಡೆದ ವ್ಯಕ್ತಿ ಹಾಗೂ ಕೊಲೆಯಾದ ವೃದ್ಧ ಅಕ್ಕಪಕ್ಕದ ನಿವಾಸಿಗಳು. ಗುಟ್ಕಾ ಜಗಿದು ಎಲ್ಲೆಂದರಲ್ಲಿ ಉಗಿಯುತ್ತಿದ್ದರು ಹಾಗೂ ಕಸ ಎಸೆಯುತ್ತಿದ್ದರು ಎನ್ನುವ ವಿಚಾರಕ್ಕೆ ಇಬ್ಬರ ಮಧ್ಯೆ ಗಲಾಟೆ ನಡೆಯುತ್ತಿತ್ತು. ಶುಕ್ರವಾರ ಬೆಳಿಗ್ಗೆಯೂ ಗಲಾಟೆ ನಡೆದು, ಕೊಲೆ ಮಾಡಲಾಗಿದೆ ಎಂಬ ಆರೋಪವಿದೆ.

'ಸಿಸಿ ಟಿ.ವಿ ಕ್ಯಾಮೆರಾದ ದೃಶ್ಯಾವಳಿ ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ. ಕೃತ್ಯ ಎಸಗಿದ್ದಕ್ಕೆ ಪೂರಕವಾದ ಸಾಕ್ಷ್ಯಾಧಾರಗಳು ಲಭಿಸಿದರೆ ಆರೋಪಿಯನ್ನು ಬಂಧಿಸಲಾಗುವುದು' ಎಂದು ಪೊಲೀಸರು ಹೇಳಿದರು.

ತಮ್ಮನ ಕೊಲೆ: ಅಣ್ಣನ ಬಂಧನ

ಪ್ರತಾಪ್

ಬೆಂಗಳೂರು: ಅಣ್ಣನೇ ತಮ್ಮನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದು, ಆರೋಪಿಯನ್ನು ಬೇಗೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಲಕ್ಷ್ಮಿಲೇಔಟ್ ನಿವಾಸಿ ಪ್ರತಾಪ್ (19) ಕೊಲೆಯಾದ ವ್ಯಕ್ತಿ. ಕೊಲೆಯಾದ ವ್ಯಕ್ತಿಯ ಅಣ್ಣ ರಜನಿ(23) ಬಂಧಿತ ಆರೋಪಿ.

'ಸಹೋದರರಿಬ್ಬರು ಕಾರು ಮತ್ತು ದ್ವಿಚಕ್ರ ವಾಹನಗಳ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದರು. ಪ್ರತಾಪನಿಗೆ ಮದ್ಯ ಸೇವನೆಯ ಅಭ್ಯಾಸ ಇತ್ತು. ಅಲ್ಲದೇ ಕೆಲಸಕ್ಕೂ ತೆರಳುತ್ತಿರಲಿಲ್ಲ. ಈ ವಿಚಾರ ಅಣ್ಣನಿಗೆ ಸಿಟ್ಟು ತರಿಸಿತ್ತು. ಮನೆಗೆ ಬಂದಿದ್ದ ರಜನಿ, ಪ್ರತಾಪ್‌ನನ್ನು ಕಂಡು 'ಬಹಳ ದಿನಗಳಿಂದ ಮನೆಯಲ್ಲೇ ಇದ್ದೀಯಾ. ಕೆಲಸಕ್ಕೂ ಹೋಗುತ್ತಿಲ್ಲ. ತಂದೆ–ತಾಯಿ ಮತ್ತು ನಾನು ಮಾತ್ರ ದುಡಿಯಬೇಕೆ ಎಂದು ಪ್ರಶ್ನಿಸಿ, ಜಗಳ ಮಾಡಿದ್ದ. ಗಲಾಟೆ ವಿಕೋಪಕ್ಕೆ ಹೋಗಿ ತಮ್ಮನ ಮೇಲೆ ಹಲ್ಲೆ ನಡೆಸಿ ನಂತರ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ' ಎಂದು ಪೊಲೀಸರು ಹೇಳಿದರು

ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರ್‌ಬಿಐ, ಇ.ಡಿ ಹೆಸರು ದುರ್ಬಳಕೆ: ಹಲವರಿಗೆ ವಂಚನೆ

ದುಪ್ಪಟ್ಟು ಹಣದ ಆಮಿಷ: ₹4 ಕೋಟಿ ಸುಲಿಗೆ

ಪ್ರಜಾವಾಣಿ ವಾರ್ತೆ

ಕಲ್ಪನಾ

ನಾಗೇಶ್ವರ ರಾವ್

ಸುಜರಿತಾ

ದಿಲೀಪ್ ಕುಮಾರ್

ತರುಣಾ

ಗೌತಮ್

ಮಂಜು

ಬೆಂಗಳೂರು: ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಹಾಗೂ ಜಾರಿ ನಿರ್ದೇಶನಾಲಯದ(ಇ.ಡಿ.) ಹೆಸರು ದುರ್ಬಳಕೆ ಮಾಡಿಕೊಂಡು ವಂಚನೆ ನಡೆಸುತ್ತಿದ್ದ ಜಾಲವನ್ನು ಭೇದಿಸುವಲ್ಲಿ ಹೆಬ್ಬಾಳ ಠಾಣೆ ಪೊಲೀಸರು ಯಶಸ್ವಿಯಾಗಿದ್ದು, ಏಳು ಆರೋಪಿಗಳನ್ನು ಬಂಧಿಸಿದ್ದಾರೆ.

ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕ ನಾಗೇಶ್ವರ ರಾವ್, ಸುಜರಿತಾ, ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಕಲ್ಪನಾ, ದಿಲೀಪ್, ತರುಣಾ, ಗೌತಮ್, ಚಾಲಕ ಮಂಜು ಬಂಧಿತ ಆರೋಪಿಗಳು. ಆತ್ಮಾನಂದ ಕಾಲೊನಿ ನಿವಾಸಿ ಶಾಂತಿ ಅವರು ನೀಡಿದ್ದ ದೂರು ಆಧರಿಸಿ ತನಿಖೆ ನಡೆಸಿದಾಗ ಆರೋಪಿಗಳನ್ನು ಪತ್ತೆಹಚ್ಚಲಾಗಿದೆ.

'ಆರ್‌ಬಿಐ, ಇ.ಡಿ ಬಳಿ ಜಪ್ತಿ ಆಗಿರುವ ಸಾಕಷ್ಟು ಹಣವಿದೆ. ಈ ಹಣ ನಿಮಗೆ ಮರಳಿ ಬರಲಿದೆ. ಮೊದಲು ಹೂಡಿಕೆ ಮಾಡಿದರೆ, ದುಪ್ಪಟ್ಟು ಹಣ ಕೊಡುತ್ತೇವೆ. ಅಲ್ಲದೇ, ಸೂಕ್ತ ಸ್ಥಳದಲ್ಲಿ ಜಮೀನು ಕೊಡಿಸುತ್ತೇವೆ ಎಂದು ನಂಬಿಸಿ ಹಣ ಪಡೆದು ವಂಚನೆ ಮಾಡುತ್ತಿದ್ದರು. ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಗಿದ್ದು, ಅಂದಾಜು ₹ 4 ಕೋಟಿಯಷ್ಟು ವಂಚನೆ ಆಗಿರುವ ಮಾಹಿತಿ ಸದ್ಯಕ್ಕೆ ಸಿಕ್ಕಿದೆ. ಆರೋಪಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದೂರುದಾರೆ ಶಾಂತಿ ಅವರಿಗೆ ನಾಗೇಶ್ವರ ರಾವ್ ಹಾಗೂ ಸುಜರಿತಾ ಎಂಬುವವರು 2020ರ ಜೂನ್‌ನಲ್ಲಿ ಕಲ್ಪನಾ ಅವರನ್ನು ಪರಿಚಯಿಸಿದ್ದರು. ಕುಡುಮುಡಿ ಎಂಬಲ್ಲಿ ₹100 ಕೋಟಿ ಮೌಲ್ಯದ ಆಸ್ತಿಯಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ನಮ್ಮ ಪರವಾಗಿ ಆದೇಶ ಬಂದಿದೆ. ದಾಖಲಾತಿ ಪಡೆಯಲು ಹಣದ ಅಗತ್ಯವಿದ್ದು, ₹15 ಲಕ್ಷ ಕೊಡಿ ಎಂದು ಕಲ್ಪನಾ ಕೇಳಿಕೊಂಡಿದ್ದರು. 15 ದಿನಗಳ ಒಳಗೆ ಬಡ್ಡಿ ಸಹಿತ ಹಣ ವಾಪಸ್ ನೀಡುವುದಾಗಿ ನಂಬಿಸಿ, ನಾಗೇಶ್ವರ ರಾವ್, ಸುಜರಿತಾ ಹಾಗೂ ಚಾಲಕ ಮಂಜು ಸಮ್ಮುಖದಲ್ಲಿ ಹಣ ಪಡೆದುಕೊಂಡಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'15 ದಿನಗಳ ಬಳಿಕ ಹಣ ವಾಪಸ್ ಕೇಳಿದಾಗ, ಕಪ್ಪು ಹಣವನ್ನು ಕಾನೂನು ಬದ್ಧವಾಗಿ ಪರಿವರ್ತಿಸಲು ₹100 ಕೋಟಿಗೆ ಶೇ 30ರಂತೆ ₹ 30 ಕೋಟಿ ಪಾವತಿಸಬೇಕಿದೆ. ನಿಮ್ಮ ಹಣಕ್ಕೆ ಹತ್ತುಪಟ್ಟು ಹೆಚ್ಚು ಹಣ ನೀಡುತ್ತೇವೆ. ಅಲ್ಲದೇ 2 ಕೆ.ಜಿ ಚಿನ್ನ ಹಾಗೂ 20 ಕೆ.ಜಿ ಬೆಳ್ಳಿ ವಿಗ್ರಹ ಕೊಡುತ್ತೇವೆ. ಈ ವ್ಯವಹಾರದಲ್ಲಿ ಆರ್‌ಬಿಐ ಅಧಿಕಾರಿಗಳು ನಮ್ಮೊಂದಿಗೆ ಇದ್ದಾರೆಂದು ಹೇಳಿಕೊಂಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಬಂಧಿತರ ಪೈಕಿ ಒಬ್ಬಾತ ಕರೆ ಮಾಡಿ ತಾನು ಇ.ಡಿ.ಯಲ್ಲಿ ಕೆಲಸ ಮಾಡುತ್ತಿರುವುದಾಗಿ ನಂಬಿಸಿ, ಗೋದಾಮಿನಲ್ಲಿರುವ ಹಣದ ಕಂತೆಗಳಿಗೆ ಔಷಧಿ ಹಾಕಬೇಕು. ಇಲ್ಲದಿದ್ದರೆ ಹಣ ಒಂದಕ್ಕೊಂದು ಅಂಟಿಕೊಂಡು ನಾಶವಾಗುತ್ತದೆ. ಹಣವನ್ನು ಈಗಲೇ ಕೊಟ್ಟರೆ ಎರಡು ದಿನಗಳಲ್ಲಿ ಹತ್ತುಪಟ್ಟು ಹೆಚ್ಚಿನ ಹಣ ಕೊಡುತ್ತೇವೆ ಎಂದು ನಂಬಿಸಿದ್ದರು. ಇದನ್ನು ನಂಬಿದ ದೂರುದಾರೆ ಸೇರಿದಂತೆ ನಾಲ್ವರು ₹4 ಕೋಟಿ ಹಣವನ್ನು ವಿವಿಧ ದಿನಾಂಕಗಳಂದು ನಾಗೇಶ್ವರ ರಾವ್, ಸುಜರಿತಾ, ಕಲ್ಪನಾ, ದಿಲೀಪ್, ತರುಣ, ಗೌತಮ್, ಚಾಲಕ ಮಂಜು ಅವರಿಗೆ ನೀಡಿದ್ದರು. ನಂತರ ಹಣ ವಾಪಸ್ ಕೇಳಿದಾಗ ಹಣ ಕೊಡುವುದಿಲ್ಲ. ಹಣ ಕೇಳಿದರೆ ಜೀವ ಸಹಿತ ಬಿಡುವುದಿಲ್ಲ ಎಂಬುದಾಗಿ ಬೆದರಿಕೆ ಒಡ್ಡಿದ್ದರು' ಎಂದು ದೂರಿನಲ್ಲಿ ವಿವರಿಸಲಾಗಿದೆ.

'ಆರೋಪಿಗಳು ಆರ್‌ಬಿಐ ಮತ್ತು ಇಡಿ ಹೆಸರು ದುರ್ಬಳಕೆ ಮಾಡಿದ್ದಾರೆ. ಇನ್ನೂ ಹಲವರು ಭಾಗಿಯಾಗಿರುವ ಮಾಹಿತಿಯಿದೆ. ತನಿಖೆ ಮುಂದುವರೆದಿದೆ' ಎಂದು ಉತ್ತರ ವಿಭಾಗ ಡಿಸಿಪಿ ಸೈದುಲ್ಲಾ ಅಡಾವತ್ ಹೇಳಿದರು.

ಆಕ್ಸಿಸ್ ಬ್ಯಾಂಕ್

ಹರಾಜಿಗೆ ಸಾರ್ವಜನಿಕ ಸೂಚನೆ

ಸಾರ್ವಜನಿಕ ಸೂಚನೆ – ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟಿಸ್

ಈ ಮೂಲಕ ಸಾಲಗಾರರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**‌ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ–ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 20.08.2024 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರು ಮತ್ತು ಬಾಕಿ ಮೊತ್ತಗಳ ವಿವರಗಳು

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ	ಡಿಮ್ಯಾಂಡ್ ನೋಟೀಸ್ ದಿನಾಂಕ	ಒಟ್ಟು ತೂಕ	ನಿವ್ವಳ ತೂಕ
ಬನಶಂಕರಿ, ಬೆಂಗಳೂರು [ಕ]	xxxxxxxxxxx39540	ಸುಬ್ರಹ್ಮಣ್ಯ ಎನ್	247035	15-Feb-24	61.100	61.000
ಬನಶಂಕರಿ, ಬೆಂಗಳೂರು [ಕ]	xxxxxxxxxxx99748	ಸುಬ್ರಹ್ಮಣ್ಯ ಎನ್	244561	15-Feb-24	58.800	58.600
ಬನಶಂಕರಿ, ಬೆಂಗಳೂರು [ಕ]	xxxxxxxxxxx93117	ಎಸ್ ಹೇಮಲತಾ	134675	15-Feb-24	36.700	32.400
ಬಸವನಗುಡಿ, ಬೆಂಗಳೂರು[ಕ]	xxxxxxxxxxx55306	ಶಿವ	985160	22-Mar-24	288.200	266.200
ಬಸವೇಶ್ವರ ನಗರ, ಬೆಂಗಳೂರು [ಕ]	xxxxxxxxxxx81751	ರವಿ ಬಿ ಗಲಗಲಿ	174221	17-Jan-24	48.900	46.000
ಬಸವೇಶ್ವರ ನಗರ, ಬೆಂಗಳೂರು [ಕ]	xxxxxxxxxxx23054	ರವಿ ಬಿ ಗಲಗಲಿ	137312	07-Jun-24	33.100	32.900
ಬಂಗಾರಪೇಟೆ [ಕ]	xxxxxxxxxxx21467	ವಿನೋದ್ ಕುಮಾರ್ ಎಂ	70813	08-May-24	16.000	15.300
ಬೆಳಂದೂರು ಬೆಂಗಳೂರು [ಕ]	xxxxxxxxxxx15321	ಫಲ್ಗುಣಿ ರಾಯ್	27542	20-Jul-24	7.000	6.600
ಚನ್ನಪಟ್ಟಣ [ಕ]	xxxxxxxxxxx28790	ಎಂ ಆರ್ ಶ್ರೀನಿವಾಸ್	300893	08-May-24	71.200	70.100
ಚಿಕ್ಕಬಳ್ಳಾಪುರ ಕೋಲಾರ [ಕ]	xxxxxxxxxxx68653	ನವೀನ್ ಎನ್	56657	10-Oct-23	8.700	8.400
ಚಿಂತಾಮಣಿ [ಕ]	xxxxxxxxxxx59795	ಕೆ ನರೇಶ್ ಕುಮಾರ್	98000	20-Jul-24	28.100	24.500
ಚಿಂತಾಮಣಿ [ಕ]	xxxxxxxxxxx57275	ವೆಂಕಟರವಣಪ್ಪ.	76474	08-May-24	17.800	17.800
ಚಿಂತಾಮಣಿ [ಕ]	xxxxxxxxxxx87159	ನಾಗರಾಜ್ ಡಿ	56550.99	15-Feb-24	17.200	15.000
ಚಿಂತಾಮಣಿ [ಕ]	xxxxxxxxxxx31225	ಸುರೇಶ್ ಎಸ್ ಎನ್	33606	07-Jun-24	8.000	8.000
ದೊಡ್ಡಬಳ್ಳಾಪುರ ಬೆಂಗಳೂರು [ಕ]	xxxxxxxxxxx47744	ಶಾರುಕ್ ಅಹಮ್ಮದ್	52946	20-Jul-24	13.190	13.190
ಗೋವಿಂದರಾಜನಗರ ಬೆಂಗಳೂರು [ಕ]	xxxxxxxxxxx76260	ಲೋಕೇಶ್ ಬಿ ಎಲ್	68609	20-Jul-24	19.600	17.600
ಹೆಗ್ಗಡೆನಗರ, ಬೆಂಗಳೂರು [ಕ]	xxxxxxxxxxx84398	ಸಲೀಂ.	128000	20-Jul-24	44.900	39.800
ಹೊಸಪೇಟೆ [ಕ]	xxxxxxxxxxx27677	ಶರಣ್ ವೈ	41232	20-Jul-24	10.400	9.600
ಹೊಸಪೇಟೆ [ಕ]	xxxxxxxxxxx12759	ಶರಣ್ ವೈ	28306	20-Jul-24	9.200	8.700
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು [ಕ]	xxxxxxxxxxx13540	ಮಧುಸೂದನ್ ರೆಡ್ಡಿ ಎಂ	369742	02-Apr-24	100.300	94.000
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು [ಕ]	xxxxxxxxxxx33311	ಮಧುಸೂದನ್ ರೆಡ್ಡಿ ಎಂ	322134	02-Apr-24	83.000	78.000
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು [ಕ]	xxxxxxxxxxx77684	ಸುಚಿಸ್ಮಿತಾ ಪಾಹಿ	89814	20-Jul-24	26.300	21.000
ಜಯನಗರ, ಬೆಂಗಳೂರು [ಕ]	xxxxxxxxxxx06420	ವಿನಯ್ ಲಕ್ಷ್ಮಣ್ ದೇಶಪಾಂಡೆ	951920.85	15-Feb-24	270.700	248.000
ಕೋಲಾರ [ಕ]	xxxxxxxxxxx90984	ನಾಗರಾಜ ಎಂ ಬಿ	246896	08-May-24	65.100	64.600
ಕೋರಮಂಗಲ, ಬೆಂಗಳೂರು [ಕ]	xxxxxxxxxxx79161	ಅಜೀತ್ ಎನ್	550029	10-Oct-23	128.300	126.500
ಕೋರಮಂಗಲ, ಬೆಂಗಳೂರು [ಕ]	xxxxxxxxxxx37179	ಅಜೀತ್ ಎನ್	526286	10-Oct-23	127.800	126.800
ಕೋರಮಂಗಲ, ಬೆಂಗಳೂರು [ಕ]	xxxxxxxxxxx68690	ಸಮ್ಯಕ್ ದಶ್	105321.06	15-Feb-24	28.100	26.800
ಮಾಗಡಿ ರಸ್ತೆ [ಕ]	xxxxxxxxxxx77830	ಭೀಮೇಶ ಕೆ ಆರ್	146924	20-Jul-24	35.400	35.400
ಮಹದೇವಪುರ, ಬೆಂಗಳೂರು [ಕ]	xxxxxxxxxxx82572	ಸಾಯಿ ಕುಮಾರ್ ಎಂ	299452.26	20-Jul-24	88.300	84.500
ಮಹದೇವಪುರ, ಬೆಂಗಳೂರು [ಕ]	xxxxxxxxxxx30968	ಮಾಡಿಸೆಟ್ಟಿ ರವಿಕಾಂತ	154352.46	15-Feb-24	41.000	39.000
ಮಹದೇವಪುರ, ಬೆಂಗಳೂರು [ಕ]	xxxxxxxxxxx79356	ದುರ್ಗಾ ಪ್ರಸಾದ್ ಮೊಹಂತಿ	98454	20-Jul-24	25.100	23.800
ಮಲ್ಲೇಶ್ವರಂ, ಬೆಂಗಳೂರು [ಕ]	xxxxxxxxxxx02848	ಹರಿಪ್ರಸಾದ್ ಕೆ	54864	08-May-24	19.900	19.800
ಮಾರತಹಳ್ಳಿ, ಬೆಂಗಳೂರು [ಕ]	xxxxxxxxxxx53755	ನಾಗೇಂದ್ರ ಪಿ ಎನ್	118246	22-Mar-24	34.000	29.200
ಪ್ರಶಾಂತನಗರ	xxxxxxxxxxx60242	ಕೆ ಆರ್ ಪ್ರದೀಪ್ ಕುಮಾರ್	76598	22-Mar-24	30.400	18.400
ಆರ್ ಟಿ ನಗರ, ಬೆಂಗಳೂರು [ಕ]	xxxxxxxxxxx50566	ಅಫ್ರೀನ್ ತಾಜ್ ಎ	1009005.41	02-Apr-24	381.300	377.600
ಆರ್‌ಬಿಐ ಲೇಔಟ್, ಬೆಂಗಳೂರು [ಕ]	xxxxxxxxxxx72338	ಮೊಹಮ್ಮದ್ ಇಸಾಕ್	90128.78	15-Feb-24	36.100	34.300
ರಾಬಟ್‌ಸನ್‌ಪೇಟೆ [ಕ]	xxxxxxxxxxx21215	ವಿಜಯಕುಮಾರ್ ಎಸ್	368546	28-Feb-24	115.600	110.700
ರಾಬಟ್‌ಸನ್‌ಪೇಟೆ [ಕ]	xxxxxxxxxxx97160	ಅರ್ಚನಾ ಪಿ	164255.68	20-Nov-23	36.900	36.800
ಸಂಜಯನಗರ, ಬೆಂಗಳೂರು [ಕ]	xxxxxxxxxxx45087	ಪುಟ್ಬೋ ಎ ಇಮ್ತಿಯಾಜ್ ಅಹಮದ್	316148	22-Mar-24	82.400	80.000
ವಿಜಯನಗರ, ಬೆಂಗಳೂರು [ಕ]	xxxxxxxxxxx08493	ಪ್ರಕಾಶ್ ಎಲ್	332623	20-Jul-24	92.100	90.150
ವಿಜಯನಗರ, ಬೆಂಗಳೂರು [ಕ]	xxxxxxxxxxx59565	ಪಿ ವೀಣಾ	280998.91	20-Jul-24	100.500	93.600
ವೈಟ್‌ಫೀಲ್ಡ್ ಮೇನ್, ಬೆಂಗಳೂರು [ಕ]	xxxxxxxxxxx35785	ನಿತಿನ್	125337	20-Jul-24	30.200	29.200

ಆಕ್ಸಿಸ್ ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ.
ಹರಾಜು ಆನ್‌ಲೈನ್ **https://gold.samil.in** ನಲ್ಲಿ **ದಿನಾಂಕ : 20.08.2024 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ **https://gold.samil.in** ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು **ಸಹಿ/– ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**

ಸುಭಾಷಿತ

ಸರಿಯಾದ ಕೆಲಸ ಮಾಡಲು ಕಷ್ಟಪಡುವವರೆಲ್ಲರೂ ಹುಚ್ಚರಂತೆಯೇ ಕಾಣುತ್ತಾರೆ.

-ಸ್ಟೀಫನ್ ಕಿಂಗ್

ಪಶ್ಚಿಮಘಟ್ಟ: ಒತ್ತುವರಿ ತೆರವಿಗಾಗಿ ಕಾರ್ಯಪಡೆ ರಚನೆ ಸ್ವಾಗತಾರ್ಹ

ಪಶ್ಚಿಮಘಟ್ಟಗಳ ಪ್ರದೇಶದಲ್ಲಿ ಅರಣ್ಯ ಒತ್ತುವರಿಯನ್ನು ತೆರವುಗೊಳಿಸಲು ರಾಜ್ಯ ಸರ್ಕಾರವು ವಿಶೇಷ ಕಾರ್ಯಪಡೆ ರಚಿಸಿರುವುದು ಸ್ವಾಗತಾರ್ಹ ಕ್ರಮ. ಕೇರಳದ ವಯನಾಡ್ ಭಾಗದಲ್ಲಿ ಉಂಟಾದ ಭೂಕುಸಿತ ಮತ್ತು ನಮ್ಮ ರಾಜ್ಯದ ವಿವಿಧ ಕಡೆಗಳಲ್ಲಿ ಸಂಭವಿಸಿದ ಗುಡ್ಡ ಕುಸಿತ ಘಟನೆಗಳಿಂದಾಗಿ [illegible] ಎಚ್ಚೆತ್ತುಕೊಂಡಂತಿದೆ. ದೇಶದ ಆರು ರಾಜ್ಯಗಳಲ್ಲಿ ಮೈಚಾಚಿರುವ ಪಶ್ಚಿಮಘಟ್ಟಗಳು ಕರ್ನಾಟಕದ ಹತ್ತು ಜಿಲ್ಲೆಗಳಲ್ಲಿ ವ್ಯಾಪಿಸಿವೆ. ನಮ್ಮ ರಾಜ್ಯವೊಂದರಲ್ಲೇ ಈ ಘಟ್ಟಗಳ ಪ್ರದೇಶದಲ್ಲಿ ಎರಡು ಲಕ್ಷ ಎಕರೆಗೂ ಅಧಿಕ ಅರಣ್ಯ ಒತ್ತುವರಿಯಾಗಿದೆ ಎಂದು ಸರ್ಕಾರಿ ದಾಖಲೆಗಳು ಹೇಳುತ್ತವೆ. ಅರಣ್ಯವನ್ನು ಒತ್ತುವರಿ ಮಾಡಿಕೊಂಡು ಬೆಳೆಸಿದ ತೋಟಗಳು ಮತ್ತು ಅಂತಹ ಪ್ರದೇಶಗಳಲ್ಲಿ ತಲೆ ಎತ್ತಿದ ಅನಧಿಕೃತ ರೆಸಾರ್ಟ್‌ಗಳಿಂದಲೇ ಹೆಚ್ಚಿನ ಅನಾಹುತಗಳು ಸಂಭವಿಸುತ್ತಿವೆ [illegible]. ಒತ್ತುವರಿಯನ್ನು ತೆರವುಗೊಳಿಸುವ ಕೆಲಸ [illegible] ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನೇ ಮುಂದಿಟ್ಟುಕೊಂಡು ಕಾಲಹರಣ ಮಾಡುತ್ತಾ ಬರಲಾಗಿತ್ತು. ಈಗ, [illegible] ಜನರಲ್ ನೆರವು ಪಡೆಯಲು ಮುಂದಾಗಿರುವುದು ಕೂಡ ಸಕಾಲಿಕ ಹಾಗೂ ಸೂಕ್ತ ನಿರ್ಧಾರ. ಈ ವರ್ಷದ ಮಾರ್ಚ್‌ನಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ, ಶಿವಮೊಗ್ಗ ಜಿಲ್ಲೆಯಲ್ಲಿ 80,775 ಎಕರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ 28,308 ಎಕರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ 25,978 ಎಕರೆ ಮತ್ತು ಕೊಡಗು ಜಿಲ್ಲೆಯಲ್ಲಿ 6,287 ಎಕರೆಯಷ್ಟು ಅರಣ್ಯ ಭೂಮಿ ಒತ್ತುವರಿ ಆಗಿದೆ. ಕೊಡಗು ಜಿಲ್ಲೆಯಲ್ಲಿ 2018ರಲ್ಲಿ ಸಂಭವಿಸಿದ ದುರಂತದ ಬಳಿಕವೂ ಒತ್ತುವರಿ ತೆರವಿಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. [illegible] ಅರಣ್ಯ ಇಲಾಖೆ, ಬಳಿಕ ಕುಂಭಕರ್ಣ ನಿದ್ರೆಗೆ ಜಾರಿತ್ತು. ಈಗ ವಯನಾಡ್ ದುರಂತ ಮತ್ತು ಶಿರೂರು ಗುಡ್ಡ ಕುಸಿತದಂತಹ ಪ್ರಕರಣಗಳು ಇಲಾಖೆಯನ್ನು ಬಡಿದೆಬ್ಬಿಸಿವೆ.

ಪಶ್ಚಿಮಘಟ್ಟಗಳ ಜೀವಪರಿಸರವು ಭಾರತ ಮಾತ್ರವಲ್ಲ, ಇಡೀ ಜಗತ್ತಿನ ಅಮೂಲ್ಯ ಆಸ್ತಿ. ಇಂತಹ ಪರಿಸರವನ್ನು ನಾವು ಹೆಚ್ಚು ಜತನದಿಂದ ಕಾಪಾಡಿಕೊಳ್ಳಬೇಕು

ಪಶ್ಚಿಮಘಟ್ಟಗಳ ಜೀವಪರಿಸರವು ಭಾರತ ಮಾತ್ರವಲ್ಲ, ಇಡೀ ಜಗತ್ತಿನ ಅಮೂಲ್ಯ ಆಸ್ತಿ. ಇಲ್ಲಿನ ದಟ್ಟ ಅರಣ್ಯ ಮತ್ತು ಗುಡ್ಡ-ಕಣಿವೆಗಳು ದಕ್ಷಿಣ ಭಾರತದ ಜಲ-ವಾಯು ಸಮತೋಲನದ ಮೂಲಗಳು. ಇಂತಹ ಪರಿಸರವನ್ನು ನಾವು ಹೆಚ್ಚು ಜತನದಿಂದ ಕಾಪಾಡಿಕೊಳ್ಳಬೇಕು. ಆದರೆ, ಈಚಿನ ದಶಕಗಳಲ್ಲಿ [illegible] ನಿರ್ಮಾಣ ಎಲ್ಲವೂ ಹೆಚ್ಚುತ್ತಿವೆ. ಅತಿವೃಷ್ಟಿ, ಭೂಕುಸಿತ, [illegible] ಸಮಸ್ಯೆಗಳು ಪಶ್ಚಿಮಘಟ್ಟಗಳನ್ನು ಎದುರಿಸುತ್ತಿವೆ. [illegible] ಪ್ರದೇಶ ಪ್ರವಾಸಿಗರ ಸಂಖ್ಯೆ ಏರುತ್ತಲೇ ಇದೆ. ಕೊಡಗು ಜಿಲ್ಲೆಯ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ಅಲ್ಲಿನ ಜನಸಂಖ್ಯೆ 5.60 ಲಕ್ಷದಷ್ಟಿದ್ದರೆ, ಕಳೆದ ವರ್ಷ ಅಲ್ಲಿಗೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ 42 ಲಕ್ಷ. ಪರಿಸರದ ಧಾರಣಾ ಸಾಮರ್ಥ್ಯವನ್ನು ಅಲಕ್ಷಿಸಿ, ನೂರಾರು ರೆಸಾರ್ಟ್‌ಗಳು ಮತ್ತು ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ. [illegible] ಪಶ್ಚಿಮ ಘಟ್ಟಗಳ ಪ್ರದೇಶ ನಲುಗದಂತೆ ಮಾಡುವ ಹೊಣೆಗಾರಿಕೆಯೂ ಸರ್ಕಾರದ ಮೇಲಿದೆ. ಪಶ್ಚಿಮ ಘಟ್ಟಗಳ ರಕ್ಷಣೆಗೆ ಏನೇನು ಕ್ರಮ ಕೈಗೊಳ್ಳಬೇಕು ಎಂಬುದರ ಪಟ್ಟಿಯನ್ನು ಮಾಧವ ಗಾಡ್ಗೀಳ್ ಮತ್ತು ಕೆ. ಕಸ್ತೂರಿರಂಗನ್ ನೇತೃತ್ವದ ಸಮಿತಿಗಳು ತುಂಬಾ ಹಿಂದೆಯೇ ಮಾಡಿಕೊಟ್ಟಿವೆ. ವಿಪರ್ಯಾಸವೆಂದರೆ ಈ ವರದಿಗಳ ಶಿಫಾರಸುಗಳಿಗೆ ಪಶ್ಚಿಮಘಟ್ಟಗಳ ಪ್ರದೇಶ ವ್ಯಾಪ್ತಿಯ ರಾಜ್ಯ ಸರ್ಕಾರಗಳೇ ವಿರೋಧ ವ್ಯಕ್ತಪಡಿಸಿವೆ. ಇಲ್ಲಿ ಗಣಿಗಾರಿಕೆ ನಿಷೇಧ, ಅಭಿವೃದ್ಧಿ ಚಟುವಟಿಕೆಗೆ ಕಡಿವಾಣ ಸೇರಿದಂತೆ ಹಲವು ಉಪಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕಿದೆ ಎಂಬುದು ತಜ್ಞರ ಸಲಹೆ. ಸರ್ಕಾರ ಈ ಸಲಹೆಗೆ ಬೆಲೆ ಕೊಡಬೇಕು. ಪಶ್ಚಿಮಘಟ್ಟಗಳ ಸ್ಥಳೀಯರ ಭವಿಷ್ಯ ಹಾಗೂ ನಿಸರ್ಗದ ಹಿತ ಕಾಯುವಂತಹ ಕ್ರಮಗಳು ಇಂದಿನ ಜರೂರು. ಆ ದಿಸೆಯಲ್ಲಿ ಒತ್ತುವರಿ ತೆರವು ಕಾರ್ಯ ಒಂದು ಸಕಾರಾತ್ಮಕ ಹೆಜ್ಜೆ. ಈ ಕಾರ್ಯ ಸಮರ್ಪಕವಾಗಿ ನಡೆಯಲು ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಬೇಕಾಗಿರುವುದು ಕೂಡ ಅಷ್ಟೇ ಮುಖ್ಯ.

ದಿನದ ಟ್ವೀಟ್

ನಿರ್ಮಲ ಹೃದಯಕ್ಕೆ ಇಲ್ಲ ಎಲ್ಲೆ

ತಾಯಂದಿರು ಪ್ರಪಂಚವನ್ನು ಆಳಿದರೆ ದ್ವೇಷವೂ ಇರದು, ಯುದ್ಧಗಳೂ ಇರವು.

ಅರ್ಷದ್ ನದೀಂ ಅವರ ತಾಯಿ: ನೀರಾಜ್ ಚೋಪ್ರಾ ನನಗೆ ಮಗನಿದ್ದಂತೆ. ನಾನು ಅವನಿಗಾಗಿಯೂ ಪ್ರಾರ್ಥಿಸುತ್ತೇನೆ.

ನೀರಜ್ ಚೋಪ್ರಾ ಅವರ ತಾಯಿ: ಬೆಳ್ಳಿ ಪದಕ ಪಡೆದದ್ದಕ್ಕೆ ನಮಗೆ ಖುಷಿಯಾಗಿದೆ. ಚಿನ್ನ ಗೆದ್ದ ಅರ್ಷದ್ ಸಹ ನನ್ನ ಮಗನೇ.

(ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ ಜಾವೆಲಿನ್ ಥ್ರೋನಲ್ಲಿ ಚಿನ್ನದ ಪದಕ ಗೆದ್ದ ಪಾಕಿಸ್ತಾನದ ಅರ್ಷದ್ ಹಾಗೂ ಬೆಳ್ಳಿ ಪದಕ ಗೆದ್ದ ಭಾರತದ ನೀರಜ್ ತಾಯಂದಿರ ಪ್ರತಿಕ್ರಿಯೆ)

ಗುಲಾಂ ಅಬ್ಬಾಸ್ ಶಾ, ಪತ್ರಕರ್ತ

ಕಿಡಿನುಡಿ



ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಭಾರತದ ಯಾವ ಕ್ರೀಡಾಪಟುವಿಗೂ ಕ್ರೀಡಾ ತರಬೇತಿಗೆ ಅಗತ್ಯವಾದ ಸಲಕರಣೆಗಳನ್ನು ಕೊಳ್ಳಲು ಸಾಮಾಜಿಕ ಮಾಧ್ಯಮಗಳ ಮೂಲಕ ಹಣಕ್ಕಾಗಿ ಬೇಡಿಕೆ ಇರಿಸಬೇಕಾದ ಸ್ಥಿತಿ ಇರಲಿಲ್ಲ. ಹೊಸ ಜಾವೆಲಿನ್ ಖರೀದಿಸಲು ಅರ್ಷದ್ ನದೀಂ ಹಣಕ್ಕಾಗಿ ಸಾರ್ವಜನಿಕರನ್ನು ಕೋರಿದ್ದರು. ಆದರೆ ಅಂತಹ ಸ್ಥಿತಿ ಸಹ ಅವರು ಚಿನ್ನದ ಪದಕ ಗೆಲ್ಲುವುದನ್ನು ತಪ್ಪಿಸಲಿಲ್ಲ. ಸಾಮಾನ್ಯವಾಗಿ ನಾವು ಮಾಡುವಂತೆ, ಸರ್ಕಾರವನ್ನು ದೂರುವುದು ಬಿಟ್ಟು, ನಮ್ಮ ಕ್ರೀಡಾಪಟುಗಳಿಗೆ ಗಂಭೀರವಾದ ಪ್ರಶ್ನೆಗಳನ್ನು ಕೇಳಬೇಕಾಗಿದೆ.

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಮಂಗಳವಾರ, 10-8-1999

● **ಅಸ್ಸಾಂ ಸೇತುವೆ ಸ್ಫೋಟ: ರಾಜಧಾನಿ ಎಕ್ಸ್‌ಪ್ರೆಸ್ ಪ್ರಯಾಣಿಕರು ಪಾರು**

ಗುವಾಹಟಿ, ಆ. 9 (ಯುಎನ್‌ಐ)– ಉಲ್ಫಾದವರು ಎಂದು ನಂಬಲಾದ ತೀವ್ರಗಾಮಿಗಳು ಅಸ್ಸಾಂನ ಕೊಕ್ರಜಾರ್ ಹಾಗೂ ಸಲಕಾಟಿ ನಡುವೆ ರೈಲ್ವೆ ಸೇತುವೆಯೊಂದನ್ನು ಸ್ಫೋಟಿಸಿದ್ದಾರೆ.

ಉತ್ತರ ಹಾಗೂ ಈಶಾನ್ಯ ರಾಜ್ಯಗಳು ಭಾರತದ ಇತರ ಪ್ರದೇಶಗಳ ಜತೆಗಿನ ರೈಲು ಸಂಪರ್ಕವನ್ನು ಕಡಿದುಕೊಂಡಿವೆ.

● **ಶಿವಮೊಗ್ಗ: ಗೌಡರ ಬಣದಿಂದ ದಳ ಕಚೇರಿ ‘ವಶ’**

ಶಿವಮೊಗ್ಗ, ಆ. 9– ಜಿಲ್ಲಾ ಜನತಾದಳದ ಕಚೇರಿ ‘ಗಾಂಧಿ ಮಂದಿರ’ವನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಬಣವು ಇಂದು ಬೆಳಿಗ್ಗೆ ತನ್ನ ‘ವಶ’ಕ್ಕೆ ತೆಗೆದುಕೊಂಡು ಜನತಾದಳ (ಜಾತ್ಯತೀತ) ಪಕ್ಷದ ಅಧ್ಯಕ್ಷರನ್ನಾಗಿ ಶಿವಮೊಗ್ಗ ತಾಲ್ಲೂಕು ಚಿಕ್ಕಮರಡಿಯ ಎಂ.ಬಿ. ಶಿವಣ್ಣ ಅವರನ್ನು ಆಯ್ಕೆ ಮಾಡಿತು.

ಆ.1ರಂದು ದೇವೇಗೌಡರ ಬಣಕ್ಕೆ ಬೆಂಬಲ ವ್ಯಕ್ತಪಡಿಸಿ ಬಹುಮತದ ನಿರ್ಣಯ ಕೈಗೊಂಡ ಜಿಲ್ಲಾ ಜನತಾದಳದ ಸಭೆಯಲ್ಲಿ ಈ ಗುಂಪಿನ ಅಧ್ಯಕ್ಷರಾಗಿ ಆಯ್ಕೆಯಾದ ಜಿಲ್ಲಾ ಜನತಾದಳದ ಅಧ್ಯಕ್ಷ ವಿ.ರಾಜು ಅವರು ತಮ್ಮ ನಿಷ್ಠೆಯನ್ನು ಜೆ.ಎಚ್. ಪಟೇಲರಿಗೆ ಬದಲಾಯಿಸಿದ್ದರಿಂದ ಈ ಬೆಳವಣಿಗೆ ಕಂಡುಬಂತು.

50 ವರ್ಷಗಳ ಹಿಂದೆ

ಶನಿವಾರ, 10-8-1974

● **‘ರಾಷ್ಟ್ರ ಹಿತ’ಕ್ಕಾಗಿ ನಿಕ್ಸನ್ ರಾಜೀನಾಮೆ**

ವಾಷಿಂಗ್ಟನ್, ಆ. 9– ವಾಟರ್‌ಗೇಟ್ ಹಗರಣದಿಂದ ರಾಜಕೀಯ ಭವಿಷ್ಯವನ್ನು ನುಚ್ಚುನೂರು ಮಾಡಿಕೊಂಡ ರಿಚರ್ಡ್ ಮಿಲ್‌ಹೌಸ್ ನಿಕ್ಸನ್ ಅವರು ರಾಷ್ಟ್ರದ ಅಧ್ಯಕ್ಷರಾಗಿ ನಿನ್ನೆ ರಾತ್ರಿ ಕೊನೆಯ ಟೆಲಿವಿಷನ್ ಭಾಷಣ ಮಾಡಿ, ಬಹಳ ನಿರೀಕ್ಷಿಸಿದ್ದ ರಾಜೀನಾಮೆಯನ್ನು ಪ್ರಕಟಿಸಿದರು.

ವಾಟರ್‌ಗೇಟ್ ಹಗರಣದಿಂದ ಆಗಿರುವ ಗಾಯ ಗುಣಪಡಿಸಲು, ಅಮೆರಿಕಕ್ಕೆ ಜೆರಾಲ್ಡ್ ಫೋರ್ಡ್ ಅವರನ್ನು ‘ಪೂರ್ಣಕಾಲದ ಅಧ್ಯಕ್ಷ’ರನ್ನಾಗಿಸಲು ತಾವು ರಾಜೀನಾಮೆ ನೀಡುತ್ತಿರುವುದಾಗಿ ಅವರು ಪ್ರಕಟಿಸಿದರು.

● **ಬ್ಯಾಂಕ್ ಜವಾನನ ಮನೆಯಿಂದ 1 ಲಕ್ಷಕ್ಕೂ ಹೆಚ್ಚು ಹಣ ವಶ**

ಮಂಡ್ಯ, ಆ. 9– ಇಲ್ಲಿನ ಬ್ಯಾಂಕೊಂದರ ಜವಾನನ ಮನೆಯಲ್ಲಿದ್ದ ಸುಮಾರು ಒಂದು ಲಕ್ಷಕ್ಕಿಂತಲೂ ಹೆಚ್ಚು ಹಣವನ್ನು ವಶಪಡಿಸಿಕೊಳ್ಳಲಾಗಿದೆಯೆಂದು ತಿಳಿದುಬಂದಿದೆ.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಮಂಡ್ಯ ಶಾಖೆಯಲ್ಲಿ ಜವಾನರಾಗಿರುವ ಟಿ. ತಿಮ್ಮಯ್ಯ ಉರುಫ್ ಕುಳ್ಳಯ್ಯ ಎಂಬುವವರ ಮನೆಗೆ ಹಠಾತ್ತನೆ ಕೇಂದ್ರ ರೆವಿನ್ಯೂ ಇಲಾಖೆ ಅಧಿಕಾರಿಗಳು ದಾಳಿ ಮಾಡಿ, ಒಂದು ಲಕ್ಷದ ಹದಿನಾರು ಸಾವಿರದ ಆರುನೂರ ಏಳು ರೂಪಾಯಿ ವಶಪಡಿಸಿಕೊಂಡರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ವಲ್ಪ ಅಂತರದಲ್ಲಿ ಭಾರತದ ಕೈತಪ್ಪಿವೆ ಏಳು ಪದಕ

ಮೂರು– ನಾಲ್ಕು: ನಡುವೆ ಅಜಗಜಾಂತರ!

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಪ್ರತಿಸಲ ಒಲಿಂಪಿಕ್ ಕೂಟ ಮುಗಿದ ನಂತರ ಭಾರತ ಪಡೆದ ಪದಕಗಳ ಸಂಖ್ಯೆಯ ಬಗ್ಗೆ ಚರ್ಚೆಗಳು ನಡೆಯುವುದು ಸಾಮಾನ್ಯ. ಆದರೆ ಈ ಸಲದ ಪ್ಯಾರಿಸ್ ಒಲಿಂಪಿಕ್ಸ್ ಇದಕ್ಕೆ ಅಪವಾದ. ಈ ಬಾರಿ ಭಾರತವು ಜಯಿಸಿದ್ದಕ್ಕಿಂತ ಅಲ್ಪ ಅಂತರದಲ್ಲಿ ಕೈತಪ್ಪಿಸಿಕೊಂಡ ಪದಕಗಳ ಬಗ್ಗೆಯೇ ಹೆಚ್ಚು ಚರ್ಚೆ ನಡೆಯುತ್ತಿದೆ.

ಏಕೆಂದರೆ, ಆರು ಕ್ರೀಡೆಗಳಲ್ಲಿ ನಾಲ್ಕನೇ ಸ್ಥಾನ ಪಡೆದ ಕ್ರೀಡಾಪಟುಗಳು ಕಂಚಿನ ಪದಕವನ್ನು ಸ್ವಲ್ಪ ಅಂತರದಲ್ಲಿ ಕಳೆದುಕೊಂಡಿದ್ದಾರೆ. ದೇಹತೂಕದಲ್ಲಿ 100 ಗ್ರಾಂ ಹೆಚ್ಚಾಗಿದ್ದರಿಂದ ವಿನೇಶ್ ಫೋಗಟ್ ಅವರು ಕುಸ್ತಿ ಫೈನಲ್‌ನಿಂದ ಅನರ್ಹಗೊಂಡು ಪದಕ ಜಯಿಸುವ ಅವಕಾಶ ಕಳೆದುಕೊಳ್ಳಬೇಕಾಯಿತು. ಇದೂ ಸೇರಿ ಒಟ್ಟು ಏಳು ಪದಕಗಳ ಜಯದ ಹೊಸ್ತಿಲಿನಲ್ಲಿ ನಿರಾಶೆ ಎದುರಾಗಿದೆ. ಇದು, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ಗೆದ್ದ ಒಟ್ಟು ಪದಕಗಳ ಸಂಖ್ಯೆಗೆ ಸಮ.

ಶೂಟಿಂಗ್‌ನಲ್ಲಿ ಮನು ಭಾಕರ್ ಎರಡು ಕಂಚಿನ ಪದಕಗಳನ್ನು ಗೆದ್ದರು. ಆದರೆ, 25 ಮೀಟರ್ಸ್ ಸ್ಪೋರ್ಟ್ಸ್ ಪಿಸ್ತೂಲ್ ಸ್ಪರ್ಧೆಯಲ್ಲಿ ಗೆದ್ದು ಹ್ಯಾಟ್ರಿಕ್ ಸಾಧಿಸುವ ಅವರ ಗುರಿ ಈಡೇರಲಿಲ್ಲ. ಶೂಟಿಂಗ್ ಕ್ರೀಡೆಯಲ್ಲಿಯೇ ಮಹೇಶ್ವರಿ ಚೌಹಾಣ್– ಅನಂತ್‌ಜೀತ್ ನರೂಕಾ (ಸ್ಕೀಟ್ ಮಿಶ್ರ ತಂಡ), ಅರ್ಜುನ್ ಬಬುತಾ (ಪುರುಷರ 10 ಮೀ. ರೈಫಲ್ ಶೂಟಿಂಗ್), ಲಕ್ಷ್ಯ ಸೇನ್ (ಪುರುಷರ ಬ್ಯಾಡ್ಮಿಂಟನ್ ಸಿಂಗಲ್ಸ್), ಅಂಕಿತಾ ಭಕತ್– ಧೀರಜ್ ಬೊಮ್ಮದೇವರ (ಆರ್ಚರಿ) ಹಾಗೂ ಮೀರಾಬಾಯಿ ಚಾನು (ಮಹಿಳೆಯರ ವೇಟ್‌ಲಿಫ್ಟಿಂಗ್) ಅವರು ಅತ್ಯಲ್ಪ ಅಂತರದಲ್ಲಿ ಪದಕ ತಪ್ಪಿಸಿಕೊಂಡವರು.

ಲೋಕಾಭಿರಾಮವಾಗಿ ಮಾತನಾಡುವುದಾದರೆ, ಮೂರು ಮತ್ತು ನಾಲ್ಕನೇ ಸ್ಥಾನಕ್ಕೆ ದೊಡ್ಡ ಅಂತರವೇನಿಲ್ಲ. ಆದರೆ ಕ್ರೀಡಾಕ್ಷೇತ್ರದಲ್ಲಿ ಈ ಎರಡು ಅಂಕಿಗಳ ನಡುವೆ ಅಜಗಜಾಂತರವಿದೆ. ಈ ಬಾರಿ ನಾಲ್ಕನೇ ಸ್ಥಾನ ಪಡೆದವರಲ್ಲಿ ಎಷ್ಟು ಮಂದಿ ಕ್ರೀಡಾಪಟುಗಳಿಗೆ ಭವಿಷ್ಯದಲ್ಲಿ ಮತ್ತೆ ಒಲಿಂಪಿಕ್ಸ್ ಆಡುವ ಅವಕಾಶ ಸಿಗಬಹುದು?

ಇದಕ್ಕೆ ಸೂಕ್ತ ಉದಾಹರಣೆಯೆಂದರೆ, ಭಾರತ ಮಹಿಳಾ ಹಾಕಿ ತಂಡ. 2020ರಲ್ಲಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ವನಿತೆಯರು ನಾಲ್ಕನೇ ಸ್ಥಾನ ಪಡೆದಿದ್ದರು. ಆಗ ತಂಡಕ್ಕೆ ಮೆಚ್ಚುಗೆಯ ಮಹಾಪೂರ ಹರಿದುಬಂದಿತ್ತು. ಆದರೆ ಈ ಸಲದ ಒಲಿಂಪಿಕ್ ಕೂಟಕ್ಕೆ ಮಹಿಳಾ ತಂಡವು ಅರ್ಹತೆ ಗಿಟ್ಟಿಸಲಿಲ್ಲ.

ಇನ್ನೊಂದು ಆಯಾಮದಲ್ಲಿ ನೋಡುವುದಾದರೆ, ನಾಲ್ಕನೇ ಸ್ಥಾನ ಪಡೆದಿರುವುದು ಶುಭಸಂಕೇತ ಎನ್ನಬಹುದು. ಏಕೆಂದರೆ, ದಶಕಗಳ ಹಿಂದೆ ಭಾರತದ ಆಟಗಾರರು ನಾಕೌಟ್ ಹಂತ ತಲುಪಿದ್ದೇ ಅಪರೂಪವಾಗಿತ್ತು. ಈಗ ಅಮೆರಿಕ, ಚೀನಾ ಮತ್ತು ಯುರೋಪ್ ದೇಶಗಳಿಗೆ ಕಠಿಣ ಪೈಪೋಟಿಯೊಡ್ಡುವ ಮಟ್ಟಕ್ಕೆ ಬೆಳೆದಿರುವುದು ಆಶಾದಾಯಕ. ಆದರೆ ಇಷ್ಟು ಸಾಕೆ?

ನಮ್ಮ ಕ್ರೀಡಾ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರಲು ಇದು ಸಕಾಲ ಎನ್ನುತ್ತಾರೆ ಹಲವು ಕ್ರೀಡಾಪಟುಗಳು. ಲಕ್ಷ್ಯ ಸೇನ್ ಸೆಮಿಫೈನಲ್‌ನಲ್ಲಿ ಮಲೇಷ್ಯಾ ಎದುರಾಳಿಯ ಮುಂದೆ ಸೋತ ನಂತರ, ಬ್ಯಾಡ್ಮಿಂಟನ್ ದಂತಕಥೆ ಪ್ರಕಾಶ್ ಪಡುಕೋಣೆ ಅವರು ಹೇಳಿದ ಮಾತುಗಳು ಇಲ್ಲಿ ಪ್ರಸ್ತುತ.

‘ಒಂದು ವಿಭಾಗವು ಒಬ್ಬ ಆಟಗಾರನ ಮೇಲಷ್ಟೇ ಅವಲಂಬಿತವಾಗಬಾರದು. ಹೆಚ್ಚು ಆಯ್ಕೆಗಳು ಇರಬೇಕು. ಪ್ರತಿ ವಿಭಾಗದಲ್ಲಿಯೂ ದೇಶವನ್ನು ಪ್ರತಿನಿಧಿಸುವ ಆಟಗಾರರು ಇರಬೇಕು. ಎರಡನೇ ಸಾಲಿನ ಆಟಗಾರರನ್ನು ಬೆಳೆಸಬೇಕು. ಕ್ರಿಕೆಟ್‌ನಲ್ಲಿ ಅಂತಹ ಮಾದರಿಯಿದೆ. ಸೀನಿಯರ್ ತಂಡ, ಎ ತಂಡ, 19 ವರ್ಷದೊಳಗಿನವರು, 17 ವರ್ಷದೊಳಗಿನವರ ತಂಡಗಳು ಇವೆ. ಇಂತಹ ವ್ಯವಸ್ಥೆ ಬೇರೆ ಕ್ರೀಡೆಗಳಲ್ಲಿಯೂ ಬರಬೇಕು. ನಮ್ಮಲ್ಲಿ ಪ್ರತಿಭಾವಂತರಿಗೆ ಕೊರತೆ ಇಲ್ಲ’ ಎಂಬುದು ಪ್ರಕಾಶ್ ಅವರ ಅಭಿಮತ.

ಅಲ್ಲದೆ ಈಗ ಮೊದಲಿಗಿಂತಲೂ ಹೆಚ್ಚು ಸೌಲಭ್ಯಗಳು ಸಿಗುತ್ತಿವೆ. ಆದ್ದರಿಂದ ಆಟಗಾರರೂ ಉತ್ತರದಾಯಿತ್ವದ ಹೊಣೆ ಹೊರಬೇಕು. ಗೆಲುವಿನಂಚಿನಲ್ಲಿ ಆಗುವ ಒತ್ತಡ ನಿರ್ವಹಣೆಯನ್ನು ಕಲಿಯಬೇಕು. ಜವಾಬ್ದಾರಿಯುತವಾಗಿ ಆಡುವುದನ್ನು ರೂಢಿಸಿಕೊಳ್ಳಬೇಕು ಎಂದೂ ಅವರು ಹೇಳಿದ್ದಾರೆ.

ಅವರ ಮಾತುಗಳು ಬ್ಯಾಡ್ಮಿಂಟನ್ ವಿಭಾಗಕ್ಕೆ ಮಾತ್ರವಲ್ಲ, ಬೇರೆ ಕ್ರೀಡೆಗಳಿಗೂ ಅನ್ವಯವಾಗುತ್ತವೆ. ವೇಟ್‌ಲಿಫ್ಟಿಂಗ್‌ನ 49 ಕೆ.ಜಿ. ವಿಭಾಗದಲ್ಲಿ ಮೀರಾಬಾಯಿ ಅವರೊಬ್ಬರನ್ನು ಬಿಟ್ಟರೆ, ಉಳಿದ ತೂಕ ವಿಭಾಗಗಳಲ್ಲಿ ಭಾರತದ ಸ್ಪರ್ಧಿಗಳು ಇರಲಿಲ್ಲ. ಪುರುಷರ ಕುಸ್ತಿಯಲ್ಲಿ ಅಮನ್ ಸೆಹ್ರಾವತ್ ಬಿಟ್ಟರೆ ಬೇರಾರೂ ಕಣದಲ್ಲಿರಲಿಲ್ಲ. ಟೆನಿಸ್‌ನಲ್ಲಿ ಮೂವರು, ಈಜಿನಲ್ಲಿ ಇಬ್ಬರು (ಕರ್ನಾಟಕದ ದಿನಿಧಿ ದೇಸಿಂಗು, ಶ್ರೀಹರಿ ನಟರಾಜ್), ಈಕ್ವೆಸ್ಟ್ರಿಯನ್ ಹಾಗೂ ಜುಡೊ ಕ್ರೀಡೆಗಳಲ್ಲಿ ತಲಾ ಒಬ್ಬರು ಇದ್ದರು. ಅಷ್ಟಕ್ಕೂ ಒಲಿಂಪಿಕ್ಸ್‌ನಲ್ಲಿದ್ದ 32 ಕ್ರೀಡೆಗಳ ಪೈಕಿ ಭಾರತವು ಸ್ಪರ್ಧೆ ಮಾಡಿದ್ದು 16 ವಿಭಾಗಗಳಲ್ಲಿ ಮಾತ್ರ. ಬರೀ 117 ಸ್ಪರ್ಧಿಗಳನ್ನು ಕಳಿಸಿ 50ಕ್ಕೂ ಹೆಚ್ಚು ಪದಕಗಳನ್ನು ನಿರೀಕ್ಷೆ ಮಾಡುವುದು ಎಷ್ಟು ಸರಿ?

ಪ್ರಕಾಶ್ ಅವರು ಹೇಳಿದಂತೆ, ಈಗ ತಕ್ಕಮಟ್ಟಿಗೆ ಸೌಲಭ್ಯಗಳಿವೆ. ಈ ಒಲಿಂಪಿಕ್ಸ್‌ನಲ್ಲಿ ಕ್ರೀಡಾಪಟುಗಳಿಗೆ ತಮ್ಮ ವೈಯಕ್ತಿಕ ಕೋಚ್ ಹಾಗೂ ನೆರವು ಸಿಬ್ಬಂದಿಯನ್ನು ಕರೆದುಕೊಂಡು ಹೋಗಲು ಅವಕಾಶ ನೀಡಲಾಗಿತ್ತು. ಖರ್ಚು ವೆಚ್ಚವನ್ನು ಸರ್ಕಾರವೇ ಭರಿಸಿತ್ತು. ‘ಟಾಪ್’ ಯೋಜನೆಯಿಂದ ತರಬೇತಿಗೆ ಹೆಚ್ಚು ಅನುಕೂಲಗಳಾಗುತ್ತಿವೆ. ಆದರೆ ಇಷ್ಟು ಸಾಲದು. ‘140 ಕೋಟಿ ಜನಸಂಖ್ಯೆಗೆ ಐದಾರು ಪದಕ ಸಾಕೆ?’ ಎಂಬ ಪ್ರಶ್ನೆಗೆ ಉತ್ತರ ಪಡೆಯಲು ಇನ್ನೂ ಹೆಚ್ಚು ಸೌಲಭ್ಯಗಳು ಬೇಕು. ತಳಮಟ್ಟದಲ್ಲಿ ಪ್ರತಿಭಾಶೋಧ ನಡೆಸಿ, ಅಂತಹವರನ್ನು ಬೆಳೆಸುವ ವ್ಯವಸ್ಥೆ ಜಾರಿಯಾಗಬೇಕು. ಆಡಳಿತ ವ್ಯವಸ್ಥೆ ಮತ್ತು ಫೆಡರೇಷನ್‌ಗಳ ಕಾರ್ಯವೈಖರಿಯಲ್ಲಿ ಪಾರದರ್ಶಕತೆ ಬರಬೇಕು. ಒಲಿಂಪಿಕ್ಸ್, ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಮಾಡುವ ಸಾಧನೆಗಳಿಂದ ಪ್ರೇರಣೆಗೊಂಡು ಹಳ್ಳಿಗಾಡಿನ ಮಕ್ಕಳು ಆಟ ಕಲಿಯಲು ಬಯಸಿದರೆ ಸೌಲಭ್ಯಗಳು ಕೈಗೆಟುಕುವಂತೆ ಇರಬೇಕು.

ಆಧುನಿಕ ಯುಗಕ್ಕೆ ತಕ್ಕಂತೆ ಕ್ರೀಡಾ ವಿಜ್ಞಾನದ ಬಳಕೆಗೆ ಹೆಚ್ಚು ಒತ್ತು ನೀಡಬೇಕು. ಆಟಗಾರರಿಗೆ ದೈಹಿಕ ತರಬೇತಿಯ ಜೊತೆಗೆ ಮಾನಸಿಕ ದೃಢತೆ ಕಾಯ್ದುಕೊಳ್ಳುವ ತರಬೇತಿಯ ಅವಶ್ಯಕತೆಯೂ ಈಗ ಹೆಚ್ಚಾಗಿದೆ.

ಅಮೆರಿಕದ ಜಿಮ್ನಾಸ್ಟ್ ಸಿಮೋನ್ ಬೈಲ್ಸ್ ಇದಕ್ಕೆ ಸೂಕ್ತ ಉದಾಹರಣೆಯಾಗುತ್ತಾರೆ. 2016ರ ಒಲಿಂಪಿಕ್ಸ್‌ನಲ್ಲಿ ಅವರು ನಾಲ್ಕು ಚಿನ್ನದ ಪದಕ ಜಯಿಸಿ ಚಾಂಪಿಯನ್ ಆಗಿದ್ದರು. ಆದರೆ ಖಿನ್ನತೆಯ ಸಮಸ್ಯೆಯಿಂದಾಗಿ 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ತಮ್ಮ ಲಯ ಕಳೆದುಕೊಂಡಿದ್ದರು. ಆದರೆ ಇದೀಗ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅವರು ಮೂರು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಗೆದ್ದು ಸಂಭ್ರಮಿಸಿದ್ದಾರೆ. ಈ ಸಂದರ್ಭದಲ್ಲಿ ಅವರು, ತಮ್ಮ ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸಿಕೊಳ್ಳಲು ವೈದ್ಯಕೀಯ ತಂಡ ಮತ್ತು ಮಾನಸಿಕ ತಜ್ಞರು ನೀಡಿದ ನೆರವನ್ನು ಸ್ಮರಿಸಿದ್ದಾರೆ. ಅಲ್ಲಿಯ ಕ್ರೀಡಾ ಆಡಳಿತ ಮತ್ತು ಸರ್ಕಾರ ಎಲ್ಲ ಬೆಂಬಲವನ್ನೂ ನೀಡಿದ್ದವು.

‘ನಮ್ಮಲ್ಲಿ ಒಬ್ಬ ಕ್ರೀಡಾಪಟು ಗಾಯಗೊಂಡು ಮೈದಾನದಿಂದ ಹೊರಗುಳಿದರೆ ಜೀವನೋಪಾಯಕ್ಕೆ ಯಾವುದೇ ಮಾರ್ಗವಿಲ್ಲ. ಚಿಕಿತ್ಸಾ ವೆಚ್ಚವನ್ನೂ ತನ್ನದೇ ಜೇಬಿನಿಂದ ಭರಿಸಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಅದೇ ಕ್ರಿಕೆಟ್‌ನಲ್ಲಿ ನೋಡಿ; ಆಟಗಾರರಿಗೆ ವೇತನ ನೀಡುತ್ತಾರೆ. ಗಾಯಗೊಂಡು ದೀರ್ಘಕಾಲ ಆಟದಿಂದ ಹೊರಗಿದ್ದರೆ ಚಿಕಿತ್ಸೆ ಮತ್ತು ಜೀವನ ನಿರ್ವಹಣೆಯ ವೆಚ್ಚವನ್ನೂ ಭರಿಸುತ್ತಾರೆ. ಬೇರೆ ಕ್ರೀಡೆಗಳಿಗೂ ಇಂತಹ ಸೌಲಭ್ಯಗಳು ಸಿಕ್ಕರೆ, ಪದಕ ಪಟ್ಟಿಯಲ್ಲಿ ನಾವು ಮೇಲಿನ ಸ್ಥಾನಗಳಲ್ಲಿ ಇರುವುದು ಖಚಿತ’ ಎಂದು ಸೈನಾ ನೆಹ್ವಾಲ್ ಹೇಳುತ್ತಾರೆ.

ಒಬ್ಬ ಅಥ್ಲೀಟ್ ದೊಡ್ಡ ಮಟ್ಟದ ಸಾಧನೆ ಮಾಡಿದಾಗ ದೊಡ್ಡ ಮೊತ್ತದ ಬಹುಮಾನಗಳನ್ನು ನೀಡಲಾಗುತ್ತದೆ. ಆದರೆ ಅದೇ ಅಥ್ಲೀಟ್ ಬೆಳೆಯುವ ಹಂತದಲ್ಲಿ ಪಟ್ಟಪಾಡು ಅವರಿಗಷ್ಟೇ ಗೊತ್ತಿರುತ್ತದೆ. ನೀರಜ್, ಸಿಂಧು, ಮೇರಿ ಕೋಮ್ ಅವರಂತಹ ಚಾಂಪಿಯನ್‌ಗಳೂ ಇಂತಹ ಪಡಿಪಾಟಲು ಅನುಭವಿಸಿಯೇ ಈ ಮಟ್ಟಕ್ಕೆ ಬೆಳೆದಿದ್ದಾರೆ. ಆದ್ದರಿಂದ ಮೊಳಕೆಯಲ್ಲಿ ನೀರೆರೆದು ಪೋಷಿಸುವ ವ್ಯವಸ್ಥೆ ಬೆಳೆದರೆ, ಪದಕ ಜಯದ ಹಾದಿಯನ್ನು ಸಂಪೂರ್ಣವಾಗಿ ಕ್ರಮಿಸುವ ಶಕ್ತಿ ಆಟಗಾರರಲ್ಲಿ ಬೆಳೆಯುವುದರಲ್ಲಿ ಸಂಶಯವಿಲ್ಲ.

ಚುರುಮುರಿ

ಪೆಂಡಾಲ್ ಮೈತ್ರಿ!

● ಗುರು ಪಿ.ಎಸ್.

‘ಏನಣ್ಣೋ ಬಿಸಿನೆಸ್ ಫುಲ್ ಜೋರಾಗಿರಬೇಕಲ್ಲ. ಒಂದೇ ಸ್ಥಳದಲ್ಲಿ ಎರಡೆರಡು ಸಮಾವೇಶ, ಡಬಲ್ ಡಬಲ್ ಕಮಾಯಿ’ ಕಂಟ್ರಾಕ್ಟರ್ ಮುದ್ದಣ್ಣನ ಕಾಲೆಳೆದ ಸ್ನೇಹಿತ ವಿಜಿ.

‘ಏನ್ ಕಮಾಯಿ ಬಿಡೊ ಮಾರಾಯ, ಈ ರಾಜಕೀಯದವರ ಸಹವಾಸವೇ ಬೇಡ ಅನಿಸಿಬಿಡುತ್ತೆ’ ಬೇಸರದಲ್ಲಿ ಹೇಳಿದ ಮುದ್ದಣ್ಣ.

‘ಪೆಂಡಾಲ್ ಹಾಕಿದ ದುಡ್ಡು ಕೊಟ್ಟಿಲ್ವ?’

‘ಎರಡು ಸಮಾವೇಶಕ್ಕೂ ಅದೇ ಪೆಂಡಾಲ್, ಫ್ಯಾನು, ಜನರೇಟರ್, ಎಲ್‌ಇಡಿ ಸ್ಕ್ರೀನು ಹಾಕ್ತಿರೋದ್ರಿಂದ ಅರ್ಧ ದುಡ್ಡು ಕೊಡ್ತೀವಿ ಅಂತಿದ್ದಾರೆ’.

‘ಹೇಗೂ ಮತ್ತೊಂದು ಪಾರ್ಟಿಯವರು ಅರ್ಧ ದುಡ್ಡು ಕೊಡ್ತಾರಲ್ಲ ಬಿಡು’ ನಕ್ಕ ವಿಜಿ.

‘ಅದು ಹೆಂಗೆ ಸರಿಯಾಗುತ್ತೋ ಮಾರಾಯ, ಎರಡು ದಿನ ಪೆಂಡಾಲ್ ಹಾಕಿ ಒಂದೇ ದಿನದ ಬಾಡಿಗೆ ತಗೊಂಡಂಗಾಗಲ್ವ’ ಸಿಟ್ಟಿನಲ್ಲಿ ಕೇಳಿದ ಮುದ್ದಣ್ಣ.

‘ಇರಲಿ, ಜನರಿಗೋಸ್ಕರ ಪಾದಯಾತ್ರೆ ಮಾಡಿದಾರೆ, ಅಡ್ಜಸ್ಟ್ ಮಾಡ್ಕೊ’.

‘ಪಾದಯಾತ್ರೆ ಶುರು ಆದಾಗಿನಿಂದ ಇವರದು ಇದೇ ಕಿರಿಕಿರಿ ಮಾರಾಯ... ದಾರಿಯುದ್ದಕ್ಕೂ ಅಲ್ಲಲ್ಲಿ ಭಾಷಣ ಮಾಡೋದಿದೆ, ಅಲ್ಲೆಲ್ಲ ಚೇರ್ ಹಾಕಿಸು ಅಂದಿದ್ರು. ಚನ್ನಪಟ್ಟಣದಲ್ಲಿ ಗಣ್ಯರ ಸಂಖ್ಯೆಯಷ್ಟು ಕುರ್ಚಿ ಹಾಕಿದ್ದೆ. ಒಂದು ಎಕ್ಸ್‌ಟ್ರಾ ಹಾಕು ಚನ್ನಪಟ್ಟಣದ ನಾಯಕ ತಡವಾಗಿ ಬರಬಹುದು, ಅವರು ಬಂದಾಗ ಚೇರ್ ಇರಲಿಲ್ಲ ಅಂದ್ರೆ ಕಷ್ಟ ಆಗುತ್ತೆ ಅಂದ್ರು, ಮೈಸೂರಿನಲ್ಲಿ ಒಂದು ಚೇರ್ ಎಕ್ಸ್‌ಟ್ರಾ ಹಾಕಿದರೆ, ಆ ಚೇರ್ ತೆಗೆದುಬಿಡು ಹಾಸನದ ಯುವನಾಯಕ ಬಂದು ಕೂತರೆ ಕಷ್ಟ ಆಗುತ್ತೆ ಅಂದ್ರು’ ತಲೆ ಚಚ್ಚಿಕೊಂಡ.

‘ಬಾಡಿಗೆ ಪೂರ್ತಿ ಕೊಡಿ. ನನಗೇನೂ ಉಳಿಯಲ್ಲ, ಲಾಭವೂ ಇಲ್ಲ ಅಂತ ಕೇಳಬೇಕಿತ್ತು’

‘ಅದನ್ನೂ ಕೇಳಿದೆ. ಈ ಪಾದಯಾತ್ರೆ, ಸಮಾವೇಶದಿಂದ ನಮಗೇನು ಲಾಭ ಆಯ್ತು ಅಂತಾನೇ ಇನ್ನೂ ಗೊತ್ತಾಗ್ತಿಲ್ಲ. ಇನ್ನು, ಪೆಂಡಾಲ್ ಹಾಕಿದ ನಿನಗೇನ್ ಲಾಭ ಆಗಬೇಕು ಹೇಳು ಅಂದ್ರು’ ಎಂದ ಬೇಸರದಲ್ಲಿ.

‘ಮತ್ತೀಗ ಏನ್ಮಾಡ್ತೀಯ?’

‘ಮೂರೂ ಪಕ್ಷದವರಿಂದ ನನಗೆ ಅನ್ಯಾಯ ಆಗಿದೆ, ನ್ಯಾಯ ಕೊಡಿ ಅಂತ ಮೈಸೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡ್ತೀನಿ’ ಎಂದ !

ಸಂಗತ

ಕೌಶಲ ಕರಗತ: ಬೋಧನೆ ಸುಲಲಿತ

ಸೂಕ್ಷ್ಮ ಮನಃಸ್ಥಿತಿ ಹೊಂದಿರುವ ಮಕ್ಕಳನ್ನು ನಾಜೂಕಾಗಿ ನಿಭಾಯಿಸುವ ಕೌಶಲಗಳನ್ನು ಕರಗತ ಮಾಡಿಕೊಳ್ಳಬೇಕಾದುದು ಶಿಕ್ಷಕರಿಗೆ ಅನಿವಾರ್ಯ

● ಡಾ. ಮುರಳೀಧರ ಕಿರಣಕೆರೆ

ಅದು ಶಿಕ್ಷಕರ ಕೌಶಲಾಭಿವೃದ್ಧಿ ತರಬೇತಿ ಕಾರ್ಯಕ್ರಮ. ಸಂವಾದದಲ್ಲಿ ಭಾಗವಹಿಸಿದ್ದ ಶಿಕ್ಷಕಿಯೊಬ್ಬರು ತಮ್ಮ ಸಮಸ್ಯೆಯನ್ನು ಮುಂದಿಟ್ಟರು. ‘ಐದನೇ ತರಗತಿಯ ಹುಡುಗಿಯೊಬ್ಬಳು ಯಾವುದೇ ಹೋಮ್‌ವರ್ಕ್ ಕೊಟ್ಟರೂ ಮಾಡಿಕೊಂಡು ಬರುವುದಿಲ್ಲ. ಹೋಮ್‌ವರ್ಕ್ ಮಹತ್ವವನ್ನು ಆಕೆಗೆ ತಿಳಿಸಿ ಹೇಳಿದ್ದಾಯ್ತು, ಗದರಿಸಿಯೂ ಆಯ್ತು. ಅವಳ ತಾಯಿಗೂ ವಿಷಯ ತಿಳಿಸಿದೆ. ಆಕೆಯ ವರ್ತನೆಯಲ್ಲಿ ಏನೂ ಬದಲಾವಣೆಯಿಲ್ಲ. ಮನೆಯಲ್ಲಿ ಮಗುವಿಗೆ ಅಭ್ಯಾಸ ಮಾಡಿಸಿ ಎಂದು ಅವಳ ತಾಯಿಗೆ ಹಲವು ಸಲ ಹೇಳಿ ನೋಡಿದೆ. ನೀವು ಶಿಕ್ಷಕರು, ನೀವೇ ಅವಳಿಗೆ ಹೇಳಿ ಮಾಡಿಸಬೇಕು. ಇದೆಲ್ಲಾ ನಿಮ್ಮ ಜವಾಬ್ದಾರಿ, ನಮ್ಮದಲ್ಲ ಎನ್ನುತ್ತಾರೆ’ ಎಂದರು.

ಮುಂದುವರಿದ ಅವರು, ‘ಹಾಗಂತ ಆ ಹುಡುಗಿ ದಡ್ಡಿ ಅಂತಲ್ಲ. ಟಿ.ವಿ. ಧಾರಾವಾಹಿಗಳ ಹೆಸರು, ಅದರ ಕತೆಯನ್ನೆಲ್ಲಾ ಪಟಪಟನೆ ಹೇಳ್ತಾಳೆ. ಮೊಬೈಲ್ ಬಳಕೆಯಲ್ಲೂ ಎಕ್ಸ್‌ಪರ್ಟ್. ಆದರೆ ಓದು, ಬರಹದಲ್ಲಿ ಮಾತ್ರ ಸ್ವಲ್ಪವೂ ಆಸಕ್ತಿ ಇಲ್ಲ. ಅವಳನ್ನು ತಿದ್ದಲು ತುಂಬಾ ಪ್ರಯತ್ನಿಸಿದೆ. ಅಂಕಗಳು ಕಡಿಮೆ ಬಂದಾಗ, ಸರಿಯಾಗಿ ಪಾಠ ಮಾಡುವುದಿಲ್ಲ ಎಂದು ನಮ್ಮನ್ನೇ ದೂರುವುದರಿಂದ ಮನಸ್ಸಿಗೆ ತುಂಬಾ ಹಿಂಸೆಯಾಗುತ್ತದೆ. ಹಾಗಾದರೆ ಇಲ್ಲಿ ಪೋಷಕರ ಜವಾಬ್ದಾರಿ ಏನೂ ಇಲ್ಲವೇ?’ ಎಂದು ಬೇಸರದಿಂದಲೇ ಪ್ರಶ್ನಿಸಿದರು. ಆಗ ಸಹೋದ್ಯೋಗಿಗಳು ತಲೆಯಾಡಿಸುತ್ತಾ ಆ ಶಿಕ್ಷಕಿಯನ್ನು ಬೆಂಬಲಿಸಿದರು!

‘ಆಕೆಯ ಹೆತ್ತವರನ್ನು ಶಾಲೆಗೆ ಕರೆಸಿ ಮಾತನಾಡಿ. ಹೋಮ್‌ವರ್ಕ್ ಕೊಡುವ ಉದ್ದೇಶ, ಮನೆಯಲ್ಲಿ ಅಭ್ಯಾಸ ಮಾಡಿಸುವುದರ ಮಹತ್ವವನ್ನು ತಿಳಿ ಹೇಳಿ. ಪೋಷಕರ ಸಹಕಾರ ಇದ್ದಾಗಷ್ಟೇ ಮಗುವಿನ ವರ್ತನೆಯಲ್ಲಿ ಬದಲಾವಣೆ ತರಬಹುದು ಎಂಬುದನ್ನು ಮನದಟ್ಟು ಮಾಡಿಸಿದಾಗ ಮಾತ್ರ ನಿಮ್ಮ ಕಲಿಸುವ ಕೆಲಸ ಹಗುರವಾಗುವುದು’ ಎಂದೆ. ತರಬೇತುದಾರನಾಗಿ ಪಾಲ್ಗೊಂಡಿದ್ದ ನಾನು, ಶಿಕ್ಷಕರು ಆಪ್ತ ಸಮಾಲೋಚನೆಯ ಕೌಶಲವನ್ನೂ ಕಲಿಯಬೇಕಾದ ಅಗತ್ಯವನ್ನು ಒತ್ತಿ ಹೇಳಿದರೂ ಆ ಶಿಕ್ಷಕಿಯ ಮುಖದಲ್ಲಿ ಅಂತಹ ಸಮಾಧಾನವೇನೂ ಕಾಣಿಸಲಿಲ್ಲ!

ಹೌದು, ಕಲಿಸುವ ಕಾಯಕವನ್ನು ಪ್ರಾಮಾಣಿಕತೆ, ಶ್ರದ್ಧೆ, ನಿಷ್ಠೆಯಿಂದ ಮಾಡುವ ಹಲವು ಶಿಕ್ಷಕರು ತಮ್ಮ ಪರಿಶ್ರಮಕ್ಕೆ ನಿರೀಕ್ಷಿತ ಪ್ರತಿಫಲ ಕಾಣದಾದಾಗ ಹತಾಶರಾಗುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಪೋಷಕರ ಸ್ಪಂದನೆ ಸರಿಯಾಗಿ ಸಿಗದಿರುವುದೇ ನಿರಾಶಾದಾಯಕ ಫಲಿತಾಂಶಕ್ಕೆ ಕಾರಣ. ಮಕ್ಕಳನ್ನು ಶಾಲೆಗೆ ಕಳುಹಿಸುವುದಷ್ಟೇ ತಮ್ಮ ಕೆಲಸ, ಅವರಿಗೆ ಉತ್ತಮ ಶಿಕ್ಷಣ ನೀಡುವ ಸಂಪೂರ್ಣ ಜವಾಬ್ದಾರಿ ಶಿಕ್ಷಕರದ್ದು ಎಂಬ ಮನೋಭಾವ ಹಲವು ಪಾಲಕರಲ್ಲಿದೆ.

ಮನೆಯ ವಾತಾವರಣ ವೇಗವಾಗಿ ಬದಲಾವಣೆ ಹೊಂದುತ್ತಿರುವ ಇಂದಿನ ಕಾಲಘಟ್ಟದಲ್ಲಿ, ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಕಲಿಸುವಲ್ಲಿ ಶಿಕ್ಷಕರು ಹಲವು ತೊಡಕು, ಸವಾಲುಗಳನ್ನು ಎದುರಿಸುತ್ತಿದ್ದಾರೆ. ಹಿಂದೆ ಕೂಡುಕುಟುಂಬದಲ್ಲಿದ್ದ ಶಿಕ್ಷೆ, ರಕ್ಷೆ, ಶಿಸ್ತು, ಸಾಂತ್ವನ, ಪ್ರೀತಿ, ಮಾರ್ಗದರ್ಶನ, ಬೆಂಬಲ ಇಂದಿನ ಸಣ್ಣ ಸಣ್ಣ ಸಂಸಾರಗಳಲ್ಲಿ ಸಂಪೂರ್ಣವಾಗಿ ಕಾಣೆಯಾಗಿದೆ. ಟಿ.ವಿ., ಸಾಮಾಜಿಕ ಜಾಲತಾಣಗಳು ಎಳೆಯರನ್ನು ಸೆಳೆಯುತ್ತಾ ಮಾರ್ಗದರ್ಶಕ ಸ್ಥಾನವನ್ನು ಆಕ್ರಮಿಸಿವೆ. ಇತ್ತ ದುಡಿಮೆಯತ್ತಲೇ ಪೂರ್ಣ ಗಮನ ನೆಟ್ಟಿರುವ ಹೆತ್ತವರಿಗೆ ಮಕ್ಕಳ ಪಾಲನೆ ಆದ್ಯತೆಯ ವಿಷಯವಾಗಿ ಉಳಿದಿಲ್ಲ. ಪಾಲಕರ ದುರಭ್ಯಾಸಗಳೂ ಮಕ್ಕಳನ್ನು ತಪ್ಪುದಾರಿಗೆ ದೂಡುತ್ತಿವೆ. ತಮ್ಮ ಮಕ್ಕಳು ಓದನ್ನು ನಿರ್ಲಕ್ಷಿಸುತ್ತಾ ಸದಾ ಟಿ.ವಿ., ಕಂಪ್ಯೂಟರ್, ಮೊಬೈಲ್ ಜೊತೆಗೆ ಕಾಲ ಕಳೆಯುತ್ತಾರೆ ಎಂಬುದು ಪೋಷಕರ ಸಾಮಾನ್ಯ ದೂರು. ಆದರೆ, ಮನೆಯಲ್ಲಿ ಹಿರಿಯರು ಈ ಸಾಧನಗಳ ಬಳಕೆ ಕಡಿಮೆ ಮಾಡಿದಾಗಲಷ್ಟೇ ಮಕ್ಕಳು ಅವರನ್ನು ಅನುಕರಿಸುವುದು!

ಈಗಿನ ಮಕ್ಕಳು ಅವಮಾನ ಸಹಿಸರು, ಸವಾಲುಗಳು, ಕಷ್ಟಗಳನ್ನು ಎದುರಿಸುವ ಮನೋಭಾವವೂ ಹೆಚ್ಚಿನ ಎಳೆಯರಿಗಿಲ್ಲ. ತುಂಬಾ ಸೂಕ್ಷ್ಮ ಮನಃಸ್ಥಿತಿ ಹೊಂದಿರುವ ಇವರನ್ನು ನಾಜೂಕಾಗಿ ನಿಭಾಯಿಸುವ ಕೌಶಲಗಳನ್ನು ಕರಗತ ಮಾಡಿಕೊಳ್ಳುವುದು ಶಿಕ್ಷಕರಿಗೆ ಅನಿವಾರ್ಯ. ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಪೋಷಕರೂ ಶಿಕ್ಷಕರೊಟ್ಟಿಗೆ ಸಹಕರಿಸಬೇಕು. ಅವರ ಅನುಚಿತ ವರ್ತನೆಗಳನ್ನು ಗಮನಕ್ಕೆ ತಂದಾಗ ಸೂಕ್ತವಾಗಿ ಸ್ಪಂದಿಸಬೇಕು. ಹೆಚ್ಚಿನ ಸಂದರ್ಭಗಳಲ್ಲಿ ಮಕ್ಕಳ ಕೆಟ್ಟ ನಡವಳಿಕೆಗಳಿಗೆ ಪೋಷಕರ ಅಂತಹ ಚಾಳಿಗಳೇ ಪ್ರಮುಖ ಕಾರಣ. ಹಾಗಾಗಿ, ಹೆತ್ತವರು ತಮ್ಮ ಮಕ್ಕಳ ಹಿತದೃಷ್ಟಿಯಿಂದ ತಮ್ಮನ್ನು ಮೊದಲು ತಿದ್ದಿಕೊಳ್ಳುವುದು ಮುಖ್ಯ.

ಅತಿಯಾಗಿ ಶಿಸ್ತನ್ನು ಹೇರುವ, ಸಣ್ಣಪುಟ್ಟದ್ದಕ್ಕೆಲ್ಲಾ ಶಿಕ್ಷಿಸುವ, ಭಯದಿಂದಲೇ ಎಳೆಯರನ್ನು ಬೆಳೆಸುವ ಸರ್ವಾಧಿಕಾರಿ ಪೋಷಕತ್ವದಂತೆ, ಮಕ್ಕಳಿಗೆ ಯಾವುದೇ ಕೊರತೆ ಕಾಡಬಾರದೆಂದು ಕೇಳಿದ್ದನ್ನೆಲ್ಲಾ ಕೊಡಿಸುವ, ಅವರನ್ನು ಸದಾ ಸುಖದಲ್ಲಿ ಇರಿಸುವ ಉದಾರಿ ಪಾಲಕತ್ವವೂ ಮಕ್ಕಳ ಭವಿಷ್ಯವನ್ನು ಹಾಳು ಮಾಡುತ್ತದೆ. ಹಾಗೆಯೇ ಮಕ್ಕಳ ಬೇಕು ಬೇಡಗಳ ಬಗ್ಗೆ ಸ್ವಲ್ಪವೂ ತಲೆ ಕೆಡಿಸಿಕೊಳ್ಳದ, ಅವರನ್ನು ಸಂಪೂರ್ಣವಾಗಿ ಅಲಕ್ಷಿಸುವ ನಿರ್ಲಕ್ಷ್ಯತನದ ಪೋಷಕತ್ವವೂ ಹಾನಿಕರವೆ.

ಮಕ್ಕಳೊಂದಿಗೆ ಸಮಾಲೋಚಿಸುವ, ಅವರ ಬೆಳವಣಿಗೆ, ಶಿಕ್ಷಣಕ್ಕೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸುವ, ಶಾಲೆಯೊಂದಿಗೆ ಸದಾ ಸಂಪರ್ಕದಲ್ಲಿದ್ದು ಎಳೆಯರ ಸರ್ವತೋಮುಖ ವಿಕಾಸಕ್ಕೆ ಪೂರಕ ವಾತಾವರಣ ಕಲ್ಪಿಸಿಕೊಡುವ ವಿಶ್ವಾಸಾರ್ಹ ಪೋಷಕತ್ವ ಸದ್ಯದ ಅಗತ್ಯ ಎಂಬುದನ್ನು ಹೆತ್ತವರು ಮನಗಾಣಬೇಕಿದೆ.

ವಾಚಕರ ವಾಣಿ

ಭಾವನೆಗೆ ಬೆಲೆ ಇಲ್ಲವಾಯಿತೇ?

ಬೆಳಗಾವಿ ಸಮೀಪದ ನಾವಗೆ ಎಂಬ ಗ್ರಾಮದಲ್ಲಿನ ಕಾರ್ಖಾನೆಯೊಂದರಲ್ಲಿ ಘಟಿಸಿದ ಅಗ್ನಿ ಅವಘಡದಲ್ಲಿ ಸಾವಿಗೀಡಾದ ಯುವ ಕಾರ್ಮಿಕನ ದೇಹದ ಅವಶೇಷಗಳನ್ನು ಜಿಲ್ಲಾಡಳಿತವು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ, ಆತನ ತಂದೆಯ ಕೈಗೆ ಕೊಟ್ಟಿರುವ ನಡೆ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಹದ್ದು. ಒಬ್ಬ ತಂದೆಗೆ ಮಗ ಸರ್ವಸ್ವವೇ ಆಗಿರುತ್ತಾನೆ. ಈ ಪ್ರಕರಣದಲ್ಲಿ ತಂದೆಯ ಭಾವನೆಗೆ ಬೆಲೆಯೇ ಇಲ್ಲದಂತಾಗಿದೆ.

ಕನ್ನಡದ ಕವಿ ರಾಘವಾಂಕನ ಕಾವ್ಯದಲ್ಲಿ, ಚಂದ್ರಮತಿಯು ಸಾವನ್ನಪ್ಪಿದ ಮಗ ಲೋಹಿತಾಶ್ವನ ಶವಸಂಸ್ಕಾರ ಮಾಡಲು ಸ್ಮಶಾನಕ್ಕೆ ಬಂದ ಸಂದರ್ಭದಲ್ಲಿ, ಹರಿಶ್ಚಂದ್ರನು ಸತ್ತ ಮಗುವಿನ ಕಾಲನ್ನು ಹಿಡಿದು ಎಸೆಯಲು ಮುಂದಾಗುತ್ತಾನೆ. ಆಗ ಹರಿಶ್ಚಂದ್ರನನ್ನು ತಡೆಯುವ ಚಂದ್ರಮತಿ, ಹಾಗೆ ಮಾಡಿದರೆ ತನ್ನ ಹಸುಳೆಗೆ ನೋವಾಗಬಹುದು ಎಂದು ಹೇಳುವುದು ಎಂತಹವರ ಕಣ್ಣನ್ನೂ ಆರ್ದ್ರಗೊಳಿಸುತ್ತದೆ. ಅಂತಹದ್ದರಲ್ಲಿ, ಮೊದಲೇ ಮಗನನ್ನು ಕಳೆದುಕೊಂಡು ನೋವಿನಲ್ಲಿದ್ದ ತಂದೆಗೆ, ಮಗನ ಮೃತದೇಹಕ್ಕೆ ಕನಿಷ್ಠ ಗೌರವವನ್ನೂ ನೀಡದೆ, ಅದರ ಅವಶೇಷಗಳನ್ನು ಕೈಚೀಲದಲ್ಲಿ ಹಾಕಿಕೊಟ್ಟರೆ ಎಂತಹ ಆಘಾತವಾಗಬಹುದು? ಮನುಷ್ಯರು ಎನ್ನಿಸಿಕೊಂಡ ನಾವು ಎಂತಹ ಸಂದರ್ಭದಲ್ಲೂ ಅಮಾನವೀಯವಾಗಿ ವರ್ತಿಸಬಾರದು ಹಾಗೂ ನಮ್ಮೊಳಗಿನ ಅಂತಃಕರಣ ಬತ್ತಿಹೋಗಬಾರದು ಎಂಬುದನ್ನು ಮರೆಯದಿರೋಣ.

ಲೋಕೇಶ ಬೆಕ್ಕಳಲೆ, ಮಂಡ್ಯ

ಜೋಗ ಜಲಪಾತ: ಪ್ರವಾಸಿಸ್ನೇಹಿ ಆಗಲಿ

ಜೋಗ ಜಲಪಾತವನ್ನು ವೀಕ್ಷಿಸಲು ಇತ್ತೀಚೆಗೆ ಹೋಗಿದ್ದೆ. ನಮ್ಮಂತೆ ಸಾವಿರಾರು ಪ್ರವಾಸಿಗರು ಆ ಅದ್ಭುತ ನಿಸರ್ಗ ನಿರ್ಮಿತ ವಿಸ್ಮಯವನ್ನು ಕಣ್ತುಂಬಿಕೊಳ್ಳಲು ಬಂದಿದ್ದರು. ಈಗ ಅಲ್ಲಿ ಜೋಗ ವೀಕ್ಷಣೆ ಸಲುವಾಗಿ ಭರಪೂರ ಕಾಮಗಾರಿಗಳು ನಡೆಯುತ್ತಿವೆ. ಆಗಲಿ ಒಳ್ಳೆಯದು. ಆದರೆ ಪ್ರವಾಸಿಗರಿಗೆ ಇಲ್ಲಿ ತುಂಬಾ ಹಿಂಸೆಯಾಗುವ ಮಟ್ಟಿಗೆ ಅನನುಕೂಲಗಳು ಹಾಸಿ ಹೊದ್ದಿವೆ. ಜಲಪಾತ ವೀಕ್ಷಣೆಯ ಪ್ರದೇಶದಲ್ಲಿ ಸ್ವಚ್ಛತೆ ಲವಲೇಶವೂ ಇಲ್ಲವಾಗಿದೆ. ಪ್ರವಾಸಿಗರು ಎಲ್ಲೆಂದರಲ್ಲಿ ನುಗ್ಗುವ ಮನೋವೃತ್ತಿ ಹೊಂದಿರುವುದರಿಂದ, ಮುಖ್ಯ ವೀಕ್ಷಣಾ ಸ್ಥಳದಲ್ಲಿ ನಿಲ್ಲುವವರು ಇತರರಿಗೆ ಅವಕಾಶ ಮಾಡಿಕೊಡುವುದಿಲ್ಲ. ಹಲವು ಕಡೆ ಜಲಪಾತ ನೋಡಲು ಮರ ಗಿಡಗಳು ಅಡ್ಡಿಯಾಗುತ್ತವೆ. ನೋಡುಗರಿಗೆ ಸಹಕಾರಿ ಆಗುವಂತೆ ಅವುಗಳನ್ನು ಕತ್ತರಿಸಿಲ್ಲ.

ಇತ್ತ ವಿದ್ಯುದಾಗಾರ ವೀಕ್ಷಣಾ ತಾಣದಲ್ಲಿ ಸ್ವಚ್ಛತೆಯ ಮಾತೇ ಇಲ್ಲ. ಆ ಸ್ಥಳವನ್ನು ನೋಡಲು ಪ್ರವಾಸಿಗರು ಹೆಣಗಾಡುವುದನ್ನು ಕಂಡರೆ ಅಯ್ಯೋ ಅನ್ನಿಸುತ್ತದೆ. ಮೇಲ್ಭಾಗದಲ್ಲೂ ಪ್ರವಾಸಿಗರ ದಂಡು ಕಿಕ್ಕಿರಿದು ತುಂಬಿರುತ್ತದೆ. ಪ್ರವಾಸಿಗರ ಸುರಕ್ಷತೆಗೆ ಸೂಕ್ತ ನಿರ್ವಹಣಾ ವ್ಯವಸ್ಥೆ ಅಥವಾ ಆಹಾರ ಸೌಲಭ್ಯ ಇಲ್ಲ. ಮೆಕ್ಕೆ ತೆನೆಗಳನ್ನು ಬರೋಬ್ಬರಿ ₹ 40ಕ್ಕೆ ಮಾರಲಾಗುತ್ತದೆ. ಜಲಪಾತ ವೀಕ್ಷಣೆಗೆ ಸರ್ಕಾರ ಅತ್ಯಾಧುನಿಕ ವ್ಯವಸ್ಥೆ ಕಲ್ಪಿಸಲು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ. ಆದಷ್ಟು ಬೇಗ ಕಾಮಗಾರಿಗಳನ್ನು ಮುಗಿಸಿ ಜೋಗವನ್ನು ಪ್ರವಾಸಿಸ್ನೇಹಿ ತಾಣವನ್ನಾಗಿ ಮಾಡಬೇಕಾಗಿದೆ. ಸ್ವಚ್ಛತೆಯನ್ನೂ ಕಾಪಾಡಿಕೊಳ್ಳಬೇಕಾಗಿದೆ.

ತಿರುಪತಿ ನಾಯಕ್, ಆಶಿಹಾಳ ತಾಂಡ, ಲಿಂಗಸುಗೂರು

ಋಣಭಾರ!

ತುಸುಹೆಚ್ಚಿ ಭಾರ
ಕೈ ತಪ್ಪಿತು
ಚಿನ್ನದ ಹಾರ,
ವಿಧಿ ತುಂಬಾ ಕ್ರೂರ
ಆದರೂ ಓ ವಿನೇಶ್
ದೇಶವೆಂದೂ
ಮರೆಯದು
ನಿಮ್ಮ ಸಾಧನೆಯ
ಋಣಭಾರ!

ಎಲ್.ಎನ್.ಪ್ರಸಾದ್
ತುರುವೇಕೆರೆ

ಅಂಬಾನಿ ಸಂಬಳ: ವಿನಿಯೋಗ ಆಗಿದ್ದೆಲ್ಲಿ?

ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಸತತ ನಾಲ್ಕನೇ ವರ್ಷವೂ ಸಂಬಳ ಪಡೆದಿಲ್ಲ ಎಂದು ಕಂಪನಿ ತಿಳಿಸಿರುವುದಾಗಿ ವರದಿಯಾಗಿದೆ. ಅವರು ಸಂಬಳ ತ್ಯಜಿಸಿದ್ದರ ಹಿಂದಿನ ಪ್ರೇರಣೆ ಏನು? ಯಾರಿಗಾಗಿ ತ್ಯಜಿಸಿದರು? ಆ ಕಂಪನಿಗೆ ಅವರೇ ಮುಖ್ಯಸ್ಥರು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಕೋವಿಡ್ ಸಾಂಕ್ರಾಮಿಕದ ವೇಳೆ (2020– 21) ಸ್ವಯಂಪ್ರೇರಣೆಯಿಂದ ಕಂಪನಿಗೆ ಅವರು ಸಂಬಳ ಬಿಟ್ಟುಕೊಟ್ಟಿದ್ದರು. ಆದರೆ ನಂತರದ ವರ್ಷಗಳಲ್ಲಿ ವಾರ್ಷಿಕವಾಗಿ ಅವರು ತ್ಯಜಿಸಿರುವ ₹ 15 ಕೋಟಿ ವೇತನವನ್ನು ಯಾವುದಕ್ಕೆ ವಿನಿಯೋಗಿಸಲಾಗಿದೆ ಎಂಬುದನ್ನು ಸಹ ಕಂಪನಿ ಬಹಿರಂಗಪಡಿಸುವುದು ಒಳ್ಳೆಯದು. ದೇಶಕ್ಕಾಗಿ, ಜನಕಲ್ಯಾಣಕ್ಕಾಗಿ, ದೇಶದ ಸೈನಿಕರಿಗಾಗಿ, ಪ್ರವಾಹಪೀಡಿತ ಪ್ರದೇಶದ ಜನರಿಗಾಗಿ ಅಥವಾ ಶಿಕ್ಷಣ ಕ್ಷೇತ್ರದಂತಹ ಉದ್ದೇಶಗಳಿಗಾಗಿ ಬಳಸಿದ್ದರೆ ನಿಜಕ್ಕೂ ಅವರ ತ್ಯಾಗ ಆದರ್ಶಪ್ರಾಯವಾದುದೇ ಸರಿ.

ಅಜ್ಜಯ್ಯಮೂರ್ತಿ, ಮೊಳಕಾಲ್ಮುರು

ಬೆಂಗಳೂರಿನ ಕಟ್ಟಡಗಳಿಗೂ ತಪ್ಪಿದ್ದಲ್ಲ ಅಪಾಯ

ಈಗ ವಯನಾಡಿನಲ್ಲಿ ಹಾಗೂ ಈ ಹಿಂದೆ ಕೊಡಗಿನಲ್ಲಿ ಗುಡ್ಡ ಕುಸಿತವುಂಟಾಗಿ ಅಪಾರ ಪ್ರಮಾಣದಲ್ಲಿ ಸಾವು ನೋವು ಉಂಟಾದುದು ನಿಜಕ್ಕೂ ಆಘಾತಕಾರಿ. ಅವೈಜ್ಞಾನಿಕವಾಗಿ ಕಟ್ಟಿದ ಹೋಮ್ ಸ್ಟೇಗಳು, ರೆಸಾರ್ಟ್‌ಗಳು ಎಲ್ಲವೂ ಚರ್ಚೆಯ ವಿಷಯಗಳಾಗುತ್ತಿವೆ.

ಬೆಂಗಳೂರಿನಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಒಂದೆರಡು ಮಾಳಿಗೆ ಕಟ್ಟಲು ಪರವಾನಗಿ ಪಡೆಯುವ ಸಣ್ಣ ನಿವೇಶನಗಳಲ್ಲೂ ಕಾನೂನುಬಾಹಿರವಾಗಿ ಮೂರು, ನಾಲ್ಕು ಮಹಡಿಗಳು ತಲೆ ಎತ್ತುತ್ತಲೇ ಇವೆ. ಕೆಲವು ಅಪಾರ್ಟ್‌ಮೆಂಟ್‌ಗಳನ್ನು ರಾಜಕಾಲುವೆ ಒತ್ತುವರಿ ಮಾಡಿ ಕಟ್ಟಲಾಗಿದೆ. ದುರ್ದೈವವಶಾತ್ ಇಲ್ಲಿಯೂ ಕೇರಳದ ರೀತಿಯಲ್ಲಿಯೇ ಧಾರಾಕಾರ ಮಳೆ ಸುರಿದರೆ ಇಂತಹ ಕಟ್ಟಡಗಳಿಗೂ ಅಪಾಯ ಕಟ್ಟಿಟ್ಟದ್ದೇ. ಇದರಿಂದ, ಆ ಕಟ್ಟಡಗಳು ಹಾಗೂ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವವರ ಪ್ರಾಣಕ್ಕೂ ಖಂಡಿತ ಅಪಾಯ ಇದ್ದೇ ಇರುತ್ತದೆ. ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವ ದಿಸೆಯಲ್ಲಿ ಸರ್ಕಾರ ಈಗಿಂದೀಗಲೇ ಕಾರ್ಯೋನ್ಮುಖವಾಗಬೇಕು.

ಬಿ.ಎನ್.ಭರತ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಿಂದ ಜೈಲು ಸೇರಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದ ಸಾವಿರಾರು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಮುಕ್ತವಾಗಿ ಹರಿದಾಡುತ್ತಿವೆ. ಇದು ಸಂತ್ರಸ್ತೆಯರ ಬದುಕನ್ನು ಅಸಹನೀಯಗೊಳಿಸಿರುವುದಷ್ಟೇ ಅಲ್ಲ, ತೀವ್ರ ತೇಜೋವಧೆಗೆ ಗುರಿ ಮಾಡುತ್ತಿದೆ. ತಂತ್ರಜ್ಞಾನದಲ್ಲಿ ಪರಿಣತರಾಗಿರುವ, ಬಹುಶಿಸ್ತೀಯ ಸಂಶೋಧಕಿ ಮತ್ತು ಅಂತರ್ಜಾಲ ತಜ್ಞೆ **ರೋಹಿಣಿ ಲಕ್ಷಣೆ** ಅವರು ಈ ರೀತಿಯ ವಿಡಿಯೊಗಳು ಮುಕ್ತವಾಗಿ ಹರಡುವುದನ್ನು ತಡೆಯುವುದು ಹೇಗೆ ಎನ್ನುವುದರ ಬಗ್ಗೆ ವಿವರಿಸಿದ್ದಾರೆ

ಲೈಂಗಿಕ ಕಿರುಕುಳದ ವಿಡಿಯೊ ಹಂಚಿಕೆ ತಡೆಯುವುದು ಹೇಗೆ?

ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಹಲವು ಮಹಿಳೆಯರ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳ, ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪಕ್ಕೆ ಗುರಿಯಾಗಿದ್ದಾರೆ. 'ಪೆನ್ ಡ್ರೈವ್ ಕೇಸ್' ಎಂದೇ ಕೆಲವು ಮಾಧ್ಯಮಗಳು ಉಲ್ಲೇಖಿಸುತ್ತಿರುವ ಈ ಪ್ರಕರಣದಲ್ಲಿ ಸುಮಾರು 3,000 ವಿಡಿಯೊಗಳಿದ್ದು, ಅವು ಏಪ್ರಿಲ್‌ನಿಂದ ಜಾಲತಾಣಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿದ್ದವು.

ಬಹುತೇಕ ವಿಡಿಯೊಗಳಲ್ಲಿ ಸಂತ್ರಸ್ತೆಯರನ್ನು ಸ್ಪಷ್ಟವಾಗಿ ಕಾಣಬಹುದು ಮತ್ತು ಅವರ ಧ್ವನಿಯನ್ನೂ ಕೇಳಬಹುದು. ಏಕೆಂದರೆ, ವಿಡಿಯೊಗಳಲ್ಲಿನ ಅವರ ಮುಖವನ್ನು ಮಸುಕು ಮಾಡಲಾಗಿಲ್ಲ ಮತ್ತು ಅವರ ಧ್ವನಿಯನ್ನು ಬದಲಾಯಿಸಿಲ್ಲ. ವಾಟ್ಸ್ ಆ್ಯಪ್, ಟೆಲಿಗ್ರಾಂನಂತಹ ಮೆಸೇಜಿಂಗ್ ಆ್ಯಪ್‌ಗಳು, ಮೆಸೇಜ್ ಬೋರ್ಡ್‌ಗಳು ಮತ್ತು ಗುಂಪುಗಳು, ಸಾಮಾಜಿಕ ಜಾಲತಾಣ ವೇದಿಕೆಗಳು, ಪೋರ್ನ್ ವೆಬ್‌ಸೈಟ್‌ಗಳು, ಟೊರೆಂಟ್‌ಗಳು ಮತ್ತು ಕ್ಲೌಡ್ ಸ್ಟೋರೇಜ್ ಸೇವೆಯಂತಹ ಮಾಧ್ಯಮಗಳ ಮೂಲಕ ವಿಡಿಯೊಗಳನ್ನು ದೊಡ್ಡ ಪ್ರಮಾಣದಲ್ಲಿ ಹಂಚಿಕೊಳ್ಳಲಾಗಿದೆ. ಅದು ಸಂತ್ರಸ್ತೆಯರು ಮತ್ತು ಅವರ ಕುಟುಂಬಗಳ ಮೇಲೆ, ಅವರ ಬದುಕಿನ ಎಲ್ಲ ವಲಯಗಳ ಮೇಲೆ ಬೀರುತ್ತಿರುವ ವಿನಾಶಕಾರಿ ಪರಿಣಾಮಗಳ ಬಗ್ಗೆ ಕೆಲವು ಪತ್ರಿಕೆಗಳು ವರದಿ ಮಾಡಿವೆ.

ಎಐ ಚಿತ್ರ: ಕಣಕಾಲಮಠ

ವಿಡಿಯೊಗಳಲ್ಲಿರುವ ಕೆಲವು ಸಂತ್ರಸ್ತೆಯರಿಗೆ ಸಾಮಾಜಿಕ ಮಾಧ್ಯಮಗಳ ಮೂಲಕ ಮತ್ತು ಕರೆ ಮಾಡುವ ಮೂಲಕ ಕಿರುಕುಳ ನೀಡಿರುವ ಬಗ್ಗೆ ವರದಿಯಾಗಿದೆ. ಪ್ರಜ್ವಲ್ ರೇವಣ್ಣ ವಿಡಿಯೊ ಚಿತ್ರೀಕರಣ ಮಾಡುತ್ತಿರುವ ಬಗ್ಗೆ ಕೆಲವು ಸಂತ್ರಸ್ತೆಯರಿಗೆ ತಿಳಿದಿರಲಿಲ್ಲ; ಮತ್ತೆ ಕೆಲವು ಸಂತ್ರಸ್ತೆಯರನ್ನು ಬಲವಂತವಾಗಿ ಹಾಗೂ ಬೆದರಿಸಿ ಸುಮ್ಮನಿರಿಸಲಾಗಿತ್ತು ಎಂಬ ಆರೋಪಗಳಿವೆ. ಈ ಘಟನೆಯ ನಂತರ ಕೆಲವು ಸಂತ್ರಸ್ತೆಯರು ಮತ್ತು ಅವರ ಕುಟುಂಬದವರು ಜನರ ಸಂಪರ್ಕದಿಂದ ದೂರ ಸರಿದಿದ್ದಾರೆ, ಮತ್ತೆ ಕೆಲವರು ತಮ್ಮ ಮನೆಗಳನ್ನೇ ಖಾಲಿ ಮಾಡಿದ್ದಾರೆ. ಕೆಲವರು ಆತ್ಮಹತ್ಯೆ ಪ್ರಯತ್ನ ಮಾಡಿದ್ದೂ ಉಂಟು. ಇತರರು ಸಾಮಾಜಿಕ ಬಹಿಷ್ಕಾರ, ನಿಂದನೆ ಮತ್ತು ಹೀಯಾಳಿಕೆ, ಚಾರಿತ್ರ್ಯಹರಣದಂಥ ತೀವ್ರವಾದ ತೇಜೋವಧೆಯನ್ನು ಎದುರಿಸುತ್ತಿದ್ದಾರೆ.

ವಿಡಿಯೊ ಹಂಚಿಕೆಗೆ ಕಾರಣಗಳು

ಇದುವರೆಗೂ ಕಡೆಗಣಿಸಲಾಗಿದ್ದ ಒಂದು ಮುಖ್ಯ ವಿಷಯವನ್ನು ಈ ಪ್ರಕರಣ ಮುನ್ನೆಲೆಗೆ ತಂದಿದೆ. ಮಾಧ್ಯಮಗಳು, ಪೊಲೀಸರು, ನ್ಯಾಯಾಂಗ ಹಾಗೂ ನಾಗರಿಕ ಸಮಾಜ ಐಬಿಎಸ್‌ಎಗೆ (ಚಿತ್ರ ಆಧಾರಿತ ಲೈಂಗಿಕ ಕಿರುಕುಳ– image based sexual abuse) ಸಂಬಂಧಿಸಿದ ಘಟನೆಗಳನ್ನು ಸರಿಯಾದ ರೀತಿಯಲ್ಲಿ ಎದುರಿಸಲು ಸಿದ್ಧವಾಗಿಲ್ಲ. ಲೈಂಗಿಕ ಹಲ್ಲೆಗೆ ಒಳಗಾದ ವ್ಯಕ್ತಿಗೆ ಸೂಕ್ತವಾದ ರಕ್ಷಣೆ, ತ್ವರಿತ ನ್ಯಾಯ ಸಿಗುವಂತೆ ಮಾಡುವುದು ಮತ್ತು ಇನ್ನೂ ಹೆಚ್ಚಿನ ಹಿಂಸೆ ಮತ್ತು ಕಿರುಕುಳ ಆಗದಂತೆ ನೋಡಿಕೊಳ್ಳುವುದು ಮುಂತಾದ ವಿಷಯಗಳನ್ನು ನಿಭಾಯಿಸಲು ಈಗಿರುವ ವ್ಯವಸ್ಥೆ ಅಷ್ಟು ಸಮರ್ಪಕವಾಗಿಲ್ಲ.

ಐಬಿಎಸ್‌ಎ ಘಟನೆ ಆದ ಕೂಡಲೇ ಅಥವಾ ಆಗಬಹುದಾದ ಸಂದರ್ಭ ನಿರ್ಮಾಣವಾಗುತ್ತಿದೆ ಎನ್ನುವಂಥ ಪರಿಸ್ಥಿತಿಯಲ್ಲಿ ಹಲ್ಲೆಗೆ ಒಳಗಾಗಿರುವ ವ್ಯಕ್ತಿಗೆ ತಕ್ಷಣವೇ ರಕ್ಷಣೆ ನೀಡಬೇಕು. ಏಕೆಂದರೆ;

1. ಚಿತ್ರ/ವಿಡಿಯೊಗಳ ನಿರಂತರ ಹಂಚಿಕೆ

ಐಬಿಎಸ್‌ಎ ವಿಷಯವು ಒಮ್ಮೆ ಆನ್‌ಲೈನ್‌ನಲ್ಲಾಗಲಿ (ಅಂತರ್ಜಾಲ, ವಾಟ್ಸ್‌ಆ್ಯಪ್, ಟೆಲಿಗ್ರಾಂ) ಅಥವಾ ಆಫ್‌ಲೈನ್‌ನಲ್ಲಾಗಲಿ (ಪೆನ್ ಡ್ರೈವ್, ಸಿಡಿ, ಮುದ್ರಿತ ಫೋಟೊಗಳು) ಬಿಡುಗಡೆ ಆಯಿತೆಂದರೆ, ಅದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡತೊಡಗುತ್ತದೆ. ಅದನ್ನು ಅಂತರ್ಜಾಲದಿಂದ ಮತ್ತು ಆಫ್‌ಲೈನ್ ತಾಣಗಳಿಂದ ಸಂಪೂರ್ಣವಾಗಿ ತೆಗೆದುಹಾಕುವುದು ಭಾರಿ ಸವಾಲಿನ ಕೆಲಸ. ವಿವಿಧ ವೇದಿಕೆಗಳಲ್ಲಿ ವೆಬ್‌ಸೈಟ್/ಪೋರ್ಟಲ್‌ಗಳಲ್ಲಿ ಪೋಸ್ಟ್ ಮಾಡುವ ಮೂಲಕ ಅದನ್ನು ಚಲನಶೀಲವಾಗಿ ಇಡಲಾಗುತ್ತದೆ. ಅದನ್ನು 'ಕೆಳಮುಖಿ ಹಂಚಿಕೆ' (downstream distribution) ಎನ್ನಲಾಗುತ್ತದೆ. ಈ ರೀತಿಯ ಹಂಚಿಕೆ/ಪ್ರಸರಣ ನಿಲ್ಲಿಸದಿದ್ದರೆ, ಒಂದು ಚಿತ್ರ/ವಿಡಿಯೊವನ್ನು ನೋಡಿರುವವರ ಸಂಖ್ಯೆ ಒಂದು ದಿನದಲ್ಲಿ ಅಥವಾ ಕೆಲವೇ ಗಂಟೆಗಳಲ್ಲಿ 200ರಿಂದ 20 ಲಕ್ಷದವರೆಗೆ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಸಕಾಲದಲ್ಲಿ ಮಧ್ಯಪ್ರವೇಶ ಮಾಡುವುದು ಹಾಗೂ ಹಂಚಿಕೆ ತಡೆಯುವುದು ಬಹು ಮುಖ್ಯ.

ಐಬಿಎಸ್‌ಎ ಹಂಚಿಕೆ ಭಾರತದಲ್ಲಿ ವ್ಯಾಪಕವಾದ ಹಾಗೂ ಲಾಭದಾಯಕ ವ್ಯವಹಾರವಾಗಿದೆ. ಈ ಹಂಚಿಕೆ ವ್ಯವಸ್ಥೆಯಲ್ಲಿ ಹಲವು ವಿತರಣಾ ವಿಧಾನಗಳಿವೆ. ಇಂಥ ವಿಷಯಗಳನ್ನು ವೆಬ್‌ಸೈಟ್‌ಗಳಲ್ಲಿ, ಮೆಸೇಜಿಂಗ್ ಆ್ಯಪ್‌ಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ವಿವಿಧ ರೀತಿಯ ವೇದಿಕೆಗಳಲ್ಲಿ ಮತ್ತು ಆಫ್‌ಲೈನ್ ಚಾನಲ್‌ಗಳಲ್ಲಿ ಹಂಚಿಕೊಳ್ಳುವ ಮೂಲಕ ಹಣ ಸಂಪಾದನೆ ಮಾಡಲಾಗುತ್ತಿದೆ. ಹಲವು ಬಾರಿ ಇಂಥ ಚಿತ್ರ/ವಿಡಿಯೊ ಬಳಸಿ ಸಂತ್ರಸ್ತರನ್ನು ಬೆದರಿಸಿ ಹಣ ಸುಲಿಗೆ ಮಾಡಲಾಗುತ್ತದೆ.

ಪ್ರಜ್ವಲ್ ರೇವಣ್ಣ, ಅಭಿಷೇಕ್ ಮನು ಸಿಂಘ್ವಿ ಅವರಂತಹ ಸಾರ್ವಜನಿಕ ಜೀವನದಲ್ಲಿ ಇರುವ ವ್ಯಕ್ತಿಗಳು ಪ್ರಕರಣದಲ್ಲಿ ಭಾಗಿಯಾಗಿದ್ದಾಗ, ಅಂಥ ವಿಡಿಯೊ/ಚಿತ್ರವನ್ನು ಹಂಚುವುದರ ಹಿಂದೆ ರಾಜಕೀಯ ಹಿತಾಸಕ್ತಿಗಳೂ ಕೆಲಸ ಮಾಡುತ್ತವೆ.

ಐಬಿಎಸ್‌ಎ ಚಿತ್ರ/ವಿಡಿಯೊ ಹಂಚಿಕೆಗೆ ಲೈಂಗಿಕ ದರ್ಶನದ ತೃಪ್ತಿಯಂತಹ (voyeurism) ಹಲವು ವ್ಯವಹಾರೇತರ ಕಾರಣಗಳಿರುತ್ತವೆ. ಮಾಡಿದ ತಪ್ಪಿಗೆ ಅಥವಾ ಕಲ್ಪಿತ ತಪ್ಪಿಗೆ ಶಿಕ್ಷೆ ಅನುಭವಿಸಬೇಕು ಎನ್ನುವ ಸೇಡಿನ ಭಾವ, ಇತರರ ನಡುವಣ ಸಂಬಂಧವನ್ನು ಪತ್ತೆ ಹಚ್ಚುವ ಉಮೇದು, ಸಂತ್ರಸ್ತರ ವಿಚಾರದಲ್ಲಿ ಮಧ್ಯಪ್ರವೇಶ ಮಾಡುವುದು ಅಥವಾ ಅವರ ಮೇಲೆ ಹಿಡಿತ ಸಾಧಿಸುವುದು ಮತ್ತು ಬೇರೊಬ್ಬರ ನೋವಿನಲ್ಲಿ ಸುಖ ಕಾಣುವ ಮನಃಸ್ಥಿತಿ ಇತರ ಪ್ರಮುಖ ಕಾರಣಗಳಾಗಿವೆ.

2. ಗಂಭೀರ ಪರಿಣಾಮ

ಐಬಿಎಸ್‌ಎಗೆ ಒಳಗಾದವರ ಮೇಲೆ ಆಗುವ ಪರಿಣಾಮಗಳು ಗಂಭೀರವಾಗಿರುತ್ತವೆ ಹಾಗೂ ನಿರಂತರವಾಗಿರುತ್ತವೆ ಮತ್ತು ಅವರ ಬದುಕು ಹಿಂದಿನಂತೆ ಉಳಿಯುವುದಿಲ್ಲ ಎನ್ನುವುದನ್ನು ಹಲವು ಸಂಶೋಧನೆಗಳು ಮತ್ತು ಪ್ರಕರಣಗಳು ಸಾಬೀತುಪಡಿಸಿವೆ. ಸಂತ್ರಸ್ತರು ಶಾಲೆ, ಕಾಲೇಜುಗಳಿಂದ ಹೊರಬೀಳುವುದು, ಉದ್ಯೋಗ ನಷ್ಟ, ಸಾಮಾಜಿಕ ಜೀವನದಿಂದ ದೂರವಾಗಿ ಒಂಟಿಯಾಗಿರುವುದು, ಕುಟುಂಬಸ್ಥರಿಂದ ಬಹಿಷ್ಕೃತರಾಗುವುದು, ಸ್ನೇಹಿತರು, ಆಪ್ತರು ದೂರ ಸರಿಯುವುದು, ಅವಮಾನ, ನಿಂದನೆಗಳಿಗೆ ಗುರಿಯಾಗುವುದರಂಥ ಪರಿಣಾಮಗಳು ಘಟಿಸುತ್ತವೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರು ಮೊದಲೇ ಹಿಂಸೆ ಅನುಭವಿಸಿರುತ್ತಾರೆ. ಚಿತ್ರ/ವಿಡಿಯೊ ಹಂಚಿಕೆಯಾಗುವುದರಿಂದ ಅವರು ಮತ್ತೆ ಮತ್ತೆ ಅಂಥದ್ದೇ ಹಿಂಸೆಗೆ ಗುರಿಯಾಗುತ್ತಾರೆ.

ಸೂಕ್ತ ಕ್ರಮದ ಅಗತ್ಯ

ಐಬಿಎಸ್‌ಎ ಘಟನೆಗಳು ನಡೆದಾಗ ಅಥವಾ ಅಂಥ ಸಂದರ್ಭ ಉಂಟಾದಾಗ, ಸಹಜವಾಗಿಯೇ ಸಂತ್ರಸ್ತರು ಕಂಗಾಲಾಗಿರುತ್ತಾರೆ. ಅಂಥ ಸಂದರ್ಭದಲ್ಲಿ ಅವರಿಗೆ ಕ್ಷಿಪ್ರವಾಗಿ ಭಾವನಾತ್ಮಕ, ತಾಂತ್ರಿಕ ಮತ್ತು ಕಾನೂನು ನೆರವಿನ ಅಗತ್ಯವಿರುತ್ತದೆ. ಕೆಲವರಿಗೆ ವೈಯಕ್ತಿಕ ಮತ್ತು ಡಿಜಿಟಲ್ ರಕ್ಷಣೆಯ ಅವಶ್ಯಕತೆಯಿರುತ್ತದೆ. ಮತ್ತೆ ಕೆಲವರಿಗೆ, ವೈದ್ಯಕೀಯ ನೆರವಿನ ಅವಶ್ಯಕತೆಯಿರುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ, ಚಿತ್ರ/ವಿಡಿಯೊಗಳನ್ನು ಆದಷ್ಟು ಬೇಗ ತೆಗೆದುಹಾಕುವ ಅಗತ್ಯವಿರುತ್ತದೆ.

ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ವಿಶೇಷ ತನಿಖಾ ತಂಡವು (ಎಸ್‌ಐಟಿ) ಸಂತ್ರಸ್ತರಿಗಾಗಿಯೇ ಒಂದು ಸಹಾಯವಾಣಿ ರೂಪಿಸಿದೆ. ಸಂತ್ರಸ್ತರು ರಕ್ಷಣೆ ಮತ್ತು ನೆರವು ಪಡೆಯಲು, ಸಾಕ್ಷ್ಯಾಧಾರಗಳನ್ನು ಒದಗಿಸಲು ಅಥವಾ ಪ್ರಕರಣದ ನಂತರದ ಪರಿಣಾಮಗಳನ್ನು ಎದುರಿಸಲು ಬೇಕಾದ ನೆರವನ್ನು ಕೇಳಲು ಸಹಾಯವಾಣಿಯಂಥ ಒಂದು ವ್ಯವಸ್ಥೆಯ ಅಗತ್ಯ ಖಂಡಿತ ಇದೆ. ಆದರೆ, ಇದು ಜನಪ್ರಿಯ ವ್ಯಕ್ತಿಗಳ ಪ್ರಕರಣಗಳಿಗೆ ಮಾತ್ರ ಸೀಮಿತವಾಗಿರಬಾರದು.

ಭಾರತದಲ್ಲಿ ಕೆಲವು ಸರ್ಕಾರೇತರ ಸಂಸ್ಥೆಗಳು ಸಹಾಯವಾಣಿಗಳನ್ನು ಒದಗಿಸಿವೆ. ಆದರೆ, ಅವುಗಳ ಮೂಲಕ ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಎಷ್ಟು ಪ್ರಕರಣಗಳನ್ನು ಬಗೆಹರಿಸಲಾಗಿದೆ ಎಂಬ ಮಾಹಿತಿ ಲಭ್ಯವಿಲ್ಲ ಅಥವಾ ಅದು ಅಸ್ಪಷ್ಟವಾಗಿದೆ.

ಈ ಲೇಖನದ ಇಂಗ್ಲಿಷ್ ಅವತರಣಿಕೆಯು 'ಫ್ರೀ ಸ್ಪೀಚ್ ಕಲೆಕ್ಟೀವ್' ವೆಬ್ ಪೋರ್ಟಲ್‌ನಲ್ಲಿ ಪ್ರಕಟವಾಗಿದೆ.

ಚಿತ್ರ ಆಧಾರಿತ ಲೈಂಗಿಕ ಕಿರುಕುಳ

ಚಿತ್ರ ಆಧಾರಿತ ಲೈಂಗಿಕ ಕಿರುಕುಳ (ಐಬಿಎಸ್‌ಎ) ಪ್ರಕರಣಗಳಲ್ಲಿ ಸಂತ್ರಸ್ತೆಯರ ಮೇಲೆ ಯಾವ ರೀತಿಯ ಪರಿಣಾಮ ಆಗುತ್ತದೆಯೋ, ಈ ಪ್ರಕರಣದಲ್ಲಿಯೂ ಅದೇ ನಡೆದಿದೆ.

ಐಬಿಎಸ್‌ಎ ಅನ್ನು 'ರಿವೆಂಜ್ ಪೋರ್ನ್' ಎಂದು ತಪ್ಪಾಗಿ ಕರೆಯಲಾಗುತ್ತದೆ. ನಗ್ನತೆ ಅಥವಾ ಲೈಂಗಿಕ ಕ್ರಿಯೆಗೆ ಸಂಬಂಧಿಸಿದ (ಅದರಲ್ಲಿ ತೊಡಗಿರುವ ಒಬ್ಬರು ಅಥವಾ ಅದಕ್ಕಿಂತ ಹೆಚ್ಚಿನವರ ಒಪ್ಪಿಗೆ ಇಲ್ಲದೆಯೇ) ಚಿತ್ರ ಅಥವಾ ವಿಡಿಯೊ ಅನ್ನು ಸೆರೆ ಹಿಡಿಯುವುದು, ಪ್ರಕಟಿಸುವುದು ಮತ್ತು ಹಂಚುವುದನ್ನು ಇದು ಒಳಗೊಂಡಿದೆ. 'ರಿವೆಂಜ್ ಪೋರ್ನ್' ಎಂದರೆ, ಒಪ್ಪಿಗೆ ಇಲ್ಲದ ನಗ್ನ ಅಥವಾ ಲೈಂಗಿಕ ಕ್ರಿಯೆಯ ಚಿತ್ರ, ವಿಡಿಯೊಗಳು ದಾರಿ ತಪ್ಪಿಸುವಂಥವು ಮತ್ತು ಅಪಾಯಕಾರಿ ಎಂದು ಅರ್ಥ. ಕೆಲವು ಮಾಧ್ಯಮಗಳು ಇದನ್ನು 'ಲೈಂಗಿಕ ಹಗರಣ', 'ಅಶ್ಲೀಲ ವಿಡಿಯೊಗಳು' ಮತ್ತು 'ಸರಸದ ಚಿತ್ರಗಳು' ಎಂದು ಕರೆಯುತ್ತಿವೆ. ಅತ್ಯಾಚಾರ, ಲೈಂಗಿಕ ದೌರ್ಜನ್ಯ ಮತ್ತು ಕಿರುಕುಳದ ವಿಡಿಯೊಗಳನ್ನು ಹಾಗೆ ಕರೆಯುವುದು ಸರಿ ಅಲ್ಲ. ಜತೆಗೆ ಹಾನಿಕಾರಕ.

ನಗ್ನ, ಅರೆನಗ್ನ ಅಥವಾ ಲೈಂಗಿಕ ಕ್ರಿಯೆಗೆ ಸಂಬಂಧಿಸಿದ ಚಿತ್ರ, ವಿಡಿಯೊ ಸೆರೆ ಹಿಡಿಯುವುದು, ಪ್ರಕಟಿಸುವುದು ಅಥವಾ ಹಂಚಿಕೆ ಮಾಡುವುದಕ್ಕೆ, ನಾಲ್ಕು ಹಂತಗಳಲ್ಲಿ ಸಮ್ಮತಿಯನ್ನು ಪಡೆಯಬೇಕಾಗುತ್ತದೆ:

1. ಲೈಂಗಿಕ ಕ್ರಿಯೆ ಅಥವಾ ನಗ್ನವಾಗುವುದು, ಅಥವಾ ಅರೆನಗ್ನ ಸ್ಥಿತಿಯಲ್ಲಿ ಕಾಣಿಸಿಕೊಳ್ಳುವುದಕ್ಕೆ ಒಪ್ಪಿಗೆ ಇರಬೇಕು. ಫ್ರೇಮ್‌ನೊಳಗೆ ಇರುವ ವ್ಯಕ್ತಿ/ವ್ಯಕ್ತಿಗಳು ತಮ್ಮ ಚಿತ್ರ ಅಥವಾ ವಿಡಿಯೊ ತಾವೇ ಚಿತ್ರೀಕರಣ ಮಾಡಿಕೊಳ್ಳಬಹುದು ಅಥವಾ ಚಿತ್ರ ಅಥವಾ ವಿಡಿಯೊದಲ್ಲಿ ದಾಖಲಾಗಲು ಒಪ್ಪಿಗೆ ಸೂಚಿಸಬಹುದು.
2. ಫ್ರೇಮ್‌ನಲ್ಲಿರುವವರನ್ನು ಪತ್ತೆ ಹಚ್ಚಲು ನೆರವಾಗಬಹುದಾದ ಮುಖ, ದೈಹಿಕ ಚಿಹ್ನೆಗಳನ್ನು (ಹಚ್ಚೆ, ಮಚ್ಚೆ ಇತ್ಯಾದಿ) ಮುಚ್ಚಿಕೊಳ್ಳಬಹುದು ಅಥವಾ ಮಸುಕುಗೊಳಿಸಬಹುದು ಅಥವಾ ಕತ್ತರಿಸಬಹುದು. ಚಿತ್ರ ಅಥವಾ ವಿಡಿಯೊದಲ್ಲಿ ಇರುವ ವ್ಯಕ್ತಿ/ವ್ಯಕ್ತಿಗಳು ಅದನ್ನು ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚಿನವರಿಗೆ (ನಿದರ್ಶನಕ್ಕೆ, ತಮ್ಮ ಸಂಗಾತಿ ಅಥವಾ ಓನ್ಲಿಫ್ಯಾನ್ಸ್‌ನಂತಹ ವಯಸ್ಕ ಸೇವೆಗಳ ಗ್ರಾಹಕರಿಗೆ) ಒಪ್ಪಿಗೆಯಿಂದಲೇ ಕಳಿಸಬಹುದು. ಹೀಗಾದಲ್ಲಿ, ತಾವು ಕಳಿಸಿದ ವ್ಯಕ್ತಿ ಬಿಟ್ಟು ಬೇರೆಯವರಿಗೆ ಚಿತ್ರ ಅಥವಾ ವಿಡಿಯೊ ಹಂಚಿಕೆಯಾಗಲು ಅವರು ಅಸಮ್ಮತಿ ವ್ಯಕ್ತಪಡಿಸಬಹುದು.
3. ಚಿತ್ರದಲ್ಲಿ ಅಥವಾ ವಿಡಿಯೊದಲ್ಲಿ ಇರುವವರು ತಮ್ಮ ಚಿತ್ರ ಅಥವಾ ವಿಡಿಯೊವನ್ನು ಅಂತರ್ಜಾಲದಲ್ಲಿ ಹಾಕಲು ಒಪ್ಪಿಗೆ ಸೂಚಿಸಬಹುದು. ಸಾಮಾನ್ಯವಾಗಿ, ಇಂಥವರು ಪ್ರದರ್ಶನದ ಸ್ವಭಾವವುಳ್ಳವರಾಗಿರುತ್ತಾರೆ. ಇಲ್ಲವೇ ವೃತ್ತಿಪರ ಅಥವಾ ಹವ್ಯಾಸಿ ಪೋರ್ನ್ ಕಾರ್ಯಕರ್ತರಾಗಿರುತ್ತಾರೆ.
4. ಕೆಲವು ಸಂದರ್ಭಗಳಲ್ಲಿ ಒಪ್ಪಿಗೆ ಇಲ್ಲದೆಯೂ ಅನ್ಯೋನ್ಯವಾಗಿರುವ ಚಿತ್ರಗಳನ್ನು ದಾಖಲಿಸಿಕೊಳ್ಳಬಹುದು. ಹೋಟೆಲ್ ಕೊಠಡಿಗಳಲ್ಲಿ, ಸ್ಪಾಗಳಲ್ಲಿ, ಬಟ್ಟೆ ಅಂಗಡಿಗಳ ಟ್ರಯಲ್ ಕೋಣೆಗಳಲ್ಲಿ, ಶೌಚಾಲಯಗಳಲ್ಲಿ, ಹಂಚಿಕೆಯ ವಾಸದ ಮನೆಗಳಲ್ಲಿ ಮುಂತಾದ ಕಡೆ ರಹಸ್ಯ ಕ್ಯಾಮರಾ ಇಡುವುದು; ಜನ ಇಂಥ ಕಡೆ ಖಾಸಗಿ ಕ್ಷಣಗಳನ್ನು ಕಳೆಯಲು ಬಂದರೆ, ಅದನ್ನು ಚಿತ್ರೀಕರಿಸಿ, ವಿಡಿಯೊಗಳನ್ನು ಅಂತರ್ಜಾಲದಲ್ಲಿ ಹರಿಬಿಡುವುದು. ಖಾಸಗಿ ವಿಡಿಯೊಗಳಿಗಾಗಿ ಹ್ಯಾಕರ್‌ಗಳು ವ್ಯಕ್ತಿಗಳ ಖಾತೆಗಳಿಗೆ ನುಗ್ಗಿ, ನಂತರ ಹಣಕ್ಕಾಗಿ ಸಂತ್ರಸ್ತರಿಗೆ ಬೇಡಿಕೆ ಇಡುವುದುಂಟು; ಇಲ್ಲವೇ ಸಂತ್ರಸ್ತರಿಗೆ ಕಿರುಕುಳ ನೀಡುವ ಉದ್ದೇಶ ಹೊಂದಿರುವವರಿಗೆ ವಿಡಿಯೊಗಳನ್ನು ರವಾನಿಸಬಹುದು.

ಕೆಳಮುಖಿ ಹಂಚಿಕೆ ತಡೆಯುವುದು

ಐಬಿಎಸ್‌ಎ ಘಟನೆಗಳಲ್ಲಿ, ಸಂತ್ರಸ್ತರು ಒಬ್ಬರೇ ಇರಲಿ ಅಥವಾ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿರುವಂತೆ ಸಂತ್ರಸ್ತರ ಸಮೂಹವೇ ಇರಲಿ (ವಿಡಿಯೊಗಳ ಸಂಖ್ಯೆ, ಅವುಗಳ ಹಂಚಿಕೆಯ ಪ್ರಮಾಣ, ಸಂತ್ರಸ್ತರ ಸಂಖ್ಯೆ ಅಧಿಕವಾಗಿರುವಂಥ ಪ್ರಕರಣ), ವ್ಯವಸ್ಥಿತ ಮಧ್ಯಪ್ರವೇಶ ಹಾಗೂ ಕ್ರಮದ ಅವಶ್ಯಕತೆಯಿದೆ.

ನಮ್ಮಲ್ಲಿ ವೈಯಕ್ತಿಕ ಪೋಸ್ಟ್‌ಗಳ ಬಗ್ಗೆ ಆಕ್ಷೇಪಣೆ ದಾಖಲು ಮಾಡಲು ಸೂಕ್ತ ವ್ಯವಸ್ಥೆ ಇಲ್ಲ. ಹೆಚ್ಚು ಚಿತ್ರ/ವಿಡಿಯೊ ಇದ್ದ ಸಂದರ್ಭದಲ್ಲಿ ಸೂಕ್ತ ಸಮಯದಲ್ಲಿ ಮಧ್ಯಪ್ರವೇಶ/ಕ್ರಮ ಜರುಗಿಸದೇ ಇರುವುದು ಕಂಡುಬಂದಿದೆ. ಐಬಿಎಸ್‌ಎ ವಿಷಯಗಳಿಗಾಗಿಯೇ ನಿರ್ದಿಷ್ಟವಾದ ವೇದಿಕೆಗಳು, ಪೋರ್ನ್ ವೆಬ್‌ಸೈಟ್‌ಗಳು, ಫೈಲ್ ಶೇರಿಂಗ್ ಸೌಲಭ್ಯಗಳು, ಕ್ಲೌಡ್ ಸ್ಟೋರೇಜ್ ಸೇವೆಗಳು ಇವೆ. ವೆಬ್‌ಸೈಟ್‌ಗಳು, ವೇದಿಕೆಗಳಿಂದ ಐಬಿಎಸ್‌ಎ ವಿಷಯವನ್ನು ತೆಗೆದುಹಾಕಲು ಸಂತ್ರಸ್ತರು ಅಥವಾ ಅವರ ಪರವಾಗಿ ಇತರರು ಅವರನ್ನು ಸಂಪರ್ಕಿಸಲು ನಡೆಸುವ ಪ್ರಯತ್ನಗಳು ಸಫಲವಾಗುವುದೇ ಇಲ್ಲ.

ಜೊತೆಗೆ, ಇಂತಹ ಆನ್‌ಲೈನ್ ವೇದಿಕೆಗಳನ್ನು ಸಂಪರ್ಕಿಸಿದಾಗ, ಸಂತ್ರಸ್ತರು ಯಾವ ವಿಷಯಗಳನ್ನು ತೆರವುಗೊಳಿಸಬೇಕು ಎಂದು ಬಯಸುವರೋ, ಆ ವೇದಿಕೆಗಳು ಅವುಗಳಿಗೆ ಇನ್ನೂ ಹೆಚ್ಚು ಪ್ರಾಶಸ್ತ್ಯ ಕೊಡುವ ಸಾಧ್ಯತೆ ಇರುತ್ತದೆ. ಅಲ್ಲದೆ, ಹೀಗೆ ಮಾಡುವ ವೇಳೆ ವೇದಿಕೆಗಳು ಸಂತ್ರಸ್ತರ ಹೆಸರು, ವಿಳಾಸ, ಸಾಮಾಜಿಕ ಜಾಲತಾಣಗಳ ಅಕೌಂಟುಗಳು ಮತ್ತು ಇತರ ಮಾಹಿತಿ ಪಡೆದುಕೊಳ್ಳಬಹುದು.

ಐಬಿಎಸ್‌ಎ ವಿಷಯಗಳನ್ನು ವಿವಿಧ ವೇದಿಕೆಗಳು, ವೆಬ್‌ಸೈಟ್‌ಗಳಿಗೆ ಅಪ್‌ಲೋಡ್ ಮತ್ತು ಮರುಅಪ್‌ಲೋಡ್ ಮಾಡುವುದನ್ನು ತಡೆಯಲು stopncii.orgಗೆ ವರದಿ ಮಾಡುವುದು ಒಂದು ಮುಖ್ಯ ವಿಧಾನವಾಗಿದೆ. ಈ ಮೂಲಕ ಚಿತ್ರ/ವಿಡಿಯೊ ಫೇಸ್‌ಬುಕ್, ಟಿಕ್‌ಟಾಕ್, ರೆಡ್ಡಿಟ್, ಇನ್‌ಸ್ಟಾಗ್ರಾಂ, ಬಂಬಲ್ ಸ್ನ್ಯಾಪ್, ಥ್ರೆಡ್ಸ್, ಓನ್ಲಿಫ್ಯಾನ್ಸ್, ಪೋರ್ನ್‌ಹಬ್ ಮತ್ತು ನಿಯಾನ್‌ಟಿಕ್‌ನಂಥ ವೇದಿಕೆಗಳಲ್ಲಿ ಹಂಚಿಕೆಯಾಗುವುದನ್ನು ತಡೆಯಬಹುದಾಗಿದೆ.

ಐಬಿಎಸ್‌ಎ ವಿಷಯಗಳನ್ನು ತೆಗೆದುಹಾಕಲು ಈ ಕೆಳಕಂಡ ವೇದಿಕೆಗಳಿಗೆ ನೇರವಾಗಿ ಮನವಿ ಮಾಡಿಕೊಳ್ಳಬಹುದು: ಫೇಸ್‌ಬುಕ್, ಗೂಗಲ್, ಮೈಕ್ರೋಸಾಫ್ಟ್, ಎಕ್ಸ್, ಯಾಹೂ, 4Chan, About.me, Ask, AOL, Flickr, Lycos, MySpace and Snapchat. Reddit, PornHub, Imgur, Photobucket ಮತ್ತು ವಿಕಿಪೀಡಿಯಾ ವೇದಿಕೆಗಳಲ್ಲಿಯೂ ಚಿತ್ರ/ವಿಡಿಯೊ ತೆಗೆದು ಹಾಕುವ ತಂತ್ರಜ್ಞಾನ ಲಭ್ಯವಿದೆ.

ಮತ್ತೊಂದು ರೀತಿಯಲ್ಲಿಯೂ ಹಂಚಿಕೆಗೆ ತಡೆ ಹಾಕಬಹುದು. ಪ್ರತಿ ಸರ್ಚ್ ಇಂಜಿನ್‌ಗೂ ಈ ಚಿತ್ರಗಳು ಮತ್ತು ವಿಡಿಯೊಗಳು ಮತ್ತು ಅವು ಇರುವ ಯುಆರ್‌ಎಲ್‌ಗಳನ್ನು ಡೀ–ಇಂಡೆಕ್ಸ್ ಮಾಡುವಂತೆ ಕೋರಿಕೆ ಸಲ್ಲಿಸುವುದು. ಡೀ–ಇಂಡೆಕ್ಸ್ ಆಗಿರುವ ವಿಷಯಗಳು ಅಂತರ್ಜಾಲದಲ್ಲಿ ಇದ್ದರೂ ಹುಡುಕಾಟ ಮಾಡಿದಾಗ ಸಿಗುವುದಿಲ್ಲ. ಇದರಿಂದ ಇವು ಜನರಿಗೆ ತಲುಪುವುದು ನಿಧಾನವಾಗಿ, ಹರಡುವಿಕೆ ಕಡಿಮೆಯಾಗುತ್ತದೆ. ಉದಾಹರಣೆಗೆ, ವೈಯಕ್ತಿಕ ವಿಷಯವನ್ನು ತೆಗೆದುಹಾಕಲು ಮನವಿ ಮಾಡಬಹುದಾದ ಅವಕಾಶವನ್ನು ಗೂಗಲ್ ಸರ್ಚ್ ತನ್ನ ಸೇವಾ ನಿಯಮದಲ್ಲಿ ಕಲ್ಪಿಸಿದೆ.

ಘಟನೆ ನಂತರ ನಡೆಯಬಹುದಾದ ಆನ್‌ಲೈನ್ ಹಿಂಸೆ, ಕಿರುಕುಳ ಮತ್ತು ನಿಂದನೆಗಳನ್ನು ಎದುರಿಸಲು, ತಡೆಯಲು ಹಾಗೂ ನಿಲ್ಲಿಸಲು ಸಂತ್ರಸ್ತೆಯರಿಗೆ ತಾಂತ್ರಿಕ ಬೆಂಬಲದ ಅಗತ್ಯವೂ ಇರುತ್ತದೆ. ಘಟನೆಯು ಅವರನ್ನು 'ಡಿಜಿಟಲ್ ದಾಳಿ'ಗೆ ಈಡು ಮಾಡಬಹುದಾಗಿದೆ.

ಡಿಜಿಟಲ್ ದಾಳಿಯು ಈ ಕೆಳಕಂಡ ರೀತಿಗಳಲ್ಲಿ ನಡೆಯಬಹುದು: ಪಾಸ್‌ವರ್ಡ್ ಕದಿಯುವುದು, ಇ–ಮೇಲ್ ಅಕೌಂಟ್, ಸಾಮಾಜಿಕ ಜಾಲತಾಣದ ಖಾತೆಗಳನ್ನು ಮತ್ತು ಸಾಧನಗಳನ್ನು ಹ್ಯಾಕ್ ಮಾಡುವುದು; ಅವರಿಗೆ ಮತ್ತಷ್ಟು ಕಿರುಕುಳ ನೀಡಲು ಏನಾದರೂ ಸಿಗುವುದೇ ಎಂದು ಹುಡುಕುವುದು, ಅವರ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡುವುದು, ಅವರ ಚಿತ್ರಗಳನ್ನು, ವಿಡಿಯೊಗಳನ್ನು ನಗ್ನ ರೂಪದಲ್ಲಾಗಲಿ, ಲೈಂಗಿಕ ಕ್ರಿಯೆಗಳಲ್ಲಿ ತೊಡಗಿರುವಂತೆ ಆಗಲಿ ಅಂತರ್ಜಾಲದಲ್ಲಿ ಪೋಸ್ಟ್ ಮಾಡುವ ಸಾಧ್ಯತೆಗಳಿರುತ್ತವೆ.

ಒಂದು ವೇಳೆ ಚಿತ್ರಗಳನ್ನಾಗಲಿ, ವಿಡಿಯೊಗಳನ್ನಾಗಲಿ, ಸಂತ್ರಸ್ತರಿಂದಲೋ ಅಥವಾ ಅವರ ಪರಿಚಿತರಿಂದಲೋ ಕಳ್ಳತನ ಮಾಡಿದ್ದಾದರೆ, ಅದನ್ನು ಪುನರಾವರ್ತಿಸುವುದನ್ನು ತಡೆಗಟ್ಟಬೇಕಿದೆ. ಸಂತ್ರಸ್ತರಿಗೆ ಎದುರಾಗಬಹುದಾದ ಅಪಾಯಗಳೇನು ಮತ್ತು ಅವರಿಗೆ ಖಚಿತವಾಗಿ ಬೇಕಾದ ನೆರವು ಎಂಥದ್ದು ಎನ್ನುವುದನ್ನು ಡಿಜಿಟಲ್ ರಕ್ಷಣೆಯ ತಜ್ಞರು ಪರಿಶೀಲಿಸಿ ಹೇಳಬೇಕು. ಹೀಗೆ ಪರಿಶೀಲಿಸುವಾಗ ಮತ್ತು ನಂತರದ ಕ್ರಮ ಜರುಗಿಸುವಾಗ ಯಾರಿಗೂ ತೊಂದರೆಯಾಗದಂತೆ ಎಚ್ಚರ ವಹಿಸಬೇಕು.

ದಕ್ಷಿಣ ಕೊರಿಯಾದಂತಹ ದೇಶಗಳಲ್ಲಿ ಐಬಿಎಸ್‌ಎ ಪ್ರಕರಣಗಳು ಅಧಿಕವಾಗಿದ್ದು, ಅಲ್ಲಿ ಅತಿ ವೈಯಕ್ತಿಕ ಎನ್ನುವ ಚಿತ್ರಗಳನ್ನು ಅವರ ಸಮ್ಮತಿಯಿಲ್ಲದೇ ಚಿತ್ರೀಕರಿಸದಂತೆ ಮತ್ತು ಬಿತ್ತರಿಸದಂತೆ ಸಾರ್ವಜನಿಕ ಸ್ಥಳಗಳಲ್ಲಿ ಎಚ್ಚರಿಕೆಯ ಫಲಕಗಳನ್ನು ಪ್ರದರ್ಶಿಸಲಾಗಿದೆ. ಎಲ್ಲ ರೀತಿಯ ಮಧ್ಯಪ್ರವೇಶ/ನೆರವಿನ ಹಂತಗಳಲ್ಲಿ, ಸಂತ್ರಸ್ತರ ಧ್ವನಿ, ಅನುಭವ ಮತ್ತು ಅವಶ್ಯಕತೆಗಳೇ ಪ್ರಮುಖ ಆಗಬೇಕಿದ್ದು, ತಕ್ಷಣಕ್ಕೆ ಮತ್ತು ದೀರ್ಘಕಾಲದವರೆಗೆ ಅವರ ಘನತೆ, ಗೋಪ್ಯತೆ ಮತ್ತು ಸುರಕ್ಷತೆಯನ್ನು ಕಾಪಾಡುವ ಅಗತ್ಯವಿದೆ.

ಬಲವಿಲ್ಲದ 'ಭೀಮ'ನಿಗೆ ಬೈಗುಳವೇ ಬಂಡವಾಳ

ದುನಿಯಾ ವಿಜಯ್

ನಾವು ನೋಡಿದ ಸಿನಿಮಾ

ಭೀಮ

- ನಿರ್ದೇಶನ: ದುನಿಯಾ ವಿಜಯ್
- ನಿರ್ಮಾಣ: ಜಗದೀಶ್ ಗೌಡ, ಕೃಷ್ಣ ಸಾರ್ಥಕ್
- ತಾರಾಗಣ: ದುನಿಯಾ ವಿಜಯ್, ಅಶ್ವಿನಿ, ರಂಗಾಯಣ ರಘು ಮುಂತಾದವರು

ಬೆಂಗಳೂರಿನ ಗಾಂಜಾ ಮಾರಾಟ ಜಾಲಕ್ಕೆ ಕೊಳೆಗೇರಿ ಹುಡುಗರು ಬಳಕೆಯಾಗುತ್ತಿದ್ದಾರೆ ಮತ್ತು ನಗರದ ಯುವಕರು ಮಾದಕ ವ್ಯಸನಿಗಳಾಗಿ ಬದುಕನ್ನೇ ಕಳೆದುಕೊಳ್ಳುತ್ತಿದ್ದಾರೆ ಎಂಬುದು 'ಭೀಮ' ಚಿತ್ರದ ಒಂದು ಸಾಲಿನ ಕಥೆ. ಈ ಎಳೆ ಮತ್ತು ಚಿತ್ರದಲ್ಲಿ ಬರುವ ಕೆಲವು ನೈಜ ಸನ್ನಿವೇಶಗಳು ಚಿತ್ರ ನೋಡುತ್ತಿದ್ದವರನ್ನು ಒಂದು ಕ್ಷಣ ಯೋಚಿಸುವಂತೆ ಮಾಡುತ್ತದೆ. ಆದರೆ, ಇಡೀ ಚಿತ್ರ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಭರದಲ್ಲಿ ಇನ್ನೊಂದಷ್ಟು ಕೆಡಕುಗಳ ಪಾಠ ಮಾಡಿದಂತಿದೆ. ಅದಕ್ಕೆ ಮುಖ್ಯ ಕಾರಣ ಚಿತ್ರಕಥೆ.

ಹೈಸ್ಕೂಲ್, ಕಾಲೇಜಿನ ಮೆಟ್ಟಿಲಿನಲ್ಲಿರುವ ಹುಡುಗರು ಕತ್ತಿ, ಚಾಕು ಹಿಡಿದು ಹೊಡೆದಾಡುವ ದೃಶ್ಯಗಳನ್ನು ನೋಡಲು ಹಿಂಸೆಯಾಗುತ್ತದೆ. ಈ ದೃಶ್ಯಗಳು ಇಲ್ಲದಿದ್ದರೂ ಚಿತ್ರದಲ್ಲಿ ಯಾವುದೇ ವ್ಯತ್ಯಾಸವಾಗುತ್ತಿರಲಿಲ್ಲ. ಪುಟ್ಟ ಹೆಣ್ಣು ಮಕ್ಕಳ ಬಾಯಿಂದ ಬರುವ ಬೈಗುಳಗಳನ್ನು ಕೂಡ ಸಹಿಸಿಕೊಳ್ಳಲು ಕಷ್ಟವಾಗುತ್ತದೆ. ನಾಲ್ಕು ಹಾಡು, ಐದು ಫೈಟುಗಳ ಸಿದ್ಧಸೂತ್ರದ ಮಾಸ್ ಚಿತ್ರಗಳ ಸಾಲಿಗೆ 'ಭೀಮ'ವನ್ನು ಖಂಡಿತ ಸೇರಿಸಬಹುದು. ಆ್ಯಕ್ಷನ್, ಮಾಸ್ ಚಿತ್ರಗಳೆಂದರೆ ಕಥೆಗೆ ಲಾಜಿಕ್ ಇರುವುದಿಲ್ಲ ಎಂಬುದು ನಿಜ. ಆದರೆ, ಅವುಗಳಿಗೆ ಇರಬೇಕಾದ ಜೋಶ್ ಕೂಡ ಇಲ್ಲಿಲ್ಲ. ಏರಿಳಿತಗಳು, ಟ್ವಿಸ್ಟ್ ಕೂಡ ಕಾಣಿಸುವುದಿಲ್ಲ. ನಾಯಕ ಭೀಮನ ಗ್ಯಾಂಗು ಎದುರಾಳಿಗಳನ್ನು ಹೀಗೆಯೇ ಹೊಡೆಯುತ್ತದೆ ಎಂಬುದು ಚಿತ್ರ ಪ್ರಾರಂಭವಾದ 15 ನಿಮಿಷಗಳಲ್ಲಿಯೇ ಊಹೆಗೆ ಸಿಲುಕಿಬಿಡುತ್ತದೆ.

ಚಿತ್ರದಲ್ಲಿನ ಪಾತ್ರಗಳು ಮಜವಾಗಿವೆ. ತಮಿಳರು ಹೆಚ್ಚಿರುವ ಕೊಳೆಗೇರಿಗಳಲ್ಲಿ ಕಾಣಿಸುವ ಒಂದಷ್ಟು ನೈಜ ಪಾತ್ರಗಳು, ಆಚರಣೆಗಳು ಚಿತ್ರದುದ್ದಕ್ಕೂ ಕಾಣುತ್ತವೆ. ಆದರೆ, ಯಾವ ಪಾತ್ರಕ್ಕೂ ಸರಿಯಾದ ಉದ್ದೇಶ, ಪೋಷಣೆ ಇಲ್ಲ. ಮಾತಿನಲ್ಲಿ ಅವಾಚ್ಯ ಶಬ್ದಗಳು ಯಥೇಚ್ಛವಾಗಿವೆ. ಇಡೀ ಚಿತ್ರದ ದೊಡ್ಡ ಶಕ್ತಿ ಕಲಾವಿದರ ದಂಡು. ಪೊಲೀಸ್ ಅಧಿಕಾರಿಯಾಗಿ ನಟಿಸಿರುವ ರಂಗಭೂಮಿ ಕಲಾವಿದೆ ಪ್ರಿಯ ಶಟಮರ್ಷಣ ನಟನೆ ಗಮನ ಸೆಳೆಯುತ್ತದೆ. ಸ್ಥಳೀಯ ರಾಜಕಾರಣಿ, ಆತನ ಪಿ.ಎ, ಡ್ರ್ಯಾಗನ್ ಮಂಜು ಮೊದಲಾದ ಪಾತ್ರಗಳನ್ನು ನಿರ್ವಹಿಸಿರುವ ಹೊಸ ಕಲಾವಿದರು ನಟನೆಯಿಂದ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ.

ಹಾಸ್ಯ ಸನ್ನಿವೇಶಗಳು ಅಲ್ಲಲ್ಲಿ ನಗು ತರಿಸುತ್ತವೆ. ಆದರೆ, ಹಲವೆಡೆ ಇದು ಕಥೆಯ ಭಾಗವಾಗದೇ ನಗಿಸಲಿಕ್ಕಾಗಿಯೇ ಪೋಣಿಸಲಾದ ಸನ್ನಿವೇಶಗಳಂತಿವೆ. ಅವಾಚ್ಯ ಮಾತುಗಳಿಂದಾಗಿ ಸಂಭಾಷಣೆಯ ಕಚಗುಳಿ ಕಳೆದು ಹೋಗಿದೆ. ಚರಣ್‌ರಾಜ್ ಹಿನ್ನೆಲೆ ಸಂಗೀತ ದೃಶ್ಯಗಳಿಗೆ ಸರಿ ಹೊಂದುವಂತಿದೆ. ಆದರೆ, ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಒಂದೆರಡು ಕಡೆ ಹಾಡಿನ ಅವಶ್ಯವೂ ಇರಲಿಲ್ಲ. ಶಿವಸೇನ ಛಾಯಾಚಿತ್ರಗ್ರಹಣದಲ್ಲಿಯೂ ಹೊಸತೇನೂ ಕಾಣಿಸುವುದಿಲ್ಲ. ಹೊಡೆದಾಟ, ಬೈಗಳಗಳನ್ನೇ ಮನರಂಜನೆಯ ಬಂಡವಾಳವಾಗಿಸಿಕೊಳ್ಳುವ ಬದಲು ಗಾಂಜಾ ಸಮಸ್ಯೆ ಮತ್ತು ಮೂಲದತ್ತ ಇನ್ನಷ್ಟು ಗಮನಹರಿಸಬಹುದಿತ್ತು.

ವಿನಾಯಕ ಕೆ.ಎಸ್.

ಪದಬಂಧ 5768

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮನಸ್ಸನ್ನು ವಿಭಜಿಸಿ ಪರೀಕ್ಷಿಸುವುದು (6)
4.ನಮ್ಮ ರಾಷ್ಟ್ರ ಪಕ್ಷಿ (3)
7.ಕವಿತೆ ಬರೆಯುವವನು (2)
9.ಅದೇ ತಾನೆ ಮೂಡುತ್ತಿರುವ ಸೂರ್ಯ (5)
12.ಮೂಲಕೃತಿಯ ಸ್ಥೂಲ ಭಾಷಾಂತರ (5)
14.ಕೊಳೆಯಿಲ್ಲಿ ಉಲ್ಟಾ ಆಗಿಬಿಟ್ಟದೆ (2)
17.ಸಂಗಾತಿ ಹೇಳಿರುವ ವಿಷಯ (3)
18.ಪ್ರೇಮಿಗಳ ಹುಸಿಜಗಳ (6)

ಮೇಲಿಂದ ಕೆಳಕ್ಕೆ

2.ಕನ್ನಡಿಗನು ಮಾಡಿಸಿರುವ ಇನ್ಶೂರೆನ್ಸ್! (2)
3.ಹೆಂಡತಿ ಸೋದರಿಯ ಗಂಡ (3)
5.ಹಾಸ್ಯ ಈ ವಿಧವಾಗಿ ಬಂದಿದೆಯಲ್ಲಾ? (3)
6.ಒಂದನ್ನೊಂದು ಅಗಲದೇ ಇರುವಿಕೆ (5)
8.ಪಂಡಿತ ಇಲ್ಲಿದ್ದಾನೆ (4)
9.ಊಟ ಮಾಡದಿರುವಿಕೆ (4)
10.ಈತ ನರಕಾಧಿಪತಿ (2)
11.ಪುಸ್ತಕ ಅಥವಾ ಪತ್ರಿಕೆಯ ಪುಟ (2)
13.ನಾದ ಸ್ವರವಿದು (3)
15.ಕಣದಲ್ಲಿ ನಡೆದ ಮದುವೆ (3)
16.ಶುನಕದ ಹತ್ತಿರವಿರುವ ಗಿಳಿ (2)



5767ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಪಾನಕ 4.ಕಕ್ಷೆ
5.ಮಣಕ 7.ಪರಿಸರ
8.ಹಯವದನ 11.ಸ್ವಾವಲಂಬಿ
13.ವಿಪಿನ 14.ನಸ್ಯ
15.ರುದ್ರಾಕ್ಷಿ

ಮೇಲಿಂದ ಕೆಳಕ್ಕೆ:
1.ಸುಮನೋಹರ 3.ಕಮರಿ
4.ಕಲ್ಹಾರ 6.ಕಡುದಾಹ
7.ಪರಾವಲಂಬಿ 9.ನಟ್ಟಡವಿ
10.ಸವಿಗನಸು 11.ಸ್ವಾರಸ್ಯ
12.ಲಂಗರು

ಸುಡೊಕು 6153

		1		8				
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				7
1		8	5			3		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6152 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಆಗಸ್ಟ್ 10, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಷಷ್ಠಿ ಅಹೋರಾತ್ರ ನಕ್ಷತ್ರ: ಚಿತ್ತಾ ಅಹೋರಾತ್ರ ಯೋಗ: ಸಾಧ್ಯ ಗಂ. 14-52 ಕರಣ: ಕೌಲವ ಗಂ. 16-32, ಕರ್ಕಾಟಕ ಮಾಸದ 24 ನೇ ದಿನ, ಮಳೆನಕ್ಷತ್ರ: ಆಶ್ಲೇಷ 3.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-21 **ಸೂರ್ಯಾಸ್ತ :** 06-51
ಮುಸ್ಲಿಂ ದಿನಾಂಕ : 05 ಸಫರ್
ಅದೃಷ್ಟ ಸಂಖ್ಯೆ : 2,10

ಮೇಷ: ಬೇರೆ ಯಾರಿಗೂ ನಿಮ್ಮ ಯೋಜನೆಯ ಸುಳಿವು ಸಿಗದಂತೆ ಗೌಪ್ಯತೆಯನ್ನು ಕಾಪಾಡಿ. ದೇಹಕ್ಕೆ ಅತಿಯಾದ ಶ್ರಮವಾದರೂ ಇಷ್ಟ ಪ್ರಾಪ್ತಿಗಾಗಿ ಕಾರ್ಯವನ್ನು ಸಾಧಿಸಿದ ಸಂತೋಷ ಇರುವುದು. ಶುಭ ಸುದ್ದಿ ಕೇಳಿ ಸಂತೋಷವಾಗುವುದು.

ವೃಷಭ: ಜೀವನ ರೂಪಿಸಿಕೊಳ್ಳಲು ನಿರ್ಧರಿಸಿದ ಪ್ರೇಮಿಗಳಿಗೆ ತಮ್ಮ ಸಹೋದರರಿಂದ ಅಥವಾ ಕುಟುಂಬ ವರ್ಗದವರಿಂದ ಸ್ಪಂದನೆ ಸಿಗುವ ಅವಕಾಶಗಳಿವೆ. ರಫ್ತು ವ್ಯಾಪಾರದಲ್ಲಿ ಹೆಚ್ಚಿನ ಅಭಿವೃದ್ಧಿ ಹೊಂದುವಿರಿ.

ಮಿಥುನ: ಯೋಜನೆಗಳನ್ನು ಕಾರ್ಯಗತಗೊಳಿಸಲು ಸಿಬ್ಬಂದಿ ವರ್ಗದವರು ಸಹಕರಿಸಲಿದ್ದಾರೆ. ನವವಿವಾಹಿತರಿಗೆ ಸಂತಾನದ ವಿಚಾರದಲ್ಲಿ ಶುಭ ಸೂಚನೆ ಕಾಣಲಿದೆ. ಅನಿರೀಕ್ಷಿತವಾಗಿ ಹಳೆಯ ಗೆಳೆಯರ ಭೇಟಿ ಸಾಧ್ಯತೆ.

ಕರ್ಕಾಟಕ: ಧೈರ್ಯದಿಂದ ದೊಡ್ಡ ಯೋಜನೆ ಕೈಗೊಳ್ಳಬಹುದು, ಆದರೆ ಹಣದ ವಿಚಾರದಲ್ಲಿ ಎಚ್ಚರ ವಹಿಸಿ. ಬಹಳ ದಿನಗಳ ನಂತರ ಒಂದು ದೃಢವಾದ ನಿರ್ಣಯವನ್ನು ಕೈಗೊಂಡಿರುವ ನಿಮಗೆ ಶುಭವಾಗುವುದು.

ಸಿಂಹ: ಯೋಜನೆಗಳು ಸರಿಯಾದ ಹಾದಿಯಲ್ಲಿ ಸಾಗುತ್ತಿರುವುದರಿಂದ ಸಮಾಧಾನ ಇರಲಿದೆ. ಕೃಷಿ ಹಾಗೂ ಹೈನು ವ್ಯಾಪಾರಗಳಿಂದ ಅಧಿಕ ಲಾಭವಾಗುವುದು. ಆಭರಣಗಳ ಖರೀದಿಯಿಂದ ಸಂತೋಷವಾಗುವುದು.

ಕನ್ಯಾ: ನಿಮ್ಮ ಆಲೋಚನೆಯಲ್ಲಿ, ಸಹೋದ್ಯೋಗಿಗಳ ಯಾವುದೇ ತರಹದ ಒತ್ತಡಕ್ಕೆ ಮಣಿಯದೆ ಕೆಲಸದಲ್ಲಿ ಮುನ್ನುಗ್ಗಿ. ಜೀವನದಲ್ಲಿ ನಾಲ್ಕಾರು ದೋಣಿಯ ಪ್ರಯಾಣ ಬೇಡವೆನಿಸಲಿದೆ. ಶಸ್ತ್ರವೈದ್ಯ ವೃತ್ತಿಯವರಿಗೆ ಸೌಲಭ್ಯಗಳು ಹೆಚ್ಚಲಿವೆ.

ತುಲಾ: ನಿಮ್ಮ ನಿರ್ಧಾರ ಸರಿಯಾದುದೆಂದು ನಿಮಗೆ ಮನವರಿಕೆಯಾಗುವುದು. ಮೀನುಗಾರರು ಅಥವಾ ಸಮುದ್ರ ಪ್ರಯಾಣ ಮಾಡುವವರು ಜಾಗ್ರತರಾಗಿರಿ. ಮಕ್ಕಳ ಓದಿನ ವಿಷಯವಾಗಿ ಹೆಚ್ಚು ಗಮನವಹಿಸುವಿರಿ.

ವೃಶ್ಚಿಕ: ಹಿರಿಯರಿಂದ ತರ್ಜಿಸಿಕೊಂಡ ಸಲುವಾಗಿ ಮನೆಯಲ್ಲಿ ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ. ಯಾರಲ್ಲಿಯೂ ಅದರಲ್ಲೂ ಮುಖ್ಯವಾಗಿ ಬಂಧುಗಳಲ್ಲಿ ಆರ್ಥಿಕ ಸಹಾಯ ಕೇಳಬೇಡಿ.

ಧನು: ಪ್ರಯತ್ನಗಳಿಗೆ ವ್ಯಕ್ತಿಯೊಬ್ಬರ ಬೆಂಬಲ ದೊರೆತು ಯಶಸ್ವಿಯಾಗಲಿದೆ. ಎಲ್ಲಾ ವಿಚಾರದಲ್ಲೂ ಸಾವಧಾನವಾಗಿ ಮುಂದುವರಿಯುವುದು ಉತ್ತಮ. ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ಸಮತೋಲನ ಕಾಯ್ದುಕೊಳ್ಳಿರಿ.

ಮಕರ: ದೈನಂದಿನ ಖರ್ಚು-ವೆಚ್ಚಗಳಿಗಾಗಿ ಹಾಗೂ ಜೀವನೋಪಾಯಕ್ಕೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವಿರಿ. ಹಣಕಾಸಿನಲ್ಲಿ ದಾಕ್ಷಿಣ್ಯದಿಂದ ನಷ್ಟ ಸಂಭವಿಸಬಹುದು. ಆದರೆ ಇದೆಲ್ಲವು ಕ್ಷಣಿಕವಾದ ವಿಚಾರ.

ಕುಂಭ: ವೈಯಕ್ತಿಕ ವಿಚಾರಕ್ಕಾಗಿ ದೂರದ ಊರಿಗೆ ಪ್ರಯಾಣಿಸುವ ಅವಕಾಶ ಒದಗಿ ಬರಬಹುದು. ಯಂತ್ರಗಳನ್ನು ಬಳಸುವಾಗ ತೊಂದರೆಯಾಗುವ ಸಾಧ್ಯತೆ. ಸರಕು ಸಾಗಾಣಿಕೆದಾರರಿಗೆ ಹೆಚ್ಚಿನ ಕೆಲಸ ಇರಲಿದೆ.

ಮೀನ: ಗಣ್ಯವ್ಯಕ್ತಿಗಳನ್ನು ನೋಡುವ ಮತ್ತು ಅವರಲ್ಲಿ ಮಾತನಾಡುವ ಅವಕಾಶ ಸಿಗುವುದು. ಪತ್ರಿಕೋದ್ಯಮಿಗಳಿಗೆ ಕ್ರಿಯಾತ್ಮಕ ಬರವಣಿಗೆಯಿಂದ ಏಳಿಗೆ ದೊರಕುವುದು. ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಿದೆ.

ಹೆಸರಲ್ಲಿ ಏನಿದೆ?

ಅಂಜಲಿ ರಾಮಣ್ಣ

ಮೊನ್ನೆ ಪಾರ್ಲಿಮೆಂಟಿನಲ್ಲಿ ಸಭಾಪತಿಗಳು 'ಜಯಾ ಅಮಿತಾಬ್ ಬಚ್ಚನ್ ಅವರೇ' ಎಂದು ಸಂಭೋದಿಸಿದ ಕೂಡಲೆ ಸದಸ್ಯೆ ಜಯ ಬಾಧುರಿ ಅವರು ತಮ್ಮ ಎಂದಿನ ಖಡಕ್ ಶೈಲಿಯಲ್ಲಿ 'ಸಭಾಪತಿಗಳೇ ನನ್ನನ್ನು ಜಯಾ ಬಚ್ಚನ್ ಎಂದರೆ ಸಾಕು, ಹೀಗೆ ಗಂಡನ ಹೆಸರನ್ನು ಹಾಕಿಕೊಳ್ಳುವುದು ಇತ್ತೀಚಿನ ಫ್ಯಾಷನ್ ಆಗಿಬಿಟ್ಟಿದೆ' ಎಂದರು. ಅಷ್ಟೇ ಅಲ್ಲ ಈ ಪುರುಷ ಪ್ರಧಾನ ಮನಃಸ್ಥಿತಿ ಇನ್ನೂ ಎಷ್ಟು ಬೆಳೆಯುತ್ತಿದೆ ಎಂದರೆ ಸರ್ವೋಚ್ಚ ನ್ಯಾಯಾಲಯವೇ ಯಾವ ಮಹಿಳೆಗೂ ತನ್ನ ಹೆಸರಿನ ಮುಂದೆ ಗಂಡನ ಅಥವಾ ತಂದೆಯ ಹೆಸರು ಸೇರಿಸಿಕೊಳ್ಳುವ ಅವಶ್ಯಕತೆ ಇಲ್ಲ ಎಂದು ತೀರ್ಪು ಕೊಟ್ಟಿದ್ದರೂ ಸರ್ಕಾರಗಳು ಒತ್ತಾಯ ಮಾಡುತ್ತಿವೆ ದಾಖಲೆಗಳನ್ನು ಕೊಡಲು.

ಒಮ್ಮೆ ಮಗು ಹುಟ್ಟಿ 15 ತಿಂಗಳಾದ್ರೂ ಬರ್ತ್ ಸರ್ಟಿಫಿಕೇಟ್ ಮಾಡಿಸಿರಲಿಲ್ಲ ಯಾಕೆ ಎಂದಿದ್ದಕ್ಕೆ ಬಂದ ಉತ್ತರ "3 ತಿಂಗಳ ಹಿಂದೇನೆ ಕೊಟ್ಟಿದ್ದೀವಿ ಆದರವರು ತಂದೆ ಹೆಸರು ಕೊಡದೆ ಮಾಡಲ್ಲ ಅಂತಿದ್ದಾರೆ. ತಾಯಿ ಲೈಂಗಿಕ ದೌರ್ಜನ್ಯದಿಂದ ನೊಂದವಳು ಎನ್ನುವ ಆದೇಶ ತೋರಿಸಿದರೂ ಆಫೀಸಿನಲ್ಲಿ ತಂದೆ ಹೆಸರು ಬೇಕು ಅಂತಿದ್ದಾರೆ". ಇನ್ನೊಂದು ಪ್ರಕರಣದಲ್ಲಿ 5 ಮಕ್ಕಳನ್ನು ಭಿಕ್ಷಾಟನೆಯಿಂದ ರಕ್ಷಿಸಲಾಗಿತ್ತು. ಮಕ್ಕಳನ್ನು ಹಿಂದಿರುಗಿಸಿ ಎಂದು ತಾಯಂದಿರೋಡಿ ಬಂದರು. ದಾಖಲೆಗಳನ್ನು ತರಲು ಹೇಳಲಾಗಿತ್ತು. ಅವರೆಲ್ಲರೂ ತಮ್ಮ ರಾಜ್ಯದ ಅಧಿಕಾರಿಗಳಿಂದ ಮಕ್ಕಳ ಜನ್ಮದಾಖಲೆ ತಂದರು. ದಾಖಲೆಗಳಲ್ಲಿ ಐದೂ ಮಕ್ಕಳ ಅಮ್ಮಂದಿರ ಹೆಸರು ಬೇರೆಬೇರೆ ಇತ್ತು ಆದರೆ ತಂದೆಯ ಹೆಸರು ಮಾತ್ರ ಒಬ್ಬನದ್ದೇ. ಗೋಲ್‌ಮಾಲ್ ಕಣ್ಣಿಗೆ ರಾಚುತ್ತಿತ್ತುತ್ತು. ಪರಿಶೀಲನೆಯಿಂದ ಸತ್ಯ ಹೊರಗೆ ಬಿತ್ತು. ಕೆಲವರಿಗೆ ಮಕ್ಕಳ ತಂದೆಯರ ಹೆಸರು ತಿಳಿದಿಲ್ಲ. ಮತ್ತೆ ಕೆಲವರಿಗೆ ಕಾರಣಾಂತರಗಳಿಂದ ಹೇಳಲಾಗುತ್ತಿಲ್ಲ. ಆದರೆ ಜನ್ಮದಾಖಲೆ, ಆಧಾರ್ ಕಾರ್ಡ್ ಇತರೆ ಯಾವುದಕ್ಕೂ ತಂದೆಯ ಹೆಸರು ಕೇಳುತ್ತಾರೆ. ಅದಕ್ಕೇ ಅವರೂರಿನ ಪುಢಾರಿಯೊಬ್ಬರು ತಮ್ಮ ಕಲ್ಪನೆಯಿಂದ ಒಂದೆರಡು ಹೆಸರು ಕೊಟ್ಟು ಅಧಿಕಾರಿಗೆ ಎಲ್ಲಾ ಮಕ್ಕಳಿಗೂ ಆ ಹೆಸರನ್ನೇ ತಂದೆಯ ಹೆಸರು ಎಂದು ಬಳಸಿ ದಾಖಲೆ ನೀಡಲು ಹೇಳಿಬಿಟ್ಟಿದ್ದರು.

ಗಂಗೂಬಾಯಿ ಕಾತ್ಯಾವಾಡಿ ಸಿನೆಮಾದಲ್ಲಿ ಆಕೆ ಲೈಂಗಿಕ ಕಾರ್ಯಕರ್ತೆ. ಮಗುವಿಗೆ ತಾಯಿ ಹೆಸರು ಬರೆಸಲು ನೀಡುವಾಗ , ತಂದೆಯ ಹೆಸರೇನು ಎನ್ನುವ ಪ್ರಶ್ನೆ ಬರುತ್ತೆ. "ತಾಯಿಯ ಹೆಸರು ಸಾಲುವುದಿಲ್ಲವೇ?" "ಆಗಲಿ ತಂದೆಯ ಹೆಸರು ದೇವಾನಂದ್ ಅಂತ ಬರೆದುಕೊಳ್ಳಿ" ಎನ್ನುತ್ತಾಳೆ.

ಎಷ್ಟೊಂದು ಅರ್ಥಪೂರ್ಣ ಈ ದೃಶ್ಯ: ಜಗತ್ತಿನಲ್ಲಿ ತಂದೆಯ ಅಸ್ತಿತ್ವ ತಾಯಿಯು ಹೇಳುವ ಹೆಸರಿಗಷ್ಟೇ ಸೀಮಿತ. ಅಮ್ಮ ಹೇಳಿದವನೇ ಅಪ್ಪ. ಬೆಳೆಯುತ್ತಿರುವ ಬದಲಾಗುತ್ತಿರುವ ಕಾಲದಲ್ಲಿ ಎಷ್ಟೊಂದು ಒಂಟಿ ಮಹಿಳೆಯರು ಬೇರೆಬೇರೆ ವಿಧಾನದಿಂದ ಅಮ್ಮ ಆಗುತ್ತಿದ್ದಾರೆ. ಅದಕ್ಕೆ ಸಮಾಜದ ಮನ್ನಣೆ ಸಿಗುತ್ತಿದೆ. ಕಾನೂನು ಒಪ್ಪುತ್ತಿದೆ. ಹೀಗಿರುವಾಗ ದಾಖಲೆಗಳಲ್ಲಿ ತಂದೆಯ ಅಥವಾ ಗಂಡನ ಹೆಸರು ಇರಬೇಕು ಎನ್ನುವುದೇ ಹಾಸ್ಯಾಸ್ಪದ.

ಕರ್ನಾಟಕ ದೇವದಾಸಿ (ಸಮರ್ಪಣಾ ನಿಷೇಧ) ಕಾಯಿದೆ-1982 ಅನ್ನು ಪುನರ್ ವಿಮರ್ಶೆ ಮಾಡಿ ಸಮರ್ಪಕವಾಗಿ ಜಾರಿಗೆ ತರಬೇಕೆಂದು ಸರ್ಕಾರವನ್ನು ಒತ್ತಾಯಿಸಲು ನಡೆದ ಸಭೆಯಲ್ಲಿ ನೊಂದ ಮಹಿಳೆಯರು ಮತ್ತು ಬಾಲಕಿಯರು ಹೇಳಿದ ಮುಖ್ಯಾಂಶವೆಂದರೆ "ಶಾಲೆ ಓದಲು, ಆಧಾರ್ ಕಾರ್ಡ್ ಮಾಡಿಸಲು ಮತ್ತಿನ್ಯಾವುದೇ ದಾಖಲೆ ಮಾಡಿಸಲು ತಂದೆಯ ಹೆಸರನ್ನು ಹೇಳಲು ಒತ್ತಾಯ ಮಾಡುತ್ತಾರೆ ಇಲ್ಲದ, ಗೊತ್ತಿಲ್ಲದ ತಂದೆಯ ವಿವರವನ್ನು ಎಲ್ಲಿಂದ ತರುವುದು?" ಅಮ್ಮಂದಿರು

ದೇವದಾಸಿ ಪದ್ಧತಿಯಿಂದ ನೊಂದವರು ಎಂದು ತಿಳಿದರೂ ಅವರ ಗಂಡಂದಿರ ಮೂಲ ಕೇಳುತ್ತಾರೆ. ಇದೆಂತಹ ಸಂದಿಗ್ಧ ಮತ್ತು ವ್ಯವಸ್ಥೆಯ ಕ್ರೂರತನ. ಗಂಡ ತೀರಿಕೊಂಡಾಕೆಗೆ, ಒಂಟಿ ಹೆಂಗಸಿಗೆ ಬದುಕುವ, ಆಸ್ತಿ ಹೊಂದುವ, ದತ್ತು ತೆಗೆದುಕೊಳ್ಳುವ ಹಕ್ಕು ಹೀಗೆ ಏನೆಲ್ಲಾ ರೀತಿಯ ನ್ಯಾಯಪಾಲು ಕೊಡಿಸಲು ಅದೆಷ್ಟು ಹೋರಾಟಗಳು ಆಗಿವೆ. ಪಾಸ್ಪೋರ್ಟಿನಲ್ಲಿ ತಾಯಿಯ ಹೆಸರು ಕಡ್ಡಾಯ ತಂದೆಯ ಹೆಸರು ಆಯ್ಕೆ ಎನ್ನುವ ನಿರ್ಧಾರಗಳೂ ಜಾರಿಗೆ ಬಂದಿದೆ. PAN ಕಾರ್ಡಿನಲ್ಲಿಯೂ ತಂದೆಯ ಹೆಸರು ಕಡ್ಡಾಯ ಅಲ್ಲ ಎನ್ನುವ ನಿರ್ದೇಶನಗಳೂ ಹೊರಬಂದಿವೆ. ಆದರೆ ಮಕ್ಕಳ ದಾಖಲೆಗಳಿಗೆ ತಂದೆಯ ಹೆಸರು ಬೇಕೇಬೇಕು ಎನ್ನುವ ಒತ್ತಾಯ, ವಿವಾಹಿತ ಮಹಿಳೆ ಎಂದ ಕೂಡಲೇ ಆಕೆಯ ಗಂಡನ ಹೆಸರನ್ನು ಜೊತೆಯಲ್ಲಿ ಸೇರಿಸಿ ಕರೆಯುವುದು ಬುದ್ಧಿದಾರಿದ್ರ್ಯ ಮಾತ್ರ. ಇದೆಲ್ಲವನ್ನು ಗಮನಿಸಿಯೇ 2015 ಜುಲೈ ತಿಂಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಹೇಳಿದೆ "ವಯಸ್ಕ ಹೆಂಗಸರ Identificationಗಾಗಿ ತಂದೆ ಅಥವಾ ಗಂಡನ ಹೆಸರುಇರಬೇಕು ಎನ್ನುವ ನಿಯಮ ಎಲ್ಲೂ ಇಲ್ಲ. ಇದೊಂದು ಬಂದಿರುವ ಅಲಿಖಿತ ನಿಯಮವಾಗಿಬಿಟ್ಟಿದೆ. ಕೆಲವು ದಾಖಲೆಗಳು ಆಗಬೇಕಾದಾಗ ತಿಳುವಳಿಕೆ ಇಲ್ಲದೆ ಸಂಸ್ಥೆಗಳಲ್ಲಿ ತಂದೆಯ ಅಥವಾ ಗಂಡನ ಹೆಸರಿಗಾಗಿ ಒತ್ತಾಯ ಹೇರುತ್ತಾರೆ. ಆದರೆ ಆಯ್ಕೆಯ ಸಾತಂತ್ರ್ಯ ಕಾನೂನಿನಲ್ಲಿ

ಖಂಡಿತಾ ಇದೆ. ಇತ್ತೀಚೆಗೆ ಕೆಲವು ಶಾಲಾ ಕಾಲೇಜು ಹಾಗು ಸಂಸ್ಥೆಗಳ ಅರ್ಜಿಯಲ್ಲಿ ಪ್ರಮುಖವಾಗಿ ತಾಯಿಯ ಹೆಸರನ್ನೇ ಕೇಳಲಾಗುತ್ತಿದೆ ಎನ್ನುವುದನ್ನೂ ಗಮನಿಸಬೇಕು. ನಮ್ಮನ್ನು ನಾವು ಹೇಗೆ ಮಾಡಿಕೊಳ್ಳಬೇಕೆನ್ನುವುದು ಸಂವಿಧಾನ ನೀಡಿದ ಹಕ್ಕು ಮತ್ತು ಆಯ್ಕೆ" ಎಂದು ಹೇಳಿ ಮುಂದುವರೆದು, "ಸರ್ಕಾರದ ಜನ್ಮದಾಖಲೆ ನೀಡುವ ಅಧಿಕಾರಿಗಳು ತಾಯಿಯು ಇಚ್ಛಿಸಿದಲ್ಲಿ ಆಕೆಯ ಹೆಸರನ್ನು ಮಾತ್ರ ನಮೂದಿಸಿ ಜನ್ಮದಾಖಲೆಯನ್ನು ನೀಡಬೇಕು. ತಂದೆಯ ಹೆಸರಿಗಾಗಿ ಒತ್ತಾಯ ಮಾಡಬಾರದು, ಸರ್ಕಾರಗಳು ಇಲಾಖೆಗಳಿಗೆ ಸುತ್ತೋಲೆ ನೀಡಬೇಕು" ಎಂದು ಆದೇಶಿಸಿದೆ.

ಭ್ರೂಣ ಹತ್ಯೆ, ಹೆಣ್ಣುಮಕ್ಕಳ ವಿದ್ಯಾಭ್ಯಾಸ, ಬಾಲ್ಯವಿವಾಹ, ಅಪೌಷ್ಠಿಕತೆ ಇವುಗಳ ಉನ್ನತೀಕರಣದ ಬಗ್ಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ಹಾಕಿ, ಬಜೆಟ್ ಮಂಡಿಸುತ್ತದೆ ಆದರೆ ಅವುಗಳ ಫಲಾನುಭವಿಗಳು ಮುಂದೆಬರಲು ಇರುವ ತಾಂತ್ರಿಕ ತೊಡಕುಗಳನ್ನು ಸರಿಮಾಡುವತ್ತ ಸರ್ಕಾರ ನಿಗಾ ವಹಿಸಬೇಕು. ಅಲ್ಲಿಯವರೆಗೂ ನಾವು ಕೇಳುತ್ತಿರಬೇಕು. ಕೇಳುತ್ತಲೇ ಪಡೆದುಕೊಳ್ಳಬೇಕು.

ಮಹಿಳೆ ಮತ್ತು ಮಕ್ಕಳ ಹಕ್ಕುಗಳ ವಕೀಲರು

ಹೆಸರು ಬದಲಿಸಿದಾಕ್ಷಣ ಸಂಬಂಧ ಬದಲಾಗದು

ಮದುವೆ ಎನ್ನುವುದು ಎರಡು ಮನಸ್ಸುಗಳ ನಡುವಿನ ಬಂಧ. ಮದುವೆಯಾದ ತಕ್ಷಣ ಹೆಣ್ಣುಮಕ್ಕಳು ತಮ್ಮ ಮೂಲ ಹೆಸರನ್ನು ಬದಲಿಸಿಕೊಳ್ಳಲೇಬೇಕು ಎನ್ನುವುದು ಕಡ್ಡಾಯವಲ್ಲ ಎನ್ನುವುದು ನನ್ನ ಭಾವನೆ. ಅಲ್ಲದೆ ಇಂದಿನ ಕಾಲದಲ್ಲಿ ಹೆಣ್ಣುಮಕ್ಕಳು ಉದ್ಯೋಗ, ಓದು ಎಂದು ಹಲವೆಡೆ ತೊಡಗಿಸಿಕೊಂಡಿರುತ್ತಾರೆ. ಹೀಗಿದ್ದಾಗ ಹೆಸರು ಬದಲಾವಣೆ ಮಾಡಬೇಕೆಂದರೆ ಕಾನೂನಿನ ಮೂಲಕವೇ ಆಗಬೇಕು. ಅದಕ್ಕೆ ಅಫಿಡವಿಟ್, ಪತ್ರಿಕೆಗಳಲ್ಲಿ ಪ್ರಕಟಣೆ ಹೀಗೆ ಹಲವು ಕಾಯಿದೆಗಳಿವೆ. ಅಲ್ಲದೆ ಪತಿಯ ಹೆಸರನ್ನು ಹೆಂಡತಿಯ ಹೆಸರಿನೊಂದಿಗೆ ಸೇರಿಸದೆ ಹೇಳಿದಾಕ್ಷಣ ಸಂಬಂಧಗಳಲ್ಲಿ ಯಾವ ಬದಲಾವಣೆಯಾಗುವುದಿಲ್ಲ. ಗಂಡನ ಮೇಲಿನ ಗೌರವವೂ ಕಡಿಮೆಯಾಗದು. ಹೆಸರು ಪ್ರತಿಯೊಬ್ಬರ ಸ್ವಾತಂತ್ರ್ಯ. ಅದು ಅವರ ಗುರುತು ಕೂಡ.

ವಿಜಯಾ ಹೆಗಡೆ (ವಾಸ್ತುಶಿಲ್ಪ ಸಂಶೋಧನಾ ವಿದ್ಯಾರ್ಥಿನಿ, ಗೃಹಿಣಿ)

ಹೆಸರು ಆಕೆಯ ಸ್ವಾತಂತ್ರ್ಯ

ಗಂಡನ ಹೆಸರು ತನ್ನ ಹೆಸರಿನೊಂದಿಗೆ ಪತ್ನಿ ಸೇರಿಸಿಕೊಳ್ಳುವುದು ಇಂದು ಅನಿವಾರ್ಯವಲ್ಲ. ಇಬ್ಬರೂ ತಮ್ಮದೇ ಬೇರೆ ಬೇರೆ ಹೆಸರಿನಿಂದ ಸಮಾಜದಲ್ಲಿ ಗುರುತಿಸಿಕೊಂಡರೆ ತಪ್ಪೇನೂ ಇಲ್ಲ. ಒಳಿತಿದ್ದರೆ ಒಳಿತು, ಕೆಡುಕಿದ್ದರೆ ಕೆಡುಕು, ಯಾರು ಏನು ಮಾಡಿದ್ದಾರೋ ಅದನ್ನೇ ಪಡೆಯುತ್ತಾರೆ. ಗಂಡನ ಹೆಸರಿನಿಂದಲೇ ಹೆಂಡತಿ ಬಿಂಬಿತವಾಗಬೇಕಿಲ್ಲ. ಅವಳಿಗೂ ಅವಳದೇ ಸ್ವಂತ ಹೆಸರು ಮಾಡುವುದು ಮತ್ತು ಅದರಿಂದಲೇ ನಾಲ್ಕು ಜನರಲ್ಲಿ ಗುರುತಿಸಿಕೊಳ್ಳುವುದು ಆಕೆಯ ಸ್ವಾತಂತ್ರ್ಯ ಮಾತ್ರವಲ್ಲ, ಹಕ್ಕು ಕೂಡ.

ಸುಮಾ. ಕಂಚೀಪಾಲ್ (ಬರಹಗಾರ್ತಿ)

ರೊಟ್ಟಿ ಹಬ್ಬದ ಒಳ ಹೊರಗೆ

ರೊಟ್ಟಿ ಊಟದ ವೈವಿಧ್ಯ ಹೀಗೆ...
-ಪ್ರಜಾವಾಣಿ ಚಿತ್ರಗಳು/ ಗೋವಿಂದರಾಜ ಜವಳಿ

ಡಾ.ಲಕ್ಷ್ಮಿಶಂಕರ.ಜೋಶಿ. ಕಲಬುರಗಿ

ಆಷಾಢದ ಕೊನೆಯ ದಿನ ನಾಗರ ಅಮಾವಾಸ್ಯೆ ಹೆಸರಿನಲ್ಲಿ ಮತ್ತೆ ಮಣ್ಣಿನ ಪೂಜೆ ನಡೆಯುತ್ತದೆ ,ಈ ದಿನ ದಿವಸಿ ಅಮಾವಾಸ್ಯೆ ಎಂತಲೂ ಪ್ರಸಿದ್ಧವಾಗಿದೆ ಹಾಗೂ ಭೀಮನ ಅಮಾವಾಸ್ಯೆ ಎಂದು ಕರೆಯುತ್ತಾರೆ.

ಈ ದಿನ ಮಣ್ಣಿನಿಂದಲೇ ದಿವಸಿ ಗೌರಿಯನ್ನು ತಯಾರಿಸಿ ಹೆಣ್ಣು ಮಕ್ಕಳು ಗೌರಿ ಪೂಜೆಯನ್ನು ಮಾಡುತ್ತಾರೆ. ಪತಿಯ ಆಯುವೃದ್ಧಿಗಾಗಿ ಪ್ರಾರ್ಥನೆ ಮಾಡಿಕೊಂಡು ಅತ್ಯಂತ ಶ್ರದ್ಧೆಯಿಂದ ಪೂಜಿಸುವ ಸಂಪ್ರದಾಯ ಇದೆ.

ಮದುವೆಗೆ ಮೊದಲು ಕೂಡ ಹೆಣ್ಣುಮಕ್ಕಳಿಂದ ಈ ಪೂಜೆ ಮಾಡಲಾಗುತ್ತದೆ. ನಂತರವೂ ಹತ್ತು ವರುಷ ವ್ರತವೆಂದು ಆಚರಿಸುತ್ತಾರೆ. ತಮ್ಮ ಗಂಡ ಭೀಮನಂತೆ ಬಲಿಷ್ಠನಾಗಲಿ ಎಂಬ ಹಾರೈಕೆ ಇರುತ್ತದೆ.

ಇನ್ನೊಂದು ವಿಶೇಷವೆಂದರೆ" ಬ್ಯಾಳಿ ಭಂಡಾರ "ಒಡೆಯುವ ಕಾರ್ಯಕ್ರಮ ನಡೆಸುತ್ತಾರೆ. ಊಟಕ್ಕಿಂತ ಮೊದಲು ಹೆಣ್ಣುಮಕ್ಕಳು ಹೊಸ್ತಿಲು ಪೂಜೆ ಮಾಡಿ ಹೊಸ್ತಿಲು ಮೇಲೆ ಬ್ಯಾಳಿ ಭಂಡಾರ ಒಡೆಯುವ ಕಾರ್ಯಕ್ರಮ ನಡೆಸುತ್ತಾರೆ .ಅಣ್ಣ - ತಮ್ಮಂದಿರು ಕಣಕದಲ್ಲಿ ಅಡಗಿದ ಬೆಳೆಯನ್ನು ಒಡೆದು ಬೇರೆ ಮಾಡಿ ಅಕ್ಕ - ತಂಗಿಯರಿಗೆ ಕೊಡುತ್ತಾರೆ. ಭಂಡಾರವೆಂದರೆ ಲಕ್ಷ್ಮೀ - ಐಶ್ವರ್ಯ ಎಂದರ್ಥ . ಸೋದರರು ತಮ್ಮ ಸೋದರಿಯರಿಗೆ ನಾವು ಈ ರೂಪದಲ್ಲಿ ನಿಮ್ಮೊಂದಿಗೆ ಸದಾ ಇದ್ದೇವೆ ಎಂಬ ಪವಿತ್ರ ಸಂಕೇತದ ಭಾವವಿದು.

ನಾಗರ ಅಮಾವಾಸ್ಯೆ ನಂತರ ಬರುವ ಹಬ್ಬವೇ ನಾಗರ ಚೌತಿ ಮತ್ತು ನಾಗ ಪಂಚಮಿ. ಸರ್ಪವನ್ನು ದೇವತಾ ಸ್ವರೂಪವೆಂದೇ ಗುರುತಿಸಲಾಗುತ್ತದೆ.

ಮಹಾಭಾರತದಲ್ಲಿ ಬರುವ ಪರಿಕ್ಷೀತನ ಅಂತ್ಯಕ್ಕೆ ಕಾರಣವಾದ ಸರ್ಪ ಸಂತತಿಯನ್ನೆ ದ್ವೇಷಿಸಿ ಸರ್ಪ ಯಜ್ಞ ಕೈಗೊಂಡ ಜನಮೇಜಯ ರಾಜ. ಆಸ್ತಿಕ ಮಹರ್ಷಿಯ ಸಲಹೆಯಂತೆ ಯಜ್ಞ ನಿಲ್ಲಿಸಿದ್ದು ಶ್ರಾವಣ ಪಂಚಮಿಯಂದೆ , ಶ್ರಾವಣ ಶುದ್ಧ ಪಂಚಮಿಗೆ ನಾಗ ಪಂಚಮಿ ಅನ್ನುತ್ತಾರೆ.

ಒಮ್ಮೆ ರೈತನೊಬ್ಬ ಹೊಲ ಊಳುವಾಗ ತನಗೆ ಅರಿವಿಲ್ಲದಂತೆ ಸರ್ಪದ ಹನ್ನೆರೆಡು ಮರಿಗಳನ್ನು ನೇಗಿಲಿಗೆ ಆಹುತಿ ಮಾಡಿರುತ್ತಾನೆ. ಭಯಭೀತನಾದ ರೈತ ಮರುಗಿ ಮನೆಗೆ ಮರುಳುತ್ತಾನೆ. ರಾತ್ರಿ ಹೊರಗೆ ಮೇಯಲು ಹೊದ ರೈತನ ಮನೆಗೆ ಆತನ ಮಕ್ಕಳನ್ನು ಕಡಿಯಲು ಮರಿಗಳ ತಾಯಿ ಸರ್ಪ ಬರುತ್ತಾಳೆ. ಆಗ ರೈತ ಆ ಸರ್ಪಕ್ಕೆ ಶರಣಾಗತನಾಗಿ ಪರಿ ಪರಿಯಾಗಿ ಬೇಡಿಕೊಳ್ಳುತ್ತಾನೆ. ಪ್ರತಿ ವರುಷ ನಿನ್ನ ಹೆಸರಿನಲ್ಲಿ ಆರಾಧನೆ ಮಾಡುತ್ತೇನೆ ಎನ್ನುವದರೊಂದಿಗೆ ಅತಿ ವಿಜ್ರಂಭಣೆಯಿಂದ ಈ ಹಬ್ಬ ಶುರುವಾಯಿತೆಂದು ನಂಬಿಕೆ..

ಪಂಚಮಿ ಹಿಂದಿನ ದಿನ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ರೊಟ್ಟಿ ಪಂಚಮಿ ಆಚರಿಸುತ್ತಾರೆ. ಹೇರಳವಾಗಿ ಸಿಗುವ ಸೊಪ್ಪುಗಳಿಂದ ಕೂಡಿದ ಪಚಡಿ, ಗಜ್ಜರಿ ಸೌತಿಕಾಯಿ, ಮೂಲಂಗಿಗಳ ಕೊಸಂಬರಿ, ಜುಣಕದ ವಡಿ, ಬದನೆಕಾಯಿ ಎಣಗಾಯಿ, ವಿವಿಧ ಚಟ್ನಿ ಪುಡಿಗಳು, ಮೊಸರನ್ನ, ಚಿತ್ರಾನ್ನಗಳೊಂದಿಗೆ ಗೆಳತಿಯರೆಲ್ಲ ಊಟ ಸವಿಯುತ್ತಾರೆ. ಪರಸ್ಪರ ಆ ರೊಟ್ಟಿ ಬುತ್ತಿಯನ್ನು ವಿನಿಮಯ ಮಾಡಿಕೊಳ್ಳುತ್ತಾರೆ.

ನಾಗ ಪಂಚಮಿ ವಿಶೇಷವಾಗಿ ಹೆಣ್ಣು ಮಕ್ಕಳ ಹಬ್ಬ. ನಾಗರ ಪಂಚಮಿ ನಾಡಿಗೆ ದೊಡ್ಡದು ಎನ್ನುವ ಪ್ರತೀತಿ ಇದೆ. ಇದು ಅವರಿಗೆ ಮಾಂಗಲ್ಯ ಪ್ರದ ಹಾಗು ಸಂತಾನ ಪ್ರದ ಎಂದು ನಂಬಿಕೆ.

ಚೌತಿಯ ದಿನ ಕಲ್ಲು ನಾಗರಕ್ಕೆ ಅಥವಾ ಮಣ್ಣಿನ ಹುತ್ತಕ್ಕೆ ಹಾಲು ಎರೆದು ಪೂಜೆ ಸಲ್ಲಿಸುತ್ತಾರೆ,ಮರುದಿನ ಪಂಚಮಿಯಂದು ಮನೆಯಲ್ಲಿ ಹುತ್ತದ ಮಣ್ಣಿನಿಂದ ಮಾಡಿದ ನಾಗಪ್ಪನನ್ನು ಪ್ರತಿಷ್ಠಾಪನೆ ಮಾಡಿ ಹಳದಿ ಬಣ್ಣದ ಗೆಜ್ಜೆ ವಸ್ತ್ರ ಅರಿಶಿಣ, ಕುಂಕುಮ, ಪತ್ರೆ, ಪುಷ್ಪ, ಧೂಪ - ದೀಪಗಳಿಂದ ಷೋಡಷೋಪಚಾರಗಳಿಂದ ಪೂಜೆ ಸಲ್ಲಿಸುತ್ತಾರೆ. ಚೌತಿಯ ದಿನ ನಾಗಪ್ಪನಿಗೆ ಬೆಲ್ಲದ ಹಾಲು ಎರೆದರೆ, ಪಂಚಮಿಯ ದಿನ ಹಸಿ ಹಾಲನ್ನು ಎರೆಯುತ್ತಾ ಕುಟುಂಬದ ಎಲ್ಲರ ಹೆಸರನ್ನು ತೆಗೆದುಕೊಂಡು ತನಿ ಬಿಡುತ್ತಾರೆ. ಕುಟುಂಬದ ಸದಸ್ಯರಿಗೆ ನಿನ್ನಿಂದ ಯಾವುದೇ ಬಾಧೆಯಾಗದಿರಲಿ ಎಂದು ಕೇಳುತ್ತಾ , ನಮ್ಮಪ್ಪನ ಪಾಲು ನಮ್ಮವ್ವನ ಪಾಲು, ನಮ್ಮಣ್ಣನ ಪಾಲು, ತಂಗಿ , ಗಂಡನ ಪಾಲು, ಮಕ್ಕಳ ಪಾಲು, ಸಕಲ ಬಂಧು-ಬಳಗದ ಮತ್ತು ಗೆಳತಿಯರ ಪಾಲನ್ನು ಕೂಡ ಹಾಕುತ್ತಾರೆ.

ವಿಚಾರವಂತರು ವೈಜ್ಞಾನಿಕ ಮನೋಭಾವದವರು ಹಾಲನ್ನು ವ್ಯರ್ಥ ಮಾಡುವುದಕ್ಕಿಂತ ಅದನ್ನು ಅನಾಥ ಆಶ್ರಮಗಳಿಗೆ ಹಂಚುತ್ತಿದ್ದಾರೆ.

ಅಳ್ಳು, ತಂಬಿಟ್ಟು, ಉಸುಳಿ ಮುಂತಾದವುಗಳನ್ನು ನೈವೇದ್ಯಯಾಗಿ ಅರ್ಪಿಸಿ ಕೃತಾರ್ಥರಾಗುತ್ತಾರೆ. ಜೋಕಾಲಿ ಜೀಕಿ ಸಂತೋಷಪಡುತ್ತಾರೆ. ಚಿಕ್ಕ ಮಕ್ಕಳು ಬೋಲ ಬಗರಿ ಆಡಿ ಸುಖಿಸುತ್ತವೆ. ಊರ ಆಯಗಾರ ಮಂದಿಯೆಲ್ಲ ಮನೆ ಮನೆಗೆ ಉಂಡಿ, ಅಳ್ಳು ಕೇಳಲು ಬರುತ್ತಾರೆ. ತರಹೇವಾರಿ ಉಂಡಿ, ಚಕ್ಕುಲಿ, ಕುರು ಕುರು ಅವಲಕ್ಕಿ ತಿಂದು ನಿರಮ್ಮಳವಾಗಿರುವ ಈ ಹಬ್ಬ ಹೆಣ್ಣು ಮಕ್ಕಳ ಪ್ರೀತಿಯ ಹಬ್ಬ.

ತವರು ಮನೆಗೆ ಬಂದ ಹೆಣ್ಣುಮಕ್ಕಳು ಗಂಡನ ಮನೆಯ ಆಯಾಸ, ಕಿರಿ ಕಿರಿಯನ್ನು ಮರೆತು ಹಿಗ್ಗಿ ನ ಬುಗ್ಗೆಯಾಗಿ ಸಡಗರ ಸಂಭ್ರಮದಲ್ಲಿ ತೇಲಾಡುತ್ತಾರೆ. ಹೊಸ ಬಟ್ಟೆ, ಹೊಸ ಆಭರಣವನ್ನು ಧರಿಸಿದಾಗ ತಂದೆ-ತಾಯಿಯ ಹೊಟ್ಟೆ ತುಂಬುತ್ತದೆ. ಹೆಣ್ಣು ಮಕ್ಕಳಿಗೆ ಹಸಿರು ಸೀರೆ ಉಡಿಸಿ, ಹಸಿರು ಬಳೆ ತೊಡಿಸಿ ಸೌಭಾಗ್ಯದ ಸಂಕೇತವಾಗಿ ಅವರನ್ನು ಸಂತೋಷಪಡಿಸುತ್ತಾರೆ.

ಪಂಚಮಿಯ ಮರುದಿನ ಶಿರಿಯಾಳ ಷಷ್ಠಿ ಕಥೆಯನ್ನು ಆಧರಿಸಿದ ಮಕ್ಕಳ ಹಬ್ಬ , ಆ ದಿನ ಹೊಸದಾಗಿ ಮದುವೆಯಾದ ಹುಡುಗಿಯರು ಬುತ್ತಿ ಬೀರುತ್ತಾರೆ. ಕರ್ಚಿಕಾಯಿ ಅಥವಾ ಶಾವಿಗೆ ಪಾಯಸ ,ಮೊಸರನ್ನ ಐದೈದು ಮನೆಗಳಲ್ಲಿ ಬೀರಬೇಕೇಂಬ ನಿಯಮವಿದೆ. ಮೂದಲನೆಯ ವರುಷ ೫ ಹಾಗೆ ೫ ವರುಷಗಳಲ್ಲಿ ೨೫ ಮನೆಗಳಿಗೆ ಬೀರಿಸುವ ಪರಿಪಾಠವುಂಟು.

ಸೊಮಲಾಪುರದ ಶಿರಿಯಾಳ ಶೆಟ್ಟಿ ಲೋಕ ಹಿತಕ್ಕಾಗಿ ಕಟ್ಟಿಸಿದ ಕೆರೆಗೆ ನೀರು ಬರುವುದೆಯಿಲ್ಲ , ಹಿಗಾಗಿ ಆತನನ ಒದ್ದಾಟ ನೋಡಲಾಗದೆ ಕಿರಿಯ ಸೊಸೆ ತನ್ನ ಹತ್ತು ತಿಂಗಳ ಮಗುವನ್ನು ಷಷ್ಠಿಯಂದು ಬಲಿ ಕೊಡುತ್ತಾರ ಪರಿಣಾಮ ಕೆರೆ ತುಂಬುತ್ತದೆ. ಈ ದಿನ ಕೆರೆ ಕಟ್ಟಂಬಲಿ ಎಂದೆ ಹೆಸರಾಗಿದೆ. ಆಷಾಢದಲ್ಲಿ ತವರಿಗೆ ಬಂದ ಮೊದಲಗಿತ್ತಿಯರೆಲ್ಲ ಗಂಡನ ಮನೆಗೆ ಹೊಗಲು ಇಂದೇ ಶುಭಗಳಿಗೆ .

ರೊಟ್ಟಿ ಬುತ್ತಿ ಕಟ್ಟಿಕೊಂಡು ಕೊಟ್ಟ ಸೀರೆಯನ್ನು ಉಟ್ಟುಕೊಂಡು ತಾಯಿ ತಂದೆಯರಿಗೆ, ಗೆಳತಿಯರಿಗೆ ವಿದಾಯ ಹೇಳಿ ಕಂಠ ಬಿಗಿದಿರುತ್ತದೆ. ಆದರೆ ಎಷ್ಟು ದಿನ ತವರಿನಲ್ಲಿದ್ದರೂ ಒಂದು ದಿನ ತನ್ನ ಮನೆಗೆ ಹೊಗಲೆಬೇಕಲ್ಲವೇ? ಇದುವೇ ಜೀವನ....ಮತ್ತೆ ಬರುವ ಪಂಚಮಿ ಎದುರು ನೋಡುತ್ತಿರುತ್ತದೆ ಹೆಣ್ಣು ಜೀವ.ಕೊಬ್ಬರಿ ಕುಬಸ ತರುವ ಅಣ್ಣನಿಗಾಗಿ ಹಾದಿ ಕಾಯುತ್ತದೆ ಅವಳ ಜೀವ.

ಸ್ತನ್ಯಪಾನ ಹೇಗಿರಬೇಕು?

ಸ್ಪಂದನ

ಡಾ. ವೀಣಾ ಎಸ್. ಭಟ್

- ನನಗೀಗ ಸಿಸೇರಿಯನ್ ಹೆರಿಗೆಯಾಗಿದ್ದು 4ನೇ ತಿಂಗಳು ನಡೆಯುತ್ತಿದೆ. ನನಗೆ ಈಗ ಎದೆಹಾಲಿನ ಪ್ರಮಾಣ ಕಡಿಮೆಯಾಗಿದ್ದು ಸ್ತನ್ಯಪಾನ ನಿಲ್ಲಿಸಬೇಕೆಂದಿದ್ದೆ. ಹೆರಿಗೆಯಾದಾಗಲೇ ನನಗೆ 3ದಿನ ಹಾಲು ಬರಲಿಲ್ಲ ಎಂದು ಕೃತಕ ಹಾಲಿನ ಡಬ್ಬ ಬರೆದುಕೊಟ್ಟಿದ್ದರು. ಈಗಲೂ ಅದನ್ನೇ ಹಾಕುತ್ತಿದ್ದೇನೆ.ನನಗೆ ತಪ್ಪಿತಸ್ಥ ಭಾವನೆ ಉಂಟಾಗುತ್ತಿದೆ. ನಾನು ಪೌಡರ್‌ಹಾಲು ನಿಲ್ಲಿಸಲೇ? ಮತ್ತೆ ನಾನು ಮಗುವಿಗೆ ಕೇವಲ ಎದೆಹಾಲುಕುಡಿಸಲು ಸಾಧ್ಯವೇ?

ಆಯೇಷಾ, ಊರು ತಿಳಿಸಿಲ್ಲ.

ಉತ್ತರ:- ತಪ್ಪಿನ ಅರಿವಾಗಿರುವುದಕ್ಕೆ ಅಭಿನಂದನೆಗಳು. ಸಿಸೇರಿಯನ್ ಹೆರಿಗೆಯಾದರೆ ಕೃತಕ ಹಾಲುಣಿಸಬೇಕೆಂಬುದೇನೂಇರಲಿಲ್ಲ. ಮೊದಲೆರಡು ದಿನ ಸಹಜ ಹೆರಿಗೆಯಾಗಿರಲಿ, ಸಿಸೇರಿಯನ್ ಹೆರಿಗೆಯಾಗಿರಲಿ ಹೆಚ್ಚಿನ ಮಹಿಳೆಯರಿಗೆ ಎದೆಹಾಲೇನು ಚಿಮ್ಮಿಹರಿಯುವುದಿಲ್ಲ. ಆದರೆ ಶಿಶುವಿಗೆ ಬೇಕಾದ ಹಾಲು ಎದೆಯಲ್ಲಿ ಉತ್ಪಾದನೆ ಆಗಿರುತ್ತದೆ. ಮಗು ಎದೆಚೀಪಿದಾಗ ಮಗುವಿಗೆ ಸಾಕಾಗುವಷ್ಟು ಹಾಲು ಬರುತ್ತದೆ. ಮತ್ತು ತಾಯಗರ್ಭದಿಂದ ಬಂದಿರುವ ಪೋಷಕಾಂಶಗಳೇ ಮಗುವಿಗೆ ಒಂದೆರಡು ದಿನ ಸಾಕಾಗುತ್ತದೆ ಮತ್ತು ಹುಟ್ಟಿದಾಕ್ಷಣ 1ಗಂಟೆಯೊಳಗೆ ಮಗುವಿಗೆ ಎದೆ ಚೀಪಿಸಬೇಕು. ನಂತರವೂ ಒಂದೆರಡು ಗಂಟೆಗೊಮ್ಮೆ ಅಥವಾ ಮಗು ಅತ್ತಾಗಲೆಲ್ಲ ಮಗುವಿಗೆ ಎದೆಹಾಲುಣಿಸಲು ಪ್ರಯತ್ನಿಸುತ್ತಿದ್ದರೆ 2-3 ದಿನದೊಳಗೆ ಹಾಲು ಜಿನುಗಲು ಆರಂಭವಾಗುತ್ತದೆ. ಆರಂಭದಲ್ಲಿ ಬರುವ ಗೀಬು ಹಾಲಂತೂ ಬಹಳಷ್ಟು ಪೋಷಕಾಂಶಗಳನ್ನ ಹಾಗೂ ರೋಗನಿರೋಧಕ ಶಕ್ತಿಕೊಡುವ ಇಮ್ಯೂನೋಗ್ಲೋಬಿನ್‌ಗಳನ್ನು ಹೊಂದಿದ್ದು ತಾಯಿ ತನ್ನ ಮಗುವಿಗೆ ಕೊಡಬಹುದಾದ ಮೊದಲ ಚುಚ್ಚುಮದ್ದು ಅಥವಾ ಚಿನ್ನದ ದ್ರವ ಎಂದು ಪರಿಗಣಿಸಲಾಗುತ್ತದೆ. ಅದಕ್ಕೆ ಮೊದಲು ಸಕ್ಕರೆ ನೀರು ಅಥವಾ ಜೇನುತುಪ್ಪ ಇನ್ನಿತರ ಆರಂಭಿಕ ಆಹಾರಗಳನ್ನು ಶುರುಮಾಡಿದರೆ ಆನಂತರ ಮಗು ತಾಯಿಯ ಎದೆಚೀಪಿಸಲು ಆಸಕ್ತಿತೋರದೆ ಇದೇ ಮುಂದೆ ಸುರಕ್ಷಿತ ಸ್ತನ್ಯಪಾನಕ್ಕೆ ಅಡ್ಡಿಯಾಗಬಹುದು. ನಿಮ್ಮ ವಿಷಯದಲ್ಲಿ ಹಾಗೇ ಆಗಿರಬಹುದು ಕೃತಕ ಹಾಲು ಮಗು ಕಷ್ಟಪಡದೇ ಆರಾಮಾಗಿ ಸಿಗುವುದರಿಂದ ಮಗು ಎದೆಹಾಲು ನಿರಾಕರಿಸಬಹುದು. ಇದರಿಂದ ಎದೆಹಾಲು ಉತ್ಪಾದನೆ ಕಡಿಮೆ ಆಗುತ್ತದೆ. ಯಾವುದೇ ಮಾತ್ರೆ, ಔಷಧಿ ಪ್ರತ್ಯೋಪಚಾರಗಳಿಗಿಂತ ಮಗು ತಾಯಿ ಎದೆಚೀಪುವುದೇ ಅತ್ಯುತ್ತಮ ಎದೆಹಾಲು ಉತ್ಪಾದನೆಯ ಪ್ರಚೋದಕ. ಹಾಗಾಗಿ ನೀವು ಕೃತಕ ಹಾಲು ನಿಲ್ಲಿಸಿ ಪದೇ ಪದೇ ಮಗುವಿಗೆ ನಿಮ್ಮ ಎದೆಯನ್ನು ಚೀಪಿಸುತ್ತಿರಿ. ಸಬ್ಬಸ್ಸಿಗೆ ಸೊಪ್ಪು, ಮೆಂತ್ಯೆಗಂಜಿ, ದನಿಯಾಗಂಜಿ, ಬೆಳ್ಳುಳ್ಳಿ ಜೀರಿಗೆ, ಶತಾವರಿ, ಲಡ್ಡು, ಚೂರ್ಣ ಇತ್ಯಾದಿಗಳನ್ನು ಹಲವು ಹಿರಿಯರು, ಅನುಭಸ್ತರು ಉಪಯೋಗಿಸಲು ಸಲಹೆ ನೀಡಬಹುದು. ಅವೆಲ್ಲಾ ನೇರವಾಗಿ ಸಹಾಯವಾಗದಿದ್ದರೂ ಉತ್ತಮ ಪೋಷಕಾಂಶಗಳನ್ನು ನೀಡಲು ಸಹಾಯಕ. ನೀವು ಮಗುವಿಗೆ ಕೇವಲ ಎದೆಹಾಲನ್ನು ಕನಿಷ್ಠ 6ತಿಂಗಳು, ಹಾಗೂ ನಂತರದ 2ವರ್ಷದವರೆಗೆ ಪೂರಕ ಆಹಾರದ ಜೊತೆಗೆ ಎದೆಹಾಲನ್ನು ಮುಂದುವರೆಸುವುದು ಅತ್ಯುತ್ತಮ. ಹೀಗೆ ಮಾಡಿದಾಗ ನಿಮಗೂ ನಿಮ್ಮ ಮಗುವಿಗೂ ಅತ್ಯಂತ ಶ್ರೇಷ್ಠಕರ. ನಿಮ್ಮಿಬ್ಬರ ನಡುವೆ ಉತ್ತಮಭಾಂದವ್ಯ ಉಂಟಾಗುತ್ತದೆ. ನಿಮ್ಮಲ್ಲಿ ಅನಗತ್ಯ ಕೊಬ್ಬಶೇಖರಣೆಯಾಗಿದ್ದರೆ ಅದು ಕರಗುತ್ತದೆ. ಸ್ತನದ ಕ್ಯಾನ್ಸರ್, ಅಂಡಾಶಯ ಹಾಗೂ ಗರ್ಭಾಶಯದ ಕ್ಯಾನ್ಸರ್, ರಕ್ತಹೀನತೆ, ಮೂಳೆಸವೆತ ಇವೆಲ್ಲದರ ಸಂಭವ ಕಡಿಮೆ ಆಗುತ್ತದೆ. ಮಗುವಿಗೂ ನಿಮ್ಮ ಎದೆಹಾಲು ಅತ್ಯಂತ ಪರಿಪೂರ್ಣ, ನೈಸರ್ಗಿಕ, ರುಚಿಯಾದ ಅತ್ಯಂತ ಪೌಷ್ಠಿಕವಾದ, ಸದಾ ಸಿದ್ದವಾಗಿರುವ ಆಹಾರ. ಮಗುವಿಗೆ ಶ್ವಾಸಕೋಶ, ಜೀರ್ಣಾಂಗವ್ಯೂಹ, ಚರ್ಮ ಹಾಗೂ ರಕ್ತಕ್ಯಾನ್ಸರ್‌ನಿಂದ ಹಿಡಿದು ಹಲವು ಕ್ಯಾನ್ಸರ್‌ಗಳ ವಿರುದ್ದ ರಕ್ಷಣೆಕೊಟ್ಟು ಮಗುವಿನ ಬುದ್ದಿಮತ್ತೆಯನ್ನು ಹೆಚ್ಚಿಸುವ ಸಂಜೀವಿನಿ. ನೀವು ಮಗುವಿಗೆ ಸ್ತನ್ಯಪಾನ ಮಾಡಿಸಿದರೆ ನಿಮಗೆ ಆರ್ಥಿಕಹೊರೆಯು ಕಡಿಮೆಯಾಗುತ್ತದೆ. ಕೃತಕಹಾಲಿನ ಕಾರಣದಿಂದಾಗುವ ಪರಿಸರನಷ್ಟವೂ ಕಡಿಮೆಯಾಗಿ ಪರಿಸರ ಪೋಷಣೆಯಾಗುತ್ತದೆ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಹಬ್ಬಕ್ಕೆ ಉಂಡಿ ಮಾಡುವುದು ಹೇಗೆ..?

ರಸಾಸ್ವಾದ

ಪೂರ್ಣಿಮಾ ಗೊಂದೆನಾಯ್ಕರ

ಹೆಸರು ಹಿಟ್ಟಿನ ಉಂಡೆ

ಬೇಕಾಗುವ ಸಾಮಗ್ರಿಗಳು: ಹೆಸರು ಹಿಟ್ಟು, ಸಕ್ಕರೆ, ಬೆಣ್ಣೆ, ಎಲ್ಲಕಿ, ದ್ರಾಕ್ಷಿ, ಬಾದಾಮಿ, ಗೊಡಂಬಿ.

ಮಾಡುವ ವಿಧಾನ: ಹೆಸರು ಹಿಟ್ಟನ್ನು ಹಸಿ ವಾಸನೆ ಹೋಗುವವರೆಗೂ ತುಪ್ಪ ಹಾಕಿ ಚೆನ್ನಾಗಿ ಹುರಿದುಕೊಳ್ಳಬೇಕು.(ತುಪ್ಪ ಹೆಚ್ಚು ಬಳಸಿದಷ್ಟು ಒಳ್ಳೆಯದು), ಹಸಿ ವಾಸನೆ ಹೋದ ನಂತರ ಅದಕ್ಕೆ ಸಕ್ಕರೆ ಪೌಡರ್ ಹಾಕಿ ಮಿಶ್ರಣ ಮಾಡಬೇಕು. ನಂತರ ತುಪ್ಪದಲ್ಲಿ ಹುರಿದಿಟ್ಟುಕೊಂಡ ಗೋಡಂಬಿ, ದ್ರಾಕ್ಷಿ, ಬಾದಾಮಿ ಹಾಕಬೇಕು. ಹುರಿದುಕೊಂಡ ಮಿಶ್ರಣಕ್ಕೆ ಎಲ್ಲಕ್ಕಿ ಪೌಡರ್ ಹಾಕಿ ಮಿಶ್ರಣ ಮಾಡಿ ಉಂಡೆ ಕಟ್ಟಬಹುದು. ಹೆಸರು ಹಿಟ್ಟಿನ ಉಂಡೆ ಬೇಸನ್ ಉಂಡೆ ರುಚಿಕೊಡುತ್ತದೆ.

ಅಳ್ಳು ಉಂಡೆ

ಬೇಕಾಗುವ ಸಾಮಗ್ರಿಗಳು: ಅಳ್ಳು, ಬೆಲ್ಲ, ಶುಂಠಿ, ಪುಟಾಣಿ ಹಿಟ್ಟು.

ಮಾಡುವ ವಿಧಾನ: ಮೊದಲು ಒಂದ ಬಾಣಲೆಗೆ ಬೆಲ್ಲ, ಸ್ವಲ್ಪ ನೀರು ಹಾಕಿ ಉಂಡೆ ಆಕಾರದಲ್ಲಿ ಪಾಕ ಬರುವವರೆಗೂ ಬೇಯಿಸಿಕೊಳ್ಳಬೇಕು. ಒಂದೆಳೆ ಪಾಕ ಬಂದ ಮೇಲೆ ಪುಟಾಣಿ ಹಿಟ್ಟಿನಲ್ಲಿ ಮಿಶ್ರಣ ಮಾಡಿಟ್ಟುಕೊಂಡ, (ಪುಟಾಣಿ ಹಿಟ್ಟು ಬಳಸದಿದ್ದರು ನಡೆಯುತ್ತದೆ) ಅಳ್ಳಿಗೆ ರುಚಿಗೆ ಬೇಕಾಗುವಷ್ಟು ಶುಂಠಿ, ಎಲಕ್ಕಿ ಪೌಡರ್ ಹಾಕಿ ಪಾಕದಲ್ಲಿ ಮಿಶ್ರಣ ಮಾಡಿ ಉಂಡೆಗಳನ್ನು ಕಟ್ಟಬಹುದು. ಪಾಕ ತಣ್ಣಗಾಗುವಷ್ಟರಲ್ಲಿ ಉಂಡೆಗಳನ್ನು ತಯಾರಿಸಿಕೊಳ್ಳಬೇಕು. ಬೆಲ್ಲದ ಬದಲು ಸಕ್ಕರೆಯನ್ನೂ ಬಳಸಬಹುದು.

ಗೋಧಿ ಹಿಟ್ಟಿನ ಉಂಡೆ

ಬೇಕಾಗುವ ಸಾಮಗ್ರಿಗಳು: ತುಪ್ಪ, ಗೋಧಿ ಹಿಟ್ಟು, ಸಕ್ಕರೆ, ಎಲ್ಲಕ್ಕಿ, ಗೋಡಂಬಿ, ದ್ರಾಕ್ಷಿ.

ಮಾಡುವ ವಿಧಾನ: ಒಂದು ಬಾಣಲೆಗೆ ಒಂದು ಕಪ್ ಕರಗಿಸಿದ ತುಪ್ಪ ಹಾಕಿ ಕಾಯಿಸಿಕೊಳ್ಳಬೇಕು. ಕಾದ ತುಪ್ಪಕ್ಕೆ ಗೋಡಂಬಿ ಹಾಕಿ ಸ್ವಲ್ಪ ಹುರಿದುಕೊಳ್ಳಬೇಕು. ನಂತರ ನಾಲ್ಕು ಕಪ್ಪ ಗೋಧಿ ಹಿಟ್ಟು ಹಾಕಿಕೊಂಡು ಸಣ್ಣ ಪ್ರಮಾಣದ ಉರಿಯಲ್ಲಿ ಹುರಿದುಕೊಳ್ಳಬೇಕು. ನಂತರ ಕಾಲಕಪ್ಪಿನಷ್ಟು ಇನ್ನಷ್ಟು ತುಪ್ಪ ಹಾಕಿ ಹುರಿದುಕೊಳ್ಳಬೇಕು. ಹುರಿದುಕೊಂಡ ನಂತರ ಒಲೆ ಆರಿಸಿ ಬಾಣಲೆ ಕೆಳಗಿಟ್ಟುಕೊಂಡು ಹುರಿದುಕೊಂಡ ಗೋಧಿ ಹಿಟ್ಟಿನ ಮಿಶ್ರಣಕ್ಕೆ ಎಲ್ಲಕ್ಕಿ ಪುಡಿ, ಸ್ವಲ್ಪ ಸ್ವಲ್ಪ ಸಕ್ಕರೆ ಪುಡಿ ಹಾಕಿ ಮಿಶ್ರಣ ಮಾಡಬೇಕು. (ನಾಲ್ಕು ಕಪ್ಪು ಗೋಧಿ ಹಿಟ್ಟಿಗೆ ನಾಲ್ಕು ಕಪ್ಪ ಸಕ್ಕರೆ ಬಳಬೇಕು) ಉಂಡೆ ಕಟ್ಟಲು ಬರುವ ಹಾಗೆ ಮಿಶ್ರಣ ಮಾಡಬೇಕು. ಮಿಶ್ರಣ ಮಾಡಿದ ನಂತರ ದ್ರಾಕ್ಷಿ ಹಾಕಿ ಉಂಡೆಗಳನ್ನು ತಯಾರಿಸಿಕೊಳ್ಳಬಹುದು.

ಶೇಂಗಾ ಉಂಡೆ

ಬೇಕಾಗುವ ಸಾಮಗ್ರಿಗಳು: ಶೇಂಗಾ, ಒಣಕೊಬ್ಬರಿ, ಬಿಳಿ ಎಳ್ಳು, ಒಣಶುಂಠಿ, ಎಲಕ್ಕಿ, ಬೆಲ್ಲ, ಪುಟಾಣಿ ಹಿಟ್ಟು.

ಮಾಡುವ ವಿಧಾನ: ಮೊದಲು ಕಾದ ಬಾಣಲೆಯಲ್ಲಿ ನಮಗೆ ಬೇಕಾಗುವಷ್ಟು ಪ್ರಮಾಣದಲ್ಲಿ ಶೇಂಗಾ ಕಾಳನ್ನು ಹುರಿದುಕೊಳ್ಳಬೇಕು. ಅರ್ಧ ಕಪ್‌ನಷ್ಟು ಬಿಳಿ ಎಳ್ಳು ಹುರಿದುಕೊಳ್ಳಬೇಕು. ನಂತರ ತುರಿದಿಟ್ಟುಕೊಂಡ ಒಂದು ಒಣಕೊಬ್ಬರಿ ಪೌಡರ್ ಹುರಿದುಕೊಳ್ಳಬೇಕು. ಹುರಿದಿಟ್ಟುಕೊಂಡ ಶೇಂಗಾ ಕಾಳಿನ ಮೇಲಿನ ಸಿಪ್ಪೆ ಸ್ವಚ್ಛ ಮಾಡಿಕೊಂಡು ಒಂದು ಸುತ್ತ ಮಿಕ್ಸರ್ ಜಾರ್‌ನಲ್ಲಿ ಹಾಕಿ ಪೌಡರ್ ಮಾಡಿಕೊಳ್ಳಬೇಕು. ನಂತರದಲ್ಲಿ ಒಂದು ಬಾಣಲೆಯಲ್ಲಿ ಉಂಡಿ ಕಟ್ಟಲು ಬೇಕಾಗುವಷ್ಟು ಬೆಲ್ಲವನ್ನು ಉಂಡೆ ಆಕಾರಕ್ಕೆ ಬರುವ ಹಾಗೆ ಪಾಕ ಮಾಡಿಕೊಳ್ಳಬೇಕು. ಪಾಕ ಬರುವವರೆಗೂ ಬೇಯಿಸಬೇಕು. ಪಾಕ ಬಂದಮೇಲೆ ಅದಕ್ಕೆ ಮಿಶ್ರಣ ಮಾಡಿಟ್ಟುಕೊಂಡ ಶೇಂಗಾ ಪೌಡರ್‌ಗೆ ಕೊಬ್ಬರಿ ಪೌಡರ್, ಶುಂಠಿ, ಎಲ್ಲಕ್ಕಿ ಮಿಶ್ರಣ, ಪುಟಾಣಿ ಹಿಟ್ಟಿನ ಪೌಡರ್, ಬಿಳಿ ಎಳ್ಳನ್ನು ಪಾಕದಲ್ಲಿ ಹಾಕಿ ಮಿಶ್ರಣ ಮಾಡಿ ಉಂಡಿ ಕಟ್ಟಬಹುದು.

THE BIGGEST INDEPENDENCE SALE
ON ELECTRONICS & HOME APPLIANCES
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
GIRIAS
LOWEST PRICES OF THE YEAR
Upto 75% OFF
ಎಕ್ಸ್‌ಚೇಂಜ್ ಬೊನಾಂಜಾ
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು.
ಎಕ್ಸ್‌ಚೇಂಜ್ ಮೇಲೆ
ಕ್ಯಾಶ್ ಬ್ಯಾಕ್ ಬೊನಾಂಜಾ
UPTO 20%*
ಯಾವುದೇ ಮೊಬೈಲ್ ಖರೀದಿಸಿ ಮತ್ತು ಪಡೆಯಿರಿ
5G MOBILES ₹10,990 ಮೇಲ್ಪಟ್ಟು
10% CASH BACK
ಫ್ಲಾಟ್ 83% ರಿಯಾಯಿತಿ*
₹3,999 ಮೌಲ್ಯದ LAPCARE BT HEAD PHONE ಖರೀದಿಯ ಮೇಲೆ
ಯಾವುದೇ ಲ್ಯಾಪ್‌ಟಾಪ್ ಖರೀದಿಸಿ ಮತ್ತು ಪಡೆಯಿರಿ
₹27,999 ಮೇಲ್ಪಟ್ಟು
10% CASH BACK
ಫ್ಲಾಟ್ 85% ರಿಯಾಯಿತಿ*
₹7,999 ಮೌಲ್ಯದ ZEBRONICS SMART WATCH ಖರೀದಿಯ ಮೇಲೆ
BIGGEST OPEN BOX SALE
ತ್ವರೆಮಾಡಿ !!! ಸೀಮಿತ ಸ್ಟಾಕ್ಸ್
LG 55 ಓಎಲ್‌ಇಡಿ 4K SMART TV
SPECIAL PRICE ₹1,09,990
ನಿಗೂಢ ವೆಚ್ಚಗಳು ಇಲ್ಲ
SAMSUNG 55 ಓಎಲ್‌ಇಡಿ 4K SMART TV
SPECIAL PRICE ₹99,990
ನಿಗೂಢ ವೆಚ್ಚಗಳು ಇಲ್ಲ
SAMSUNG 70 4K ULTRA HD SMART ಎಲ್‌ಇಡಿ
SPECIAL PRICE ₹69,990
ನಿಗೂಢ ವೆಚ್ಚಗಳು ಇಲ್ಲ
SAMSUNG 385 LTR TWIN COOLING PLUS™ DOUBLE DOOR REFRIGERATOR
SPECIAL PRICE ₹39,990
ನಿಗೂಢ ವೆಚ್ಚಗಳು ಇಲ್ಲ
NEW LAUNCH QLED
50% OFF
Model | Price | EMI
55 QLED | ₹37,960 | ₹3,163
65 QLED | ₹59,760 | ₹4,980
ಯಾವುದೇ ಎಲ್.ಇ.ಡಿ ಟಿವಿ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 48% ರಿಯಾಯಿತಿ*
₹13,490 ಮೌಲ್ಯದ PHILIPS SOUNDBAR ಖರೀದಿಯ ಮೇಲೆ
ಯಾವುದೇ ರೆಫ್ರಿಜರೇಟರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 42% ರಿಯಾಯಿತಿ*
₹13,990 ಮೌಲ್ಯದ KAFF CHIMNEY ಖರೀದಿಯ ಮೇಲೆ
ಯಾವುದೇ ವಾಷಿಂಗ್ ಮೆಷಿನ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 31% ರಿಯಾಯಿತಿ*
₹880 ಮೌಲ್ಯದ VIJAYALAKSHMI DRY IRON ಖರೀದಿಯ ಮೇಲೆ
ಯಾವುದೇ ಡ್ರೈಯರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 62% ರಿಯಾಯಿತಿ*
₹3,990 ಮೌಲ್ಯದ NIRLEP 4 PCS COOKWARE SET ಖರೀದಿಯ ಮೇಲೆ
ಯಾವುದೇ ಡಿಶ್ವಾಶರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 39% ರಿಯಾಯಿತಿ*
₹990 ಮೌಲ್ಯದ BUTTERFLY NON STICK COOKWARE ಖರೀದಿಯ ಮೇಲೆ
ಯಾವುದೇ ಏರ್ ಕಂಡಿಷನರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 48% ರಿಯಾಯಿತಿ*
₹39,900 ಮೌಲ್ಯದ 43 SMART UHD 4K LED ಖರೀದಿಯ ಮೇಲೆ
ಯಾವುದೇ ಮೈಕ್ರೋವೇವ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 32% ರಿಯಾಯಿತಿ*
₹1,650 ಮೌಲ್ಯದ V-GUARD ROOM HEATER ಖರೀದಿಯ ಮೇಲೆ
ಯಾವುದೇ ಕಿಚನ್ ಅಪ್ಲೈಯನ್ಸಸ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 85% ರಿಯಾಯಿತಿ*
₹20,000 ಮೌಲ್ಯದ FIRE-BOLTT SMART WATCH ಖರೀದಿಯ ಮೇಲೆ
ಯಾವುದೇ ಹೋಮ್ ಥಿಯೇಟರ್/ಸೌಂಡ್ ಬಾರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 50% ರಿಯಾಯಿತಿ*
₹5,490 ಮೌಲ್ಯದ PHILIPS PARTY SPEAKER ಖರೀದಿಯ ಮೇಲೆ
1 ಇ.ಎಮ್.ಐ ಉಚಿತ*
FINANCE POWERED BY Groww
0% EMI
MIN PRODUCT VALUE ₹10,000
5% INSTANT DISCOUNT* SBI card
#Min. Trxn.: ₹15,000: Max. Discount: ₹3,000 per card. Valid only on EMI Trxn. Validity: 01 Aug - 31 Aug 2024. T&C Apply
MobiKwik
3% ಕ್ಯಾಶ್ ಬ್ಯಾಕ್* on UPI
MINIMUM TRANSACTION ₹1000
MAXIMUM CASHBACK UPTO ₹750
LG
ಎಲ್ಲಾ ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು*
BT SPEAKER INDUCTION COOKER STEAM IRON KETTLE DRY IRON
LG SAMSUNG SONY Panasonic Haier IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo OPPO ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR BAJAJ Crompton V-GUARD ZEBRONICS KAFF OZONE
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 । ಅತ್ತಿಬೆಲೆ 99009 77747 । ಆರ್.ಟಿ.ನಗರ 91080 65665 । ಆನೇಕಲ್ 9036289556 । ಇಂದಿರಾನಗರ 9035499255 । ಉತ್ತರಹಳ್ಳಿ 90362 89563 । ಕತ್ರಿಗುಪ್ಪೆ 9035499288 । ಕನಕಪುರ ಮುಖ್ಯ ರಸ್ತೆ 90082 20739 । ಕುಣಿಗಲ್ 90362 89546 । ಕೆಂಗೇರಿ 99009 77712 । ಕೆಆರ್ ಪುರಂ 9019929881 । ಕೋರಮಂಗಲ 90354 11200 । ಕೋಲಾರ 90082 20791 । ಗಾಂಧಿನಗರ 9035499311 । ಗೌರಿಬಿದನೂರು 90354 99244 । ಚನ್ನಪಟ್ಟಣ 9035023186 । ಚಿಂತಾಮಣಿ 90362 89552 । ಚಿಕ್ಕಜಾಲ 95918 32080 । ಚಿಕ್ಕಬಳ್ಳಾಪುರ 9591561669 । ಜಯನಗರ 90354 99077 । ಜಾಲಹಳ್ಳಿ ಕ್ರಾಸ್ 9008220804 । ತಿಪಟೂರು 90362 89548 । ತುಮಕೂರು 90082 18009 । ದೊಡ್ಡಬಳ್ಳಾಪುರ 77602 12888 । ನಾಗರಭಾವಿ 90354 99191 । ನೆಲಮಂಗಲ 9606922798 । ಬಾಗೇಪಲ್ಲಿ 9036289562 । ಬನಶಂಕರಿ 9035499199 । ಬನ್ನೇರುಘಟ್ಟ ರೋಡ್ 9035422500 । ಬಸವನಗುಡಿ 90354 99244 । ಬಾಗೇಪಲ್ಲಿ 9036289562 । ಭಾರ್ತಿಯಾ ಮಾಲ್ 70900 00981 । ಮಾದನಾಯಕನಹಳ್ಳಿ 90362 89550 । ಮತ್ತಿಕೆರೆ 90352 22377 । ಮಲ್ಲೇಶ್ವರಂ 90354 99233 । ಮಾಗಡಿರಸ್ತೆ 90362 89557 । ಮಾರತ್‌ಹಳ್ಳಿ 90354 99011 । ಮಾಲೂರು 9036984484 । ಮೈಸೂರು ರಸ್ತೆ 90354 99188 । ಯಲಹಂಕ 9036001315 । ರಾಜಾಜಿನಗರ 9035499144 । ರಾಮನಗರ 9606922697 । ವಿಜಯನಗರ 96069 22795 । ಶಿರಾ 9035023188 । ಸದಾಶಿವನಗರ 9035499088 । ಸಹಕಾರನಗರ 90199 29882 । ಹಿರಿಯೂರು 9035023185 । ಹೆಚ್‌ಆರ್‌ಬಿಆರ್ ಲೇಔಟ್ 90354 99177 । ಹೆಬ್ಬಗೋಡಿ 90350 50023 । ಹೆಸರಘಟ್ಟ ಮುಖ್ಯ ರಸ್ತೆ 90362 89551 । ಹೊಸಕೋಟೆ 90362 89545 । ಹೊಸೂರು 04344 243633 । ಹೊಸೂರು ರಸ್ತೆ 9035499022
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆಗೆ / ಬಿಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ವಿನಿಮಯ ಕೊಡುಗೆ. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ.
161 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಗಡಿಯಲ್ಲಿ ದೋಣಿ ನಂಬಿ ಬದುಕು

● ಇಮಾಮ್‌ಹುಸೇನ್ ಗೂಡುನವರ

ಜುಗೂಳ(ಬೆಳಗಾವಿ ಜಿಲ್ಲೆ): 'ಪ್ರವಾಹದಾಗ ಕೃಷ್ಣಾ ನದಿ ಉಕ್ಕಿ ಹರಿತಿರ್ತೇತಿ. ನೀರಿನ ಸೆಳವಿಗೆ ಸಿಕ್ಕು, ಒಮ್ಮಿಂದೊಮ್ಮೆ ದೋಣಿ ಅಲುಗಾಡಿದಂಗ್ ಆಗ್ತೇತಿ. ಒಂದು ವೇಳೆ ದೋಣಿ ಪಲ್ಟಿ ಆದ್ರ, ಗಂಡ್ಮಕ್ಕು ಹೆಂಗೋ ಈಜ್ಕೊಂತ ದಡ ಸೇರ್ತಿವಿ. ಆದ್ರ ಹೆಣ್ಮಕ್ಕು ಮತ್ತು ವಯಸ್ಸಾದಾವ್ರ ಇದ್ರ, ಅವರ ಕತಿ ಏನ್ರೀ...'

ಕಾಗವಾಡ ತಾಲ್ಲೂಕಿನ ಜುಗೂಳ ಗ್ರಾಮಸ್ಥ ದಯಾನಂದ ಮಿಣಚೆ ಅವರು ಸಂಕಷ್ಟ ತೋಡಿಕೊಂಡಿದ್ದು ಹೀಗೆ. ಜುಗೂಳ ಮತ್ತು ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಖಿದ್ರಾಪುರ ಅಕ್ಕಪಕ್ಕದಲ್ಲಿವೆ. ಒಂದು ಬದಿಯಿಂದ ಇನ್ನೊಂದು ಬದಿ ಹೋಗಲು 2 ಕಿ.ಮೀ ಅಂತರವಿದೆ. ಎರಡೂ ಕಡೆಯ ಗ್ರಾಮಸ್ಥರಿಗೆ ದೋಣಿಯೇ ಆಸರೆ.

'ಜುಗೂಳದಿಂದ ಖಿದ್ರಾಪುರಕ್ಕೆ ಹೋಗಲು ನೇರ ರಸ್ತೆ ಸಂಪರ್ಕವಿಲ್ಲ. ರಾಜಾಪುರ ಬ್ಯಾರೇಜ್ ಮಾರ್ಗವಾಗಿ 8 ಕಿ.ಮೀ ಸಂಚರಿಸಿ, ಖಿದ್ರಾಪುರ ತಲುಪಬಹುದು. ಮಳೆಗಾಲದಲ್ಲಿ ಆ ಬ್ಯಾರೇಜ್ ಮುಳುಗುವುದರಿಂದ 40 ಕಿ.ಮೀ ಸುತ್ತು ಬಳಸಿ ಸಂಚರಿಸುವುದು ಅನಿವಾರ್ಯ. ಕೃಷಿ ಕೆಲಸ, ದೇವರ ದರ್ಶನ ಅಲ್ಲದೇ ಬೇರೆ ಬೇರೆ ಕೆಲಸಕ್ಕೆ ನಾವು ಖಿದ್ರಾಪುರಕ್ಕೆ ಹೋಗುತ್ತೇವೆ. ದೋಣಿ ಬಿಟ್ಟು ಬೇರೆ ಮಾರ್ಗವಿಲ್ಲ' ಎಂದು ಗ್ರಾಮಸ್ಥರು ತಿಳಿಸಿದರು.

'ಕೆಲವರ ಜಮೀನು ಖಿದ್ರಾಪುರದಲ್ಲಿ ಮತ್ತು ಅಲ್ಲಿನ ಕೆಲವರ ಜಮೀನು ಜುಗೂಳದಲ್ಲಿ ಇವೆ. ಕೃಷಿ ಕೆಲಸಕ್ಕೆ ಎರಡೂ ಕಡೆಯವರು ಪ್ರತಿ ದಿನ ದೋಣಿಯಲ್ಲಿ ಹೋಗಬೇಕು' ಎಂದು ಜುಗೂಳ ಗ್ರಾಮಸ್ಥ ದಯಾನಂದ 'ಪ್ರಜಾವಾಣಿ'ಗೆ ತಿಳಿಸಿದರು.

'ಪರ್ಯಾಯ ಮಾರ್ಗಕ್ಕಾಗಿ ಸರ್ಕಾರಕ್ಕೆ ಒತ್ತಾಯಿಸಿದ್ದೇವೆ. ರಾಜ್ಯ ಸರ್ಕಾರವು ₹20.86 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಾಣ ಕಾರ್ಯ ಕೈಗೊಂಡಿತು. 6 ವರ್ಷಗಳಾದರೂ ಇನ್ನೂ ಪೂರ್ಣಗೊಂಡಿಲ್ಲ' ಎಂದರು.

ಕಾಗವಾಡ ತಾಲ್ಲೂಕಿನ ಜುಗೂಳ ಗ್ರಾಮಸ್ಥರು ಲೈಫ್ ಜಾಕೆಟ್ ಧರಿಸದೆಯೇ ದೋಣಿಯಲ್ಲಿ ಸಂಚರಿಸಿದರು —ಪ್ರಜಾವಾಣಿ ಚಿತ್ರ

ದೋಣಿಯಲ್ಲಿ ಸಂಚರಿಸುವವರ ಹಿತದೃಷ್ಟಿಯಿಂದ ಪ್ರತಿ ಗ್ರಾಮ ಪಂಚಾಯಿತಿಗೆ ತಲಾ 20 ಲೈಫ್ ಜಾಕೆಟ್ ನೀಡಿದ್ದೇವೆ. ಅವುಗಳ ಕಡ್ಡಾಯ ಬಳಕೆಗೆ ಸೂಚಿಸಿದ್ದೇವೆ

ರಾಜೇಶ ಬುರ್ಲಿ
ತಹಶೀಲ್ದಾರ್, ಕಾಗವಾಡ

ಅನ್ನಪೂರ್ಣೇಶ್ವರಿ ಫೌಂಡೇಷನ್ ದೋಣಿ ವ್ಯವಸ್ಥೆ ಕಲ್ಪಿಸಿದೆ. ಸರ್ಕಾರವೂ ಪ್ರತ್ಯೇಕ ದೋಣಿ ವ್ಯವಸ್ಥೆ ಕಲ್ಪಿಸಬೇಕು. ಇಲ್ಲವೇ ಸೇತುವೆ ಪೂರ್ಣಗೊಳಿಸಬೇಕು

ಉಮೇಶ ಪಾಟೀಲ
ಗ್ರಾಮ ಪಂಚಾಯಿತಿ ಸದಸ್ಯ

ಸುಧಾ, ಮಯೂರ ಓದಿರಿ

ಸಂತ್ರಸ್ತರ ಅಹವಾಲು ಆಲಿಸಿದ ತಹಶೀಲ್ದಾರ್

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ನಾರಾಯಣಪುರ ಜಲಾಶಯದಿಂದ ಹೆಚ್ಚುವರಿ ನೀರನ್ನು ಕೃಷ್ಣಾ ನದಿಗೆ ಹರಿಸುತ್ತಿರುವುದರಿಂದ ತಾಲ್ಲೂಕಿನ ತವದ ಗಡ್ಡಿಯಲ್ಲಿ ಉಂಟಾಗಿದ್ದ ಪ್ರವಾಹಪೀಡಿತ ಪ್ರದೇಶಕ್ಕೆ ತಹಶೀಲ್ದಾರ್ ಶಂಶಾಲಂ ನಾಗಡದಿನ್ನಿ ಗುರುವಾರ ಭೇಟಿ ನೀಡಿ ಸಂತ್ರಸ್ತರ ಅಹವಾಲು ಆಲಿಸಿದರು.

ವರದಿ ಪರಿಣಾಮ

'ಪ್ರಜಾವಾಣಿ'ಯ ಗುರುವಾರದ ಸಂಚಿಕೆಯಲ್ಲಿ 'ನಡುಗಡ್ಡೆ ಜನರ ನೆರವಿಗೆ ಬಾರದ ಆಡಳಿತ' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಗೊಂಡಿತ್ತು. ಸಂತ್ರಸ್ತ ಅಮರೇಶ ಅವರು ನೆರೆಯಿಂದಾಗಿ ಜನ ಅನುಭವಿಸುತ್ತಿರುವ ತೊಂದರೆ ಕುರಿತು ತಹಶೀಲ್ದಾರ್ ಅವರಿಗೆ ಮನವರಿಕೆ ಮಾಡಿಕೊಟ್ಟರು.

'ನಮಗೆ ಶಾಶ್ವತ ಸ್ಥಳಾಂತರ ಬೇಡ. ನಾವು ಶೀಲಹಳ್ಳಿಯಲ್ಲಿ ಮನೆ ಮಾಡಿಕೊಂಡಿದ್ದೇವೆ. ಮಳೆಗಾಲ ಮತ್ತು ಪ್ರವಾಹ ಸಂದರ್ಭದಲ್ಲಿ ನಡುಗಡ್ಡೆ ಸಂಪರ್ಕ ಕಡಿತಗೊಂಡು ಬೆಳೆ ನಷ್ಟದಿಂದ ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ. ಸೇತುವೆ ನಿರ್ಮಿಸಿ ಅಥವಾ ಬೇರೆ ಕಡೆಗೆ ಫಲವತ್ತಾದ ಜಮೀನು ಕೊಡಿಸಬೇಕು' ಎಂದು ಸಂತ್ರಸ್ತರು ಒತ್ತಾಯಿಸಿದರು.

'ಪ್ರವಾಹ ಕಡಿಮೆ ಆದ ತಕ್ಷಣ ಕೃಷಿ ಮತ್ತು ಕಂದಾಯ ಅಧಿಕಾರಿಗಳ ಜಂಟಿ ಸಮೀಕ್ಷೆಗೆ ಕಳುಹಿಸಲಾಗುವುದು. ಭೂಮಿ ಕೊಚ್ಚಿ ಹೋಗಿರುವ, ಬೆಳೆ ನಷ್ಟಕ್ಕೆ ಒಳಗಾಗಿರುವ ವಾಸ್ತವ ವರದಿ ಸಂಗ್ರಹಿಸಲಾಗುತ್ತದೆ. ಪ್ರವಾಹ ಸಂದರ್ಭ ನದಿ ದಾಟುವುದು ಅಪಾಯಕಾರಿಯಾಗಿದ್ದು, ಅಂತಹ ಸಾಹಸಕ್ಕೆ ಮುಂದಾಗಬಾರದು. ನಿಮ್ಮ ಸಮಸ್ಯೆ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ತಹಶೀಲ್ದಾರ್ ಭರವಸೆ ನೀಡಿದರು.

ರೈಲುಗಳ ಸಂಚಾರ ರದ್ದು

ಹುಬ್ಬಳ್ಳಿ: ಕರ್ನಾಟಕ ಹಾಗೂ ಗೋವಾ ಗಡಿಯ ಬ್ರಿಗಾಂಜ ಘಾಟ್‌ನಲ್ಲಿನ ಸೊನಾಲಿಮ್ ಹಾಗೂ ದೂದ್‌ಸಾಗರ್ ರೈಲ್ವೆ ನಿಲ್ದಾಣಗಳ ನಡುವೆ ಸರಕು ಸಾಗಣೆ ರೈಲು ಹಳಿ ತಪ್ಪಿದ ಕಾರಣ ಯಶವಂತಪುರ–ವಾಸ್ಕೊ ಡ ಗಾಮ ನಡುವಿನ 17309 ಹಾಗೂ 17310 ಸಂಖ್ಯೆಯ ರೈಲುಗಳ ಸಂಚಾರ ಆಗಸ್ಟ್ 10ರಂದು ರದ್ದಾಗಿದೆ.

ಭಾಗಶಃ ರದ್ದು: ಶುಕ್ರವಾರ ಶಾಲಿಮಾರ್‌ನಿಂದ ಹೊರಟ್ಟಿದ್ದ 18047 ಸಂಖ್ಯೆ ರೈಲು ಹುಬ್ಬಳ್ಳಿಯ ಎಸ್‌ಎಸ್‌ಎಸ್ ನಿಲ್ದಾಣದಲ್ಲಿ ನಿಲುಗಡೆಯಾಗಿ, 18048 ಸಂಖ್ಯೆಯ ರೈಲು ಆಗಸ್ಟ್ 11ರಂದು ಇಲ್ಲಿಂದಲೇ ಹೊರಡಲಿದೆ. ಹುಬ್ಬಳ್ಳಿ ಹಾಗೂ ವಾಸ್ಕೊ ಡ ಗಾಮ ನಡುವಿನ ಸಂಚಾರ ಭಾಗಶಃ ರದ್ದಾಗಿದೆ.

ವಿಶೇಷ ರೈಲು ಸಂಚಾರ: ರಜಾ ದಿನಗಳಲ್ಲಿ ಹುಬ್ಬಳ್ಳಿ ಹಾಗೂ ಬೆಂಗಳೂರು ನಡುವೆ ಪ್ರಯಾಣಿಕರ ದಟ್ಟಣೆ ನಿಯಂತ್ರಿಸಲು ವಿಶೇಷ ರೈಲು ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ಹುಬ್ಬಳ್ಳಿ- ಎಸ್‌ಎಂವಿಟಿ ಬೆಂಗಳೂರು ಒನ್ ವೇ ಎಕ್ಸ್‌ಪ್ರೆಸ್ ವಿಶೇಷ ರೈಲು (07314) ಆಗಸ್ಟ್ 14ರಂದು ಬೆಳಿಗ್ಗೆ 11 ಗಂಟೆಗೆ ಹುಬ್ಬಳ್ಳಿಯಿಂದ ಹೊರಟು ರಾತ್ರಿ 8 ಗಂಟೆಗೆ ಬೆಂಗಳೂರು ತಲುಪಲಿದೆ. ಹಾವೇರಿ, ಹರಿಹರ, ದಾವಣಗೆರೆ, ಅರಸಿಕೆರೆ ಹಾಗೂ ತುಮಕೂರು ನಿಲ್ದಾಣಗಳ ಮೂಲಕ ಸಾಗುವ ರೈಲಿನಲ್ಲಿ 18 ಬೋಗಿಗಳು ಇರಲಿವೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

ಕರ್ನಾಟಕ ಸರ್ಕಾರ

ಪುರಸಭೆ ಕಾಯಾಲಯ, ಹಗರಿಬೊಮ್ಮನಹಳ್ಳಿ–583212

ಮಹಾತ್ಮಗಾಂಧಿ ರಸ್ತೆ, ರಾಮನಗರ, ಜಿಲ್ಲೆ: ವಿಜಯನಗರ ರಾಜ್ಯ : ಕರ್ನಾಟಕ.
ದೂರವಾಣಿ:08397–238358. Email: itstaff_ulb_hbhalli@yahoo.in
Web: www.hagaribommanahallitown.mrc.gov.in

ಸಂಖ್ಯೆ: ತಾಂತ್ರಿಕ/ಕಾಮಗಾರಿ/ಟೆಂಡರ್:2024–25 ದಿನಾಂಕ : 08.08.2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2024–25ನೇ ಸಾಲಿನ ಪುರಸಭಾ ನಿಧಿ ಅನುದಾನದಲ್ಲಿ ಮಂಜೂರಾಗಿರುವ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ನಾಗರೀಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ತಿದ್ದುಪಡಿ ಅಧಿನಿಯಮ 2001 ರ ಪ್ರಕಾರ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ / ಅಧೀಕೃತ ಏಜೆನ್ಸಿದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಕ್ಯುಮೆಂಟ್ ನಿಬಂಧನೆಗೊಳಪಟ್ಟಂತೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ, ಇಡೆಂಟ್ ಸಂಖ್ಯೆಗಳು ಈ ಕೆಳಗಿನಂತಿರುತ್ತವೆ.

Work Indent Number: DMA/2024-25/OW/WORK_INDENT22917. **Estimate Cost (Lakhs):** 402.51. **EMD Amount(Lakhs):** 6.038. **Pre bid meeting Date:** 22.08.2024. **Last Date And Time For Receipt Of Tenders:** 06.09.2024. **Last Date And Time For Opening Of Technical Bid:** 09.09.2024. **Last Date And Time For Opening Of Financial Bid:** 11.09.2024

ಮೇಲ್ಕಂಡ ಟೆಂಡರ್‌ಗಳಿಗೆ ಇ–ಪ್ರೊಕ್ಯೂರ್‌ಮೆಂಟ್‌ರಲ್ಲಿ ಟೆಂಡರ್ ದಾಖಲಾತಿಗಳಿಗಾಗಿ & ಷರತ್ತುಗಳಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು & ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಸರ್ಕಾರದಿಂದ ಹಂತ ಹಂತವಾಗಿ ಅನುದಾನ ಬಿಡುಗಡೆಯಾದಂತೆ ಕಾಮಗಾರಿಗಳ ಬಿಲ್‌ನ್ನು ಪಾವತಿಸಲಾಗುವುದು ಮತ್ತು ಒಂದು ವೇಳೆ ನಿಗಧಿ ಪಡಿಸಿದ ದಿನಾಂಕಗಳು ರಜಾ ದಿನಗಳೆನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು, ಹೆಚ್ಚಿನ ಮಾಹಿತಿಗಾಗಿ **http://hagaribommanahallitown.mrc.gov.in** ರಲ್ಲಿ ಅಥವಾ ಈ ಕಛೇರಿಯ ಮುಖ್ಯಾಧಿಕಾರಿಗಳನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ ಹಗರಿಬೊಮ್ಮನಹಳ್ಳಿ
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ ಕಾರ್ಯಾಲಯ ಹಗರಿಬೊಮ್ಮನಹಳ್ಳಿ

ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/181

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆ.ಆರ್. ಪುರ ವಿಭಾಗ, ಹಳೇ ಮದ್ರಾಸ್ ರಸ್ತೆ, ಕೆ.ಆರ್. ಪುರ, ಬೆಂಗಳೂರು–560 036.

ಸಂ: ಕಾಪಾಅ/ಕೆಆರ್‌ಪಿ/ಟೆಂಡ್/04/2024–25 ದಿನಾಂಕ:09.08.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಕೆ.ಆರ್. ಪುರ ವಿಭಾಗ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕೆಳಕಂಡ ವಿವಿಧ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಾರ್ಡ್ ಸಂಖ್ಯೆ	ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇ.ಎಂ.ಡಿ (ರೂ.ಗಳಲ್ಲಿ)	ಕಾಮಗಾರಿಗಳ ಸಂಖ್ಯೆ
ಸಾಮಾನ್ಯ ಪ್ರವರ್ಗಕ್ಕೆ ಮೀಸಲಿರಿಸಿದ ಕಾಮಗಾರಿಗಳು:				
ವಿವಿಧ ವಾರ್ಡ್‌ಗಳಲ್ಲಿ ಫುಟ್‌ಪಾತ್ ನಿರ್ವಹಣಾ ಕಾಮಗಾರಿಗಳು				
1	86–ಚಳ್ಳಕೆರೆ, 87–ಹೊರಮಾವು, 88–ಕಲ್ಕೆರೆ, 89–ವಿಜಿನಾಪುರ, 90–ರಾಮಮೂರ್ತಿ ನಗರ, 92–ಬಸವನಪುರ, 95–ವಿಜ್ಞಾನ ನಗರ, 96–ಹೆಚ್‌ಎಎಲ್ ಏರ್‌ಪೋರ್ಟ್.	25.00 ತಲಾ	50,000 ತಲಾ	08
ರಸ್ತೆಗಳು ಮತ್ತು ಚರಂಡಿಗಳ ನಿರ್ವಹಣೆಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ಒದಗಿಸುವುದು.				
2	86–ಚಳ್ಳಕೆರೆ, 87–ಹೊರಮಾವು, 88–ಕಲ್ಕೆರೆ, 92–ಬಸವನಪುರ, 93– ದೇವಸಂದ್ರ, 94–ಎ. ನಾರಾಯಣಪುರ, 96–ಹೆಚ್‌ಎಎಲ್ ಏರ್‌ಪೋರ್ಟ್.	30.00 ತಲಾ	60,000 ತಲಾ	07
ಮಳೆಗಾಲದ ಅವಧಿಗಾಗಿ ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪನೆ.				
3	86–ಚಳ್ಳಕೆರೆ, 87–ಹೊರಮಾವು, 88–ಕಲ್ಕೆರೆ, 89–ವಿಜಿನಾಪುರ, 91–ಕೆ. ಆರ್. ಪುರ, 92–ಬಸವನಪುರ, 93–ದೇವಸಂದ್ರ, 95– ವಿಜ್ಞಾನ ನಗರ, 96–ಹೆಚ್‌ಎಎಲ್ ಏರ್‌ಪೋರ್ಟ್	5.00 ತಲಾ	12,500 ತಲಾ	09
4	ಕೆಆರ್ ಪುರ ವಿಧಾನಸಭಾ ಕ್ಷೇತ್ರದ ವಾರ್ಡ್ ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿ.	165.00	2,47,500	01
ಪರಿಶಿಷ್ಟ ಜಾತಿ ಪ್ರವರ್ಗಕ್ಕೆ ಮೀಸಲಿರಿಸಿದ ಕಾಮಗಾರಿಗಳು:				
ವಿವಿಧ ವಾರ್ಡ್‌ಗಳಲ್ಲಿ ಫುಟ್‌ಪಾತ್ ನಿರ್ವಹಣಾ ಕಾಮಗಾರಿಗಳು				
5	93–ದೇವಸಂದ್ರ, 94–ಎ. ನಾರಾಯಣ ಪುರ.	25.00 ತಲಾ	25,000 ತಲಾ	02
ರಸ್ತೆಗಳು ಮತ್ತು ಚರಂಡಿಗಳ ನಿರ್ವಹಣೆಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ಒದಗಿಸುವುದು.				
6	89–ವಿಜಿನಾಪುರ, 90–ರಾಮಮೂರ್ತಿ ನಗರ, 95–ವಿಜ್ಞಾನ ನಗರ.	30.00 ತಲಾ	30,000 ತಲಾ	03
ಮಳೆಗಾಲದ ಅವಧಿಗಾಗಿ ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪನೆ.				
7	90–ರಾಮಮೂರ್ತಿ ನಗರ.	5.00	6,250	01
ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ ಮೀಸಲಿರಿಸಿದ ಕಾಮಗಾರಿಗಳು:				
ವಿವಿಧ ವಾರ್ಡ್‌ಗಳಲ್ಲಿ ಫುಟ್‌ಪಾತ್ ನಿರ್ವಹಣಾ ಕಾಮಗಾರಿಗಳು				
8	91 – ಕೆ. ಆರ್. ಪುರ	25.00	25,000	01
ರಸ್ತೆಗಳು ಮತ್ತು ಚರಂಡಿಗಳ ನಿರ್ವಹಣೆಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ಒದಗಿಸುವುದು.				
9	91 – ಕೆ. ಆರ್. ಪುರ	30.00	30,000	01
ಮಳೆಗಾಲದ ಅವಧಿಗಾಗಿ ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪನೆ.				
10	94 – ಎ. ನಾರಾಯಣಪುರ	5.00	6,250	01
			ಒಟ್ಟು ಕಾಮಗಾರಿಗಳು	**34**

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆ / ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **17.08.2024 ರ ಸಂಜೆ 4.00 ಗಂಟೆಯವರೆಗೆ.** 3) ಪೂರ್ವಭಾವಿ ಸಭೆ ದಿನಾಂಕ: **19.08.2024 ರ ಬೆಳಿಗ್ಗೆ 11.30 ಗಂಟೆಗೆ.** 4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **26.08.2024 ರ ಸಂಜೆ 4.00 ಗಂಟೆಯವರೆಗೆ.** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **27.08.2024 ರ ಸಂಜೆ 4.30 ಗಂಟೆಗೆ.** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **31.08.2024 ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: www.kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆ.ಆರ್. ಪುರ ವಿಭಾಗ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಆಯುಕ್ತರ ಕಛೇರಿ, ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.
ಇ–ಮೇಲ್: bcwd.hostels@karnataka.gov.in

ಸಂಖ್ಯೆ: BCWD-12022/4/2024-BCWD_HOSTEL-BCWD ದಿನಾಂಕ:09.08.2024

ಪ್ರಕಟಣೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ (ಸಾಮಾನ್ಯ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಮತ್ತು ಪ.ಜಾ/ಪ.ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ 2024–25ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ

ಪ್ರವರ್ಗ–1, ಎಸ್.ಸಿ & ಎಸ್.ಟಿ	ರೂ.2.50 ಲಕ್ಷ
ಪ್ರವರ್ಗ–2ಎ, 2ಬಿ, 3ಎ, 3ಬಿ	ರೂ.1.00 ಲಕ್ಷ

- ವಿದ್ಯಾರ್ಥಿಗಳು https://shp.karnataka.gov.in/bcwd ಅನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು.
- ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **04.09.2024.**
- ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in ನ್ನು ನೋಡಬಹುದು.
- ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ / ತಾಲ್ಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು.

ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆಗಳು : 8050770004 ಮತ್ತು 8050770005

ಸಹಿ/– ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ವಾಸಾಸಂಇ/ವಾಪ್ರ/ಜೆಎ/1390/2024–25

ಪುರಸಭೆ ಕಾರ್ಯಾಲಯ, ಶಿಕಾರಿಪುರ–577427

ದೂರವಾಣಿ ಸಂ: 08187–22222, 08187–223861,
e web: www.shikaripuratown.gov.in
e-mail: itstaff_ulb_shikaripur@yahoo.com

ಸಂಖ್ಯೆ:ಶಿಪುರ/ಸಿಬ್ಬಂದಿ/ಇ ಟೆಂಡರ್/15/2024–25 ದಿ: 08.08.2024

"ಮರು ಟೆಂಡರ್ ಪ್ರಕಟಣೆ"
(ಕರ್ನಾಟಕ ಸರ್ಕಾರದ ಸಾರ್ವಜನಿಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಶಿಕಾರಿಪುರ ಪುರಸಭೆಯ ಒಣ ತ್ಯಾಜ್ಯ ನಿರ್ವಹಣೆಗಾಗಿ ಮೆಟರೀಯಲ್ ರಿಕವರಿ ಫೆಸಿಲಟಿಗಳನ್ನು (MRF) ಸ್ಥಾಪಿಸಲು ಸ್ವಚ್ಛ ಭಾರತ್ ಮಿಷನ್ 2.00 ಯೋಜನೆ, ಈ ಕೆಳಕಂಡ ಕಾಮಗಾರಿಯ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 2000ರ ಪ್ರಕಾರ ಪ್ರಸಕ್ತ ಬ್ಲಾಕ್ ಅವಧಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಯನ್ನು ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ಸ್ ರಂತೆ ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರರು/ಏಜನ್ಸಿಯವರು ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದು ಭಾಗವಹಿಸಬಹುದಾಗಿದೆ

Sl.No. 1. Indent number: DMA/2024-25/OW/WORK_INDENT 18846 /CALL-2 **Amount (in Lakh):** 67.50

*) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ:22.08.2024 ಸಮಯ: ಸಂಜೆ:5.30 ಗಂಟೆ ವರೆಗೆ *)ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 26.08.2024 ಸಮಯ ಸಂಜೆ:5.30 ಗಂಟೆ ವರೆಗೆ. *)ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿ:28.08.2024 ಸಮಯ : ಬೆಳಗ್ಗೆ 10.30 ಗಂಟೆಗೆ. *)ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.08.2024 ಸಮಯ : ಬೆಳಗ್ಗೆ : 10.30 ಗಂಟೆಗೆ

ಸಹಿ/– ಮುಖ್ಯಾಧಿಕಾರಿ ಪುರಸಭೆ, ಶಿಕಾರಿಪುರ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/24–25/43/08/439

ಕರ್ನಾಟಕ ಸರಕಾರ (ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ)

ಉಪ ನಿರ್ದೇಶಕರು (ಗ್ರಾ.ಕೈ)ರವರ ಕಚೇರಿ, ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯತ್, ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ: 109, ಹುಬ್ಬಳ್ಳಿ ರೋಡ, ಗದಗ–582103. ದೂರವಾಣಿ : 08372–220506.
Mail : ddkvi-gadag@karnatakaindustry.gov.in

ಸಂ.ಜಿಪಂಗ/ಗ್ರಾಕೈ/ಜಿವಯೋ/ಉಖ/ಟೆ/2024–25 ದಿನಾಂಕ : 09–08–2024

ಟೆಂಡರ್ ಪ್ರಕಟಣೆ

ಜಿಲ್ಲಾ ವಲಯ ಯೋಜನೆಯಡಿ ವೃತ್ತಿನಿರತ ಕುಶಲಕರ್ಮಿಗಳಿಗೆ ಈ ಕೆಳಕಂಡ ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡಲು ಅಧಿಕೃತ ಪೂರೈಕೆದಾರರಿಂದ ಇ–ಪ್ರೊಕ್ಯೂರ್‌ಮೆಂಟ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ನಂ: IC/2024-25/IND0061

ಕ್ರ. ಸಂ.	ಸಾಮಗ್ರಿ ವಿವರಗಳು	ಸಂಖ್ಯೆ	ಉಪಕರಣ ಖರೀದಿಗಾಗಿ ನಿಗದಿಪಡಿಸಿದ ಮೊತ್ತ (ರೂ. ಲಕ್ಷಗಳಲ್ಲಿ)	ನಿಗದಿ ಪಡಿಸಿದ ಇಎಂಡಿ (ರೂ.ಗಳಲ್ಲಿ)
1	ಹೊಲಿಗೆಯಂತ್ರ	371	29.68	74200.00
2	ಬಡಿಗತನ ಉಪಕರಣಗಳು	97	7.76	19400.00
3	ಕ್ಷೌರಿಕ ಉಪಕರಣಗಳು	89	7.12	17800.00
4	ಧೋಬಿ ಉಪಕರಣಗಳು	29	2.32	5800.00
	ಒಟ್ಟು	**586**	**46.88**	**117200.00**

ಮಾದರಿ ಸಾಮಗ್ರಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **05–09–2024** ಸಾಯಂಕಾಲ 5.00 ಗಂಟೆ, ಕೆಪಿಪಿಪಿ ಪೋರ್ಟನಲ್ಲಿ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **04–09–2024** ಮಧ್ಯಾಹ್ನ 3.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **09–09–2024** ಬೆಳಿಗ್ಗೆ 11.00 ಗಂಟೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **11–09–2024** ಬೆಳಿಗ್ಗೆ 11.00 ಗಂಟೆ.

ಟೆಂಡರ್ ವಿವರಗಳನ್ನು **https://kppp.karnataka.gov.in** ನಿಂದ ಪಡೆದು ಆಸಕ್ತ ಪೂರೈಕೆದಾರರು ಟೆಂಡರ್‌ಗೆ ನಿಗದಿಪಡಿಸಿದ ಷರತ್ತುಗಳನ್ವಯ ಅಗತ್ಯ ದಾಖಲೆಗಳನ್ನು ಕೆಪಿಪಿಪಿ ಪೋರ್ಟನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ನಿಯಮಾನುಸಾರ ಅರ್ಜಿ ಶುಲ್ಕ ಹಾಗೂ ನಿಗದಿಪಡಿಸಿದ ಇ.ಎಂ.ಡಿ ಪಾವತಿಸಿ ಇ-ಸಂಗ್ರಹಣೆಯಲ್ಲಿ ಮಾತ್ರ ಟೆಂಡರ್ ಸಲ್ಲಿಸಬೇಕು. ಟೆಂಡರಿನಲ್ಲಿ ಭಾಗವಹಿಸುವವರು ಮಾದರಿ ಸಾಮಗ್ರಿಗಳನ್ನು ನಿಗದಿಪಡಿಸಿದ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಮಾದರಿ ಸಾಮಗ್ರಿಗಳ ಗುಣಮಟ್ಟ ನಿಗದಿಪಡಿಸಿದ ಸ್ಪೆಸಿಫಿಕೇಷನ್ ಪ್ರಕಾರ ಸರಿಯಾಗಿ ಇದ್ದಲ್ಲಿ & ನಿಗದಿಪಡಿಸಿದ ಎಲ್ಲಾ ದಾಖಲೆಗಳನ್ನು ಸಲ್ಲಿಸಿದ & ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದುವ ಟೆಂಡರ್‌ದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುವದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯ ಮುಖ್ಯಸ್ಥರನ್ನು ಸಂಪರ್ಕಿಸಬಹುದಾಗಿದೆ. (ದೂರವಾಣಿ ಸಂಖ್ಯೆ : **08372–220506**).

ಸಹಿ/– ಉಪ ನಿರ್ದೇಶಕರು(ಗ್ರಾಕೈ)
ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯತ್, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/148/2024–25

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿರವರ ಕಛೇರಿ, ಜಿಲ್ಲಾ ಪಂಚಾಯತ್, ಮಂಡ್ಯ. ದೂ: 08232–2240273,
E-mail: dho.mandya@gmail.com
ಸಂಖ್ಯೆ:ಸರಬ/15/2024–25 ದಿನಾಂಕ:08.08.2024

ಇ–ಟೆಂಡರ್ ಪ್ರಕಟಣೆ – (E-PROCUREMENT TENDER)

ವಿಷಯ: 2024–25 ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಮಂಡ್ಯ ರವರ ಆಧೀನದಲ್ಲಿ ಬರುವ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಖಾಸಗಿ 12 ಎ.ಸಿ.ವಾಹನಗಳನ್ನು ವಾಹನ ಚಾಲಕರೊಂದಿಗೆ ಹೊರಗುತ್ತಿಗೆ ಮೂಲಕ ಬಾಡಿಗೆ ಪಡೆಯಲು e-Procurement ಮೂಲಕ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ:ಆಕುಕ 143 ಎಫ್‌ಆರ್‌ಸಿ 2022 ಬೆಂಗಳೂರು ದಿ:23.03.2023. 2.ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ರವರ ಸುತ್ತೋಲೆ ಪತ್ರ ಸಂಖ್ಯೆ:ಎಸ್‌ಹೆಚ್ ಟಿಬಿ/ಹೆಚ್‌ಟಿಎಸ್/14/2013–14 ದಿ:06.07.2016. 3.ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 30 ಶಿವಾನಿ 2019, ಬೆಂಗಳೂರು, ದಿನಾಂಕ:31.03.2022 4. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ರವರು ಇದೇ ಕಡತದ ಕಂಡಿಕೆ ಸಂಖ್ಯೆ 18 ರಲ್ಲಿ ದಿನಾಂಕ:10.07.2024 ರಂದು ಅನುಮೋದಿಸಿರುವಂತೆ

2024–25 ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಮಂಡ್ಯ ರವರ ಅಧೀನದಲ್ಲಿ ಬರುವ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಖಾಸಗಿ ಎ.ಸಿ.ವಾಹನಗಳನ್ನು ವಾಹನ ಚಾಲಕರೊಂದಿಗೆ ಹೊರಗುತ್ತಿಗೆ ಮೂಲಕ ಬಾಡಿಗೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ **(KTPP)** 1999 ನಿಯಮಗಳು 2000 ರ ಪ್ರಕಾರ **E-Procurement** ಮೂಲಕ ಎನ್.ಹೆಚ್.ಎಂ ಮಾರ್ಗಸೂಚಿಯಂತೆ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವಿಳಾಸ **http://eproc.karnataka.gov.in** ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ–ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು, ಟೆಂಡರ್ ಇ.ಎಂ.ಡಿ ಮೊತ್ತ ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮವಹಿಸುವುದು, ಟೆಂಡರ್ ದಿನಾಂಕಗಳ ವಿವರ ಈ ಕೆಳಕಂಡಂತೆ ಇರುತ್ತದೆ. ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಮೂಲಕ (1) ಟೆಂಡರ್ ಪ್ರಕಟಣೆ ದಿನಾಂಕ : **ಸಂಖ್ಯೆ:ಸರಬ/15/2024–25 ದಿನಾಂಕ:08.08.2024**. (2) ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : **08.08.2024**. (3) ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ : **23.08.2024 ರ ಸಂಜೆ 05:30 ಗಂಟೆ ಒಳಗೆ.** (4) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : **ಜಿಲ್ಲಾ ಅ.ಕು.ಕ ಅಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ ದಿನಾಂಕ:26.08.2024 ಬೆಳಿಗ್ಗೆ 11–00 ಗಂಟೆ ನಂತರ.** (5) ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : **ತಾಂತ್ರಿಕ ದಾಖಲಾತಿಗಳನ್ನು ತೆರೆದ ನಂತರದ ದಿನಗಳಲ್ಲಿ ತೆರೆಯಲಾಗುವುದು.** (6) ಟೆಂಡರ್‌ನ ಒಟ್ಟು ಅಂದಾಜು ಮೊತ್ತ : **ರೂ.58,00,000/– (ಐವತ್ತೆಂಟು ಲಕ್ಷ ರೂಗಳು)**. (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : **ರೂ.1,45,000/–**. (8) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಆವರಣ, ಮಂಡ್ಯ, ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 08232–224027**

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಮಂಡ್ಯ ಜಿಲ್ಲೆ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/239/2024–25

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ,
ಬಿ.ಸಿ.ಪಾಟೀಲ್ ಲೇಔಟ್, ಹೊಸಪೇಟೆ ರೋಡ್, ಕೊಪ್ಪಳ – 583231

ಸಂಖ್ಯೆ:ಕೊನಪ್ರಾ/ಠೇವಣಿ/2024–25 /339 ದಿನಾಂಕ:07–08–2024

ಅಲ್ಪಾವಧಿಯ ಟೆಂಡರ್ ಅಧಿಸೂಚನೆ
(ವಿದ್ಯುನ್ಮಾನ ಟೆಂಡರಿಂಗ್ ಮೋಡ್ ಮೂಲಕ ಮಾತ್ರ)

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳವು ರಾಷ್ಟ್ರೀಯ ಮತ್ತು ಖಾಸಗಿ ವಲಯದ ಬ್ಯಾಂಕಗಳಿಂದ ಕಂಪನಿಯ ಹೆಚ್ಚುವರಿ ನಿಧಿಯ ಸ್ಥಿರ ಠೇವಣಿಯಲ್ಲಿ ಹೂಡಿಕೆ ಮಾಡಲು ಸ್ಪರ್ಧಾತ್ಮಕ ಬಡ್ಡಿದರವನ್ನು ಉಲ್ಲೇಖಿಸಲು ಪ್ರಸ್ತಾವನೆ ಯನ್ನು ಆಹ್ವಾನಿಸುತ್ತದೆ.

ಟೆಂಡರ್ ಎಲೆಕ್ಟ್ರಾನಿಕ್ಸ್ ಮೋಡ್‌ನಲ್ಲಿರಬೇಕು ಮತ್ತು ಅನುಮೋದಿತ ತಾಂತ್ರಿಕ ಬಿಡ್‌ಗಳಿಗೆ ಮಾತ್ರ ಹಣಕಾಸಿನ ಬಿಡ್ ತೆರೆಯಲಾಗುತ್ತದೆ.

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್– www.kppp.karnataka.gov.in ನಿಂದ ಅಥವಾ ಕೆಳಗೆ ಸಹಿ ಮಾಡಿದವರಿಂದ ವೈಯಕ್ತಿಕವಾಗಿ ಪಡೆಯಬಹುದು.

ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:**16–08–2024 ಮಧ್ಯಾಹ್ನ 4–30** ರವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17–08–2024 ಮಧ್ಯಾಹ್ನ 12–00 ಗಂಟೆಗೆ.** ತಾಂತ್ರಿಕ ಬಿಡ್ ಅಂತಿಮಗೊಳಿಸಿದ ನಂತರ ವಾಣಿಜ್ಯ ಬಿಡ್ ತೆರೆಯುವ ದಿನಾಂಕ : **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.** ವ್ಯಕ್ತಿಯನ್ನು ಸಂಪರ್ಕಿಸಿ: **ಶ್ರೀ ಯೋಗಾನಂದ ಆರ್.** ಹುದ್ದೆ: **ಆಯುಕ್ತರು.** ದೂರವಾಣಿ: **9980761981.** ಟೆಂಡರ್ ತೆರೆಯು ಸ್ಥಳ: **ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ, ಬಿ.ಸಿ.ಪಾಟೀಲ್ ಲೇಔಟ್, ಹೊಸಪೇಟೆ ರೋಡ್, ಕೊಪ್ಪಳ – 583231**

ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/244/ಕೆಎಸ್‌ಎಂಸಿಎ/2024–25

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ/ಟೆ.ಪ್ರ/ತಾಸ/2024–25/707 ದಿನಾಂಕ:08.08.2024

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ದ್ವಿಲಕೋಟೆ

1) **ಕಾಮಗಾರಿಗಳ ವಿವರ.:** ಸುರಪೂರ ತಾಲೂಕಿನ ಬನದೊಡ್ಡಿ ಗ್ರಾಮದಿಂದ ಜುಲಪುಲ ದೊಡ್ಡಿ ವರೆಗಿನ ರಸ್ತೆಗೆ ಸಿ.ಡಿ.ಗಳ ನಿರ್ಮಾಣ. 2) **ಲೆಕ್ಕ ಶೀರ್ಷಿಕೆ:** 2023–24ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆ 3) **ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ. ಮತ್ತು ಗರಿಷ್ಠ ರೂ. 60.00 ಲಕ್ಷ 4) **ಗುತ್ತಿಗೆದಾರರ ದರ್ಜೆ:** 3ನೇ ದರ್ಜೆ ಮೇಲ್ಪಟ್ಟು 5) **ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 12.08.2024 ರಿಂದ 20.08.2024 ಸಾಯಂಕಾಲ 4:00 ಗಂಟೆವರೆಗೆ 6) **ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶಿಲ್ಕು ಹಿಂದಿರುಗಿಸಲಾಗುವುದಿಲ್ಲಾ) 7) **ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 20.08.2024 ಸಾಯಂಕಾಲ 4:00 ಗಂಟೆವರೆಗೆ 8) **ಟೆಂಡರ ತೆರೆಯುವ ದಿನಾಂಕ ತಾಂತ್ರೀಕ:** 22.08.2024 ಬೆಳ್ಳಿಗೆ 11:00 ನಂತರ 9) **ಟೆಂಡರ ತೆರೆಯುವ ದಿನಾಂಕ ಆರ್ಥಿಕ:** 27.08.2024 ಬೆಳ್ಳಿಗೆ 11:00 ನಂತರ 10) **ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. 11) **ಅಂತರಜಾಲ ತಾಣದ ವಿಳಾಸ:**https://kppp.karnataka.gov.in

ಸೂಚನೆ :– ಟೆಂಡರರಿಗೆಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/136/ಕೆ.ಎಸ್.ಎಂ.ಸಿ.&ಎ/2024–25

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
Email:itstaff_ulb_channarayapatna@yahoo.co.in, Phone:08176-255411

ಸಂ:ಮುಅ/ಪುಸಚ/ಇಂ.ವಿ/ಸಾಅನಿ/ಎಸ್‌ಎಫ್‌ಸಿ/15ನೇಹಣಕಾಸು/2024–25 ದಿನಾಂಕ:07/08/2024

:ಟೆಂಡರ್ ಪ್ರಕಟಣೆ: : ಇ ಪ್ರೊಕ್ಯೂರ್‌ಮೆಂಟ್ ಮೂಲಕ :

ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಪುರಸಭಾ ನಿಧಿ ಹಾಗೂ ಎಸ್‌ಎಫ್‌ಸಿ ಮುಕ್ತ ನಿಧಿ, 15ನೇಹಣಕಾಸು ಹಾಗೂ 2023–24ನೇ ಸಾಲಿನ ಸಾಮಾನ್ಯ ಅವತರಣ ಅನುದಾನದಡಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಅಧ್ಯಾದೇಶ 2000ದ ಅನ್ವಯ ಟೆಂಡರನ್ನು ಕರೆಯಲಾಗಿದ್ದು ಗುತ್ತಿಗೆದಾರರು ಇ–ಪ್ರೂಕ್ಯೂರಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:23/08/2024 ಸಂಜೆ 5.30 ಗಂಟೆಯಾಗಿದ್ದು ಕಾಮಗಾರಿಗಳು ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ಪುರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ದಿಕೋಶ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಮತ್ತು https://kppp.karnataka.gov.in ಪಡೆಯಬಹುದು ದೂರವಾಣಿ:08176–254544. ಕಾಮಗಾರಿಗಳ ಇಡೆಂಟ್ ವಿವರ ಕೆಳಕಂಡತಿದೆ:– **ಎಸ್‌ಎಫ್‌ಸಿ ಸಾಮಾನ್ಯ ಅವತರಣ ನಿಧಿ ಹಾಗೂ ಪುರಸಭಾ ನಿಧಿ 2023–24** ಕ್ರ.ಸಂ.1.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ್ ನಂ.01 ಗೂರಮಾರನಹಳ್ಳಿ ಬಡಾವಣೆಗೆ ನೀರು ಸರಬರಾಜು ಮಾಡುವ ಪೈಪ್ ಲೈನ್ ಅಳವಡಿಸುವ ಕಾಮಗಾರಿ. (DMA/2024-25/WS/WORK_INDENT24983) ಅಂದಾಜು ಮೊತ್ತ: 4.20 15ನೇಹಣಕಾಸು ನಿರ್ಬಂಧಿತ ಅನುದಾನ ಹಾಗೂ ಪುರಸಭಾ ನಿಧಿ 2024–25 2.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.01 ಗೂರಮಾರನಹಳ್ಳಿ ಬಡಾವಣೆಗೆ ಹಾಗೂ ಶ್ರೀರಾಮ ಬಡಾವಣೆಗೆ ಕುಡಿಯುವ ನೀರು ಸರಬರಾಜು ಮಾಡುವ ಪೈಪ್ ಲೈನ್ ಕಾಮಗಾರಿ. (DMA/2024-25/WS/WORK_INDENT24987) ಅಂದಾಜು ಮೊತ್ತ:13.50 3.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.02 ರ ರಾಮೇಶ್ವರ ಬಡಾವಣೆಯಲ್ಲಿ ಬೋರವೆಲ್ ಕೊರೆದು ಗ್ಯಾಸ್ ಗೋಡೌನ್ ನಿಂದ ರೈಲ್ವೆ ನಿಲ್ದಾಣದ ವರೆಗೆ ಕುಡಿಯುವ ನೀರು ಸರಬರಾಜು ಮಾಡುವ ಪೈಪ್ ಲೈನ್ ಕಾಮಗಾರಿ. (DMA/2024-25/WS/WORK_INDENT 24990) ಅಂದಾಜು ಮೊತ್ತ: 5.25 4.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.04ರ ಸರ್ಕಾರಿ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಮಳೆ ನೀರು ಕೋಯ್ಲು ಅಳವಡಿಸುವ ಕಾಮಗಾರಿ. (DMA/2024-25/OW/WORK_INDENT 24993) ಅಂದಾಜು ಮೊತ್ತ: 4.00 5.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.07ರಲ್ಲಿ ಬೋರವೆಲ್ ಕೊರೆದು ಪೈಪ್ ಲೈನ್ ಅಳವಡಿಸುವ ಕಾಮಗಾರಿ. (DMA/2024-25/WS/WORK_INDENT 24994) ಅಂದಾಜು ಮೊತ್ತ: 5.25 6.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.09ರ ವಿವಿಧ ಸ್ಥಳಗಳಲ್ಲಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ. (DMA/2024-25/WS/WORK_INDENT24998) ಅಂದಾಜು ಮೊತ್ತ: 3.25 7.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ10ರ ವಿವಿಧ ಸ್ಥಳಗಳಲ್ಲಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ. (DMA/2024-25/WS/WORK_INDENT25000) ಅಂದಾಜು ಮೊತ್ತ: 3.00 8.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ. 14 ರ ಕುಡಿಯುವ ನೀರಿನ ಸರಬರಾಜು ಬಿಟ್ಟು ಹೋದ ಸ್ಥಳಗಳಲ್ಲಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ. (DMA/2024-25/WS/WORK_INDENT25003) ಅಂದಾಜು ಮೊತ್ತ: 5.00 15ನೇಹಣಕಾಸು ಮುಕ್ತ ಅನುದಾನ ಹಾಗೂ ಪುರಸಭಾ ನಿಧಿ 2024–25 9.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.05 ರ ತಾಲ್ಲೂಕು ಪಂಚಾಯ್ತಿ ಪಕ್ಕದ ಗ್ರಂಥಾಲಯದ ಮುಂಭಾಗದ ರಸ್ತೆ ಅಭಿವೃದ್ದಿ ಕಾಮಗಾರಿ. (DMA/2024-25/RD/WORK_INDENT25008) ಅಂದಾಜು ಮೊತ್ತ: 6.80 10.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.08 ರ ಕದಂಬವೈನ್ಸ ಹಿಂಭಾಗದ ರಸ್ತೆ ಅಭಿವೃದ್ದಿ ಕಾಮಗಾರಿ. (DMA/2024-25/RD/WORK_INDENT25022) ಅಂದಾಜು ಮೊತ್ತ: 5.90 11.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.10 ರ ಸರಸ್ವತಿಪುರಂನ ಬಿ.ಎಂ. ರಸ್ತೆಯಿಂದ ರವಿಶೆಟ್ಟಿ ಮನೆಯವರೆಗೆ ರಸ್ತೆ ಅಭಿವೃದ್ದಿ ಕಾಮಗಾರಿ. (DMA/2024-25/RD/WORK_INDENT25023) ಅಂದಾಜು ಮೊತ್ತ: 5.60 12.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.11 ರ ಪೂರ್ಣಚಂದ್ರ ಶಾಲೆ ರಸ್ತೆಯ ವಾಸು ಮನೆ ರಸ್ತೆ ಅಭಿವೃದ್ದಿ ಕಾಮಗಾರಿ. (DMA/2024-25/RD/WORK_INDENT25025) ಅಂದಾಜು ಮೊತ್ತ: 11.80 13.ಕಾಮಗಾರಿ ಹೆಸರು: (ಪರಿಶಿಷ್ಟ ಪಂಗಡ) ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.12 ರ ಬಿ.ಎಂ ರಸ್ತೆಯಿಂದ ಮಧು ಎಂಟರ್‌ಪ್ರೈಸಸ್ ಮುಂಭಾಗದ ರಸ್ತೆ ಅಭಿವೃದ್ದಿ ಕಾಮಗಾರಿ. (DMA/2024-25/RD/WORK_INDENT25027) ಅಂದಾಜು ಮೊತ್ತ: 6.00 14.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.13 ರ ಗೂರನಹಳ್ಳಿ ಅರಳಿಮರ ರಸ್ತೆ ಅಭಿವೃದ್ದಿ ಕಾಮಗಾರಿ. (DMA/2024-25/RD/WORK_INDENT25030) ಅಂದಾಜು ಮೊತ್ತ:11.80 15.ಕಾಮಗಾರಿ ಹೆಸರು: ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ್ ನಂ.15 ರ ಮಸೀದಿ ಹಿಂಭಾಗ ಯುಜಿಡಿ ಮೇನ್ ಲೈನ್ ದುರಸ್ತಿ ಪಡಿಸುವ ಕಾಮಗಾರಿ. (DMA/2024-25/WS/WORK_INDENT25033) ಅಂದಾಜು ಮೊತ್ತ: 5.60 16.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.16 ರ ಶನಿದೇವರ ದೇವಸ್ಥಾನ ರಸ್ತೆ ಅಭಿವೃದ್ದಿ ಕಾಮಗಾರಿ ಮತ್ತು ಮಿನಿಮಾಸ್ಟ ಅಳವಡಿಸುವ ಕಾಮಗಾರಿ. (DMA/2024-25/OW/WORK_INDENT25035) ಅಂದಾಜು ಮೊತ್ತ: 8.10 ಎಸ್‌ಎಫ್‌ಸಿ ಮುಕ್ತ ಅನುದಾನ ಹಾಗೂ ಪುರಸಭಾ ನಿಧಿ 2024–25 17.ಕಾಮಗಾರಿ ಹೆಸರು:ಪುರಸಭಾ ವ್ಯಾಪ್ತಿಯ ವಾರ್ಡ ನಂ.17 ರ ವಿವಿಧ ಸ್ಥಳಗಳಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (DMA/2024-25/RD/WORK_INDENT25038) ಅಂದಾಜು ಮೊತ್ತ: 6.10 18.ಕಾಮಗಾರಿ ಹೆಸರು: (ಪರಿಶಿಷ್ಟ ಜಾತಿ) ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.18 ರ ವಿದ್ಯಾನಗರ 1ನೇಕ್ರಾಸ್ ನಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. (DMA/2024-25/OW/WORK_INDENT25042) ಅಂದಾಜು ಮೊತ್ತ: 5.00 19.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.19 ರ ಶ್ರೀದೇವಿ ನಗರದಲ್ಲಿ ಯುಜಿಡಿ ನಿರ್ಮಾಣ ಕಾಮಗಾರಿ. (DMA/2024-25/WS/WORK_INDENT25051) ಅಂದಾಜು ಮೊತ್ತ: 5.00 20.ಕಾಮಗಾರಿ ಹೆಸರು: (ಪರಿಶಿಷ್ಟ ಜಾತಿ) ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.20 ರ ವಳಗೇರಮ್ಮ ಕೆರೆಗೆ ಪೆನ್ಸಿಂಗ್ ಅಳವಡಿಸುವ ಕಾಮಗಾರಿ. (DMA/2024-25/OW/WORK_INDENT25053) ಅಂದಾಜು ಮೊತ್ತ:6.55 21.ಕಾಮಗಾರಿ ಹೆಸರು:ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.01 ಗೂರಮಾರನಹಳ್ಳಿ ಬಡಾವಣೆಗೆ ಹಾಗೂ ಶ್ರೀರಾಮ ಬಡಾವಣೆಗೆ ಕುಡಿಯುವ ನೀರು ಸರಬರಾಜು ಮಾಡುವ ಪೈಪ್ ಲೈನ್ ಮುಂದುವರೆದ ಕಾಮಗಾರಿ. (DMA/2024-25/WS/WORK_INDENT 25059) ಅಂದಾಜು ಮೊತ್ತ: 4.00 ಕಾಲಾವಧಿ: 3 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು ಕೆ.ಡಬ್ಲ್ಯೂ–1 ಸೂಚನೆ:– ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಮುಂದಿನ ದಿನಾಂಕವನ್ನು ಪರಿಗಣಿಸತಕ್ಕದ್ದು.

ಸಹಿ/–ಮುಖ್ಯಾಧಿಕಾರಿಗಳು,
ಪುರಸಭೆ ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/277/ಕೆಎಸ್‌ಎಂಸಿಎ/2024–25

ಕೆಆರ್‌ಎಸ್– ಅಮ್ಯೂಸ್‌ಮೆಂಟ್ ಪಾರ್ಕ್ ಸ್ಥಾಪನೆಗೆ ಟೆಂಡರ್: ಡಿ.ಕೆ.ಶಿವಕುಮಾರ್

ಡ್ಯಾಮ್‌ಗೆ ಧಕ್ಕೆಯಾಗದಂತೆ ಪಾರ್ಕ್ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕೆ.ಆರ್.ಎಸ್ ಅಣೆಕಟ್ಟೆಗೆ ಧಕ್ಕೆಯಾಗದಂತೆ, ಸುರಕ್ಷತಾ ಜಾಗವನ್ನು ಮೀಸಲಿಟ್ಟು, ಉಳಿದ 200 ಎಕರೆ ಜಾಗದಲ್ಲಿ 'ಅಮ್ಯೂಸ್‌ಮೆಂಟ್ ಪಾರ್ಕ್' ಸ್ಥಾಪಿಸಲಾಗುವುದು. ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಆರ್.ಎಸ್ ಬೃಂದಾವನ ಉದ್ಯಾನ ಅಭಿವೃದ್ಧಿ ಸಂಬಂಧ ಶುಕ್ರವಾರ ಸ್ಥಳ ಪರಿಶೀಲನೆ ನಡೆಸಿದ ಅವರು, 'ಬೃಂದಾವನ ಉದ್ಯಾನ ಮೇಲ್ದರ್ಜೆಗೆ ಏರಿಸುವ ಯೋಜನೆಯಲ್ಲೇ 'ಕಾವೇರಿ ಆರತಿ' ಕಾರ್ಯಕ್ರಮಕ್ಕೂ ಜಾಗ ಮೀಸಲಿಡಲು ಸೂಚಿಸಲಾಗಿದೆ' ಎಂದರು.

'ಸುಮಾರು ₹2 ಸಾವಿರ ಕೋಟಿ ವೆಚ್ಚದಲ್ಲಿ ಉದ್ಯಾನವನ್ನು ವಿಶ್ವದರ್ಜೆಗೇರಿಸುತ್ತೇವೆ. ಡಿಸ್ನಿಲ್ಯಾಂಡ್ ಯೋಜನೆಯನ್ನು ಮಾರ್ಪಡಿಸಿ, ಅಮ್ಯೂಸ್‌ಮೆಂಟ್ ಪಾರ್ಕ್ ಸ್ಥಾಪಿಸುತ್ತೇವೆ. ಎರಡು ಮೂರು ಪಂಚಾಯಿತಿಗಳನ್ನು ಸೇರಿಸಿ 'ಕಂಟ್ರೋಲ್ ಪ್ಲ್ಯಾನಿಂಗ್ ಕಮಿಟಿ' ರಚಿಸುತ್ತೇವೆ' ಎಂದರು.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಬೃಂದಾವನದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 'ಅಮ್ಯೂಸ್‌ಮೆಂಟ್ ಪಾರ್ಕ್' ಸ್ಥಾಪನೆ ಸಂಬಂಧ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಂದ ಮಾಹಿತಿ ಪಡೆದರು. ಜಿಲ್ಲಾ ಉಸ್ತುವಾರಿ ಸಚಿವ ಎನ್‌.ಚಲುವರಾಯಸ್ವಾಮಿ ಪಾಲ್ಗೊಂಡಿದ್ದರು

ಮೈಶುಗರ್ ಉಳಿಸಲು ಕ್ರಮ: 'ಮೈಶುಗರ್ ಸಕ್ಕರೆ ಕಾರ್ಖಾನೆಯಲ್ಲಿ ಪ್ರತಿ ದಿನ 10 ಸಾವಿರ ಟನ್ ಕಬ್ಬು ನುರಿಸಬೇಕೆಂಬುದು ನಮ್ಮ ಆಶಯ. ಆದರೆ 5 ಸಾವಿರ ಟನ್ ನುರಿಸಬೇಕೆಂದು ತಾಂತ್ರಿಕ ಸಮಿತಿ ತಿಳಿಸಿದೆ. ಎಥೆನಾಲ್ ಘಟಕ ಸೇರಿದಂತೆ ಎಲ್ಲವೂ ಕಾರ್ಯಾರಂಭವಾಗಿ ಸಂಸ್ಥೆ ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು. ನಾವು ದೊಡ್ಡ ಕಾರ್ಖಾನೆ ಮಾಡುವುದು ದೊಡ್ಡದಲ್ಲ. ಅದಕ್ಕೆ ತಕ್ಕಂತೆ ರೈತರು ಕಬ್ಬು ಬೆಳೆಯಲು ಉತ್ತೇಜಿಸಬೇಕು' ಎಂದು ಹೇಳಿದರು.

'ಬಿಳಿಗುಂಡ್ಲುವಿಗೆ ನಿಗದಿಯಂತೆ 50 ಟಿಎಂಸಿ ಅಡಿ ಬದಲು 96 ಟಿಎಂಸಿ ಹೆಚ್ಚುವರಿಯಾಗಿ ನೀರು ಹರಿಸಿದ್ದೇವೆ. ತಮಿಳುನಾಡು ಪಾಲಿನ 177 ಟಿಎಂಸಿ ಅಡಿ ನೀರಿನ ಪೈಕಿ ಈಗಾಗಲೇ 149 ಟಿಎಂಸಿ ಅಡಿ ನೀರನ್ನು ಹರಿಸಲಾಗಿದೆ. ನಮ್ಮ ಭಾಗದ ಎಲ್ಲಾ ಕೆರೆಗಳನ್ನು ತುಂಬಿಸಲು ಸೂಚಿಸಲಾಗಿದೆ' ಎಂದು ಹೇಳಿದರು.

'ಎಚ್‌ಡಿಕೆ ಎಂದಿಗೂ ರೈತರ ಪರ ನಿಂತಿಲ್ಲ'

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಕಾನೂನು ಮೂಲಕ ಹೋರಾಟ ನಡೆಸಿ ಅನುಮತಿ ಪಡೆದುಕೊಳ್ಳುತ್ತೇವೆ. ಈಗಾಗಲೇ ಪ್ರಧಾನಿ ಮತ್ತು ಕೇಂದ್ರ ಜಲಸಂಪನ್ಮೂಲ ಸಚಿವರ ಜತೆ ಮಾತುಕತೆ ನಡೆಸಿದ್ದೇನೆ. ಕೇಂದ್ರ ಸಚಿವ ಕುಮಾರಸ್ವಾಮಿ ಅನುಮತಿ ಕೊಡಿಸುವ ಅವಶ್ಯವಿಲ್ಲ ಎಂದು ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು.

ಕುಮಾರಸ್ವಾಮಿ ಅಧಿಕಾರದಲ್ಲಿದ್ದಾಗ ರೈತರ ಪರ ನಿಂತ ಉದಾಹರಣೆ ಇಲ್ಲ. ಅವರ ಬುಡುಬುಡುಕೆ ಮಾತುಗಳು ಬೇಕಿಲ್ಲ. ಹೊಸದಾಗಿ ಪಂಚೆ ಹಾಕಿದ್ದನ್ನು ಬಿಟ್ಟರೆ ಎಂದಿಗೂ ರೈತರ ಪರವಾಗಿಲ್ಲ ಎಂದು ಕುಟುಕಿದರು.

ಸಮುದ್ರಕ್ಕೆ ಸೇರುವ ನೀರನ್ನು ಉಳಿಸಿಕೊಳ್ಳಲು ಮೇಕೆದಾಟು ಯೋಜನೆಯ ಅವಶ್ಯಕತೆ ಇದೆ. ನಮ್ಮ ಲೆಕ್ಕದ ಪ್ರಕಾರ 71 ಟಿಎಂಸಿ ಅಡಿಯಷ್ಟು ನೀರು ಸಮುದ್ರದ ಪಾಲಾಗಿದ್ದು, ನಮ್ಮ ಮೇಕೆದಾಟು ಅಣೆಕಟ್ಟಿನ ಸಾಮರ್ಥ್ಯ ಕೇವಲ 66 ಟಿಎಂಸಿ ಅಡಿ. ಸಮುದ್ರಕ್ಕೆ ಹೋಗುತ್ತಿರುವ ಹೆಚ್ಚುವರಿ ನೀರನ್ನು ಬಳಸಿಕೊಳ್ಳಲು ಅನುಮತಿ ಕೇಳಿದ್ದೇವೆ ಎಂದರು.

'ಸುಳ್ಳುಸುದ್ದಿ ಹಬ್ಬಿಸುವವರಿಗೆ ಪ್ರವೇಶವಿಲ್ಲ'

ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

ಸಿರಿಗೆರೆ: 'ತರಳಬಾಳು ಬೃಹನ್ಮಠದ ಬಗ್ಗೆ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸು| ವುದನ್ನೇ ಕೆಲಸ ಮಾಡಿಕೊಂಡಿದ್ದಾರೆ. ಅಂಥ ಖದೀಮರಿಗೆ ಇನ್ನು ಮುಂದೆ ಮಠಕ್ಕೆ ಪ್ರವೇಶ ನೀಡುವುದಿಲ್ಲ' ಎಂದು ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಸಿರಿಗೆರೆ ಸಮೀಪದ ಕೊಳಹಾಳ್ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದ ಬಸವೇಶ್ವರ ದೇವಾಲಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸುಳ್ಳು ಸುದ್ದಿ ಹಬ್ಬಿಸುತ್ತಿರುವುದನ್ನು ನೋಡಿಕೊಂಡು ಮೌನವಾಗಿರಲು ಸಾಧ್ಯವಿಲ್ಲ. ಇಂತಹ ಪರಿಪಟವನ್ನು ಕೂಡಲೇ ನಿಲ್ಲಿಸಬೇಕು. ಘನತೆ ಹೊಂದಿರುವ ಪೀಠದ ವಿರುದ್ಧ ದಾವಣಗೆರೆಯ ರೆಸಾರ್ಟ್‌ನಲ್ಲಿ ಸಭೆ ನಡೆಸಿದ್ದು ನನಗೆ ನೋವು ತಂದಿದೆ. ಹಿರಿಯ ರಾಜಕಾರಣಿ ಶಾಮನೂರು ಶಿವಶಂಕರಪ್ಪ ಇಂತಹ ಸಭೆಯಲ್ಲಿ ಭಾಗವಹಿಸುತ್ತಾರೆ ಎಂದು ಭಾವಿಸಿರಲಿಲ್ಲ' ಎಂದರು.

'ನಮ್ಮ ಪೂರ್ವಾಶ್ರಮದ ಸಂಬಂಧಿಗಳಿಗೆ ನಾವು ಮಠದಿಂದ ಹಣಕಾಸಿನ ನೆರವು ನೀಡಿಲ್ಲ. ವೃದ್ಧಾಪ್ಯದ ಅಂಚಿನಲ್ಲಿದ್ದ ನಮ್ಮ ಪೂರ್ವಾಶ್ರಮದ ತಾಯಿ ಒಮ್ಮೆ ಭೇಟಿಯಾಗಿ ನಮಗೇ ₹ 25,000 ನೀಡಿದ್ದರು. ಏಕೆ ಎಂದು ಕೇಳಿದಾಗ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ತರಳಬಾಳು ಕೇಂದ್ರದಲ್ಲಿ ಕೈಗಡ ಪಡೆದಿದ್ದ ವಿಷಯ ತಿಳಿಸಿದರು. ಜನರ ಕಷ್ಟಕ್ಕೆ ನೆರವಾಗುವ ನಾವು ಪೂರ್ವಾಶ್ರಮದ ತಾಯಿ ಅನಾರೋಗ್ಯದ ಸಂದರ್ಭದಲ್ಲಿಯೂ ನೆರವು ನೀಡಿಲ್ಲ' ಎಂದು ಭಾವುಕರಾದರು.

'ನಾನು ಬೆಂಗಳೂರಿನ ಆಸ್ಪತ್ರೆಯೊಂದಕ್ಕೆ ದಾಖಲಾಗಿ ಚಿಕಿತ್ಸೆ ಪಡೆದಾಗ ವೈದ್ಯ ಶರಣ್ ಪಾಟೀಲ್ ಅವರು ಆಸ್ಪತ್ರೆ ವೆಚ್ಚ ಸ್ವೀಕರಿಸಲು ನಿರಾಕರಿಸಿದ್ದರು. ಆದರೂ ನಾನು ಬಡರೋಗಿಗಳ ಚಿಕಿತ್ಸೆಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ನಮಗೆ ಬಂದಿದ್ದ ಪಾದಕಾಣಿಕೆ ಹಣದಲ್ಲಿ ₹25 ಲಕ್ಷ ನೀಡಿದ್ದೆ' ಎಂದರು.

'ತರಳಬಾಳು ಮಠ ಮತ್ತು ಶಿಷ್ಯ ಸಮುದಾಯ ಜೇನುಗೂಡು ಇದ್ದಂತೆ. ಅದಕ್ಕೆ ಕಲ್ಲು ಹೊಡೆಯುವ ಪ್ರಯತ್ನವನ್ನು ಯಾರೂ ಮಾಡಬಾರದು. ನಮ್ಮ ಧರ್ಮ ಗುರುವಿನ ಪರವಾಗಿ ಸಾಮಾಜಿಕ ಚಿಂತಕರು, ಹೋರಾಟಗಾರರು, ರೈತರು ಸದಾ ನಿಲ್ಲುತ್ತಾರೆ' ಎಂದು ಸಾಧು ಸದ್ಧರ್ಮ ಸಂಘದ ಅಧ್ಯಕ್ಷ ಎಚ್.ಆರ್. ಬಸವರಾಜಪ್ಪ ತಿಳಿಸಿದರು.

ದೇವಾಲಯ ನಿರ್ಮಾಣ ತಪ್ಪಲ್ಲ

'ದೇವಸ್ಥಾನಗಳನ್ನು ಕಟ್ಟುವುದು, ದೇವರ ಪೂಜೆ ಮಾಡುವುದು ತಪ್ಪಲ್ಲ. ಈ ಕ್ರಮವನ್ನು ಬಸವಣ್ಣನವರು ಎಲ್ಲಿಯೂ ವಿರೋಧಿಸಿಲ್ಲ. ದೇಹವೇ ದೇವಾಲಯ ಎಂದು ಬಸವಣ್ಣ ಹೇಳಿದ್ದಾರೆಯೇ ವಿನಾ ದೇವಾಲಯ ನಿರ್ಮಾಣ ಮಾಡುವ ಮತ್ತು ಪೂಜೆಯ ಬಗ್ಗೆ ವಿರೋಧ ಮಾಡಿಲ್ಲ' ಎಂದು ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಮರು ಮೌಲ್ಯಮಾಪನ ಶುಲ್ಕ ಮರಳಿಸದಿರಲು ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿದ್ಯಾರ್ಥಿಗಳು ಗಳಿಸಿದ ಅಂಕಗಳಲ್ಲಿ ಬದಲಾವಣೆಯಾದರೂ ಇನ್ಮುಂದೆ ಮರು ಮೌಲ್ಯಮಾಪನದ ಶುಲ್ಕ ಮರುಪಾವತಿ ಮಾಡದಿರಲು ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ನಿರ್ಧರಿಸಿದೆ.

ವಿವಿಧ ಕೋರ್ಸ್‌ಗಳಿಗೆ ಸಂಬಂಧಿಸಿ, ವಿಟಿಯುನಲ್ಲಿ ಪ್ರತಿ ಸೆಮಿಸ್ಟರ್‌ನಲ್ಲಿ ಸುಮಾರು 12 ಲಕ್ಷ ಉತ್ತರ ಪತ್ರಿಕೆಗಳು ಮೌಲ್ಯಮಾಪನಕ್ಕೆ ಬರುತ್ತಿದ್ದವು. ಈ ಪೈಕಿ ಮರು ಮೌಲ್ಯಮಾಪನಕ್ಕೆ ಶೇ 6ರಷ್ಟು ಅರ್ಜಿ ಸಲ್ಲಿಕೆ ಆಗುತ್ತಿದ್ದವು. ಅದರಲ್ಲಿ ಶೇ 2ರಿಂದ 3ರಷ್ಟು ಉತ್ತರ ಪತ್ರಿಕೆಗಳಲ್ಲಿ ಅಂಕಗಳ ಬದಲಾವಣೆ ಆಗಿರುವುದು ಕಂಡುಬರುತ್ತಿತ್ತು. ಮರು ಮೌಲ್ಯಮಾಪನದಲ್ಲಿ ಶೇ 15ಕ್ಕಿಂತ ಅಧಿಕ ಅಂಕ ಬಂದಿದ್ದರೆ, ಮರು ಮೌಲ್ಯಮಾಪನ ಶುಲ್ಕ ಮರುಪಾವತಿಸಲಾಗುತ್ತಿತ್ತು.

ಆದರೆ, ಹೀಗೆ ಮರುಪಾವತಿಸಿದ್ದ ಶುಲ್ಕವನ್ನು ವಿದ್ಯಾರ್ಥಿಗಳು ಕ್ಲೇಮ್ ಮಾಡಿಕೊಳ್ಳದ್ದರಿಂದ ಆಯಾ ಎಂಜಿನಿಯರಿಂಗ್ ಕಾಲೇಜುಗಳ ಖಜಾನೆಯಲ್ಲೇ ಉಳಿದಿದೆ. ಹೀಗಾಗಿ ವಿದ್ಯಾರ್ಥಿಗಳ ಅಂಕಗಳಲ್ಲಿ ಬದಲಾವಣೆಯಾದರೂ, ಮರು ಮೌಲ್ಯಮಾಪನ ಶುಲ್ಕ ಮರುಪಾವತಿಸದಿರಲು ನಿರ್ಧರಿಸಲಾಗಿದೆ.

'ರಾಜ್ಯದ ವಿವಿಧ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕ್ಲೇಮ್ ಮಾಡದ ಮೊತ್ತ ಎಷ್ಟು ಉಳಿದಿದೆ ಎಂದು ತಿಳಿಯಲು ಆಡಿಟ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಆಡಿಟ್ ವರದಿ ಸಲ್ಲಿಕೆಯಾದ ನಂತರ. ಆ ಹಣವನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವಂತೆ ಆಯಾ ಕಾಲೇಜಿನವರಿಗೆ ಪತ್ರ ಬರೆಯುತ್ತೇವೆ' ಎಂದು ವಿಟಿಯು ಮೌಲ್ಯಮಾಪನ ಕುಲಸಚಿವ ಪ್ರೊ.ಟಿ.ಎನ್.ಶ್ರೀನಿವಾಸ 'ಪ್ರಜಾವಾಣಿ'ಗೆ ತಿಳಿಸಿದರು.

ಶುಲ್ಕ ಕಡಿತ: 'ಸ್ನಾತಕೋತ್ತರ ಮತ್ತು ಪಿಎಚ್‌.ಡಿ ಕೋರ್ಸ್‌ಗಳ ಮರು ಮೌಲ್ಯಮಾಪನಕ್ಕೆ ವಿಧಿಸುತ್ತಿದ್ದ ಶುಲ್ಕ ಕಡಿತಗೊಳಿಸಿದ್ದೇವೆ' ಎಂದು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಹೇಳಿದರು.

'ಸ್ನಾತಕೋತ್ತರ ಕೋರ್ಸ್‌ನ ಪ್ರತಿ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನ ಶುಲ್ಕ ₹3 ಸಾವಿರ ಇತ್ತು. ಈಗ ಅದನ್ನು ₹2 ಸಾವಿರಕ್ಕೆ ಇಳಿಸಿದ್ದೇವೆ. ಪಿಎಚ್‌.ಡಿ ಕೋರ್ಸ್‌ನ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನ ಶುಲ್ಕ ₹10 ಸಾವಿರದಿಂದ ₹5 ಸಾವಿರಕ್ಕೆ ಇಳಿದಿದೆ'.

'ಸ್ನಾತಕ ಕೋರ್ಸ್‌ಗಳ ಮರು ಮೌಲ್ಯಮಾಪನ ಶುಲ್ಕವು ಪ್ರತಿ ಉತ್ತರ ಪತ್ರಿಕೆಗೆ ₹600 ಇತ್ತು. ಅಂಕಗಳಲ್ಲಿ ಬದಲಾವಣೆಯಾದರೆ, ₹250 ಮರು ಪಾವತಿಸಲಾಗುತ್ತಿತ್ತು. ಸ್ನಾತಕ ಕೋರ್ಸ್‌ನ ಮರು ಮೌಲ್ಯಮಾಪನ ಶುಲ್ಕ ಕಡಿಮೆಯೇ ಇದೆ. ಹಾಗಾಗಿ ಅದನ್ನು ಇಳಿಸಿಲ್ಲ' ಎಂದರು.

ಆರೋಗ್ಯ ಕ್ಷೇತ್ರಕ್ಕೆ ಸಿಎಸ್‌ಆರ್ ನಿಧಿ: ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಪೊರೇಟ್ ಕಂಪನಿಗಳು ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್‌ಆರ್) ಆರೋಗ್ಯ ಕ್ಷೇತ್ರಕ್ಕೆ ವಿನಿಯೋಗಿಸಲು ಆದ್ಯತೆ ನೀಡಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸಿ-ಕ್ಯಾಂಪ್ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಕಾರ್ಪೊರೇಟ್ ಕಂಪನಿಗಳ ಸಭೆಯಲ್ಲಿ ಅವರು ಮಾತನಾಡಿದರು.

'ಜನಸಾಮಾನ್ಯರ ಆರೋಗ್ಯ ಸುರಕ್ಷತೆಗಾಗಿ ಇಲಾಖೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಹಲವು ರೋಗಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚಿ ಜನರ ಆರೋಗ್ಯ ರಕ್ಷಣೆಯತ್ತ ಗಮನ ಹರಿಸುತ್ತಿದ್ದೇವೆ. ಗ್ರಾಮೀಣ ಪ್ರದೇಶದ ಮನೆಗಳಿಗೆ ತೆರಳಿ ಜನರ ತಪಾಸಣೆ ನಡೆಸಿ, ಔಷಧಗಳನ್ನೂ ತಲುಪಿಸುತ್ತಿದ್ದೇವೆ. ಇಂತಹ ದೊಡ್ಡ ಯೋಜನೆಗಳಿಗೆ ಕೈಜೋಡಿಸಬೇಕು. ಸಿಎಸ್‌ಆರ್ ನಿಧಿಯ ಹೆಚ್ಚಿನ ಭಾಗ ನೀಡಿದರೆ ಆರೋಗ್ಯ ಕ್ಷೇತ್ರದಲ್ಲಿ ಇನ್ನಷ್ಟು ಸುಧಾರಣೆ ತರಬಹುದು' ಎಂದು ಸಲಹೆ ನೀಡಿದರು.

'ಗೃಹ ಆರೋಗ್ಯ ಕಾರ್ಯಕ್ರಮದಲ್ಲಿ ತಂತ್ರಜ್ಞಾನ ಬಳಕೆಯ ಅಗತ್ಯವಿದೆ. ಮಂಗನ ಕಾಯಿಲೆಯಂತಹ ರೋಗಗಳಿಗೆ ಔಷಧ ಕಂಡುಹಿಡಿಯಲು ಸಂಶೋಧನೆಗೆ ಒತ್ತು ನೀಡಿದ್ದೇವೆ. ಇಂತಹ ಕಾರ್ಯಗಳಿಗೆ ಸಿಎಸ್‌ಆರ್ ನಿಧಿ ಬಳಸಿಕೊಳ್ಳುತ್ತೇವೆ. ಮೊದಲ ಸಭೆಯಲ್ಲಿ ₹21 ಕೋಟಿ ದೊರಕಿತ್ತು' ಎಂದು ಅವರು ಹೇಳಿದರು.

ಇನ್ಫೊಸಿಸ್ ಫೌಂಡೇಷನ್, ಯುಎಸ್ ಏಡ್, ಜಿ.ಇ. ಹೆಲ್ತ್‌ಕೇರ್, ಬಾಷ್ ಗ್ಲೋಬಲ್ ಸಾಫ್ಟ್‌ವೇರ್ ಟೆಕ್ನಾಲಜೀಸ್, ಬಯೋಕಾನ್ ಫೌಂಡೇಷನ್ ಸೇರಿದಂತೆ ಹಲವು ಕಂಪನಿಗಳ ಪ್ರಮುಖರು ಭಾಗವಹಿಸಿದ್ದರು.

ಅಧ್ಯಕ್ಷ–ಉಪಾಧ್ಯಕ್ಷ ಚುನಾವಣೆ: ದಿನಾಂಕ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗ ನಗರಸಭೆ, ಕುಶಾಲನಗರ ಮತ್ತು ಬನ್ನೂರು ಪುರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಗೆ ದಿನಾಂಕ ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಚಿತ್ರದುರ್ಗದ ಸಯ್ಯದ್ ನಸ್ರುಲ್ಲಾ ಸೇರಿದಂತೆ 13 ಜನ, ಬನ್ನೂರಿನ ಎಸ್.ಭಾಗ್ಯ ಸೇರಿದಂತೆ 15 ಹಾಗೂ ಕುಶಾಲನಗರದ ಬಿ.ಜಯವರ್ಧನ ಸೇರಿದಂತೆ 16 ಚುನಾಯಿತ ಪ್ರತಿನಿಧಿಗಳು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ಚಿತ್ರದುರ್ಗ ನಗರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಇದೇ 26ರಂದು ಚುನಾವಣೆ ನಡೆಸಲಾಗುತ್ತದೆ. ಅಂತೆಯೇ, ಕೊಡಗು ಜಿಲ್ಲೆಯ ಕುಶಾಲನಗರ ಮತ್ತು ಮೈಸೂರು ಜಿಲ್ಲೆಯ ಬನ್ನೂರು ಪುರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆಗೆ ಕ್ರಮವಾಗಿ ಆಗಸ್ಟ್ 19 ಮತ್ತು ಸೆಪ್ಟೆಂಬರ್ 6ರಂದು ಚುನಾವಣೆ ನಡೆಸಲಾಗುತ್ತದೆ' ಎಂಬ ಮಾಹಿತಿ ನೀಡಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಅರ್ಜಿದಾರರ ಮನವಿ ಈಡೇರಿದ್ದು ಈ ಕುರಿತು ಹೆಚ್ಚಿನ ವಿಚಾರಣೆ ಅಗತ್ಯ ಇಲ್ಲ' ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಿಲೇವಾರಿ ಮಾಡಿತು. ಅರ್ಜಿದಾರರ ಪರ ವಕೀಲ ಎ. ಮೊಹಮ್ಮದ್ ತಾಹೀರ್ ಮತ್ತು ವರುಣ್ ಜೆ.ಪಾಟೀಲ ಅವರು ಹಾಜರಿದ್ದರು.

ಕೆಐಎಡಿಬಿ ಪ್ರಧಾನ ಕಚೇರಿಯಲ್ಲಿ ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧೆಡೆ ಕೈಗಾರಿಕಾ ಪ್ರದೇಶಗಳ ನಿರ್ಮಾಣಕ್ಕೆ ಸ್ವಾಧೀನ ಪಡಿಸಿಕೊಂಡ ಜಮೀನುಗಳಿಗೆ ರೈತರ ಹೆಸರಿನಲ್ಲಿ ಅನ್ಯರಿಗೆ ಪರಿಹಾರ ವಿತರಿಸಿ, ವಂಚಿಸಿರುವ ಪ್ರಕರಣದ ಕುರಿತು ತನಿಖೆ ಆರಂಭಿಸಿರುವ ಜಾರಿ ನಿರ್ದೇಶನಾಲಯ (ಇ.ಡಿ), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಪ್ರಧಾನ ಕಚೇರಿ ಮೇಲೆ ಶುಕ್ರವಾರ ದಾಳಿ ಮಾಡಿ, ಶೋಧ ನಡೆಸಿದೆ.

ಧಾರವಾಡದ ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ 2012ರಲ್ಲಿ ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳಿಗೆ ಒಮ್ಮೆ ಪರಿಹಾರ ನೀಡಲಾಗಿತ್ತು. 2021ರಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ 14 ಮಂದಿಗೆ ₹ 19.9 ಕೋಟಿ ಪರಿಹಾರ ವಿತರಿಸಲಾಗಿತ್ತು. ಈ ಕುರಿತು ಧಾರವಾಡದ ವಿದ್ಯಾಗಿರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಲಾಗಿತ್ತು.

ಇದೇ ರೀತಿ ಇನ್ನೂ ಕೆಲವು ಪ್ರಕರಣಗಳಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಪರಿಹಾರ ವಿತರಿಸಿರುವ ಕುರಿತು ತನಿಖೆ ನಡೆಯುತ್ತಿದೆ. ಪೊಲೀಸರು ದಾಖಲಿಸಿರುವ ಎಫ್‌ಐಆರ್‌ಗಳ ಆಧಾರದಲ್ಲಿ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ. ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಕೆಐಎಡಿಬಿಯ ಪ್ರಧಾನ ಕಚೇರಿ ಮತ್ತು ಹುಬ್ಬಳ್ಳಿ ಪ್ರಾದೇಶಿಕ ಕಚೇರಿಗಳ ಮೇಲೆ ಶುಕ್ರವಾರ ಏಕಕಾಲಕ್ಕೆ ದಾಳಿ ಮಾಡಿರುವ ಇ.ಡಿ. ಅಧಿಕಾರಿಗಳು ಶೋಧ ನಡೆಸಿದ್ದಾರೆ.

ಹಣಕಾಸು ವಿಭಾಗದ ಕಡತ ವಶಕ್ಕೆ: 'ರೇಸ್ ಕೋರ್ಸ್ ರಸ್ತೆಯಲ್ಲಿರುವ ಖನಿಜ ಭವನದಲ್ಲಿನ ಕೆಐಎಡಿಬಿ ಕಚೇರಿಯ ಹಣಕಾಸು ವಿಭಾಗದಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಹಣಕಾಸು ವಿಭಾಗದ ಹಲವು ಕಡತಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ' ಎಂದು ಮೂಲಗಳು ತಿಳಿಸಿವೆ.

'ಹಣಕಾಸು ವಿಭಾಗದ ಕೆಲವು ಅಧಿಕಾರಿಗಳನ್ನೂ ತನಿಖಾ ತಂಡ ವಿಚಾರಣೆ ನಡೆಸಿದೆ. ಪರಿಹಾರ ವಿತರಣೆ ಪ್ರಕ್ರಿಯೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದಿದೆ' ಎಂದು ಮೂಲಗಳು ಹೇಳಿವೆ.

ಗೆಜೆಟೆಡ್ ಪ್ರೊಬೇಷನರ್ ಪರೀಕ್ಷೆ: 27ಕ್ಕೆ ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಆ.27ರಂದು ಪೂರ್ವಭಾವಿ ಪರೀಕ್ಷೆ ನಡೆಸುತ್ತಿದ್ದು, ಪರೀಕ್ಷೆ ನಡೆಯುವ ಎಲ್ಲ 564 ಕೇಂದ್ರಗಳ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಪರೀಕ್ಷಾ ಕೇಂದ್ರವಾಗಿ 214 ಸರ್ಕಾರಿ, 189 ಅನುದಾನಿತ ಹಾಗೂ 161 ಖಾಸಗಿ ಶಾಲಾ-ಕಾಲೇಜುಗಳನ್ನು ಬಳಸಿಕೊಳ್ಳಲಾಗುತ್ತಿದೆ. ಸುಸೂತ್ರವಾಗಿ ಪರೀಕ್ಷೆಗಳನ್ನು ನಡೆಸಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಹಕಾರ ನೀಡಬೇಕು. ಅಗತ್ಯ ಆದೇಶಗಳನ್ನು ಹೊರಡಿಸುವ ಮೂಲಕ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೂಚನೆ ನೀಡಿದೆ.

ಪರೀಕ್ಷೆಗೆ ಹಾಜರಾಗುವ ಸರ್ಕಾರಿ, ಅನುದಾನಿತ ಸಂಸ್ಥೆಗಳ ನೌಕರರು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಸೇವಾ ನಿರತರಿಗೆ ಅಂದು ಒಂದು ದಿನದ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಲು ಆದೇಶಿಸಲಾಗಿದೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ
ಚಾಮರಾಜನಗರ ಇವರ ಸಂಯುಕ್ತಾಶ್ರಯದಲ್ಲಿ


ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಚೆಲುವ ಚಾಮರಾಜನಗರ

ಸನ್ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಹೆಚ್.ಕೆ. ಪಾಟೀಲ, ಮಾನ್ಯ ಪ್ರವಾಸೋದ್ಯಮ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಅನ್ಯ ಸಚಿವರುಗಳೊಂದಿಗೆ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಪ್ರವಾಸೋದ್ಯಮ ಇಲಾಖೆಯ ಮಳಿಗೆಯನ್ನು ವೀಕ್ಷಿಸುತ್ತಿರುವ ಸಂದರ್ಭ.

ದಿನಾಂಕ: 10ನೇ ಆಗಸ್ಟ್ 2024 | ಸಮಯ: ಸಂಜೆ 5.00 ಗಂಟೆಗೆ
ಸ್ಥಳ: ಭರಚುಕ್ಕಿ ಜಲಪಾತ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.



ಕರ್ನಾಟಕ ಒಂದು ರಾಜ್ಯ, ಹಲವು ಜಗತ್ತುಗಳು. www.karnatakatourism.org

ಸರ್ವರಿಗೂ ಆದರದ ಸ್ವಾಗತ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
–ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ವಕ್ಫ್ ಮಸೂದೆ ಪರಿಶೀಲನೆ ಸಮಿತಿಗೆ 31 ಸದಸ್ಯರು ● ಸಂಸತ್ತಿನ ಮುಂದಿನ ಅಧಿವೇಶನದ ಒಳಗೆ ವರದಿ ಸಲ್ಲಿಕೆ

ಅಧಿವೇಶನ ಅನಿರ್ದಿಷ್ಟಾವಧಿ ಮುಂದೂಡಿಕೆ

ನವದೆಹಲಿ (ಪಿಟಿಐ): ಸಂಸತ್‌ನ ಉಭಯ ಸದನಗಳನ್ನು ಶುಕ್ರವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಮಳೆಗಾಲದ ಅಧಿವೇಶನ ಆಗಸ್ಟ್ 12ರವರೆಗೆ ನಿಗದಿಯಾಗಿತ್ತು. ಆದರೆ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಶುಕ್ರವಾರ ಅನಿರ್ದಿಷ್ಟಾವಧಿಗೆ ಮುಂದೂಡಿದರು. ರಾಜ್ಯಸಭೆಯ ಅಧಿವೇಶನವನ್ನು ಕೂಡ ಶುಕ್ರವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ಈ ಅಧಿವೇಶನದಲ್ಲಿ ಹಣಕಾಸು ಮಸೂದೆಯನ್ನು ಅಂಗೀಕರಿಸಲಾಗಿದೆ.

ಅಲ್ಲದೇ, ಲೋಕಸಭೆಯಲ್ಲಿ 'ವಕ್ಫ್ (ತಿದ್ದುಪಡಿ) ಮಸೂದೆಯನ್ನು ಮಂಡಿಸಲಾಯಿತು. ಲೋಕಸಭೆಯಲ್ಲಿ ಬಿರುಸಿನ ಚರ್ಚೆಗಳು ನಡೆದ ನಂತರ ಜಂಟಿ ಸದನ ಸಮಿತಿ (ಜೆಪಿಸಿ) ಪರಿಶೀಲನೆಗೆ ಒಪ್ಪಿಸಲು ಸೂಚಿಸಲಾಗಿದೆ.

ಸದನ ಕಲಾಪದ ಉದ್ದೇಶ ಶೇ 130ಕ್ಕಿಂತಲೂ ಹೆಚ್ಚಿದೆ ಎಂದು ಸ್ಪೀಕರ್ ಓಂ ಬಿರ್ಲಾ ತಿಳಿಸಿದರು.

ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲನೆ ಜಂಟಿ ಸದನ ಸಮಿತಿಗೆ 31 ಸದಸ್ಯರು: ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲಿಸಲಿರುವ ಸಂಸತ್ತಿನ ಜಂಟಿ ಸದನ ಸಮಿತಿಯಲ್ಲಿ ಲೋಕಸಭೆಯ 21, ರಾಜ್ಯಸಭೆಯ 10 ಸದಸ್ಯರಿದ್ದಾರೆ. ಸಮಿತಿ ಮುಂದಿನ ಅಧಿವೇಶನದ ಒಳಗೆ ವರದಿ ಸಲ್ಲಿಸಲಿದೆ.

ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಸಮಿತಿ ಅಧ್ಯಕ್ಷರ ಹೆಸರು ಪ್ರಕಟಿಸುವರು. ಬಹುತೇಕ ಬಿಜೆಪಿ ಸಂಸದರೇ ಅಧ್ಯಕ್ಷರಾಗಬಹುದು. ಅಂತಿಮ ನಿರ್ಧಾರವನ್ನು ಬಿರ್ಲಾ ಅವರೇ ಕೈಗೊಳ್ಳಲಿದ್ದಾರೆ.

ಸಮಿತಿಗೆ ಸದಸ್ಯರನ್ನು ಹೆಸರಿಸುವ ನಿಲುವಳಿಯನ್ನು ಲೋಕಸಭೆ, ರಾಜ್ಯಸಭೆ ಶುಕ್ರವಾರ ಅಂಗೀಕರಿಸಿತು. ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ನಿಲುವಳಿ ಮಂಡಿಸಿದರು.

ಸಮಿತಿಯಲ್ಲಿರುವ ಲೋಕಸಭೆ ಸದಸ್ಯರಲ್ಲಿ ಬಿಜೆಪಿಯ ಎಂಟು ಸದಸ್ಯರು ಸೇರಿ ಎನ್‌ಡಿಎ ಮೈತ್ರಿಕೂಟದ 12 ಮಂದಿ ಸದಸ್ಯರಿದ್ದಾರೆ. ಉಳಿದ 9 ಮಂದಿ ಪ್ರತಿಪಕ್ಷದವರು. ರಾಜ್ಯಸಭೆಯ ಸದಸ್ಯರಲ್ಲಿ ಬಿಜೆಪಿಯ 4, ಪ್ರತಿಪಕ್ಷಗಳ 4, ವೈಎಸ್‌ಆರ್‌ಸಿಪಿಯ ಒಬ್ಬರು ಹಾಗೂ ಒಬ್ಬ ನಾಮಕರಣ ಸದಸ್ಯರಿದ್ದಾರೆ.

ಸಂಸತ್‌ನ ಮಳೆಗಾಲದ ಅಧಿವೇಶನದಲ್ಲಿ ಶುಕ್ರವಾರ ರಾಜ್ಯಸಭೆಯಲ್ಲಿ ಬಹುತೇಕ ಸದಸ್ಯರು ಗೈರಾಗಿದ್ದರು–ಪಿಟಿಐ ಚಿತ್ರ

ಸಭಾಪತಿ ವಿರುದ್ಧ ವಾಗ್ದಂಡನೆ ನೋಟಿಸ್

ರಾಜ್ಯಸಭಾ ಸಭಾಪತಿ ಜಗದೀಪ್ ಧನ್‌ಕರ್ ಹಾಗೂ ವಿರೋಧ ಪಕ್ಷ ಇಂಡಿಯಾ ಒಕ್ಕೂಟದ ಸಂಸದರ ನಡುವಿನ ತಿಕ್ಕಾಟ ಮತ್ತಷ್ಟು ವಿಸ್ತರಿಸಿದೆ.

ಬಿಜೆಪಿ ಸಂಸದರೊಬ್ಬರು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ್ ಖರ್ಗೆ ವಿರುದ್ಧ ನೀಡಿದ ಹೇಳಿಕೆ ಬೆನ್ನಲ್ಲೇ, ರಾಜ್ಯಸಭಾ ಸಭಾಪತಿ ಜಗದೀಪ್ ಧನ್‌ಕರ್ ವಿರುದ್ಧ ಮೂರು ಪುಟಗಳ ವಾಗ್ದಂಡನೆ ಅರ್ಜಿ ಸಲ್ಲಿಸಲು ವಿರೋಧ ಪಕ್ಷಗಳು ನಿರ್ಧರಿಸಿವೆ. ಈ ಪತ್ರಕ್ಕೆ ಇಂಡಿಯಾ ಒಕ್ಕೂಟದ 87 ಸಂಸದರ ಪೈಕಿ 67 ಸಂಸದರು ಸಹಿಹಾಕಿದ್ದಾರೆ ಎಂದು ವಿರೋಧ ಪಕ್ಷಗಳು ಮೂಲಗಳು ತಿಳಿಸಿವೆ.



ಜಗದೀಪ್ ಧನ್‌ಕರ್

'ರೈಲ್ವೆ (ತಿದ್ದುಪಡಿ) ಮಸೂದೆ' ಮಂಡನೆ

ನವದೆಹಲಿ (ಪಿಟಿಐ): ರೈಲ್ವೆ ಮಂಡಳಿಗೆ ಶಾಸನಬದ್ಧ ಅಧಿಕಾರ ನೀಡುವ ರೈಲ್ವೆ (ತಿದ್ದುಪಡಿ) ಮಸೂದೆ -2024' ಅನ್ನು ಶುಕ್ರವಾರ ಲೋಕಸಭೆಯಲ್ಲಿ ಮಂಡಿಸಲಾಯಿತು.

ಮಸೂದೆ ಮಂಡಿಸಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು, ಈ ಮಸೂದೆಯ ಮೂಲಕ 1989ರ ರೈಲ್ವೆ ಕಾಯ್ದೆ ಜೊತೆಗೆ 1905ರ ಭಾರತೀಯ ರೈಲ್ವೆ ಮಂಡಳಿ ಕಾಯ್ದೆಯನ್ನು ಸಂಯೋಜನೆಗೊಳಿಸಲಾಗುವುದು ಎಂದು ತಿಳಿಸಿದರು.

'ಹೊಸ ಮಸೂದೆಯು ಮಂಡಳಿಯ ಕಾನೂನು ವ್ಯಾಪ್ತಿಯನ್ನು ಸರಳೀಕರಣಗೊಳಿಸಲಿದೆ. ಎರಡೂ ಕಾಯ್ದೆಗಳನ್ನು ಪರಾಮರ್ಶಿಸಬೇಕಾದ ಅಗತ್ಯವನ್ನು ತಪ್ಪಿಸಲಿದೆ' ಎಂದು ವಿವರಿಸಿದರು.

ಲೋಕಸಭೆ ಸದಸ್ಯರು: ಜಗದಾಂಬಿಕಾ ಪಾಲ್, ನಿಶಿಕಾಂತ್ ದುಬೆ, ತೇಜಸ್ವಿ ಸೂರ್ಯ, ಅಪರಾಜಿತಾ ಸಾರಂಗಿ, ಸಂಜಯ್ ಜೈಸ್ವಾಲ್, ದಿಲೀಪ್ ಸೈಕಿಯಾ, ಅಭಿಜಿತ್ ಗಂಗೋಪಾಧ್ಯಾಯ, ಡಿ.ಕೆ.ಅರುಣಾ (ಎಲ್ಲರೂ ಬಿಜೆಪಿ), ಗೌರವ್ ಗೊಗೊಯ್, ಇಮ್ರಾನ್ ಮಸೂದ್, ಮೊಹಮ್ಮದ್ ಜಾವೇದ್ (ಎಲ್ಲರೂ ಕಾಂಗ್ರೆಸ್), ಮೊಹೀಬುಲ್ಲಾ (ಸಮಾಜವಾದಿ ಪಕ್ಷ), ಕಲ್ಯಾಣ್ ಬ್ಯಾನರ್ಜಿ (ತೃಣಮೂಲ ಕಾಂಗ್ರೆಸ್), ಎ.ರಾಜಾ (ಡಿಎಂಕೆ), ಲಾವು ಶ್ರೀ ಕೃಷ್ಣ ದೇವರಾಯಲು (ಟಿಡಿಪಿ), ದಿಲೇಶ್ವರ್ ಕಾಮೈತ್ (ಜೆಡಿಯು), ಅರವಿಂದ್ ಸಾವಂತ್ (ಶಿವಸೇನಾ–ಯುಬಿಟಿ), ಸುರೇಶ್ ಮಾತ್ರೆ (ಎನ್‌ಸಿಪಿ–ಶರದ್ ಪವಾರ್), ನರೇಶ್ ಮಾಸ್ಕೆ (ಶಿವಸೇನಾ), ಅರುಣ್ ಭಾರ್ತಿ (ಲೋಕಜನಶಕ್ತಿ – ರಾಮವಿಲಾಸ್), ಅಸಾದುದ್ದೀನ್ ಒವೈಸಿ (ಎಐಎಂಐಎಂ).

ರಾಜ್ಯಸಭೆ ಸದಸ್ಯರು: ಬ್ರಿಜ್‌ಲಾಲ್, ಮೇಧಾ ವಿಶ್ರಂ ಕುಲಕರ್ಣಿ, ಗುಲಾಂ ಅಲಿ, ರಾಧಾಮೋಹನ್ ದಾಸ್ ಅಗರವಾಲ್ (ಎಲ್ಲರೂ ಬಿಜೆಪಿ), ಸೈಯದ್ ನಸೀರ್ ಹುಸೇನ್ (ಕಾಂಗ್ರೆಸ್), ಮೊಹಮ್ಮದ್ ನದೀಮುಲ್ ಹಕ್ (ತೃಣಮೂಲ ಕಾಂಗ್ರೆಸ್), ವಿ.ವಿಜಯಸಾಯಿ ರೆಡ್ಡಿ (ವೈಎಸ್‌ಆರ್‌ಸಿಪಿ), ಎಂ.ಮೊಹಮ್ಮದ್ ಅಬ್ದುಲ್ಲಾ (ಡಿಎಂಕೆ), ಸಂಜಯ್ ಸಿಂಗ್ (ಎಎಪಿ), ಡಿ.ವೀರೇಂದ್ರ ಹೆಗ್ಗಡೆ (ನಾಮನಿರ್ದೇಶನ ಸದಸ್ಯ).

ಜಾತಿ ಗಣತಿ ನಿಲುವು: ರಾಹುಲ್ ವಿರುದ್ಧ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾತಿಗಣತಿ ನಿಲುವಿಗೆ ಸಂಬಂಧಿಸಿದಂತೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿರುವ ಬಿಜೆಪಿ ಸಂಸದ ಜಿ.ನಿಶಿಕಾಂತ್ ದುಬೆ, 'ಕಾಂಗ್ರೆಸ್ ಮೊದಲು ಕರ್ನಾಟಕದಲ್ಲಿಯೇ ಜಾತಿ ಜನಗಣತಿ ನಡೆಸಲಿ' ಎಂದಿದ್ದಾರೆ.

ಲೋಕಸಭೆಯಲ್ಲಿ ಮಾತನಾಡಿದ ದುಬೆ, 'ಹಿಂದುಳಿದವರು, ಬಡವರಿಗೆ ನ್ಯಾಯ ಒದಗಿಸುವ ಸಾಮರ್ಥ್ಯ ನಿಮಗಿಲ್ಲ. ಅದೇ ಕಾರಣಕ್ಕೆ ಜಾತಿ ಗಣತಿ ಕುರಿತು ಮಾತನಾಡುತ್ತಿದ್ದೀರಿ. ಧೈರ್ಯವಿದ್ದರೆ ಮೊದಲು ಕರ್ನಾಟಕದಲ್ಲೇ ಜಾತಿ ಜನಗಣತಿ ಮಾಡಿಸಿ' ಎಂದು ಒತ್ತಾಯಿಸಿದರು.

'ಕರ್ನಾಟಕದಲ್ಲಿ ಎರಡು ವರ್ಷದಿಂದ ನಿಮ್ಮ ಪಕ್ಷದ ಸರ್ಕಾರವೇ ಇದೆ. ಅಲ್ಲಿ ಏಕೆ ಸಾಮಾಜಿಕ –ಆರ್ಥಿಕ ಮೀಸಲಾತಿ ಇಲ್ಲ. ನೀವು ಏಕೆ ಜಾರಿಗೆ ತಂದಿಲ್ಲ ಎಂದರೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮ ಜಾತಿ ಬಗ್ಗೆ ಮಾತನಾಡುವುದಿಲ್ಲ. ಹಿಂಬಾಗಿಲ ಮೂಲಕ ಕ್ರೈಸ್ತರಲ್ಲಿರುವ 86 ಜಾತಿಗಳು, ಮುಸ್ಲಿಮರಲ್ಲಿನ 56 ಜಾತಿಗಳವರಿಗೆ ಒಬಿಸಿ ಮೀಸಲಾತಿ ನೀಡಿದ್ದೀರಿ' ಎಂದು ಅವರು ಟೀಕಿಸಿದರು.

ಕಾಂಗ್ರೆಸ್ ಪಕ್ಷ ದಶಕಗಳಿಂದಲೂ ಒಬಿಸಿಗಳಿಗೆ ಮೀಸಲಾತಿ ವಿರೋಧಿಸುತ್ತಿದೆ. ಒಬಿಸಿಯವರನ್ನು ಎಂದಿಗೂ ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶದಲ್ಲಿ ಸಿ.ಎಂ ಆಗಿ ನೇಮಿಸಿಲ್ಲ ಎಂದು ಟೀಕಿಸಿದರು.

'1952, 1957, 1962, 1969, 1971, 1980, 1984, 1989, ಮತ್ತು 1991ರಲ್ಲಿ ಪ್ರಕಟಿಸಿದ ಕಾಂಗ್ರೆಸ್ ಪ್ರಣಾಳಿಕೆಯಲ್ಲಿಯೂ ಒಬಿಸಿ ಮೀಸಲಾತಿಗೆ ವಿರೋಧ ಇರುವುದಾಗಿಯೇ ಉಲ್ಲೇಖಿಸಲಾಗಿದೆ. 1977ರಲ್ಲಿ ಚರಣ್ ಸಿಂಗ್ ಅವರು ಮೀಸಲಾತಿ ಕೊಡಲು ಬಯಸಿದ್ದರು. ಅವರ ಸರ್ಕಾರ ಪದಚ್ಯುತಗೊಳಿಸಿದ್ದೀರಿ. 1989ರಲ್ಲಿ ವಿ.ಪಿ.ಸಿಂಗ್ ಸರ್ಕಾರವನ್ನು ಪದಚ್ಯುತಿಗೊಳಿಸಿ, ಚಂದ್ರಶೇಖರ್ ನೇತೃತ್ವದ ಸರ್ಕಾರವನ್ನು ತರಲು ಒತ್ತು ನೀಡಿದಿರಿ' ಎಂದು ಅವರು ಆರೋಪಿಸಿದರು.

ಜಯಾ ಬಚ್ಚನ್– ಧನಕರ್ ಜಟಾಪಟಿ

ನವದೆಹಲಿ (ಪಿಟಿಐ): ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಮತ್ತು ಸಮಾಜವಾದಿ ಪಕ್ಷದ ರಾಜ್ಯಸಭೆ ಸದಸ್ಯೆ ಜಯಾ ಬಚ್ಚನ್ ಅವರ ಮಧ್ಯೆ ಸದನದಲ್ಲಿ ಶುಕ್ರವಾರ ಮಾತಿನ ಚಕಮಕಿ ನಡೆಯಿತು. ಧನಕರ್ ಅವರ ಮಾತಿನ ಧಾಟಿಯನ್ನು ಜಯಾ ಖಂಡಿಸಿದ್ದರಿಂದ ಸದನದಲ್ಲಿ ಕೆಲಕಾಲ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು.

ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಬಿಜೆಪಿ ಸಂಸದ ಘನಶ್ಯಾಮ್ ತಿವಾರಿ ಅವರು ನೀಡಿದ್ದ ಹೇಳಿಕೆ ಕುರಿತು ವಿಪಕ್ಷಗಳ ಸದಸ್ಯರು ಮತ್ತು ಸಭಾಪತಿ ನಡುವೆ ಬಿರುಸಿನ ಚರ್ಚೆ ನಡೆಯುತ್ತಿತ್ತು. ಆಗ ಜಯಾ ಅವರು ತಮ್ಮ ಅಭಿಪ್ರಾಯ ಮಂಡಿಸಲು ಮುಂದಾದರು ಆಗ ಧನಕರ್ ಅವರು, 'ಜಯಾ ಅಮಿತಾಭ್ ಬಚ್ಚನ್, ನಿಮ್ಮ ಅಭಿಪ್ರಾಯ ತಿಳಿಸಿ' ಎಂದರು.

ಇದಕ್ಕೆ ಕುಪಿತರಾದ ಜಯಾ ಅವರು, 'ನಾನು ನಟಿ. ದೇಹಭಾಷೆ ಮತ್ತು ಅಭಿವ್ಯಕ್ತಿಯನ್ನು ಗ್ರಹಿಸುತ್ತೇನೆ. ನಿಮ್ಮ ಮಾತಿನ ಧಾಟಿಯನ್ನು ಸ್ವೀಕರಿಸಲು ಸಾಧ್ಯವಿಲ್ಲ. ನೀವು ಸಭಾಪತಿ ಪೀಠದಲ್ಲೇ ಕುಳಿತಿರಬಹುದು. ಆದರೆ ನಾವೆಲ್ಲರೂ ಸಹೋದ್ಯೋಗಿಗಳು ಎಂಬುದನ್ನು ಮರೆಯಬೇಡಿ' ಎಂದರು.

ಇದಕ್ಕೆ ಖಾರವಾಗಿಯೇ ಪ್ರತಿಕ್ರಿಯಿಸಿದ ಧನಕರ್ ಅವರು, 'ಸಾಕುಮಾಡಿ. ನೀವು ಯಾರಾದರೂ ಆಗಿರಬಹುದು. ನಟಿಯೇ ಆಗಿರಬಹುದು. ಸದನದ ಶಿಷ್ಟಾಚಾರವನ್ನು ಪಾಲಿಸಲೇಬೇಕು. ನೀವು ಮಾತ್ರ ಪ್ರಸಿದ್ಧರು ಎಂಬ ಭ್ರಮೆಯಲ್ಲಿ ಇರಬೇಡಿ. ಇಲ್ಲಿ ಎಲ್ಲರೂ ಯಶಸ್ಸು ಕಂಡಿದ್ದಾರೆ' ಎಂದರು.

ಆ ಬಳಿಕ ವಿಪಕ್ಷಗಳ ಸದಸ್ಯರು ಮತ್ತು ಧನಕರ್ ಅವರ ನಡುವೆ ವಾಗ್ವಾದ ನಡೆಯಿತು. ಧನಕರ್ ಅವರ ಹೇಳಿಕೆ ಖಂಡಿಸಿ ವಿರೋಧ ಪಕ್ಷಗಳ ಸದಸ್ಯರು ಕೆಲಕಾಲ ಸಭಾತ್ಯಾಗ ಮಾಡಿದರು.

ಘಟನೆ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ಜಯಾ ಅವರು, 'ಧನಕರ್ ಅವರ ಮಾತಿನ ಧಾಟಿ ನನಗೆ ಸರಿಕಾಣಲಿಲ್ಲ. ಅದಲ್ಲದೇ ಅವರು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡುವ ವೇಳೆ ಮೈಕ್ ಅನ್ನು ಸ್ಥಗಿತಗೊಳಿಸಿದ್ದೂ ಸರಿಯಲ್ಲ. ಇಲ್ಲಿ ಯಾರೂ ಶಾಲಾ ಮಕ್ಕಳಿಲ್ಲ. ನಮ್ಮಲ್ಲಿ ಹಲವರು ಹಿರಿಯ ನಾಗರಿಕರಿದ್ದೇವೆ. ಮೈಕ್ ಆಫ್ ಮಾಡುವಂಥ ನಡೆ ಸದನದ ಪರಂಪರೆಗೆ ವಿರುದ್ಧವಾದುದು' ಎಂದು ತಿಳಿಸಿದರು.

ಜಯಾ ಬಚ್ಚನ್

ಸುದ್ದಿ 2 ನಿಮಿಷ

ಭಾರತ– ಬಾಂಗ್ಲಾ ಗಡಿ ಮೇಲ್ವಿಚಾರಣೆ ಕೇಂದ್ರದಿಂದ ಸಮಿತಿ ರಚನೆ: ಶಾ

ನವದೆಹಲಿ (ಪಿಟಿಐ): ನೆರೆರಾಷ್ಟ್ರ ಬಾಂಗ್ಲಾದೇಶದಲ್ಲಿ ಸಂಘರ್ಷ ಹೆಚ್ಚಿದ ಬೆನ್ನಲ್ಲೇ, ಭಾರತ ಹಾಗೂ ಬಾಂಗ್ಲಾದೇಶದ ಗಡಿಯಲ್ಲಿನ ಸ್ಥಿತಿಗತಿ ಕುರಿತು ಮೇಲ್ವಿಚಾರಣೆ ವಹಿಸಲು ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಹಿರಿಯ ಅಧಿಕಾರಿ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಸಮಿತಿ ರಚಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ತಿಳಿಸಿದ್ದಾರೆ.

ಸಮಿತಿಯು ಬಾಂಗ್ಲಾದೇಶದ ಅಧಿಕಾರಿಗಳ ಜೊತೆ ನಿಕಟ ಸಂಪರ್ಕ ಸಾಧಿಸಿ, ಅಲ್ಲಿರುವ ಹಿಂದೂಗಳು ಹಾಗೂ ಇತರೆ ಅಲ್ಪಸಂಖ್ಯಾತ ಸಮುದಾಯ ಸೇರಿದಂತೆ ಭಾರತೀಯರ ಸುರಕ್ಷತೆ ಹಾಗೂ ಭದ್ರತೆಯ ಬಗ್ಗೆ ಖಾತರಿಪಡಿಸಿಕೊಳ್ಳಲಿದೆ ಎಂದು ಹೇಳಿದ್ದಾರೆ.

'ಭಾರತ– ಬಾಂಗ್ಲಾದೇಶದ ಗಡಿ ಪರಿಸ್ಥಿತಿ ಮೇಲೆ ನಿಗಾವಹಿಸಲು ಮೋದಿ ಸರ್ಕಾರವು ಸಮಿತಿ ರಚಿಸಲು ನಿರ್ಧರಿಸಿದೆ. ಬಿಎಸ್‌ಎಫ್‌ನ ಪೂರ್ವ ಕಮಾಂಡ್‌ನ ಎಡಿಜಿ ನೇತೃತ್ವದಲ್ಲಿ ಈ ಸಮಿತಿ ರಚಿಸಲಾಗಿದೆ' ಎಂದು ಶಾ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇದಲ್ಲದೇ, ಸೌತ್ ಬೆಂಗಾಲ್ ಫ್ರಾಂಟಿಯರ್ ಐಜಿಪಿ, ತ್ರಿಪುರ ಫ್ರಾಂಟಿಯರ್‌ನ ಐಜಿಪಿ, ಲ್ಯಾಂಡ್ ಪೋರ್ಟ್ ಆಥಾರಿಟಿ ಆಫ್ ಇಂಡಿಯಾದ ಕಾರ್ಯದರ್ಶಿ ಹಾಗೂ ಸದಸ್ಯರು ಈ ಸಮಿತಿಯಲ್ಲಿರಲಿದ್ದಾರೆ ಎಂದು ತಿಳಿಸಿದ್ದಾರೆ.



'ರಷ್ಯಾ ಸೇನೆಯಿಂದ 69 ಮಂದಿ ಭಾರತೀಯರ ಬಿಡುಗಡೆ ನಿರೀಕ್ಷೆ

ನವದೆಹಲಿ (ಪಿಟಿಐ): ರಷ್ಯಾ ಸೇನೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 69 ಮಂದಿ ಭಾರತೀಯರ ಬಿಡುಗಡೆಗೆ ಕೇಂದ್ರ ಸರ್ಕಾರ ಎದುರುನೋಡುತ್ತಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಶುಕ್ರವಾರ ಹೇಳಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಈ ಬಗ್ಗೆ ಮಾತನಾಡಿದ ಅವರು, ಹಲವು ಪ್ರಕರಣಗಳಲ್ಲಿ ಭಾರತದ ಯುವಕರಿಗೆ ಕೆಲಸದ ಆಮಿಷವೊಡ್ಡಿ ರಷ್ಯಾ ಸೇನೆಗೆ ವಾಮಮಾರ್ಗದಲ್ಲಿ ಸೇರಿಸಲಾಗಿದೆ ಎಂದು ಆಪಾದಿಸಿದ್ದಾರೆ. ರಷ್ಯಾ ಸೇನೆಗೆ ಭಾರತೀಯರ ನೇಮಕ ಹಾಗೂ ಸೈಬರ್ ಅಪರಾಧಗಳ ಮೂಲಕ ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಮಾನವ ಕಳ್ಳಸಾಗಣೆ ಮಾಡುತ್ತಿರುವ ವಿಚಾರಗಳನ್ನು ಕೇಂದ್ರ ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ ಎಂದು ಹೇಳಿದ್ದಾರೆ.

'ಈವರೆಗೆ ಭಾರತದ 91 ಮಂದಿ ರಷ್ಯಾ ಸೇನೆಗೆ ಸೇರಿದ್ದಾರೆ. ಅವರಲ್ಲಿ 8 ಮಂದಿ ಮೃತಪಟ್ಟಿದ್ದು, 14 ಮಂದಿಯನ್ನು ವಾಪಸು ಕಳುಹಿಸಲಾಗಿದೆ. ಉಳಿದ 69 ಮಂದಿಯ ಬಿಡುಗಡೆಗೆ ಎದುರುನೋಡುತ್ತಿದ್ದು, ಈ ಸಂಬಂಧ ರಷ್ಯಾದ ವಿದೇಶಾಂಗ ಸಚಿವರೊಂದಿಗೆ ಹಲವು ಬಾರಿ ಚರ್ಚಿಸಿದ್ದೇನೆ. ಪ್ರಧಾನಿ ಮೋದಿ ರಷ್ಯಾಗೆ ಕಳೆದ ತಿಂಗಳು ಭೇಟಿ ನೀಡಿದ್ದಾಗಲೂ ಈ ವಿಷಯವನ್ನು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಗಮನಕ್ಕೆ ತಂದಿದ್ದಾರೆ' ಎಂದರು.

ಕಾಂಗ್ರೆಸ್‌ನಿಂದ ನಾಲ್ಕು ಹಕ್ಕುಚ್ಯುತಿ ನೋಟಿಸ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ನಾಯಕರ ವಿರುದ್ಧ ಒಟ್ಟು ನಾಲ್ಕು ಹಕ್ಕುಚ್ಯುತಿ ನೋಟಿಸ್ ನೀಡಲಾಗಿದೆ ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ತಿಳಿಸಿದರು. 'ಏನಾಗುತ್ತದೆ ಎಂದು ಕಾದು ನೋಡೋಣ' ಎಂದರು.

'82 ವರ್ಷದ ಹಿಂದೆ ಇದೇ ದಿನ ಮಹಾತ್ಮ ಗಾಂಧಿ ಅವರು, 'ಮಾಡು ಇಲ್ಲವೇ ಮಡಿ' ಎಂದು ದೇಶಕ್ಕೆ ಕರೆ ನೀಡಿದ್ದರು' ಎಂದು ಅವರು 'ಎಕ್ಸ್'ನಲ್ಲಿ ನೆನಪಿಸಿದರು.

'ರಾಜ್ಯಸಭೆಯ ಈ ಸಲದ ಅಧಿವೇಶನದಲ್ಲಿ ನಾಲ್ಕು ಹಕ್ಕುಚ್ಯುತಿ ನೋಟಿಸ್ ನೀಡಲಾಗಿದೆ. (ಜೈವಿಕವಲ್ಲದ) ಪ್ರಧಾನಮಂತ್ರಿ ಅವರು ಮಾಜಿ ಉಪ ರಾಷ್ಟ್ರಪತಿ ಹಮೀದ್ ಅನ್ಸಾರಿ ವಿರುದ್ಧ ನೀಡಿದ್ದ ಕೀಳುಮಟ್ಟದ ಹೇಳಿಕೆ, ಬಿಜೆಪಿ ಸಂಸದ ಅನುರಾಗ್ ಠಾಕೂರ್ ಅವರು ಕಡತದಿಂದ ತೆಗೆದುಹಾಕಿದ ಭಾಷಣವಿರುವ ವಿಡಿಯೊ ಅನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದ ವಿಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಎರಡು ಹಕ್ಕುಚ್ಯುತಿ ನೋಟಿಸ್ ನೀಡಲಾಗಿದೆ. ಅದೇ ರೀತಿ ವಯನಾಡು ಭೂಕುಸಿತ ಕುರಿತು ರಾಜ್ಯಸಭೆಯ ದಿಕ್ಕುತಪ್ಪಿಸುವ ಹೇಳಿಕೆ ನೀಡಿದ್ದ ಗೃಹ ಸಚಿವ ಅಮಿತ್ ಶಾ ವಿರುದ್ಧವೂ ಹಕ್ಕುಚ್ಯುತಿ ನೋಟಿಸ್ ನೀಡಲಾಗಿದೆ ಎಂದು 'ಎಕ್ಸ್'ನಲ್ಲಿ ತಿಳಿಸಿದರು.

ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಲ್ಲಿ 'ಸಂವಿಧಾನ ಪ್ರಸ್ತಾವನೆ'ಯನ್ನು ಕೈಬಿಟ್ಟ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸದನದ ಹಾದಿ ತಪ್ಪಿಸಿದ್ದಾರೆ ಎಂದು ಆರೋಪಿಸಿ ಹಕ್ಕುಚ್ಯುತಿ ನೋಟಿಸ್ ನೀಡಲಾಗಿದೆ ಎಂದರು.

'ಆಗಸ್ಟ್ 7ರಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಎನ್‌ಸಿಇಆರ್‌ಟಿಯ 3 ಹಾಗೂ 6ನೇ ತರಗತಿಯ ಪಠ್ಯಪುಸ್ತಕದಲ್ಲಿ 'ಸಂವಿಧಾನದ ಪ್ರಸ್ತಾವನೆ' ತೆಗೆದುಹಾಕಿದ ವಿಚಾರವನ್ನು ಸದನದಲ್ಲಿ ಪ್ರಶ್ನಿಸಿದ್ದರು.

ಇದಕ್ಕೆ ಉತ್ತರಿಸಿದ್ದ ಸಚಿವ ಧರ್ಮೇಂದ್ರ ಪ್ರಧಾನ್, '6ನೇ ತರಗತಿಯ ಪಠ್ಯಪುಸ್ತಕವು 'ಸಂವಿಧಾನದ ಪ್ರಸ್ತಾವನೆ'ಯನ್ನು ಒಳಗೊಂಡಿದೆ ಎಂದಿದ್ದರು. ಅವರು ನೀಡಿದ ಸಮರ್ಥನೆಯು ವಾಸ್ತವಿಕವಾಗಿ ತಪ್ಪು ಹಾಗೂ ದಾರಿ ತಪ್ಪಿಸುವಂತಿದೆ' ಎಂದು ಆಗಸ್ಟ್ 8ರಂದು ಧನಕರ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

'ಇದಕ್ಕೆ ಸಂಬಂಧಿಸಿದಂತೆ ನಾನು 2022 ಹಾಗೂ 2024ರ 3 ಮತ್ತು 6ನೇ ತರಗತಿಯ ಪಠ್ಯಪುಸ್ತಕಗಳನ್ನು ಪತ್ರದ ಜೊತೆಗೆ ಕಳುಹಿಸಿದ್ದೇನೆ. 2022ರ ಪಠ್ಯಪುಸ್ತಕದಲ್ಲಿ 'ಸಂವಿಧಾನದ ಪ್ರಸ್ತಾವನೆ'ಯು ಒಳಗೊಡಿದೆ. 2024ರ ಪಠ್ಯಪುಸ್ತಕದಲ್ಲಿ ಕಾಣುತ್ತಿಲ್ಲ' ಎಂದು ಸಭಾಪತಿಗೆ ಬರೆದ ದೂರಿನಲ್ಲಿ ವಿವರಿಸಿದ್ದಾರೆ.

ಜೈರಾಮ್ ರಮೇಶ್

ಪರಿಶಿಷ್ಟರ ಮೀಸಲು: ಕೆನೆಪದರಕ್ಕೆ ಅವಕಾಶವಿಲ್ಲ–ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿಗೆ ಕೆನೆಪದರ ನೀತಿ ಅನ್ವಯಿಸಲು ಸಂವಿಧಾನದಲ್ಲಿ ಅವಕಾಶವಿಲ್ಲ ಎಂದು ಕೇಂದ್ರ ಸಚಿವ ಸಂಪುಟ ಶುಕ್ರವಾರ ಪ್ರತಿಪಾದಿಸಿದೆ.

ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರವನ್ನು ಸುದ್ದಿಗಾರರಿಗೆ ತಿಳಿಸಿದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು, ಸುಪ್ರೀಂ ಕೋರ್ಟ್ ಈಚೆಗೆ ಈ ಕುರಿತು ಮಾಡಿರುವ ಪ್ರಸ್ತಾಪದ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು ಎಂದರು.

'ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಪ್ರಕಾರ ಎಸ್‌ಸಿ, ಎಸ್‌ಟಿ ಮೀಸಲಾತಿಯಲ್ಲಿ ಕೆನೆಪದರಕ್ಕೆ ಅವಕಾಶವಿಲ್ಲ. ಎಸ್‌ಸಿ, ಎಸ್‌ಟಿ ಮೀಸಲಾತಿ ಸಂವಿಧಾನಕ್ಕೆ ಬದ್ಧವಾಗಿರಬೇಕು' ಎಂದು ಹೇಳಿದರು.

ಎಸ್‌ಸಿ, ಎಸ್‌ಟಿಗಳಲ್ಲಿ ಕೆನೆಪದರಕ್ಕೆ ಸೇರಿದವರನ್ನು ಗುರುತಿಸಲು ಮತ್ತು ಅವರಿಗೆ ಮೀಸಲಾತಿಯ ಸೌಲಭ್ಯವನ್ನು ನಿರಾಕರಿಸಲು ರಾಜ್ಯ ಸರ್ಕಾರಗಳು ನೀತಿ ರೂಪಿಸಬಹುದು ಎಂದು ಸುಪ್ರೀಂ ಕೋರ್ಟ್ ಆಗಸ್ಟ್ 1ರಂದು ಹೇಳಿತ್ತು.

ಪ್ರಧಾನಿಗೆ ಮನವಿ: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಲ್ಲಿ ಕೆನೆಪದರಕ್ಕೆ ಸೇರಿದವರನ್ನು ಗುರುತಿಸಬಾರದು ಎಂದು ಬಿಜೆಪಿ ಸಂಸದರ ನಿಯೋಗವು ಪ್ರಧಾನಿ ಅವರಿಗೆ ಮನವಿ ಮಾಡಿದೆ.

ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಂಸದರ ನಿಯೋಗವು, ಸುಪ್ರೀಂ ಕೋರ್ಟ್ ತೀರ್ಪಿನ ಬಗ್ಗೆ ಕಳವಳ ವ್ಯಕ್ತಪಡಿಸಿತು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ, 'ಪ್ರಧಾನಿ ಅವರು ಭೇಟಿಯಾಗಿ ಒಳಮೀಸಲಾತಿ ವಿಷಯವಾಗಿ ಚರ್ಚೆ ಮಾಡಿದ್ದೇವೆ. ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಕೆನೆಪದರ ಬಗ್ಗೆ ಸಾಂದರ್ಭಿಕವಾಗಿ ಪ್ರಸ್ತಾಪ ಇದೆ. ಅದನ್ನು ಜಾರಿ ಮಾಡಿದರೆ ಪರಿಶಿಷ್ಟರಿಗೆ ಅನ್ಯಾಯವಾಗಲಿದೆ ಎಂಬುದನ್ನು ಪ್ರಧಾನಿಯವರ ಗಮನಕ್ಕೆ ತಂದಿದ್ದೇವೆ' ಎಂದರು.

'ಯಾವುದೇ ಕಾರಣಕ್ಕೂ ನಮ್ಮ ಸರ್ಕಾರ ಕೆನೆಪದರ ವ್ಯವಸ್ಥೆ ರೂಪಿಸುವುದಿಲ್ಲ ಎಂದು ಪ್ರಧಾನಿ ಅಭಯ ನೀಡಿದ್ದಾರೆ. ಒಬ್ಬ ವೈದ್ಯ ಬಾಡಿಗೆ ಮನೆ ಕೇಳಲು ಹೋದರೆ ಜಾತಿ ಕೇಳುತ್ತಾರೆ ಹಾಗೂ ಜಾತಿ ಗೊತ್ತಾದ ಮೇಲೆ ಮನೆ ಕೊಡುವುದಿಲ್ಲ ಎಂದು ಪ್ರಧಾನಿ ಬೇಸರದಿಂದ ಹೇಳಿದ್ದಾರೆ. ನಮ್ಮ ಪಕ್ಷ ಕೆನೆಪದರದ ಪರವಾಗಿ ಇಲ್ಲ ಎಂಬುದನ್ನೂ ಸ್ಪಷ್ಟಪಡಿಸಿದ್ದಾರೆ' ಎಂದರು.

ಬಿಜೆಪಿಯ ರಾಜ್ಯಸಭಾ ಸದಸ್ಯ ಸಿಕಂದರ್ ಕುಮಾರ್ ಮಾತನಾಡಿ, 'ಈ ವಿಷಯದ ಬಗ್ಗೆ ಕಳವಳ ವ್ಯಕ್ತಪಡಿಸಿ ಅನೇಕ ಮಂದಿ ನಮಗೆ ನಿತ್ಯ ಕರೆ ಮಾಡುತ್ತಿದ್ದಾರೆ. ಇದನ್ನು ಪ್ರಧಾನಿಯವರಿಗೆ ಮನವರಿಕೆ ಮಾಡಿದ್ದೇವೆ. ಕೆನೆಪದರ ಜಾರಿಗೊಳಿಸುವುದಿಲ್ಲ ಎಂದು ಅವರು ಭರವಸೆ ಕೊಟ್ಟಿದ್ದಾರೆ' ಎಂದರು.

ಬಿಜೆಪಿ ಸಂಸದರ ನಿಯೋಗವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಿತು

ಬೆಂಗಳೂರಿನಲ್ಲಿ ಬುಕ್ ಬ್ರಹ್ಮ ಸಾಹಿತ್ಯ ಉತ್ಸವಕ್ಕೆ ಚಾಲನೆ ● ವಿವಿಧ ಭಾಷೆಗಳ ಸಾಹಿತಿಗಳು ಭಾಗಿ

ತೆಂಕಣ ನುಡಿ ಕೌದಿಗೆ ಬಹುವಿಧದ ಅಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದ್ರಾವಿಡದ ನಮ್ಮೆಲ್ಲಾ ಭಾಷೆಗಳ ಮಧ್ಯೆ ಹಲವು ಸಾಮ್ಯತೆಗಳಿದ್ದರೂ, ಅವು ಭಿನ್ನ-ಭಿನ್ನವಾಗಿಯೇ ಇವೆ. ಪರಸ್ಪರ ವೈಶಿಷ್ಟ್ಯ ಕಾಯ್ದುಕೊಂಡಿವೆ' ಎಂದು ಮಾತು ಆರಂಭಿಸಿದ್ದು ಮಲಯಾಳ ಮತ್ತು ಇಂಗ್ಲಿಷ್ ಕವಿ ಕೆ. ಸಚ್ಚಿದಾನಂದನ್. ಈ ಮಾತಿಗೆ ಕನ್ನಡ, ತೆಲುಗು, ತಮಿಳು ಬರಹಗಾರರ ಒಮ್ಮತ; ಜತೆಗೆ ಭಿನ್ನಮತ.

ಹೀಗೆ ದ್ರಾವಿಡ ನುಡಿಗಳ ಕವಿ-ಕತೆಗಾರರನ್ನು ಒಂದೇ ವೇದಿಕೆಯಲ್ಲಿ ಕೂಡಿಸಿ, ಭಾಷಾ ಬಾಂಧವ್ಯದ ನೇಯ್ಗೆಗೆ ಅನುವು ಮಾಡಿಕೊಟ್ಟಿದ್ದು 'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ'. ಇಂಥದ್ದೊಂದು ಪ್ರಯತ್ನ ಇದೇ ಮೊದಲು. ದ್ರಾವಿಡ ಭಾಷೆಗಳ ಕೊಡು–ಕೊಳ್ಳುವಿಕೆ, ಸಾಗುತ್ತಿರುವ ಮತ್ತು ಸಾಗಬೇಕಾದ ಹಾದಿ ಏನು ಎಂಬುದರ ಮೂರು ದಿನಗಳ ಮಥನಕ್ಕೆ 'ತೆಂಕಣ ನುಡಿ ಕೌದಿ' ಗೋಷ್ಠಿಯೇ ನಡೆ ಬಿಂದುವಿನಂತಿತ್ತು.

ಗೋಷ್ಠಿ ದ್ರಾವಿಡ ನುಡಿಗಳಾದ್ದಾದರೂ, ಮಾತುಕತೆ ನಡೆದದ್ದು ಇಂಗ್ಲಿಷ್‌ನಲ್ಲಿ. ಕಡೆಗೆ, 'ಮುಂದಿನ ಬಾರಿ ಎಲ್ಲರಿಗೂ ಮನದಟ್ಟಾಗುವಂತೆ ನಮ್ಮದೇ ನುಡಿಗಳನ್ನಾಡುವ ಮಟ್ಟಿಗೆ ದ್ರಾವಿಡರು ಪರಸ್ಪರ ಬೆಸೆಯಬೇಕು' ಎಂಬ ಅಭಿಮತಕ್ಕೆ ಬಂದು ನಿಂತಿದ್ದು ಗೋಷ್ಠಿಯ ಸೊಬಗು.

ಸಚ್ಚಿದಾನಂದನ್, 'ಕನ್ನಡದ ವಚನಗಳನ್ನು ಮಲಯಾಳದಲ್ಲಿ ಕಾಣಲು ಸಾಧ್ಯವೇ? ಅಂತೆಯೇ ಮಲಯಾಳದ ಅಟ್ಟಕಥಾ ಕನ್ನಡದಲ್ಲಿ ಉಂಟೇ?' ಎಂದಾಗ, 'ದಕ್ಷಿಣವು ಒಂದೇ ಸಾಂಸ್ಕೃತಿಕ ದೇಶವಾದರೂ, ಭಾಷೆಯಿಂದ ಬೇರೆ–ಬೇರೆಯೆ' ಎಂದು ತಮಿಳು ಕತೆಗಾರ ಬಿ.ಜಯಮೋಹನ್ ದನಿಗೂಡಿಸಿದರು.

'ನಮ್ಮ ನಾಲ್ಕೂ ಭಾಷೆ ಮತ್ತು ಸಾಹಿತ್ಯಗಳನ್ನು ಪ್ರತ್ಯೇಕ ಎಂಬಂತೆ ನೋಡಲಾಗುತ್ತಿದೆ. ಆದರೆ ಇವು ಪರಸ್ಪರ ಪ್ರಭಾವದಲ್ಲಿ ಬೆಳೆದಿವೆ, ಬೆಳೆಯುತ್ತಿವೆ' ಎಂಬುದು ಕನ್ನಡ ಕವಿ, ನಾಟಕಕಾರ ಎಚ್.ಎಸ್.ಶಿವಪ್ರಕಾಶ್ ಅವರ ಭಿನ್ನಮತ. 'ತಮಿಳಿನ ಶಿಲಪ್ಪದಿಕಾರಂ ಮಾನವನ ಮೋಕ್ಷದ ವಿಚಾರವನ್ನು ಅನುಸಂಧಾನ ಮಾಡುತ್ತದೆ. ಶಿಲಪ್ಪದಿಕಾರಂ ರಚನೆಯಾದ ಎಷ್ಟೋ ಶತಮಾನಗಳ ನಂತರ ಆದಿಕವಿ ಪಂಪ ತನ್ನ ಆದಿಪುರಾಣದಲ್ಲಿ ಮಾಡಿದ್ದೂ ಮೋಕ್ಷದ ಚರ್ಚೆಯನ್ನೇ' ಎಂದು ಪ್ರತಿಪಾದಿಸಿದರು.

'ಜಾಗತೀಕರಣ ಮತ್ತು ನಗರದೆಡೆಗಿನ ವಲಸೆ ಇಂದಿನ ದ್ರಾವಿಡ ಸಾಹಿತ್ಯಗಳನ್ನು ಪ್ರಭಾವಿಸುತ್ತಿವೆ. ಕನ್ನಡವನ್ನೇ ಪರಿಗಣಿಸಿದರೆ, ಹೊಸ ತಲೆಮಾರಿನ ಬರಹಗಾರರು ಗ್ರಾಮೀಣ ಪ್ರದೇಶದವರೇ ಆಗಿದ್ದಾರೆ. ಬೆಂಗಳೂರಿಗರು ಕೂತು ಕನ್ನಡದಲ್ಲಿ ಬರೆಯುವುದು ತೀರಾ ಕಡಿಮೆ. ನಗರ ಮತ್ತು ಗ್ರಾಮೀಣ ಎಂಬ ಅಂತರವು ಭಾಷೆ ಮತ್ತು ಸಾಹಿತ್ಯದಲ್ಲೂ ಢಾಳಾಗಿ ತಲೆದೋರುತ್ತಿದೆ. ಹೊಸತಲೆಮಾರಿನವರು ಒಂದೆರಡು ಸಂಕಲನಗಳ ನಂತರ ಬರೆದಿದ್ದನ್ನೇ ಬರೆಯುತ್ತಿದ್ದಾರೆ. ದ್ರಾವಿಡದ ಎಲ್ಲಾ ಭಾಷೆಗಳೂ ಈ ಸವಾಲು ಎದುರಿಸುತ್ತಿವೆ' ಎಂದು ಕನ್ನಡಿಗ ಸಾಹಿತಿ ವಿವೇಕ ಶಾನಭಾಗ ಕಳವಳ ಮುಂದಿಟ್ಟರು.

ಚರ್ಚೆಯನ್ನು ಮತ್ತೊಂದು ಹಾದಿಗೆ ಹೊರಳಿಸಿದ ತೆಲುಗು ಕವಯತ್ರಿ ವೋಲ್ಗಾ (ಲಲಿತಾ ಕುಮಾರಿ), 'ದ್ರಾವಿಡ ಭಾಷಾ ಸಂಸ್ಕೃತಿಗಳು ಹಲವು ವಿಚಾರದಲ್ಲಿ ಸಾಮ್ಯತೆ ಇದ್ದರೂ, ಸಾಹಿತ್ಯವನ್ನು ಪರಸ್ಪರ ಹಂಚಿಕೊಳ್ಳುವಲ್ಲಿ ಹಿಂದೆ ಬಿದ್ದಿವೆ. ನಮ್ಮಲ್ಲಿಗೆ ಇಂಗ್ಲಿಷ್, ರಷ್ಯನ್, ಫ್ರೆಂಚ್, ಬಂಗಾಳಿ ಸಾಹಿತ್ಯಗಳು ಭಾಷಾಂತರವಾಗಿ ಬಂದಿವೆ. ಆದರೆ, ದ್ರಾವಿಡ ಭಾಷೆಗಳ ಮಧ್ಯೆಯೇ ಭಾಷಾಂತರವಾಗಿದ್ದು ತೀರಾ ಕಡಿಮೆ. ಇದನ್ನು ಪಟ್ಟು ಹಿಡಿದು ಮಾಡಬೇಕಾದ ಅಗತ್ಯವಿದೆ. ಈ ಮೂಲಕ ನಾವು ಪರಸ್ಪರ ಬೆರೆಯುವ ಕೆಲಸವಾಗಬೇಕು' ಎಂದು ತಿಳಿಸಿದರು.

'ತೆಂಕಣ ನುಡಿ ಕೌದಿ' ಉದ್ಘಾಟನಾ ಗೋಷ್ಠಿಯಲ್ಲಿ ಮಲಯಾಳ–ತಮಿಳು ಕತೆಗಾರ ಬಿ.ಜಯಮೋಹನ್ ಮಾತನಾಡಿದರು. ಎಚ್.ಎಸ್. ಶಿವಪ್ರಕಾಶ್, ಕೆ. ಸಚ್ಚಿದಾನಂದನ್, ವೋಲ್ಗಾ ಮತ್ತು ವಿವೇಕ್ ಶಾನಭಾಗ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ/ಎಂ. ಎಸ್.ಮಂಜುನಾಥ್

ವೇದಿಕೆಯಾಚೆಯ ಸಂವಾದ

ದ್ರಾವಿಡ ಭಾಷೆಗಳ ಬರಹಗಾರರು ಮತ್ತು ಓದುಗರನ್ನು ಒಂದೇ ವೇದಿಕೆಗೆ ತಂದರೂ, ಸ್ವಾರಸ್ಯಕರ ಮಾತುಕತೆ ನಡೆದದ್ದು ವೇದಿಕೆಯಾಚೆಯೇ. ನಗರದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ರೂಪಿಸಲಾಗಿದ್ದ ನಾಲ್ಕು ವೇದಿಕೆಗಳಲ್ಲಿ ಏಕಕಾಲಕ್ಕೆ ಗೋಷ್ಠಿಗಳು ನಡೆಯುತ್ತಿದ್ದವು. ಒಂದು ವೇದಿಕೆಯಲ್ಲಿ ಒಂದೆಡೆ ಕನ್ನಡದ ಗೋಷ್ಠಿಯಿದ್ದರೆ, ಮತ್ತೊಂದೆಡೆ ತಮಿಳು. ಒಮ್ಮೆ ಮಲಯಾಳದ ಮಾತುಕತೆಯಾದರೆ, ಇನ್ನೊಮ್ಮೆ ತೆಲುಗು ಚರ್ಚೆ.

ದ್ರಾವಿಡ ಭಾಷೆಯ ಹೆಸರಾಂತ ಬರಹಗಾರರು ಭಾಗಿಯಾಗಿದ್ದ ಸಾಹಿತ್ಯ ಉತ್ಸವದಲ್ಲಿ, ಅವರನ್ನು ಕಣ್ತುಂಬಿಕೊಳ್ಳಲೆಂದೇ ಓದುಗರು ಕಿಕ್ಕಿರಿದು ತುಂಬಿದ್ದರು. ಒಂದೇ ಭಾಷೆಗೆ ಸಂಬಂಧಿಸಿದ ಗೋಷ್ಠಿಗಳು ನಡೆಯುವಾಗಲೆಲ್ಲಾ ಓದುಗರು ಸಭಾಂಗಣಗಳಲ್ಲಿ ನಿಂತು ಬರಹಗಾರರ ಮಾತಿಗೆ ಕಿವಿಯಾದರು. ಗೋಷ್ಠಿ ಮುಗಿಸಿ ಹೊರಬಂದಾಗ ತಮ್ಮೊಂದಿಗೆ ಮಾತನಾಡಲು ಮುಗಿಬಿದ್ದ ಓದುಗರನ್ನು ಬರಹಗಾರರು ಹಸನ್ಮುಖಿಯಾಗಿಯೇ ಎದುರುಗೊಂಡರು.

ಲೇಖಕ–ಸಹೃದಯರ ಸಂವಾದಕ್ಕೆ ಎಡೆಮಾಡಿಕೊಟ್ಟದ್ದು ಊಟದ ಅಂಗಳ. ಅಲ್ಲಲ್ಲಿ ಹಾಕಿದ್ದ ಮೇಜುಗಳಲ್ಲಿ ಕೈಯೂರಿ ಕಾಫಿ–ಟೀ ಹೀರುತ್ತಲೇ ಹರಟೆ. ಈಚೆಗೆ ಬಂದ ಹೊಸ ಕಥಾಸಂಕಲನ, ಸಿನೆಮಾ, ವಿಮರ್ಶೆ, ಕೃತಕ ಬುದ್ಧಿಮತ್ತೆ, ಬೆಂಗಳೂರಿನ ಸಂಚಾರ ದಟ್ಟಣೆಯೂ ಮಾತಿನ ಮಧ್ಯೆ ಬಂದುಹೋದವು.

'ಮಂಪರು' ಕೃತಿಗೆ 'ಕಾದಂಬರಿ ಪುರಸ್ಕಾರ'

ಬುಕ್ ಬ್ರಹ್ಮ ಸಂಸ್ಥೆ ನೀಡುವ 2024ನೇ ಸಾಲಿನ 'ಸ್ವಾತಂತ್ರ್ಯೋತ್ಸವ ಕಾದಂಬರಿ ಪುರಸ್ಕಾರ'ಕ್ಕೆ ಚೀಮನಹಳ್ಳಿ ರಮೇಶಬಾಬು ಅವರ 'ಮಂಪರು' ಕೃತಿ ಆಯ್ಕೆಯಾಗಿದೆ.

ಇಲ್ಲಿ ಶುಕ್ರವಾರ ನಡೆದ 'ಬುಕ್ ಬ್ರಹ್ಮ ಸಾಹಿತ್ಯೋತ್ಸವ'ದಲ್ಲಿ ಪುರಸ್ಕಾರಕ್ಕೆ ಆಯ್ಕೆಯಾದವರ ಹೆಸರು ಘೋಷಿಸಲಾಯಿತು. ರಮೇಶಬಾಬು ಹಾಗೂ ಅನಿಮಾ ಪ್ರಕಾಶನದ ಪರವಾಗಿ ಭಾಗವಹಿಸಿದ್ದ ಲೇಖಕ ಕನಕಪ್ಪ ವಾಗನಗೇರಿ ಅವರಿಗೆ ತಮಿಳು ಸಾಹಿತಿ ಪೆರುಮಾಳ್ ಮುರುಗನ್ ಪುರಸ್ಕಾರ ಪ್ರದಾನ ಮಾಡಿದರು. ಈ ಪುರಸ್ಕಾರವು ₹ 1 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ. ಇದರಲ್ಲಿ ಲೇಖಕರಿಗೆ ₹ 75 ಸಾವಿರ ಹಾಗೂ ಪ್ರಕಾಶಕರಿಗೆ ₹ 25 ಸಾವಿರ ಸೇರಲಿದೆ.

ಈ ವೇಳೆ ಸಪ್ನ ಬುಕ್ ಹೌಸ್ ಪ್ರಕಟಿಸಿರುವ ಆರ್. ಸುನಂದಮ್ಮ ಅವರ 'ಭರತಕಲ್ಪ', ದೇಸಿ ಪ್ರಕಾಶನ ಪ್ರಕಟಿಸಿರುವ ಮೊಗಳ್ಳಿ ಗಣೇಶ್ ಅವರ 'ಹೊಕ್ಕಳು', ಅಂಕಿತ ಪುಸ್ತಕ ಪ್ರಕಟಿಸಿರುವ ಗಜಾನನ ಶರ್ಮ ಅವರ 'ಪ್ರಮೇಯ', ತಮಟೆ ಪ್ರಕಾಶನ ಪ್ರಕಟಿಸಿರುವ ಗಂಗಪ್ಪ ತಳವಾರ್ ಅವರ 'ಧಾವತಿ' ಕೃತಿಗಳಿಗೆ ಸಮಾಧಾನಕರ ಬಹುಮಾನ ನೀಡಲಾಯಿತು. ಈ ನಾಲ್ಕು ಕೃತಿಗಳಿಗೆ ತಲಾ ₹ 5 ಸಾವಿರ ನಗದು, ಪ್ರಶಸ್ತಿ ಫಲಕವನ್ನು ನೀಡಲಾಯಿತು.

ಪ್ರಶಸ್ತಿ ನಿರಾಕರಿಸಿದ ಪ್ರಕಾಶ್ ರಾಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಯನ್ನು ನಟ ಪ್ರಕಾಶ್ ರಾಜ್ ನಿರಾಕರಿಸಿದ್ದಾರೆ.

ಮೂರು ವರ್ಷಗಳ ವಾರ್ಷಿಕ ಪ್ರಶಸ್ತಿಯ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದ್ದ ಅಕಾಡೆಮಿ, 2024–25ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಿತ್ತು.

'ನಾನು ಈಗಷ್ಟೇ ರಂಗಭೂಮಿಗೆ ಮರಳಿ ಬಂದಿದ್ದೇನೆ. ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ. ನನಗಿಂತಲೂ ಅರ್ಹರು ರಂಗಭೂಮಿಯಲ್ಲಿ ಇರುವುದರಿಂದ, ಈ ಪುರಸ್ಕಾರವನ್ನು ಸ್ವೀಕರಿಸಲು ನನ್ನ ಮನಃಸಾಕ್ಷಿ ಒಪ್ಪುತ್ತಿಲ್ಲ' ಎಂದು ಪ್ರಕಾಶ್ ರಾಜ್ ಅವರು ಶುಕ್ರವಾರ್ 'ಎಕ್ಸ್' ಮಾಡಿದ್ದಾರೆ.

ಸಾಮಾಜಿಕ ನ್ಯಾಯಕ್ಕಾಗಿ ಲಿಂಗತ್ವ ಮತ್ತು ಲೈಂಗಿಕತೆ ಅಲ್ಪಸಂಖ್ಯಾತರ ಮೈತ್ರಿಕೂಟ ಇಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿಯೂ ಈ ಬಗ್ಗೆ ಪ್ರಸ್ತಾಪಿಸಿದ ಪ್ರಕಾಶ್ ರಾಜ್, 'ರಂಗಭೂಮಿ ಉಳಿಸಿ, ಬೆಳೆಸಿದ ಉತ್ತಮ ಅರ್ಹ ಕಲಾವಿದರಿಗೆ ಈ ಪ್ರಶಸ್ತಿ ನೀಡಬೇಕು' ಎಂದು ವೇದಿಕೆ ಮೇಲಿದ್ದ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಅವರಿಗೆ ಮನವಿ ಮಾಡಿದರು.

'ಪ್ರಕಾಶ್ ರಾಜ್ ಅವರ ಜತೆಗೆ ಇನ್ನೊಮ್ಮೆ ಮಾತನಾಡಿ, ಪ್ರಶಸ್ತಿ ಸ್ವೀಕರಿಸುವಂತೆ ಅವರನ್ನು ಒಪ್ಪಿಸಲಾಗುವುದು. ಇಷ್ಟಾಗಿಯೂ ಅವರು ನಿರಾಕರಿಸಿದರೆ ಬೇರೆಯವರನ್ನು ಆಯ್ಕೆ ಮಾಡಲಾಗುತ್ತದೆ' ಎಂದು ನಾಗರಾಜ ಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

12ಕ್ಕೆ ಶಿಕ್ಷಕರ 'ಬೆಂಗಳೂರು ಚಲೋ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡ್ತಿ, ವರ್ಗಾವಣೆಗೆ ಅಡ್ಡಿಯಾಗಿರುವ ವೃಂದ ಮತ್ತು ನೇಮಕಾತಿ ನಿಯಮ–2017ಕ್ಕೆ ತಿದ್ದುಪಡಿ ತಂದು ನ್ಯಾಯ ದೊರಕಿಸಿ ಕೊಡಬೇಕು ಎಂದು ಆಗ್ರಹಿಸಿ ಪ್ರಾಥಮಿಕ ಶಾಲಾ ಶಿಕ್ಷಕರು ಆ. 12ರಂದು ರಜೆ ಹಾಕಿ, ಬೆಂಗಳೂರು ಚಲೋ ಹಮ್ಮಿಕೊಂಡಿದ್ದಾರೆ.

ಅತ್ತ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳು 'ಸ್ವಾತಂತ್ರ್ಯ ಇಲ್ಲದ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು ಅಸಾಧ್ಯವಾಗಿದೆ. ಶಿಕ್ಷಣ ಇಲಾಖೆಯಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ' ಎಂದು ಆರೋಪಿಸಿ ಆ.15ರಂದು ಕರಾಳ ದಿನ ಆಚರಿಸುತ್ತಿವೆ.

ಪ್ರಾಥಮಿಕ ಶಾಲಾ ಶಿಕ್ಷಕರ ಬೇಡಿಕೆ: 2016ಕ್ಕಿಂತ ಮೊದಲು ನೇಮಕವಾದ ಶಿಕ್ಷಕರಿಗೆ 2017ರ ನಿಯಮ ಅನ್ವಯಿಸಬಾರದು. 1ರಿಂದ 8ನೇ ತರಗತಿಯ ಪ್ರಾಥಮಿಕ ಶಾಲೆಗಳಿಗೆ ನೇಮಕವಾದ ಶಿಕ್ಷಕರನ್ನು 1ರಿಂದ 5ನೇ ತರಗತಿಗೆ ಸೀಮಿತಗೊಳಿಸಿರುವ ಆದೇಶವನ್ನು ಹಿಂಪಡೆಯಬೇಕು. ಪದವಿ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಪದವೀಧರ ಪ್ರಾಥಮಿಕ ಶಿಕ್ಷಕರು (ಜಿಪಿಟಿ) ಎಂದು ಪರಿಗಣಿಸಬೇಕು. ಸೇವಾ ಜ್ಯೇಷ್ಠತೆ, ಬಡ್ತಿ, ವರ್ಗಾವಣೆ ಪ್ರಕ್ರಿಯೆಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು. ಬಡ್ತಿಯಲ್ಲಿ ಮೊದಲ ಆದ್ಯತೆ ನೀಡಬೇಕು. ಮುಖ್ಯಶಿಕ್ಷಕರ ಹುದ್ದೆಗೆ ಸೇವಾ ಹಿರಿತನ ಪರಿಗಣಿಸಿ ಬಡ್ತಿ ನೀಡಬೇಕು. ಬಿ.ಇಡಿ ಪದವೀಧರರಿಗೆ ಪ್ರೌಢಶಾಲೆಗೆ ಪರಿಗಣಿಸಬೇಕು ಎಂಬ ಬೇಡಿಕೆ ಮುಂದಿಟ್ಟುಕೊಂಡು ರಾಜ್ಯದ ಪ್ರಾಥಮಿಕ ಶಾಲೆಗಳ ಒಂದು ಲಕ್ಷಕ್ಕೂ ಹೆಚ್ಚಿನ ಶಿಕ್ಷಕರು ಬೆಂಗಳೂರು ಚಲೋ ಹಮ್ಮಿಕೊಂಡಿದ್ದಾರೆ.

ಆ.15ಕ್ಕೆ ಕರಾಳ ದಿನ: ಶಾಲಾ ಶಿಕ್ಷಣ ಇಲಾಖೆ ಸರ್ಕಾರಿ ಶಾಲೆಗಳಲ್ಲಿ ಯಾವ ನಿಯಮವನ್ನೂ ಪಾಲಿಸದೆ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಕಿರುಕುಳ ನೀಡುತ್ತಿದೆ. ಹೊಸ ಶಿಕ್ಷಣ ಸಂಸ್ಥೆಗಳಿಗೆ ರಚಿಸಿದ ನಿಯಮಗಳನ್ನು ನ್ಯಾಯಾಲಯದ ತೀರ್ಪು ಉಲ್ಲಂಘಿಸಿ ಹಳೆಯ ಶಿಕ್ಷಣ ಸಂಸ್ಥೆಗಳ ಮೇಲೂ ಹೇರುತ್ತಿದೆ. ಸಾಧ್ಯವಾಗದ ದಾಖಲೆಗಳನ್ನು ನೀಡಲು ಒತ್ತಡ ಹಾಕುವ ಮೂಲಕ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತಿದೆ. ಬಿಇಒ, ಡಿಡಿಪಿಐ ವರ್ಗಾವಣೆಯಲ್ಲೂ ಹಣಕಾಸಿನ ವ್ಯವಹಾರ ನಡೆಯುತ್ತಿದೆ. ಇಂಥವರು ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ವಸೂಲಿಗೆ ಇಳಿದಿದ್ದಾರೆ ಎಂಬ ಆರೋಪಿಸಿರುವ ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿ, ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ಸಮನ್ವಯ ಸಮಿತಿ, ಖಾಸಗಿ ಶಾಲಾ ವ್ಯವಸ್ಥಾಪಕ ಮಂಡಳಿಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಆಗ್ರಹಿಸಿ ಆ. 15ರಂದು ಕರಾಳ ದಿನ ಆಚರಿಸುತ್ತಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳು ಸ್ವಾತಂತ್ರ್ಯದ ದಿನ ಕರಾಳ ದಿನ ಆಚರಿಸುವುದನ್ನು ಒಪ್ಪಲಾಗದು. ಸರ್ಕಾರ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಸಮಸ್ಯೆಗಳಿಗೆ ಪರಿಹಾರ ಹುಡುಕಲಿ
ಎಸ್. ಸುರೇಶ್‌ಕುಮಾರ್, ಬಿಜೆಪಿ ಶಾಸಕ

ರಾಜ್ಯದ 6,523 ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರು ಇದ್ದಾರೆ. ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಡೆಸುವ ಹೋರಾಟದಿಂದ ಮಕ್ಕಳ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತದೆ
ವಿ.ಪಿ. ನಿರಂಜನಾರಾಧ್ಯ, ಶಿಕ್ಷಣ ತಜ್ಞ

ಶಿಕ್ಷಕರ ಬೇಡಿಕೆಯಲ್ಲಿ ಕಾನೂನಾತ್ಮಕ ಅಂಶಗಳಿದ್ದು, ವಿವಿಧ ಇಲಾಖೆಗಳಿಂದ ಅಭಿಪ್ರಾಯ ಸಂಗ್ರಹಿಸಿ, ಸಮಸ್ಯೆ ಬಗೆಹರಿಸಲಾಗುವುದು
ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,117
ಇಂದಿನ ಅಂತ್ಯ	24,367
▲	250
ದಿನದ ಗರಿಷ್ಠ	24,419

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹291-486
ದ್ವಿತಳಿ (ಬಿ.ವಿ) ₹300-629

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹68
ಮೈಸೂರು	
100ಕ್ಕೆ	₹470

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹945 (950)
ಸೂರ್ಯಕಾಂತಿ (ರಿಫೈನ್ಡ್)	₹955 (955)
ಪಾಮೋಲಿನ್	₹914 (912)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8500-9740
ಬೆಂಗಳೂರು	₹10000-12000
ದಾವಣಗೆರೆ	₹6800-6800
ತಿಪಟೂರು	₹9500-9900
ತುರುವೇಕೆರೆ	₹9300-9700

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹241
ಆರ್‌ಎಸ್‌ಎಸ್-5	₹231
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹220

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹16750
ಎಸಿ	₹10500
ಆರ್‌ಪಿ	₹18500
ಆರ್‌ಸಿ	₹10010

ಬ್ಯಾಂಕ್‌ಗಳ ಆಡಳಿತ ಸುಧಾರಣೆ, ಠೇವಣಿದಾರರ ರಕ್ಷಣೆಗೆ ಒತ್ತು: ಕೇಂದ್ರ

ಬ್ಯಾಂಕಿಂಗ್ ಮಸೂದೆ ಮಂಡನೆ

ನವದೆಹಲಿ (ಪಿಟಿಐ): ಬ್ಯಾಂಕ್‌ಗಳ ಆಡಳಿತ ಸುಧಾರಣೆ ಮತ್ತು ಠೇವಣಿದಾರರ ಹಿತರಕ್ಷಣೆಗಾಗಿ ಲೋಕಸಭೆಯಲ್ಲಿ ಬ್ಯಾಂಕಿಂಗ್ ಕಾನೂನು (ತಿದ್ದುಪಡಿ) ಮಸೂದೆ–2024 ಮಂಡಿಸಲಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಕಳೆದ ವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ಈ ಮಸೂದೆ ಮಂಡನೆಗೆ ಒಪ್ಪಿಗೆ ನೀಡಿತ್ತು.

ಈ ತಿದ್ದುಪಡಿಗಳು ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯನ್ನು ನಿಯಂತ್ರಿಸುವ 1924ರ ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1949ರ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1955ರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಾಯ್ದೆ, 1970ರ ಬ್ಯಾಂಕಿಂಗ್ ಕಂಪನಿಗಳ (ಸಂಸ್ಥೆಗಳ ಸ್ವಾಧೀನ ಮತ್ತು ವರ್ಗಾವಣೆ) ಕಾಯ್ದೆ ಹಾಗೂ 1980ರ ಬ್ಯಾಂಕಿಂಗ್ ಕಂಪನಿಗಳ (ಸಂಸ್ಥೆಗಳ ಸ್ವಾಧೀನ ಮತ್ತು ವರ್ಗಾವಣೆ) ಕಾಯ್ದೆ ಮೇಲೂ ಪರಿಣಾಮ ಬೀರಲಿವೆ ಎಂದು ಹೇಳಲಾಗಿದೆ.

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ತಿದ್ದುಪಡಿ ಬಗ್ಗೆ 2023–24ರ ಬಜೆಟ್ ಅಧಿವೇಶನದಲ್ಲಿಯೂ ಹಣಕಾಸು ಸಚಿವರು ಪ್ರಸ್ತಾಪಿಸಿದ್ದರು.

ಪ್ರತಿಪಕ್ಷಗಳ ವಿರೋಧ: ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಅವರು, ಮಸೂದೆಗೆ ವಿರೋಧ ವ್ಯಕ್ತಪಡಿಸಿದರು. 'ಸಹಕಾರ ಬ್ಯಾಂಕ್‌ಗಳಿಗೆ ಸಂಬಂಧಿಸಿದಂತೆ ಶಾಸನ ರೂಪಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಬೇಕಿದೆ' ಎಂದು ಒತ್ತಾಯಿಸಿದರು. ಇದಕ್ಕೆ ಆರ್‌ಎಸ್‌ಪಿ ಸಂಸದ ಎನ್.ಕೆ. ಪ್ರೇಮಚಂದ್ರನ್ ಕೂಡ ಧ್ವನಿಗೂಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, 'ಸಹಕಾರ ಬ್ಯಾಂಕ್‌ಗಳಿಗೆ ಸಂಬಂಧಿಸಿದಂತೆ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯಲ್ಲಿ ಕೇವಲ ಒಂದು ಅಥವಾ ಎರಡು ತಿದ್ದುಪಡಿಯನ್ನಷ್ಟೇ ಮಾಡಿಲ್ಲ. ಹಲವು ತಿದ್ದುಪಡಿಗಳನ್ನು ಮಾಡಲಾಗಿದೆ' ಎಂದು ಸಮರ್ಥಿಸಿಕೊಂಡರು.

ಬ್ಯಾಂಕಿಂಗ್ ಹೆಸರಿನಡಿ ಸಹಕಾರ ಬ್ಯಾಂಕ್‌ಗಳ ಆಶಯಕ್ಕೆ ಧಕ್ಕೆ ತರುವುದಿಲ್ಲ. ಅವುಗಳನ್ನು ದುರ್ಬಲಗೊಳಿಸುವ ಯಾವುದೇ ಪ್ರಯತ್ನಕ್ಕೆ ಸರ್ಕಾರ ಮುಂದಾಗುತ್ತಿಲ್ಲ. ತಿದ್ದುಪಡಿಗಳು ಮತ್ತು ನ್ಯಾಯಾಲಯದ ತೀರ್ಪುಗಳು ಈ ಕಾಯ್ದೆಯನ್ನು ಮತ್ತಷ್ಟು ಬಲಪಡಿಸುತ್ತವೆ ಎಂದರು.

ಅಧಿಕಾರಾವಧಿ

ಪ್ರಸ್ತುತ ಸಹಕಾರ ಬ್ಯಾಂಕ್‌ಗಳ ನಿರ್ದೇಶಕರ (ಅಧ್ಯಕ್ಷ ಮತ್ತು ಪೂರ್ಣಕಾಲಿಕ ನಿರ್ದೇಶಕರನ್ನು ಹೊರತುಪಡಿಸಿ) ಅಧಿಕಾರಾವಧಿಯು 8 ವರ್ಷ ಇದೆ. ಮಸೂದೆಯಲ್ಲಿ ಈ ಅವಧಿಯನ್ನು 10 ವರ್ಷಕ್ಕೆ ಹೆಚ್ಚಿಸಲಾಗಿದೆ. ಕೇಂದ್ರ ಸಹಕಾರ ಬ್ಯಾಂಕ್‌ನ ನಿರ್ದೇಶಕರು, ರಾಜ್ಯ ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿಯಲ್ಲಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಸಂಭಾವನೆ ನಿರ್ಧಾರ

ಸರ್ಕಾರವು ಬ್ಯಾಂಕ್‌ಗಳಿಗೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುತ್ತದೆ. ಅವರಿಗೆ ಎಷ್ಟು ಸಂಭಾವನೆ ನೀಡಬೇಕು ಎಂಬ ಸ್ವಾತಂತ್ರ್ಯವನ್ನು ಬ್ಯಾಂಕ್‌ಗಳಿಗೆ ನೀಡಲಾಗಿದೆ. ಲೆಕ್ಕ ಪರಿಶೋಧಕರ ಕಾರ್ಯ ನಿರ್ವಹಣೆಗೆ ಅನುಗುಣವಾಗಿ ಬ್ಯಾಂಕ್‌ಗಳು ಸಂಭಾವನೆ ನಿಗದಿಪಡಿಸಬಹುದಾಗಿದೆ.

ನಿರ್ದೇಶಕರ ಆಸ್ತಿ ಮೌಲ್ಯದ ಮಿತಿ ಏರಿಕೆ

ಕಳೆದ ಆರು ದಶಕದಿಂದಲೂ ಕಂಪನಿಗಳ ನಿರ್ದೇಶಕರ ಆಸ್ತಿ ಮೌಲ್ಯದ ಮಿತಿ ಹೆಚ್ಚಿಸಿರಲಿಲ್ಲ. ಈ ಮಸೂದೆಯಲ್ಲಿ ಮಿತಿಯನ್ನು ಹೆಚ್ಚಿಸಲಾಗಿದೆ.

ಯಾವುದೇ ಕಂಪನಿಯಲ್ಲಿ ನಿರ್ದೇಶಕರು ₹5 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಆಸ್ತಿಯ ಒಡೆತನ ಹೊಂದಿದ್ದರೆ ಅದನ್ನು 'ಸಬ್‌ಸ್ಟಾನ್ಷಿಯಲ್ ಇಂಟರೆಸ್ಟ್' ಎಂದು ನಿರ್ಧರಿಸಲಾಗುತ್ತದೆ. ಅಂತಹ ನಿರ್ದೇಶಕರಿಗೆ ಸಾಲ ನೀಡಲು ಆಡಳಿತ ಮಂಡಳಿಯ ಅನುಮೋದನೆ ಪಡೆಯುವುದು ಕಡ್ಡಾಯ. ಮಸೂದೆ ಪ್ರಕಾರ ನಿರ್ದೇಶಕರು ₹2 ಕೋಟಿ ಮೊತ್ತದ ಷೇರುಗಳ ಒಡೆತನ ಅಥವಾ ಮಾಲೀಕತ್ವ ಹೊಂದಿದ್ದರೆ ಈ ಮಾನದಂಡವನ್ನು ಪರಿಗಣಿಸಬೇಕಿದೆ.

ವರದಿ ಸಲ್ಲಿಕೆ

ಪ್ರಸ್ತುತ ಬ್ಯಾಂಕ್‌ಗಳು ನಿಯಮಾವಳಿ ಅನ್ವಯ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಪ್ರತಿ ತಿಂಗಳ ಎರಡನೇ ಮತ್ತು ನಾಲ್ಕನೇ ಶುಕ್ರವಾರ ವರದಿ ಸಲ್ಲಿಸುವುದು ಕಡ್ಡಾಯ. ಮಸೂದೆಯಲ್ಲಿ ಪ್ರತಿ ತಿಂಗಳ 15ರಂದು ಮತ್ತು ಕೊನೆಯ ದಿನದಂದು ವರದಿ ಸಲ್ಲಿಕೆಗೆ ಅವಕಾಶ ನೀಡಲಾಗಿದೆ.

ಈಗ ನಿಗದಿಪಡಿಸಿರುವ ಅವಧಿಯು ಪರಿಣಾಮಕಾರಿ ಹಾಗೂ ನಿಖರವಾದ ವರದಿ ಸಲ್ಲಿಕೆಗೆ ತೊಡಕಾಗಿದೆ. ಹಾಗಾಗಿ, ಇದನ್ನು ಬದಲಾಯಿಸಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಪ್ಲಾಸ್ಟಿಕ್ ಪಾರ್ಕ್‌ಗೆ ಕಾನೂನು ತೊಡಕು

ನವದೆಹಲಿ (ಪಿಟಿಐ): ಜಮೀನಿಗೆ ಸಂಬಂಧಿಸಿದ ಕಾನೂನು ತೊಡಕಿನಿಂದಾಗಿ ಕರ್ನಾಟಕದ ಮಂಗಳೂರಿನ ಗಂಜಿಮಠದ ಬಳಿ ನಿರ್ಮಾಣ ಮಾಡುತ್ತಿರುವ ಪ್ಲಾಸ್ಟಿಕ್ ಪಾರ್ಕ್ ಕಾಮಗಾರಿಯ ಪೂರ್ಣಕ್ಕೆ ವಿಳಂಬವಾಗಿದೆ ಎಂದು ಕೇಂದ್ರ ಸರ್ಕಾರವು, ಶುಕ್ರವಾರ ಲೋಕಸಭೆಗೆ ತಿಳಿಸಿದೆ.

'ಪಾರ್ಕ್ ನಿರ್ಮಾಣದ ಒಟ್ಟು ವೆಚ್ಚ ₹62.78 ಕೋಟಿ ಆಗಿದೆ. 2022ರ ಜನವರಿಯಲ್ಲಿಯೇ ಈ ಅನುದಾನಕ್ಕೆ ಸರ್ಕಾರವು ಅನುಮೋದನೆ ನೀಡಿದೆ' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಅವರು, ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಈ ಪ್ರಾಜೆಕ್ಟ್‌ಗೆ ಕೇಂದ್ರದ ಪಾಲು ₹31.38 ಕೋಟಿ ನೀಡಲಾಗಿದೆ. ಅಂತಿಮ ಅನುಮೋದನೆ ನೀಡಿದ ಐದು ವರ್ಷಗಳಲ್ಲಿ ಈ ಯೋಜನೆಯು ಮುಕ್ತಾಯಗೊಳ್ಳಬೇಕಿದೆ.

'ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ನೀಡಿರುವ ಮಾಹಿತಿ ಪ್ರಕಾರ ಇಲ್ಲಿಯವರೆಗೆ ಶೇ 55ರಷ್ಟು ಕಾಮಗಾರಿ ಪೂರ್ಣಗೊಂಡಿದೆ' ಎಂದು ಸಚಿವೆ ಅನುಪ್ರಿಯಾ ತಿಳಿಸಿದ್ದಾರೆ.

'ಉದ್ದೇಶಿತ ಪಾರ್ಕ್ ವ್ಯಾಪ್ತಿಯಲ್ಲಿ 9.33 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಾನೂನು ತೊಡಕು ಎದುರಾಗಿದೆ. ಇನ್ನೂ ಈ ಸಮಸ್ಯೆ ಬಗೆಹರಿದಿಲ್ಲ. ಹಾಗಾಗಿ, ಕೆಲವು ಕಾಮಗಾರಿಗಳು ಪೂರ್ಣಗೊಂಡಿಲ್ಲ. ಪ್ರಾಜೆಕ್ಟ್‌ನ ನಿರ್ಮಾಣ ವೆಚ್ಚದಲ್ಲಿ ಏರಿಕೆ ಮಾಡಿಲ್ಲ' ಎಂದು ವಿವರಿಸಿದ್ದಾರೆ.

ಆರೋಗ್ಯ ವಿಮೆ: ಖಾಸಗಿ ಕಂಪನಿ ಸ್ವಾಧೀನಕ್ಕೆ ಎಲ್‌ಐಸಿ ಚಿಂತನೆ

ನವದೆಹಲಿ (ಪಿಟಿಐ): 'ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಆರೋಗ್ಯ ವಿಮಾ ವಲಯಕ್ಕೆ ಕಾಲಿಡಲಿದೆ. ಇದಕ್ಕಾಗಿ ಖಾಸಗಿ ಕಂಪನಿಯೊಂದನ್ನು ಸ್ವಾಧೀನಪಡಿಸಿಕೊಳ್ಳಲು ಚಿಂತನೆ ನಡೆಸಿದೆ' ಎಂದು ಎಲ್‌ಐಸಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸಿದ್ಧಾರ್ಥ ಮೊಹಂತಿ ತಿಳಿಸಿದ್ದಾರೆ.

ಗುರುವಾರ ತ್ರೈಮಾಸಿಕ ಫಲಿತಾಂಶದ ಬಿಡುಗಡೆ ವೇಳೆ ಮಾತನಾಡಿದ ಅವರು, 'ಪ್ರತ್ಯೇಕವಾಗಿ ಆರೋಗ್ಯ ವಿಮಾ ವ್ಯವಹಾರ ನಡೆಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಖಾಸಗಿ ಕಂಪನಿಯೊಂದರಲ್ಲಿ ಹೆಚ್ಚಿನ ಷೇರುಗಳನ್ನು ಖರೀದಿಸುವ ಬಗ್ಗೆ ಚರ್ಚಿಸಲಾಗಿದೆ' ಎಂದು ಹೇಳಿದ್ದಾರೆ.

ಕಳೆದ ಆರ್ಥಿಕ ವರ್ಷದಂತೆಯೇ ಪ್ರಸಕ್ತ ಆರ್ಥಿಕ ವರ್ಷದಲ್ಲಿಯೂ ಈಕ್ವಿಟಿ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಭಾರತೀಯ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಐಆರ್‌ಡಿಎಐ) ನಿಯಮಾವಳಿ ಪ್ರಕಾರ ಒಂದೇ ಕಂಪನಿಗೆ ಜೀವ ವಿಮೆ ಮತ್ತು ಆರೋಗ್ಯ ವಿಮಾ ಸೌಲಭ್ಯ ಕಲ್ಪಿಸುವುದಕ್ಕೆ ಸಂಯೋಜಿತ ಪರವಾನಗಿ ನೀಡಲು ಅವಕಾಶವಿಲ್ಲ. ಹಾಗಾಗಿ, ಕೇಂದ್ರ ಸರ್ಕಾರವು ವಿಮಾ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಎಲ್‌ಐಸಿಗೆ ಈ ಪರವಾನಗಿ ನೀಡುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಮುಂಬೈ ಧಾರಣೆ

ಶೇಂಗಾ

09-08-2024

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	10100-10200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	890 (885)
ಪಾಮ್ ವಾರದ ಡೆಲಿವರಿ	912 (910)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹69,500 (69,000)
ಬೆಳ್ಳಿ ಕೆ.ಜಿ ₹80,200 (79,050)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಿನಿಮಯ ದರ

$ ಡಾಲರ್	83.95
£ ಪೌಂಡ್	107.13
€ ಯುರೊ	91.70
¥ ಯೆನ್ (100ಕ್ಕೆ)	57

₹691 ಕೋಟಿ ಬಿಡುಗಡೆಗೆ ಮನವಿ

ಉಂಡೆ ಕೊಬ್ಬರಿ: ಕೇಂದ್ರ ಸಚಿವರ ಜತೆ ಸೋಮಣ್ಣ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಉಂಡೆ ಕೊಬ್ಬರಿ ಮಾರಾಟ ಮಾಡಿರುವ ರೈತರಿಗೆ ಪಾವತಿ ಮಾಡಲು ₹691 ಕೋಟಿ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ಅವರು, ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದರು.

'ತುಮಕೂರು, ಮಂಡ್ಯ, ಹಾಸನ, ಮೈಸೂರು, ಚಾಮರಾಜನಗರ, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆಂಗು ಬೆಳೆಯುವ ರೈತರ ಹಿತಾಸಕ್ತಿ ಕಾಪಾಡಲು ಇದರಿಂದ ಅನುಕೂಲವಾಗುತ್ತದೆ' ಎಂದು ಸೋಮಣ್ಣ ಅವರು, ಸಚಿವರ ಗಮನಕ್ಕೆ ತಂದರು.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ವಿ. ಸೋಮಣ್ಣ ಮನವಿ ಸಲ್ಲಿಸಿ ಚರ್ಚಿಸಿದರು

ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ (ಎಂಎಸ್‌ಪಿ) ಮತ್ತೆ 7,500 ಟನ್ ಮಿಲ್ಲಿಂಗ್ ಕೊಬ್ಬರಿ (ಚಿಕ್ಕ ಚಿಕ್ಕ ತುಂಡು) ಖರೀದಿಸಲು ಕೇಂದ್ರ ಸರ್ಕಾರ ಈಚೆಗೆ ಒಪ್ಪಿಗೆ ನೀಡಿತ್ತು.

'ತುಮಕೂರು ಜಿಲ್ಲೆಯಲ್ಲಿ ಉಂಡೆ ಕೊಬ್ಬರಿ ಮಾರಾಟ ಮಾಡಿದ ರೈತರಿಗೆ ಕಳೆದ ವಾರ ₹346 ಕೋಟಿ ಪಾವತಿ ಮಾಡಲಾಗಿದೆ. ₹691 ಕೋಟಿ ಬಿಡುಗಡೆ ಮಾಡುವುದಾಗಿ ಕೃಷಿ ಸಚಿವರು ಭರವಸೆ ನೀಡಿದ್ದಾರೆ. ಹಾಗಾಗಿ, ರೈತರ ಹಣವನ್ನು ಶೀಘ್ರ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಸೋಮಣ್ಣ ತಿಳಿಸಿದರು.

ಜಿಗಿದ ಷೇರು ಸೂಚ್ಯಂಕಗಳು

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರಿಸ್, ಇನ್ಫೊಸಿಸ್ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಷೇರು ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಶೇ 1ರಷ್ಟು ಏರಿಕೆ ಕಂಡಿವೆ.

ಸೂಚ್ಯಂಕಗಳ ಏರಿಕೆಯಿಂದ ಹೂಡಿಕೆದಾರರು ₹4.46 ಲಕ್ಷ ಕೋಟಿ ಗಳಿಸಿದ್ದಾರೆ. ಬಿಎಸ್‌ಇಯಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯ ₹450 ಲಕ್ಷ ಕೋಟಿಗೆ ತಲುಪಿದೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 819 ಅಂಶ ಏರಿಕೆ ಕಂಡು 79,705ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ 1,098 ಅಂಶ ಹೆಚ್ಚಳ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 250 ಅಂಶ ಹೆಚ್ಚಳವಾಗಿ 24,367 ಅಂಶಕ್ಕೆ ಅಂತ್ಯಗೊಂಡಿತು. ವಹಿವಾಟಿನ ವೇಳೆ 302 ಅಂಶ ಏರಿಕೆಯಾಗಿತ್ತು.

'ಅಮೆರಿಕದಲ್ಲಿ ಆರ್ಥಿಕ ಹಿಂಜರಿತದ ಭೀತಿ ಕಡಿಮೆಯಾಗಿದೆ. ಇದು ಜಾಗತಿಕ ಷೇರುಪೇಟೆಗಳಲ್ಲಿ ಏರಿಕೆಗೆ ನೆರವಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನೆ) ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಮೋಟರ್ಸ್, ಟೆಕ್ ಮಹೀಂದ್ರ, ಜೆಎಸ್‌ಡಬ್ಲ್ಯು ಸ್ಟೀಲ್, ಎಸ್‌ಬಿಐ, ಎಚ್‌ಸಿಎಲ್ ಟೆಕ್ನಾಲಜೀಸ್, ರಿಲಯನ್ಸ್ ಇಂಡಸ್ಟ್ರಿಸ್ ಮತ್ತು ಇನ್ಫೊಸಿಸ್‌ನ ಷೇರಿನ ಮೌಲ್ಯದಲ್ಲಿ ಏರಿಕೆ ಆಗಿದೆ.

ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ಮಾರುತಿ ಸುಜುಕಿ ಕಂಪನಿಯ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಟೋಕಿಯೊ, ಸೋಲ್ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆ ಏರಿಕೆ ಕಂಡಿದ್ದರೆ, ಶಾಂಘೈ ಮಾರುಕಟ್ಟೆ ಇಳಿಕೆ ದಾಖಲಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		**ಪುತ್ತೂರು**		ಕೋಕ	21819-25699
ಕೋಕ	18000-28500	ಹೊಸತು	26500-38500	ಕೆಂಪುಗೋಟು	24619-26319
ಹೊಸತು	28500-38500	**ಶಿವಮೊಗ್ಗ**		ರಾಶಿ	44099-47300
ಹಳತು	38500-46500	ಬೆಟ್ಟೆ	40109-55555	ತಟ್ಟಿಬೆಟ್ಟೆ	36019-36089
ಚಿತ್ರದುರ್ಗ		ಗೊರಬಲು	17900-33669	**ಶಿರಸಿ**	
ಅಪಿ	49600-50000	ರಾಶಿ	30000-50599	ಬೆಟ್ಟೆ	30199-41209
ಬೆಟ್ಟೆ	35100-35500	ಸರಕು	51399-76007	ಬಿಳಿಗೋಟು	22230-29780
ಕೆಂಪುಗೋಟು	29600-30000	**ಸಿದ್ದಾಪುರ**		ಚಾಲಿ	32299-36769
ರಾಶಿ	49100-49500	ಬಿಳಿಗೋಟು	24699-28109	ರಾಶಿ	43899-46899
		ಚಾಲಿ	33029-35100		

ಸಂಕ್ಷಿಪ್ತ ಸುದ್ದಿ

ಸಾಲದ ಬಡ್ಡಿ ದರ ಹೆಚ್ಚಿಸಿದ ಕೆನರಾ ಬ್ಯಾಂಕ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧಾರಿತ ಸಾಲದ (ಎಂಸಿಎಲ್‌ಆರ್) ಮೇಲಿನ ಬಡ್ಡಿದರವನ್ನು ಶೇ 0.05ರಷ್ಟು ಹೆಚ್ಚಿಸಿದೆ. ಇದರಿಂದಾಗಿ ವಾಹನಗಳು ಹಾಗೂ ವೈಯಕ್ತಿಕ ಸಾಲಗಳ ಮೇಲಿನ ಇಎಂಐ ಹೆಚ್ಚಳವಾಗಲಿದೆ.

ಒಂದು ವರ್ಷದ ಎಂಸಿಎಲ್‌ಆರ್ ಬಡ್ಡಿದರವು ಶೇ 8.95ರಿಂದ ಶೇ 9ಕ್ಕೆ ಏರಿಕೆಯಾಗಲಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ಎರಡು ವರ್ಷ ಮತ್ತು ಮೂರು ವರ್ಷದ ಎಂಸಿಎಲ್‌ಆರ್ ಕ್ರಮವಾಗಿ ಶೇ 9.30 ಮತ್ತು ಶೇ 9.40ರಷ್ಟಾಗಿದೆ.

ಒಂದು, ಮೂರು ಮತ್ತು ಆರು ತಿಂಗಳ ಎಂಸಿಎಲ್‌ಆರ್ ಶೇ 8.35ರಿಂದ ಶೇ 8.80ಕ್ಕೆ ಏರಿಕೆಯಾಗಿದೆ. ಈ ಹೊಸ ಬಡ್ಡಿದರವು ಆಗಸ್ಟ್ 12ರಿಂದ ಜಾರಿಗೆ ಬರಲಿದೆ ಎಂದು ತಿಳಿಸಿದೆ.

ಚಿನ್ನದ ದರ ₹1,100, ಬೆಳ್ಳಿ ₹1,400 ಏರಿಕೆ

ನವದೆಹಲಿ/ ಬೆಂಗಳೂರು (ಪಿಟಿಐ): ಜಾಗತಿಕ ಮತ್ತು ದೇಶೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳದಿಂದಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು ₹1,100 ಏರಿಕೆಯಾಗಿ, ₹72,450ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1,400 ಹೆಚ್ಚಳವಾಗಿ, ₹82,500ಕ್ಕೆ ಮುಟ್ಟಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,468 ಡಾಲರ್ (ಅಂದಾಜು ₹2.07 ಲಕ್ಷ) ಮತ್ತು 27.60 ಡಾಲರ್‌ನಂತೆ (ಅಂದಾಜು ₹2,317) ಮಾರಾಟವಾಗಿದೆ.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರವು ₹71,630 ಮತ್ತು ಕೆ.ಜಿ ಬೆಳ್ಳಿ ಧಾರಣೆ ₹82,600 ಇದೆ.

ನೀಟ್–ಪಿಜಿ ಮುಂದೂಡಲು 'ಸುಪ್ರೀಂ' ನಕಾರ

ಒಂದನೇ ಪುಟದಿಂದ...

'ಎರಡು ಲಕ್ಷ ವಿದ್ಯಾರ್ಥಿಗಳು ಮತ್ತು ನಾಲ್ಕು ಲಕ್ಷ ಪೋಷಕರು ವಾರಾಂತ್ಯದಲ್ಲಿ ನಡೆಯಲಿರುವ ಪರೀಕ್ಷೆಯನ್ನು ಎದುರು ನೋಡುತ್ತಿದ್ದಾರೆ. ಅರ್ಜಿದಾರರ ಕಾರಣದಿಂದಾಗಿ ಲಕ್ಷಾಂತರ ವಿದ್ಯಾರ್ಥಿಗಳ ವೃತ್ತಿಜೀವನವನ್ನು ಅಪಾಯಕ್ಕೆ ತಳ್ಳಲು ಬಯಸುವುದಿಲ್ಲ. ಪರೀಕ್ಷೆಯನ್ನು ಮುಂದೂಡಲು ಸಾಧ್ಯವಿಲ್ಲ' ಎಂದು ಪೀಠವು ಹೇಳಿತು.

ಮುನ್ನೆಚ್ಚರಿಕೆ ಕ್ರಮಗಳ ಭಾಗವಾಗಿ ಮುಂದೂಡಲಾಗಿದ್ದ ನೀಟ್–ಪಿ.ಜಿ ಪರೀಕ್ಷೆಯನ್ನು ಆಗಸ್ಟ್ 11ರಂದು ಎರಡು ಪಾಳಿಯಲ್ಲಿ ನಡೆಸಲು ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಬಿಇಎಂಎಸ್) ನಿರ್ಧರಿಸಿತ್ತು.

ಪರೀಕ್ಷೆ ನಡೆಯಲಿರುವ ನಗರಗಳ ಪಟ್ಟಿಯನ್ನು ಎನ್‌ಟಿಎ ಜುಲೈ 31ರಂದು ಪ್ರಕಟಿಸಿದೆ. ನಿರ್ದಿಷ್ಟ ಪರೀಕ್ಷಾ ಕೇಂದ್ರಗಳನ್ನು ಆಗಸ್ಟ್ 8ರಂದು ಪ್ರಕಟಿಸಿದೆ. ಹಾಗಾಗಿ ಪರೀಕ್ಷಾರ್ಥಿಗಳಿಗೆ ನಿಗದಿತ ಸಮಯದೊಳಗೆ ಪರೀಕ್ಷಾ ಕೇಂದ್ರಗಳನ್ನು ತಲುಪುವುದು ಕಷ್ಟವಾಗಲಿದೆ ಎಂದು ವಿಶಾಲ್ ಸೊರೇನ್ ಹಾಗೂ ಇತರರು ಅರ್ಜಿಯಲ್ಲಿ ಉಲ್ಲೇಖಿಸಿದ್ದರು. ಪರೀಕ್ಷೆಯನ್ನು ಎರಡು ಪಾಳಿಗಳಲ್ಲಿ ನಡೆಸುವ ಎನ್‌ಟಿಎ ನಿರ್ಧಾರವನ್ನೂ ಪ್ರಶ್ನಿಸಿದ್ದರು.

ಭರವಸೆ ಜೀವಂತ, ನಿಲ್ಲದ ಶೋಧ

ವಯನಾಡ್: 131 ಮಂದಿ ನಾಪತ್ತೆ • ಇಂದು ಪ್ರಧಾನಿ ಭೇಟಿ

ವಯನಾಡ್ (ಪಿಟಿಐ): ಭೂಕುಸಿತ ಸಂಭವಿಸಿದ ಹತ್ತು ದಿನಗಳ ನಂತರವೂ ಇಲ್ಲಿ ನಾಪತ್ತೆ ಆದವರಿಗಾಗಿ ಹುಡುಕಾಟ ನಡೆದಿದೆ. ಈಗ ಬಂಧುಗಳು, ಅವಘಡದಲ್ಲಿ ಉಳಿದವರೂ ಶೋಧಕ್ಕೆ ಕೈಜೋಡಿಸಿದ್ದಾರೆ.

ಜಿಲ್ಲಾಡಳಿತದ ಪ್ರಕಾರ, ಚೂರಲ್‌ಮಲ, ಮುಂಡಕ್ಕೈನಲ್ಲಿ ಒಟ್ಟು 131 ಮಂದಿ ನಾಪತ್ತೆಯಾಗಿದ್ದಾರೆ.

ದುರಂತ ಸ್ಥಳಕ್ಕೆ ಶನಿವಾರ ಪ್ರಧಾನಿ ಭೇಟಿ ನೀಡಲಿದ್ದು, ಭದ್ರತಾ ಕಾರಣಗಳಿಗಾಗಿ ದಿನದ ಮಟ್ಟಿಗೆ ಶೋಧ ಕಾರ್ಯಕ್ಕೆ ವಿರಾಮ ಸಿಗಲಿದೆ. ಶುಕ್ರವಾರ ಬೆಳಿಗ್ಗೆ ಪ್ರದೇಶವನ್ನು ಎಸ್‌ಪಿಜಿ ಸುಪರ್ದಿಗೆ ಒಪ್ಪಿಸಲಾಗಿದೆ.

ಇದಕ್ಕೂ ಮುನ್ನ ಅವಘಡದ ಸ್ಥಳ ಮತ್ತು ಭೌಗೋಳಿಕ ವ್ಯಾಪ್ತಿ ಕುರಿತು ಮಾಹಿತಿ ಒದಗಿಸಿ ಶೋಧಕ್ಕೆ ಸಿಬ್ಬಂದಿಗೆ ನೆರವಾಗಲು ಪ್ರತಿ ಶಿಬಿರಗಳಿಂದ ನಾಲ್ಕು ಮಂದಿ ಸ್ಥಳೀಯರ ನೆರವು ಪಡೆಯಲಾಯಿತು.

ಪ್ರಧಾನಿ ಮೋದಿ ಭೇಟಿಯ ಬಳಿಕ ಭಾನುವಾರ ಮತ್ತೆ ಶೋಧ ಕಾರ್ಯವು ಮುಂದುವರಿಯಲಿದೆ ಎಂದು ಸಚಿವ ಪಿ.ಎ.ಮೊಹಮ್ಮದ್ ರಿಯಾಸ್ ಅವರು ತಿಳಿಸಿದರು.

ಮುಂಡಕ್ಕೈ, ಚೂರಲ್‌ಮಲದಲ್ಲಿ ಆರು ವಲಯಗಳನ್ನು ಗುರುತಿಸಿ ಶೋಧ ಕಾರ್ಯ ನಡೆಸಲಾಗುತ್ತಿದೆ. ನಾಪತ್ತೆಯಾದವರ ಪತ್ತೆಗೆ ಕೊನೆಯ ಯತ್ನವಾಗಿ ಅವರ ಬಂಧುಗಳು, ಸ್ಥಳೀಯರ ನೆರವನ್ನು ಪಡೆಯಲಾಗುತ್ತಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ತಿಳಿಸಿದ್ದಾರೆ.

ಭೂಮಿ ಅಲುಗಾಡಿದ ಅನುಭವ, ಆತಂಕ

ವಯನಾಡ್ (ಪಿಟಿಐ): ಜಿಲ್ಲೆಯ ವಿವಿಧೆಡೆ ಶುಕ್ರವಾರ ಬೆಳಿಗ್ಗೆ ಭಾರಿ ಶಬ್ದ ಕೇಳಿಬಂದಿದ್ದು, ಭೂಮಿ ಅಲುಗಾಡಿದ ಅನುಭವವಾಗಿದೆ. ಇದು, ನಿವಾಸಿಗಳು ಹಾಗೂ ಸ್ಥಳೀಯ ಆಡಳಿತದವರಲ್ಲಿ ಕೆಲಹೊತ್ತು ಆತಂಕವನ್ನು ಮೂಡಿಸಿತ್ತು.

ಭೂಕುಸಿತ ಪ್ರದೇಶಗಳ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದು, ಈ ಗ್ರಾಮಗಳ ವ್ಯಾಪ್ತಿಯಲ್ಲಿ ರಜೆ ಘೋಷಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಆರ್. ಮೇಘಶ್ರೀ ಅವರು ತಿಳಿಸಿದ್ದಾರೆ.

ಬಲವಯಲ್ ಗ್ರಾಮ ಮತ್ತು ವೈತ್ತಿರಿ ತಾಲ್ಲೂಕು ವ್ಯಾಪ್ತಿಯಲ್ಲಿ ಭೂಮಿ ಅಲುಗಾಡಿದ ಅನುಭವವಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

'ಶಬ್ದದ ಮೂಲ ಗುರುತಿಸಲಾಗುತ್ತಿದೆ. ಭೂಕಂಪದ ಸಂಜ್ಞೆ ಕಂಡುಬಂದಿಲ್ಲ' ಎಂದು ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಪ್ರಾಧಿಕಾರವು ಹೇಳಿಕೆ ನೀಡಿದೆ.

ಬಾಧಿತರಿಗೆ ಆರ್ಥಿಕ ನೆರವು –ಸರ್ಕಾರ

ತಿರುವನಂತಪುರ (ಪಿಟಿಐ): ಭೂಕುಸಿತದಿಂದಾಗಿ ವಸತಿ ಕಳೆದುಕೊಂಡಿರುವ ಚೂರಲ್‌ಮಲ, ಮುಂಡಕ್ಕೈ ನಿವಾಸಿಗಳಿಗೆ ಸ್ಥಳಾಂತರಕ್ಕೆ ಆರ್ಥಿಕ ನೆರವು ನೀಡಲು ಕೇರಳ ಸರ್ಕಾರ ತೀರ್ಮಾನಿಸಿದೆ.

ಮುಖ್ಯಮಂತ್ರಿ ಕಚೇರಿಯು ಈ ಕುರಿತು ಹೇಳಿಕೆ ನೀಡಿದೆ. ದುರಂತದ ಬಳಿಕ ಆದಾಯದ ಮೂಲ ಕಳೆದುಕೊಂಡಿರುವ ವಯಸ್ಕರಿಗೆ ನಿತ್ಯ ₹300 ಭತ್ಯೆ ನೀಡಲಾಗುವುದು ಎಂದು ತಿಳಿಸಿದೆ.

ಕುಟುಂಬ ಸದಸ್ಯರು ಗಂಭೀರ ಸ್ಥಿತಿಯಲ್ಲಿರುವುದು, ಆಸ್ಪತ್ರೆಗೆ ದಾಖಲಾಗಿರುವ ಪ್ರಕರಣ ಹೊರತುಪಡಿಸಿ ಈ ಸೌಲಭ್ಯ ಕುಟುಂಬದಲ್ಲಿ ಇಬ್ಬರು ವಯಸ್ಕರಿಗೆ ಸಿಗಲಿದೆ. ಗರಿಷ್ಠ 30 ದಿನ ಈ ಸೌಲಭ್ಯ ಸಿಗಲಿದೆ ಎಂದು ಸ್ಪಷ್ಟಪಡಿಸಿದೆ. ಮನೆ ಇಲ್ಲದವರಿಗೆ ವಸತಿ ಸೌಲಭ್ಯ ಕಲ್ಪಿಸುವ ಚಿಂತನೆ ಇದೆ. ಈ ಸಂಬಂಧ ವರದಿ ಸಲ್ಲಿಸುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ ಎಂದೂ ಸರ್ಕಾರ ತಿಳಿಸಿದೆ.

ಕೃಷಿಕರ ಸಂಘಗಳಿಂದ ₹1 ಕೋಟಿ ನೆರವು: ಠಾಣೆ (ಪಿಟಿಐ): ಪರಿಹಾರ ಕಾರ್ಯಗಳಿಗಾಗಿ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಮತ್ತು ಕೇರಳ ಕರ್ಷಕ ಸಂಘಂ (ಕೆಕೆಎಸ್) ಒಟ್ಟು ₹ 1 ಕೋಟಿ ದೇಣಿಗೆಯನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ನೀಡಿವೆ. ಉಭಯ ಸಂಘಟನೆಗಳ ಮುಖಂಡರು ಗುರುವಾರ ತಿರುವನಂತಪುರದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ನೆರವಿನ ಚೆಕ್ ಹಸ್ತಾಂತರಿಸಿದರು.

ಮಧ್ಯಂತರ ಸರ್ಕಾರ: ಸಲಹಾ ಮಂಡಳಿ ಸದಸ್ಯರಿಗೆ ಖಾತೆ ಹಂಚಿಕೆ

ಬಾಂಗ್ಲಾ: ಯೂನಸ್ ಬಳಿ ರಕ್ಷಣೆ, ಶಿಕ್ಷಣ

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರು ಶುಕ್ರವಾರ ನೂತನವಾಗಿ ನೇಮಕವಾಗಿರುವ ಸಂಪುಟ ಸಲಹೆಗಾರರ ಖಾತೆಗಳನ್ನು ಹಂಚಿಕೆ ಮಾಡಿದರು.

ಮೊಹಮ್ಮದ್ ಯೂನಸ್

ನೊಬೆಲ್ ಪ್ರಶಸ್ತಿ ಪುರಸ್ಕೃತ ಯೂನಸ್ ಅವರು ಗುರುವಾರ ಮುಖ್ಯ ಸಲಹೆಗಾರರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಇದು ಬಾಂಗ್ಲಾದೇಶದ ಪ್ರಧಾನಿ ಸ್ಥಾನಕ್ಕೆ ಸಮ. ರಕ್ಷಣೆ, ಸಾರ್ವಜನಿಕ ಆಡಳಿತ, ಶಿಕ್ಷಣ, ಇಂಧನ, ಆಹಾರ, ಜಲ ಸಂಪನ್ಮೂಲ ಮತ್ತು ಮಾಹಿತಿ ಸಚಿವಾಲಯ ಸೇರಿ ಒಟ್ಟು 27 ಸಚಿವಾಲಯಗಳು ಯೂನಸ್ ಅವರ ಬಳಿಯೇ ಇರಲಿವೆ.

> **ದೇಶದಲ್ಲಿ ಕಾನೂನು–ಸುವ್ಯವಸ್ಥೆ ಮರುಸ್ಥಾಪನೆಯೇ ನಮ್ಮ ಮೊದಲ ಆದ್ಯತೆ. ಇತರೆ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯವೂ ನಮಗೆ ಅಗತ್ಯ**
> **ಮೊಹಮ್ಮದ್ ತೌಹಿದ್ ಹುಸೇನ್**
> ವಿದೇಶಾಂಗ ವ್ಯವಹಾರಗಳ ಸಲಹೆಗಾರ

ವಿದ್ಯಾರ್ಥಿ ನಾಯಕರು, ಸೇನೆ ಮತ್ತು ನಾಗರಿಕ ಸಮಾಜದ ಮುಖಂಡರ ಸಲಹೆ ಪಡೆದು ಸಂಪುಟ ಸಲಹೆಗಾರರನ್ನು ಆಯ್ಕೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಾಜಿ ವಿದೇಶಾಂಗ ಕಾರ್ಯದರ್ಶಿ ಮೊಹಮ್ಮದ್ ತೌಹಿದ್ ಹುಸೇನ್ ಅವರನ್ನು ವಿದೇಶಾಂಗ ವ್ಯವಹಾರಗಳ ಉಸ್ತುವಾರಿ ಮತ್ತು ಸೇನೆಯ ನಿವೃತ್ತ ಬ್ರಿಗೇಡಿಯರ್ ಜನರಲ್ ಎಂ. ಶೇಖಾವತ್ ಹುಸೇನ್ ಅವರನ್ನು ಗೃಹ ಸಚಿವಾಲಯ ಉಸ್ತುವಾರಿ ನೀಡಲಾಗಿದೆ.

ಬಾಂಗ್ಲಾದೇಶ ಬ್ಯಾಂಕ್‌ನ ಮಾಜಿ ಗವರ್ನರ್ ಸಲಾಹುದ್ದೀನ್ ಅಹ್ಮದ್ ಅವರಿಗೆ ಹಣಕಾಸು ಮತ್ತು ಯೋಜನಾ ಸಚಿವಾಲಯ, ಮಾಜಿ ಅಟಾರ್ನಿ ಜನರಲ್ ಎ.ಎಫ್. ಹಸನ್ ಆರಿಫ್ ಸ್ಥಳೀಯ ಆಡಳಿತದ ಜವಾಬ್ದಾರಿ ನೀಡಲಾಗಿದೆ.

'ದೌರ್ಜನ್ಯದ ವಿರುದ್ಧ ವಿದ್ಯಾರ್ಥಿಗಳು' ಚಳವಳಿಯ ಸಂಘಟಕರಾದ ಎಂ. ನಹೀದ್ ಇಸ್ಲಾಂ ಮತ್ತು ಆಸಿಫ್ ಮಹಮದ್ ಅವರಿಗೂ ಸ್ಥಾನ ನೀಡಲಾಗಿದೆ. ಕ್ರಮವಾಗಿ ಅವರು, ದೂರಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ಯುವಜನ ಮತ್ತು ಕ್ರೀಡಾ ಸಚಿವಾಲಯದ ನೇತೃತ್ವ ವಹಿಸಲಾಗಿದೆ.

ಸಂಪುಟ ಸಲಹೆಗಾರರಲ್ಲಿ ಕೆಲವರು ಗುರುವಾರ ರಾತ್ರಿ ಪ್ರಮಾಣ ವಚನ ಸ್ವೀಕರಿಸಿರಲಿಲ್ಲ. ಸದ್ಯ, ಯೂನಸ್ ಅವರ ಬಳಿಯಿರುವ 27 ಖಾತೆಗಳಲ್ಲಿ ಕೆಲವನ್ನು ಅವರಿಗೆ ನೀಡುವ ನಿರೀಕ್ಷೆ ಇದೆ.

ವಿನೇಶ್ ಮೇಲ್ಮನವಿ: ಸಕಾರಾತ್ಮಕ ತೀರ್ಪಿನ ಭರವಸೆ ಎಂದ ಐಒಎ


ವಿನೇಶ್ ಫೋಗಟ್

ಪ್ಯಾರಿಸ್ (ಪಿಟಿಐ): ಭಾರತದ ವಿನೇಶ್ ಫೋಗಟ್ ಅವರು ತಮ್ಮನ್ನು ಒಲಿಂಪಿಕ್ ಕೂಟದ ಕುಸ್ತಿ ಸ್ಪರ್ಧೆಯ ಫೈನಲ್‌ನಿಂದ ಅನರ್ಹಗೊಳಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ಶುಕ್ರವಾರ ಕ್ರೀಡಾ ನ್ಯಾಯ ಮಂಡಳಿಯ (ಸಿಎಎಸ್) ಹಂಗಾಮಿ ವಿಭಾಗದಲ್ಲಿ ವಿಚಾರಣೆ ನಡೆಸಿತು.

ಮಹಿಳೆಯರ 50 ಕೆಜಿ ಕುಸ್ತಿ ವಿಭಾಗದಲ್ಲಿ ಫೈನಲ್ ತಲುಪಿದ್ದ ವಿನೇಶ್ ಅವರಿಗೆ ನಿಗದಿಗಿಂತ 100 ಗ್ರಾಂ ಹೆಚ್ಚು ತೂಕವಿದ್ದಾರೆ ಎಂಬ ಕಾರಣಕ್ಕೆ ಫೈನಲ್ ಬೌಟ್‌ನಿಂದ ಅನರ್ಹಗೊಳಿಸಲಾಗಿತ್ತು. ಈ ಕ್ರಮದ ವಿರುದ್ಧ ಕ್ರೀಡಾಕೂಟದ ಸಂದರ್ಭದಲ್ಲಿ ವಿವಾದ ಪರಿಹಾರಕ್ಕಾಗಿ ವಿಶೇಷವಾಗಿ ಸ್ಥಾಪಿಸಲಾದ ಕ್ರೀಡಾ ನ್ಯಾಯ ಮಂಡಳಿಯ ತಾತ್ಕಾಲಿಕ ವಿಭಾಗಕ್ಕೆ (ಅಡ್ ಹಾಕ್) ಮೇಲ್ಮನವಿ ಸಲ್ಲಿಸಿದ್ದರು.

‘ವಿನೇಶ್ ಸಲ್ಲಿಸಿದ ಅರ್ಜಿಯ ವಿಚಾರಣೆಯು ಈಗಾಗಲೇ ಮುಕ್ತಾಯವಾಗಿದ್ದು, ಭಾರತ ಒಲಿಂಪಿಕ್ ಸಂಸ್ಥೆಯು ಸಕಾರಾತ್ಮಕ ತೀರ್ಪಿನ ಭರವಸೆಯಲ್ಲಿದೆ’ ಎಂದು ಐಒಎ ಹೇಳಿಕೆಯಲ್ಲಿ ತಿಳಿಸಿದೆ.

ಮಂಗಳವಾರ ನಡೆದಿದ್ದ ಆರಂಭದ ಮೂರು ಸುತ್ತಿನ ಪಂದ್ಯಗಳಲ್ಲಿ ನಿಗದಿತ ತೂಕದ ಮಿತಿಯಲ್ಲಿದ್ದ ಕಾರಣ ತನಗೆ ಜಂಟಿಯಾಗಿ ಬೆಳ್ಳಿ ಪದಕದ ಗೌರವ ನೀಡಬೇಕೆಂದು ವಿನೇಶ್ ಕೋರಿದ್ದರು.

ಮೈಸೂರು ಓಪನ್ ಗಾಲ್ಫ್: ಅರ್ಜುನ್ ಶರ್ಮಗೆ ಮುನ್ನಡೆ

ಮೈಸೂರು: ಗಾಲ್ಫರ್ ಅರ್ಜುನ್ ಶರ್ಮ ಇಲ್ಲಿ ನಡೆಯುತ್ತಿರುವ ‘ಮೈಸೂರು ಓಪನ್-2024’ ಗಾಲ್ಫ್ ಟೂರ್ನಿಯಲ್ಲಿ ಶುಕ್ರವಾರ ಎರಡನೇ ಸುತ್ತಿನ ಅಂತ್ಯಕ್ಕೆ ಮುನ್ನಡೆ ಸಾಧಿಸಿದರು.

ಪ್ರೊಫೆಷನಲ್ ಗಾಲ್ಫ್ ಟೂರ್ ಆಫ್ ಇಂಡಿಯಾ (ಪಿಜಿಟಿಐ) ಹಾಗೂ ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯುಜಿಸಿ) ಸಹಯೋಗದಲ್ಲಿ ನಡೆದಿರುವ ಟೂರ್ನಿಯ ಎರಡನೇ ದಿನದಂದು ನೋಯ್ಡದ ಆಟಗಾರ ಅರ್ಜುನ್ ಲೀಡ್ ಪಡೆದರು. ಶೌರ್ಯ ಬಿನು, ಅಕ್ಷಯ್ ಶರ್ಮ ಮತ್ತು ಕಾರ್ತಿಕ್ ಶರ್ಮ ಜಂಟಿ ಎರಡನೇ ಸ್ಥಾನದಲ್ಲಿ ಮುನ್ನಡೆದರು.

ಗುರುವಾರ ಅಗ್ರಸ್ಥಾನದಲ್ಲಿದ್ದ ಅಮನ್ ಐದನೇ ಸ್ಥಾನಕ್ಕೆ ಕುಸಿದರೆ, ಮೈಸೂರಿನ ಹವ್ಯಾಸಿ ಗಾಲ್ಫರ್ ವೀರ್ ಗಣಪತಿ 12ನೇ ಸ್ಥಾನಕ್ಕೆ ಸರಿದರು.



ಪುರುಷರ ಫ್ರೀಸ್ಟೈಲ್ ಕುಸ್ತಿಯ 57 ಕೆ.ಜಿ. ವಿಭಾಗದಲ್ಲಿ ಭಾರತದ ಅಮನ್ ಸೆಹ್ರಾವತ್ (ನೀಲಿ ಪೋಷಾಕು) ಮತ್ತು ಪೋರ್ಟರಿಕೊದ ಟಾಯ್ ಡೇರಿಯನ್ ಕ್ರೂಜ್ ಅವರ ಸೆಣಸಾಟ (ಎಡಚಿತ್ರ). ಚಿನ್ನದ ಪದಕ ವಿಜೇತ ಜಪಾನ್‌ನ ರೇ ಹಿಗುಚಿ (ಎಡದಿಂದ ಎರಡನೆಯವರು), ಬೆಳ್ಳಿ ಪದಕ ವಿಜೇತ ಅಮೆರಿಕದ ಸ್ಪೆನ್ಸರ್ ರಿಚರ್ಡ್ ಲೀ, ಕಂಚಿನ ಪದಕ ವಿಜೇತರಾದ ಭಾರತದ ಅಮನ್ ಸೆಹ್ರಾವತ್ ಮತ್ತು ಉಜ್ಬೇಕಿಸ್ತಾನ್‌ನ ಗುಲೋಮ್‌ಜಾನ್ ಅಬ್ದುಲ್ಲೇವ್ ಸೆಲ್ಫಿ ತೆಗೆದುಕೊಂಡರು. –ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್

ಬಾಲ್ಯದಲ್ಲಿ ಅಪ್ಪ, ಅಮ್ಮನ ಅಗಲಿಕೆಯ ದುಃಖ ಅನುಭವಿಸಿದ್ದ ಕುಸ್ತಿಪಟು • ಪ್ಯಾರಿಸ್‌ನಲ್ಲಿ ಭಾರತಕ್ಕೆ ಒಲಿದ ಆರನೇ ಪದಕ

ಅಮನ್ ಸೆಹ್ರಾವತ್ ಛಲಕ್ಕೆ ಒಲಿದ ಕಂಚು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 11ನೇ ವಯಸ್ಸಿನಲ್ಲಿ ಅನಾಥನಾದ ಅಮನ್ ಸೆಹ್ರಾವತ್
- ಪುರುಷರ ವಿಭಾಗದಲ್ಲಿ ಭಾರತದ ಏಕೈಕ ಸ್ಪರ್ಧಿ
- ಗೆಳೆಯ ಸಾಗರ್ ಆಶ್ರಯದಲ್ಲಿ ಕುಸ್ತಿಪಟುವಾಗಿ ಬೆಳೆದ ಹರಿಯಾಣ ಹುಡುಗ

ಪ್ಯಾರಿಸ್: ಉತ್ತರ ದೆಹಲಿಯಲ್ಲಿರುವ ಛತ್ರಸಾಲ ಒಳಾಂಗಣ ಕ್ರೀಡಾಂಗಣವು ವಿಶ್ವದರ್ಜೆಯ ಪೈಲ್ವಾನರನ್ನು ಸಿದ್ಧಗೊಳಿಸುವ ಕಾರ್ಖಾನೆ. ಅವರು ಕೂಡ ಅದೇ ಕಾರ್ಖಾನೆಯ ಶ್ರೇಷ್ಠದರ್ಜೆಯ ಕುಸ್ತಿಪಟು.

21 ವರ್ಷದ ಅಮನ್ ಹನ್ನೊಂದು ವರ್ಷದ ಬಾಲಕನಾಗಿದ್ದಾಗ ಅನಾಥರಾಗಿದ್ದರು. ಇದೀಗ ಅವರು ಒಲಿಂಪಿಕ್ ಕೂಟದ ಕುಸ್ತಿಯಲ್ಲಿ ಪದಕಕ್ಕೆ ಕೊರಳೊಡ್ಡಿದ್ದಾರೆ. ಇದರೊಂದಿಗೆ ಸುಶೀಲ್ ಕುಮಾರ್, ಯೋಗೇಶ್ವರ್ ದತ್, ರವಿಕುಮಾರ್ ದಹಿಯಾ ಮತ್ತು ಬಜರಂಗ್ ಪೂನಿಯಾ ಅವರಂತಹ ಖ್ಯಾತನಾಮರ ಸಾಲಿಗೆ ಸೇರಿದರು.

ಶುಕ್ರವಾರ ರಾತ್ರಿ (ಭಾರತೀಯ ಕಾಲಮಾನ) ಚಾಂಪ್ ಡಿ ಮಾರ್ಸ್ ಅರೆನಾದಲ್ಲಿ ನಡೆದ ಕಂಚಿನ ಪದಕಕ್ಕಾಗಿ ನಡೆದ 57 ಕೆ.ಜಿ ವಿಭಾಗದ ಫ್ರೀಸ್ಟೈಲ್ ಕುಸ್ತಿಯ ಬೌಟ್‌ನಲ್ಲಿ ಅಮನ್ ಅವರು 13–5ರಿಂದ ಪೋರ್ಟರಿಕೊದ ಟಾಯ್ ಡೆರಿಯನ್ ಕ್ರೂಜ್ ವಿರುದ್ಧ ಗೆದ್ದರು. 29 ವರ್ಷದ ಅನುಭವಿ ಕ್ರೂಜ್ ಅವರು ಆಕ್ರಮಣಕಾರಿ ಶೈಲಿಯಲ್ಲಿ ಅಮನ್ ಅವರನ್ನು ಚಿತ್ ಮಾಡುವ ವಿಶ್ವಾಸದಲ್ಲಿ ಮ್ಯಾಟ್‌ಗೆ ಬಂದಿದ್ದರು. ಆದರೆ ಯುವ ಕುಸ್ತಿಪಟು ಅಮನ್ ಪಟ್ಟುಗಳನ್ನು ಪ್ರಯೋಗಿಸಿದರು. ಗೆಲುವು ಸಾಧಿಸಿದ ನಂತರ ಕೈಯೆತ್ತಿ ವಿಜಯದ ಸಂಕೇತ ತೋರಿಸಿದರು. ಹಿನ್ನೆಲೆಯಲ್ಲಿ ಮೈಕೆಲ್ ಜಾಕ್ಸನ್ ಅವರ ‘ಬೀಟ್ ಇಟ್’ ಸಂಗೀತ ಮೊಳಗುತ್ತಿತ್ತು.

ಈ ಒಲಿಂಪಿಕ್ಸ್‌ನಲ್ಲಿ ಬಹಳಷ್ಟು ನಿರಾಶೆಯ ಕ್ಷಣಗಳನ್ನು ಕಂಡಿರುವ ಭಾರತದ ಕುಸ್ತಿ ತಂಡದಲ್ಲಿ ಸಂತಸ ಮೂಡಲು ಕೂಡ ಅಮನ್ ಕಾರಣರಾದರು. ಮಹಿಳೆಯರ ವಿಭಾಗದ ಕುಸ್ತಿಯಲ್ಲಿ ಫೈನಲ್ ತಲುಪಿದ್ದ ವಿನೇಶ್ ಫೋಗಟ್ ಅವರು ದೇಹತೂಕ ಹೆಚ್ಚಳದ ಕಾರಣದಿಂದ ಅನರ್ಹಗೊಂಡಿದ್ದರು. 53 ಕೆ.ಜಿ. ವಿಭಾಗದಲ್ಲಿ ಅಂತಿಮ್ ಪಂಘಾಲ್ ಅವರು ಸೋತರು. ನಂತರ ನಿಯಮ ಉಲ್ಲಂಘನೆಯ ವಿವಾದದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ.

ಸಂಕಷ್ಟಗಳ ಜೀವನ: ಛತ್ರಸಾಲದಲ್ಲಿರುವ ಬಹಳಷ್ಟು ಕುಸ್ತಿಪಟುಗಳಂತೆಯೇ ಅಮನ್ ಅವರ ಜೀವನವೂ ಕಷ್ಟದ ಹಾದಿಯಲ್ಲಿ ಬೆಳೆದುಬಂದಿತು. 8ನೇ ವಯಸ್ಸಿನಲ್ಲಿಯೇ ತಾಯಿಯ ನಿಧನದ ದುಃಖ ಕಾಡಿತು. ಸುಶೀಲ್ ಕುಮಾರ್ ಅವರು 2012ರಲ್ಲಿ ಬೆಳ್ಳಿ ಪದಕ ಜಯಿಸಿದ್ದನ್ನು ನೋಡಿ ಅಮನ್ ಕುಸ್ತಿಯತ್ತ ಆಕರ್ಷಿತರಾಗಿದ್ದನ್ನು ತಂದೆ ಗಮನಿಸಿದರು. ಛತ್ರಸಾಲದಲ್ಲಿ ಕುಸ್ತಿ ಕಲಿಕೆಗೆ ಸೇರಿಸಿದರು. ತರಬೇತಿ ಆರಂಭವಾಯಿತು. ಕೆಲ ದಿನಗಳ ನಂತರ ಅನಾರೋಗ್ಯದ ಕಾರಣದಿಂದ ತಂದೆ ಮರಣ ಹೊಂದಿದ ಸುದ್ದಿ 11 ವರ್ಷದ ಬಾಲಕನನ್ನು ಘಾಸಿಗೊಳಿಸಿತು. ಇದರಿಂದಾಗಿ ಅಮನ್ ನಿರ್ಗತಿಕನಾಗಬೇಕಾದ ಪರಿಸ್ಥಿತಿ ಎದುರಾಯಿತು.

‘10–11 ವರ್ಷದ ವಯಸ್ಸಿನಲ್ಲಿ ಅಮ್ಮ, ಅಪ್ಪನನ್ನು ಕಳೆದುಕೊಂಡ ಅಮನ್ ಸ್ಥಿತಿ ಗಂಭೀರವಾಗಿತ್ತು. ಹಬ್ಬಗಳ ಸಂದರ್ಭದಲ್ಲಿ ನಾವೆಲ್ಲರೂ ನಮ್ಮ ಊರುಗಳಿಗೆ ಹೋಗುತ್ತಿದ್ದೆವು. ಕುಟುಂಬದೊಂದಿಗೆ ಹಬ್ಬ ಆಚರಿಸುತ್ತಿದ್ದೆವು. ಆದರೆ ಅಮನ್‌ಗೆ ಕುಟುಂಬವೇ ಇರಲಿಲ್ಲ. ಆಗೆಲ್ಲ ಆತ ಛತ್ರಸಾಲದಲ್ಲಿಯೇ ಉಳಿದುಬಿಡುತ್ತಿದ್ದ’ ಎಂದು ಅಮನ್ ಅವರ ಬಾಲ್ಯದ ಕೋಚ್ ಜೈವೀರ್ ಸಿಂಗ್ ಹೇಳಿದರು.

ಆದರೆ ಛತ್ರಸಾಲದಲ್ಲಿರುವ ಎಲ್ಲರೂ ಅಮನ್ ಬಗ್ಗೆ ಪ್ರೀತಿ ಮತ್ತು ಕಾಳಜಿ ತೋರಿದರು. ಅಮನ್‌ಗೆ ಆಪ್ತಮಿತ್ರನಾಗಿದ್ದ ಸಾಗರ್ ಊಟ, ವಸತಿ ಮತ್ತು ಬಟ್ಟೆಯನ್ನು ಕೊಡುತ್ತಿದ್ದ. ಅಮನ್ ಅವರ ಚಿಕ್ಕಪ್ಪ ಕೂಡ ಆಗಾಗ ಬಂದು ನೋಡಿಕೊಂಡು ಹೋಗುತ್ತಿದ್ದರು. ಸತತ ಸಂಪರ್ಕದಲ್ಲಿದ್ದರು. ಇದರಿಂದಾಗಿ ದುಃಖದಿಂದ ನಿಧಾನವಾಗಿ ಹೊರಬಂದ ಅಮನ್ ಕುಸ್ತಿ ತಮ್ಮ ಜೀವನದ ಪರಮೋಚ್ಛ ಗುರಿ ಎಂದು ನಿರ್ಧರಿಸಿದರು. ಕಠಿಣ ಅಭ್ಯಾಸದಿಂದ ಪಟ್ಟುಗಳನ್ನು ಕರಗತ ಮಾಡಿಕೊಂಡರು. 2021ರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದರು. 2022ರಲ್ಲಿ 23 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್‌ಷಿಪ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಚಿನ್ನ ಗೆದ್ದರು. ಈ ಸಾಧನೆ ಮಾಡಿದ ಮೊದಲ ಭಾರತೀಯ ಕುಸ್ತಿಪಟುವಾದರು.

ಇದರಿಂದಾಗಿ ಅವರು ಹಾಂಗ್‌ಝೌ ಏಷ್ಯನ್ ಗೇಮ್ಸ್‌ಗೆ ಆಯ್ಕೆಯಾದರು. ಅಲ್ಲಿಕಂಚು ಜಯಿಸಿದರು. ಇದರಿಂದಾಗಿ ಅವರಿಗೆ ಪ್ರತ್ಯೇಕ ವಸತಿ ಕೋಣೆ ಲಭಿಸಿತು.

‘ಏಷ್ಯನ್ ಗೇಮ್ಸ್ ಪದಕ ಜಯಿಸುವವರೆಗೂ ಅವರು ತಮ್ಮ ಮಿತ್ರ ಸಾಗರ್ ಜೊತೆಗೆ ಕೋಣೆಯಲ್ಲಿದ್ದರು. ಹಾಂಗ್‌ಝೌನಿಂದ ಬಂದ ನಂತರ ಒಂದಿಷ್ಟು ಹಣ ಲಭಿಸಿತು. ಅದರಿಂದಾಗಿ ಪ್ರತ್ಯೇಕ ಕೋಣೆ ಪಡೆದರು. ಅಮನ್ ಕಠಿಣ ಪರಿಶ್ರಮಿ ಮತ್ತು ಶ್ರದ್ಧಾವಂತ ಕುಸ್ತಿಪಟುವಾಗಿದ್ದಾರೆ. ಒಲಿಂಪಿಕ್ ಪದಕವು ಅವರ ಜೀವನವನ್ನೇ ಬದಲಿಸುವುದು ಖಚಿತ. 2028ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಇನ್ನೂ ದೊಡ್ಡಮಟ್ಟದ ಸಾಧನೆ ಮಾಡುವುದು ಅಮನ್ ಗುರಿಯಾಗಿದೆ’ ಎಂದು ಜೈವೀರ್ ಹೇಳಿದರು.

ಉ.ಪ್ರದೇಶ: ಸರಣಿ ಹಂತಕನ ಬಂಧನ


ಕುಲ್‌ದೀಪ್ ಗಂಗ್ವಾರ್

ಲಖನೌ (ಪಿಟಿಐ): ಉತ್ತರ ಪ್ರದೇಶದ ಬರೇಲಿ ಜಿಲ್ಲೆಯಲ್ಲಿ ಕಳೆದ ಕೆಲವು ತಿಂಗಳಿನಿಂದ 9 ಮಂದಿ ಮಹಿಳೆಯರನ್ನು ಹತ್ಯೆ ಮಾಡಿದ್ದಾನೆ ಎನ್ನಲಾದ ಸರಣಿ ಹಂತಕನೊಬ್ಬನನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಬಂಧಿತ ವ್ಯಕ್ತಿಯನ್ನು ಕುಲ್‌ದೀಪ್ ಗಂಗ್ವಾರ್ ಎಂದು ಗುರುತಿಸಲಾಗಿದ್ದು, ಜಿಲ್ಲೆಯ ನವಾಬ್‌ಗಂಜ್ ಪ್ರದೇಶದ ನಿವಾಸಿ ಎಂದು ಗುರುತಿಸಲಾಗಿದೆ. ಪ್ರಾಥಮಿಕ ತನಿಖೆಗೆ ಒಳಪಡಿಸಿದ ಬಳಿಕ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

‘ಕಳೆದ 9 ತಿಂಗಳಲ್ಲಿ ಆರು ಮಹಿಳೆಯರನ್ನು ಕೊಲೆ ಮಾಡಿರುವುದಾಗಿ ಕುಲ್‌ದೀಪ್ ಒಪ್ಪಿಕೊಂಡಿದ್ದಾನೆ’ ಎಂದು ಬರೇಲಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಕುಲ್‌ದೀಪ್ ಮದುವೆಯಾದ ತಕ್ಷಣವೇ ಅವನ ಪತ್ನಿ ಬಿಟ್ಟು ದೂರವಾಗಿದ್ದರು. ಅಲ್ಲಿಂದ ಅವನ ವರ್ತನೆಯಲ್ಲಿ ಬದಲಾವಣೆಯಾಗಿತ್ತು. ನಂತರ ಮಹಿಳೆಯರನ್ನು ಇಷ್ಟಪಡುತ್ತಿರಲಿಲ್ಲ’ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಮಹಿಳೆಯರ ಮೃತದೇಹಗಳನ್ನು ವಶಪಡಿಸಿಕೊಂಡ ಸ್ಥಳಗಳಿಗೆ ಆರೋಪಿಯನ್ನು ಕರೆದೊಯ್ಯಲಾಯಿತು. ಅವನ ವಿಚಾರಣೆ ಮುಂದುವರಿಸಲಾಗಿದ್ದು, ಇನ್ನಷ್ಟು ಮಾಹಿತಿ ಹೊರಬರುವ ಸಾಧ್ಯತೆಯಿದೆ’ ಎಂದು ವಿವರಿಸಿದ್ದಾರೆ.

‘ಗ್ರಾಮೀಣ ಭಾಗದಲ್ಲಿ ಮಹಿಳೆಯರನ್ನು ಪರಿಚಯಿಸಿಕೊಳ್ಳುತ್ತಿದ್ದ ಆರೋಪಿ, ದೈಹಿಕ ಸಂಬಂಧ ಬೆಳೆಸುವಂತೆ ಒತ್ತಾಯಿಸುತ್ತಿದ್ದ. ಅದಕ್ಕೆ ಪ್ರತಿಭಟಿಸಿದ ಮಹಿಳೆಯರನ್ನು ಹತ್ಯೆ ಮಾಡಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

ಆಪರೇಷನ್ ತಲಾಷ್: ಜಿಲ್ಲೆಯಲ್ಲಿ ಮಹಿಳೆಯರ ಸರಣಿ ಹತ್ಯೆಗಳು ಹೆಚ್ಚಾದ ಬಳಿಕ ಆರೋಪಿಯನ್ನು ಸೆರೆಹಿಡಿಯಲು ‘ವಾರ್ ರೂಂ’ ಸಿದ್ಧಪಡಿಸಿ, ‘ಆಪರೇಷನ್ ತಲಾಷ್’ ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಲಾಗಿತ್ತು. 22 ತಂಡಗಳಲ್ಲಿ, ಜಿಲ್ಲೆಯ ವಿವಿಧೆಡೆ 1,500 ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲನೆ ಒಳಪಡಿಸಲಾಗಿತ್ತು ಎಂದು ಬರೇಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅನುರಾಗ್ ಆರ್ಯ ಮಾಹಿತಿ ನೀಡಿದ್ದಾರೆ.

ಆರೋಪಿಯು ಓಡಾಡಿದ್ದ ಜಾಗದಲ್ಲಿ ರೈತರಂತೆ ವೇಷ ಬದಲಿಸಿ ಪೊಲೀಸರು, ಹುಡುಕಾಟ ನಡೆಸಿದ್ದರು. ಈ ವೇಳೆ ಜನರು ನೀಡಿದ ಮಾಹಿತಿ ಆಧರಿಸಿ, ಜಿಲ್ಲಾ ಪೊಲೀಸರು ಗುರುವಾರ ಮೂರು ರೇಖಾಚಿತ್ರ ಬಿಡುಗಡೆಗೊಳಿಸಿದ್ದರು.

ಸಂಜೆ ಹೊಲದಲ್ಲಿ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ 45ರಿಂದ 65 ವರ್ಷದ ಮಹಿಳೆಯರನ್ನು ಅಡ್ಡಗಟ್ಟುತ್ತಿದ್ದ ಆರೋಪಿಯು ನಂತರ ಸೀರೆ ಅಥವಾ ಸ್ಕಾರ್ಫ್‌ನಿಂದ ಕತ್ತು ಹಿಸುಕಿ ಕೊಲೆ ಮಾಡುತ್ತಿದ್ದ. ಮೃತದೇಹವನ್ನು ಸನಿಹದ ಹೊಲದಲ್ಲಿ ಎಸೆದು ಅಲ್ಲಿಂದ ಪರಾರಿ ಆಗುತ್ತಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನೃತ್ಯ ಪ್ರದರ್ಶನ... ವಿಶ್ವ ಆದಿವಾಸಿ ದಿನದ ಅಂಗವಾಗಿ ಪಶ್ಚಿಮ ಬಂಗಾಳದ ಬಿರ್‌ಭೂಮ್ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯದವರು ಶುಕ್ರವಾರ ನೃತ್ಯ ಪ್ರದರ್ಶಿಸಿದರು ಪಿಟಿಐ ಚಿತ್ರ

ಕಂಡಕ್ಟರ್ ಮೇಲೆ ಹಾವು ಎಸೆದ ಮಹಿಳೆ

ಹೈದರಾಬಾದ್ (ಪಿಟಿಐ): ಕುಡಿದ ಮತ್ತಿನಲ್ಲಿ ಮಹಿಳೆಯೊಬ್ಬರು ಬಸ್ ಮೇಲೆ ಬಾಟಲಿ ತೂರಿ, ಮಹಿಳಾ ಕಂಡಕ್ಟರ್ ಮೇಲೆ ಹಾವು ಎಸೆದಿದ್ದಾರೆ. ಇದು ಹೈದರಾಬಾದ್‌ನಲ್ಲಿ ನಡೆದಿದ್ದು, ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಗುರುವಾರ ಸಂಜೆ ವಿದ್ಯಾನಗರದಲ್ಲಿ ತೆಲಂಗಾಣ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ (ಟಿಜಿಎಸ್‌ಆರ್‌ಟಿಸಿ) ಸೇರಿದ ಬಸ್ ನಿಲ್ಲಿಸಿಲ್ಲ ಎಂಬ ಕಾರಣಕ್ಕೆ ಮಹಿಳೆ ಮದ್ಯದ ಬಾಟಲಿ ಎಸೆದು, ಬಸ್ ಹಿಂದಿನ ಗಾಜಿಗೆ ಹಾನಿ ಮಾಡಿದರು. ಇದನ್ನು ಕಂಡಕ್ಟರ್ ಪ್ರಶ್ನಿಸಿದಾಗ, ತನ್ನ ಬ್ಯಾಗ್‌ನಿಂದ ಹಾವನ್ನು ತೆಗೆದು ಕಂಡಕ್ಟರ್ ಮೇಲೆ ಎಸೆದಿದ್ದಾರೆ.

ಘಟನೆಯ ಕುರಿತು ನಲ್ಲಕುಂಟಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವುದಾಗಿ ಟಿಜಿಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ. ವಿದ್ಯಾನಗರ ಬಸ್ ನಿಲ್ದಾಣದಲ್ಲಿ ಚಾಲಕ ವಾಹನವನ್ನು ನಿಲ್ಲಿಸದ ಕಾರಣ ಮಹಿಳೆ ಬಸ್ ಮೇಲೆ ದಾಳಿ ಮಾಡಿದ್ದಾರೆ ಎಂಬುದು ಸುಳ್ಳು ಎಂದೂ ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆರೋಪಿ ಪತಿ ಹಾವು ಹಿಡಿಯುವವರಾಗಿದ್ದು,ನಾಗರ ಪಂಚಮಿ ನಿಮಿತ್ತ ಮಹಿಳೆ ಹಾವನ್ನು ತನ್ನೊಂದಿಗೆ ತೆಗೆದುಕೊಂಡು ಹೋಗುತ್ತಿದ್ದರು.

ಮಣಿಪುರದಲ್ಲಿ ಗುಂಡಿನ ಚಕಮಕಿ

ಇಂಫಾಲ್ (ಪಿಟಿಐ): ಮಣಿಪುರದ ಕಕ್ಚಿಂಗ್ ಜಿಲ್ಲೆಯಲ್ಲಿ ಶಸ್ತ್ರಾಸ್ತ್ರಧಾರಿ ಬಂಡುಕೋರರ ಗುಂಪುಗಳ ನಡುವೆ ಶುಕ್ರವಾರ ಗುಂಡಿನ ಚಕಮಕಿ ನಡೆದಿದೆ ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ತಿಳಿಸಿದ್ದಾರೆ.

‘ಒಂದೇ ಸಮುದಾಯಕ್ಕೆ ಸೇರಿದ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದ್ದು, ಪರಿಸ್ಥಿತಿಯನ್ನು ಹತೋಟಿಗೆ ತರಲು ಭದ್ರತಾ ಪಡೆಗಳು ಸ್ಥಳಕ್ಕೆ ಧಾವಿಸಿವೆ’ ಎಂದು ಅವರು ಹೇಳಿದ್ದಾರೆ.

ಗಡಿಯಲ್ಲಿ ಹೆಚ್ಚಿನ ಸೈನಿಕರು ಸಿ.ಸಿ.ಟಿ.ವಿ ಕ್ಯಾಮೆರಾ ನಿಗಾ

ಜಲಂಧರ್ (ಪಿಟಿಐ): ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಪಂಜಾಬ್–ಜಮ್ಮು ಅಂತರರಾಜ್ಯ ಗಡಿಯುದ್ದಕ್ಕೂ ಹೆಚ್ಚಿನ ಸೈನಿಕರನ್ನು ನಿಯೋಜಿಸಿದೆ ಮತ್ತು ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಿದೆ ಎಂದು ಬಿಎಸ್‌ಎಫ್‌ನ ಪಂಜಾಬ್ ಗಡಿಯ ಮುಖ್ಯಸ್ಥ ಅತುಲ್ ಫುಲ್‌ಜೇಲ್ ತಿಳಿಸಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚುತ್ತಿರುವ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇನ್‌ಸ್ಪೆಕ್ಟರ್ ಜನರಲ್ (ಐಜಿ) ಅತುಲ್ ಫುಲ್‌ಜೇಲ್ ಅವರು, ‘ಪಠಾಣ್‌ಕೋಟ್ ಜಿಲ್ಲೆಯ ಗುರುದಾಸ್‌ಪುರದ ಉದ್ದಕ್ಕೂ ಹೆಚ್ಚುವರಿ ಸೈನಿಕರನ್ನು ನಿಯೋಜಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಲಾಗಿದೆ. ಈ ಪ್ರದೇಶದಲ್ಲಿ ಹೆಚ್ಚು ಎಚ್ಚರದಿಂದ ಕಾರ್ಯ ನಿರ್ವಹಿಸಲಾಗುತ್ತಿದೆ’ ಎಂದರು.

ಮಾದಕವಸ್ತು ಕಳ್ಳಸಾಗಣೆ ಕುರಿತು ಪ್ರತಿಕ್ರಿಯಿಸಿದ ಅವರು, ‘ರಸ್ತೆ ಮಾರ್ಗವಾಗಿ ಕಳ್ಳಸಾಗಾಣಿಕೆ ಸಾಧ್ಯವಿಲ್ಲ, ಆದರೆ ಡ್ರೋನ್ ಮೂಲಕ ನಡೆಯುತ್ತಿದೆ’ ಎಂದರು.

‘ದೊಡ್ಡ ದೊಡ್ಡ ಡ್ರೋನ್‌ಗಳ ಮೂಲಕ ಕಳ್ಳಸಾಗಣೆಯು ಕಳೆದ ವರ್ಷ ಅಕ್ಟೋಬರ್‌ನಿಂದ ನಿಂತಿದೆ. ಆದರೆ ಈಗ ಸಣ್ಣ ಡ್ರೋನ್ ಮೂಲಕ ಅವ್ಯವಹಾರ ನಡೆಯುತ್ತಿದೆ. ಅವುಗಳ ಶಬ್ದವೂ ಕಡಿಮೆ ಇರುತ್ತದೆ, ಕಣ್ಣಿಗೂ ಗೋಚರವಾಗುವುದಿಲ್ಲ’ ಎಂದು ಹೇಳಿದರು.

‘ಕಿಲೋಮೀಟರ್‌ಗಟ್ಟಲೆ ಎತ್ತರದಲ್ಲಿ ಅವು ಹಾರಾಡುವುದರಿಂದ ಹೊಡೆದುರುಳಿಸುವುದು ಕಷ್ಟ. ಆದಾಗ್ಯೂ ಸಾಕಷ್ಟು ಡ್ರೋನ್‌ಗಳನ್ನು ಸೈನಿಕರು ಹೊಡೆದುರುಳಿಸಿದ್ದಾರೆ’ ಎಂದು ತಿಳಿಸಿದರು.

ಪೂಜಾ ಖೇಡ್ಕರ್ ತಂದೆ ವಿರುದ್ಧ ಎಫ್‌ಐಆರ್

ಡಾ.ಪೂಜಾ ಖೇಡ್ಕರ್

ಪುಣೆ (ಪಿಟಿಐ): ಇಲ್ಲಿನ ಸರ್ಕಾರಿ ಅಧಿಕಾರಿಗಳ ಮೇಲೆ ಬೆದರಿಕೆ ಮತ್ತು ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಪೂಜಾ ಖೇಡ್ಕರ್ ತಂದೆ ದಿಲೀಪ್ ಖೇಡ್ಕರ್ ಅವರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಶುಕ್ರವಾರ ಅಧಿಕಾರಿಗಳು ತಿಳಿಸಿದ್ದಾರೆ.

ತಹಶೀಲ್ದಾರರು ನೀಡಿದ ದೂರಿನ ಆಧಾರದ ಮೇಲೆ ಇಲ್ಲಿನ ಬಂಡ್‌ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

‘ಪೂಜಾ ಖೇಡ್ಕರ್ ಅವರು ಸಹಾಯಕ ಜಿಲ್ಲಾಧಿಕಾರಿಯಾಗಿ ನೇಮಕಗೊಂಡ ಸಂದರ್ಭದಲ್ಲಿ, ದಿಲೀಪ್ ಖೇಡ್ಕರ್ ಅವರು ತಹಶೀಲ್ದಾರ್ ದೀಪಕ್ ಅಖಾಡೆ ಅವರಿಗೆ ಬೆದರಿಕೆ ಹಾಕಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ ಮತ್ತು ಆಡಳಿತಾತ್ಮಕ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವ ಹಕ್ಕಿಲ್ಲದಿದ್ದರೂ ಸಹ ತಮ್ಮ ಮಗಳಿಗೆ ಕ್ಯಾಬಿನ್ ನೀಡುವಂತೆ ಕೇಳಿದರು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ ಎಂದು ಅವರು ಹೇಳಿದರು.

ಶಾಲೆಗಳಲ್ಲಿ ‘ಶುಭೋದಯ’ ಬದಲು ‘ಜೈಹಿಂದ್’

ಚಂಡೀಗಢ (ಪಿಟಿಐ): ರಾಜ್ಯದ ಶಾಲೆಗಳಲ್ಲಿ ‘ಶುಭೋದಯ’ದ (Good morning) ಬದಲು ‘ಜೈ ಹಿಂದ್’ ಹೇಳಬೇಕು. ಈ ಮೂಲಕ ಮಕ್ಕಳಲ್ಲಿ ದೇಶಭಕ್ತಿ ಹಾಗೂ ರಾಷ್ಟ್ರೀಯ ಹೆಮ್ಮೆ ಆಳವಾಗಿ ಬೇರೂರುವಂತೆ ಮಾಡಬೇಕು. ಹೀಗೆಂದು ಹರಿಯಾಣ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಹರಿಯಾಣದ ಶಾಲಾ ಶಿಕ್ಷಣ ಮಂಡಳಿ ಗುರುವಾರ ಸುತ್ತೋಲೆ ಹೊರಡಿಸಿದ್ದು, ಇದೇ 15ರಂದು ನಡೆಯಲಿರುವ 78ನೇ ಸ್ವಾತಂತ್ರ್ಯೋತ್ಸವದ ಬಳಿಕ ರಾಜ್ಯದ ಎಲ್ಲ ಶಾಲೆಗಳಲ್ಲಿ ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ತಿಳಿಸಲಾಗಿದೆ.

ಸ್ವಾತಂತ್ರ್ಯ ಹೋರಾಟದ ವೇಳೆ ಸುಭಾಷ್ ಚಂದ್ರ ಬೋಸ್ ಅವರು ‘ಜೈ ಹಿಂದ್’ ಎಂಬುದನ್ನು ಮೊದಲಿಗೆ ಬಳಕೆ ಮಾಡಿದ್ದರು. ನಂತರ ಸೇನಾ ಪಡೆಗಳಲ್ಲಿ ಗೌರವ ವಂದನೆ ಸೂಚಿಸಲು ಈ ಪದವನ್ನು ಅಳವಡಿಸಿಕೊಳ್ಳಲಾಗಿದೆ ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ.

ಮಕ್ಕಳು ಪ್ರತಿದಿನ ದೇಶಭಕ್ತಿಯೊಂದಿಗೆ ಶುಭಾಶಯ ಕೋರುವುದರಿಂದ, ಸ್ವಾತಂತ್ರ್ಯ ಹೋರಾಟದ ವೇಳೆ ತ್ಯಾಗ-ಬಲಿದಾನ ಮಾಡಿದ ಹಿರಿಯರಿಗೆ ಗೌರವ ಸೂಚಿಸುವುದನ್ನು ಪ್ರೋತ್ಸಾಹಿಸಿದಂತಾಗುತ್ತದೆ ಎಂದು ಅದರಲ್ಲಿ ಹೇಳಲಾಗಿದೆ.

‘ಜೈ ಹಿಂದ್’ ಎಂಬುದು ಭಾಷೆ, ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ಎಲ್ಲೆಯನ್ನು ಮೀರಿದ್ದು, ಭಾರತೀಯರಾದ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸುತ್ತದೆ. ಜೊತೆಗೆ ಮಕ್ಕಳಲ್ಲಿ ಶಿಸ್ತು ಹಾಗೂ ಏಕತೆಯ ಪ್ರಜ್ಞೆ ಮೂಡಿಸಲಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿ ವರ್ಕ್ ಫ್ರಮ್ ಹೋಮ್ ಕೆಲಸಮಾಡಿ 4000–20,000 ಪಡೆಯಿರಿ, ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

ರಿಯಲ್ ಎಸ್ಟೇಟ್ ಬೈಯಿಂಗ್

Agricultural Land

Chickmagalur

ಚಿಕ್ಕಮಗಳೂರಿನಲ್ಲಿ ಕಾಫಿ ಎಸ್ಟೇಟ್ ಅಥವಾ ಅಡಿಕೆ ತೋಟ ಖರೀದಿಸಲು ತಕ್ಷಣ ಬೇಕಾಗಿದೆ ಈ ಕೂಡಲೇ ಸಂಪರ್ಕಿಸಿ : 7483651933

ವೈಯಕ್ತಿಕ

Lost

LOST
I, RAVICHANDRA K S/o Krishnappa N R do hereby inform the general public that I have lost the Original Sale Deed Property Vacant land measuring 1499.6 Sq.feet, Situated at Property No.12, house No.12, Janjaru -404 Naganayakanakote Village, Anugondanahalli Holi, Hoskote Taluk Bangalore Rural District, Purchased by me Dated: 30-06-2008 and from C Muniraju Bearing Doc No. HSK-1-01208-2008-09, CD No.HSKD112 dated: 30/6/2008 I have lodged a complaint regarding lost of document Lost Report No. 1179519/2024 Finders may Contact Me : 9108289561

ಪ್ರವಾಸ

Travel

13.09.2024 21.10.2024 06.11.2024 ಸಿಂಗಾಪುರ್, ಮಲೇಶಿಯಾ ಥೈಲ್ಯಾಂಡ್ 7/ 11 ದಿನಗಳು. 23.09.2024 17.10.2024 ಭೂತಾನ್ 8 ದಿನಗಳು. 23.09.2024 07.10.2024 30.10.2024 ಅಸ್ಸಾಂ,ಮೇಘಾಲಯ 9 ದಿನಗಳು. 26.09.2024 17.10.2024 ಮಧ್ಯಪ್ರದೇಶ 10 ದಿನಗಳು. 17.10.2024 24.11.2024 ಶ್ರೀಲಂಕಾ 6 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು03. 9448402248 7022547922

18 ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ 10 ದೇಶಗಳು ವಿಮಾನದರ ವೀಸಾ ಪ್ರವೇಶದರ ಊಟ,ವಸತಿ ತೆರಿಗೆ ಟಿಪ್ಸ್ ಟೋಲ್ ವಿಮೆದರ ಟೂರ್ ಮ್ಯಾನೇಜರ್ ಬೆಂಗಳೂರಿನಿಂದ ಬೆಂಗಳೂರಿನ ತನಕ ಎಲ್ಲಾ ಸೇರಿರುತ್ತದೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9880079644 9900080793 9900093613

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@ 500/-* PER SQCM
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಒಲಿಂಪಿಕ್ಸ್ ದಾಖಲೆಯೊಡನೆ ಚಿನ್ನ ಗೆದ್ದ ಪಾಕಿಸ್ತಾನದ ಅಥ್ಲೀಟ್ • ಭಾರತದ ಜಾವೆಲಿನ್ ತಾರೆ ನೀರಜ್‌ಗೆ ಬೆಳ್ಳಿ

ನದೀಮ್ ಜಯದಲ್ಲಿ ಚೋಪ್ರಾ 'ಪ್ರಭಾವಳಿ'

• ಸಿಡ್ನಿ ಕಿರಣ್

ಪ್ಯಾರಿಸ್: ಕೆಲವು ವರ್ಷಗಳಿಂದ ಅರ್ಷದ್ ನದೀಮ್ ಅವರು ನೀರಜ್ ಚೋಪ್ರಾ ಅವರ ಪ್ರಸಿದ್ಧಿಯ ಪ್ರಭಾವಳಿಯ ನೆರಳಿನಲ್ಲೇ ಬೆಳೆದವರು. ಅವರಿಬ್ಬರೂ ಆತ್ಮೀಯ ಸ್ನೇಹಿತರು. ನೀರಜ್ ಅವರನ್ನು ತಮ್ಮ ಸ್ಫೂರ್ತಿಯೆಂದು ನದೀಮ್ ಪರಿಗಣಿಸಿದವರು ಕೂಡ. 2022ರ ಬುಡಾಪೆಸ್ಟ್ ವಿಶ್ವ ಚಾಂಪಿಯನ್‌ಷಿಪ್ ಆಗಿರಲಿ, ಕಳೆದವರ್ಷ ನಡೆದ ಹಾಂಗ್‌ಝೌ ಏಷ್ಯನ್ ಗೇಮ್ಸ್ ಆಗಿರಲಿ, ನೀರಜ್ ಚಿನ್ನ ಗೆದ್ದರೆ, ಅರ್ಷದ್ ಬೆಳ್ಳಿಗೆ ತೃಪ್ತರಾಗುವುದು ಅನಿವಾರ್ಯ ಎಂಬಂತೆ ಇತ್ತು.

ಮಿಂಚುವ ಒಂದು ಒಳ್ಳೆಯ ಸುಸಂದರ್ಭಕ್ಕಾಗಿ 27 ವರ್ಷದ ನದೀಮ್ ಹಾತೊರೆಯುತ್ತಿದ್ದರು. ಅದಕ್ಕೆ ಅವರಿಗೆ ದೊರೆತ ವೇದಿಕೆ ಮಾತ್ರ ಕ್ರೀಡಾಲೋಕದಲ್ಲೇ ದೊಡ್ಡದೆನಿಸಿದ ಒಲಿಂಪಿಕ್ಸ್. ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ ಅವರು ಅದ್ಭುತ ಪ್ರದರ್ಶನ ನೀಡಿ, ಹಾಲಿ ಚಾಂಪಿಯನ್ ಚೋಪ್ರಾ ಅವರಿಂದ ಮೊದಲ ಬಾರಿ ಕ್ರೀಡಾ-ಪ್ರೇಮಿಗಳ ಗಮನವನ್ನು ತಮ್ಮೆಡೆಗೆ ಸೆಳೆದುಕೊಂಡರು. ದಾಖಲೆ ಸ್ಥಾಪಿಸಿದ ಅವರ ಅಮೋಘ ಎಸೆತಕ್ಕೆ ಉಳಿದ ಸ್ಪರ್ಧಿಗಳು ಬೆಕ್ಕಸಬೆರಗಾದರು.

ತಮ್ಮ ಮೊದಲ ಯತ್ನ ಫೌಲ್ ಆದ ಮೇಲೆ ಅರ್ಷದ್ ಮರು ಯತ್ನದಲ್ಲಿ ಅಮೋಘವಾಗಿ ಬೀಸಿದ ಜಾವೆಲಿನ್ 92.97 ಮೀ.ಗಳಷ್ಟು ದೂರಹಾರಿಬಿತ್ತು. ಆ ಮೂಲಕ ಚಿನ್ನದ ಪದಕದ ಪೈಪೋಟಿಗೆ ನದೀಮ್ ಬಹುಬೇಗ ತೆರೆಯೆಳೆದರು. ಅದನ್ನು ದಾಟಬೇಕಾದರೆ ಬಲು ದೊಡ್ಡ ಸಾಹಸವನ್ನೇ ನಡೆಸಬೇಕಾಗಿತ್ತು. ನೀರಜ್ ತಮ್ಮೆಲ್ಲಾ ಯತ್ನ ನಡೆಸಿದರು. ಆದರೆ ಎರಡನೇ ಯತ್ನದಲ್ಲಿ ಶ್ರೇಷ್ಠ ಎಸೆತ, 89.45 ಮೀ. ದಾಖಲಾಗಿ, ಅಂತಿಮವಾಗಿ ಬೆಳ್ಳಿಯ ಪದಕ ಗೆದ್ದುಕೊಂಡರು.

ಕ್ವಾಲಿಫಿಕೇಷನ್ ಸುತ್ತಿನ ಮೊದಲ ಎಸೆತದಲ್ಲೇ 89.34 ಮೀ. ಎಸೆದು ಅಮೋಘ ಫಾರ್ಮ್ ಪ್ರದರ್ಶಿಸಿದ್ದ ಚೋಪ್ರಾ, ಸತತ ಎರಡನೇ ಚಿನ್ನ ಗೆಲ್ಲುವ ನಿರೀಕ್ಷೆಗಳು ಇಲ್ಲಿಯೂ ಗರಿಗೆದರಿದ್ದವು. ಆದರೆ ಈ ಬಾರಿ ಮೊದಲ ಯತ್ನದಲ್ಲೇ 'ಲಕ್ಷ್ಮಣರೇಖೆ' ದಾಟಿ ಫೌಲ್ ಆದರು. ಎಸೆತದ ನಂತರ ತಮ್ಮನ್ನು ನಿಯಂತ್ರಿಸಿಕೊಳ್ಳಲು ಯತ್ನಿಸಿದರೂ ಆಗಲಿಲ್ಲ.

ಅಸಾಧಾರಣ ಪ್ರಯತ್ನವೊಂದರ ಮುಂದೆ ನೀರಜ್ ಕೊನೆ ನಾಲ್ಕು ಯತ್ನಗಳಲ್ಲಿ ಫೌಲ್ ಆದರು. ಕ್ರೀಡಾಂಗಣದಲ್ಲಿ ನೆರೆದಿದ್ದ ಪ್ರೇಕ್ಷಕರತ್ತ ತಲೆಬಾಗಿ, ರಜತಕ್ಕೆ ಸಂತುಷ್ಟರಾಗಿರುವುದನ್ನು ಸೂಚಿಸಿದರು.

ಸಿಡ್ನಿ ಮೆಕ್‌ಲಾಗ್ಲಿನ್ ಮಿಂಚು: ದೀಪಗಳ ನಗರಿಯಲ್ಲಿ ಗುರುವಾರ ನದೀಮ್ ಮಾತ್ರ ಮಿಂಚಲಿಲ್ಲ. ಮಹಿಳೆಯರ 400 ಮೀ. ಹರ್ಡಲ್ಸ್ ಗೆಲ್ಲುವ ನೆಚ್ಚಿನ ಓಟಗಾರ್ತಿಯಾಗಿದ್ದ ಸಿಡ್ನಿ ಮೆಕ್‌ಲಾಗ್ಲಿನ್-ಲೆವ್ರೊನ್ ಅದಕ್ಕೆ ತಕ್ಕಂತೆ ಈ ಬಾರಿ ಚಿನ್ನ ಗೆದ್ದರು- ಅದೂ ತಮ್ಮದೇ ವಿಶ್ವದಾಖಲೆ ಸುಧಾರಿಸುವ ಮೂಲಕ. ಮೊದಲ 200 ಮೀ. ಮುಗಿಯುವಷ್ಟರಲ್ಲಿ ಅವರು ಸ್ಪಷ್ಟ ಮುನ್ನಡೆ ಪಡೆದಿದ್ದರು. 50.37 ಸೆಕೆಂಡುಗಳಲ್ಲಿ ದೂರ ಕ್ರಮಿಸಿ, ಅನ್ನಾ ಕಾಕ್ರೆಲ್ ಮತ್ತು ನಿಕಟ ಸ್ಪರ್ಧಿಯೆನಿಸಿದ್ದ ಫೆಮ್ಕೆ ಬೋಲ್ (ನೆದರ್ಲೆಂಡ್ಸ್) ಅವರನ್ನು ಸುಲಭವಾಗಿ ಹಿಂದೆಹಾಕಿದರು.

ಫಲಿತಾಂಶಗಳು

ಪುರುಷರು: ಜಾವೆಲಿನ್ ಥ್ರೊ: ಅರ್ಷದ್ ನದೀಮ್ (ಪಾಕಿಸ್ತಾನ, 92.97 ಮೀ.)–1, ನೀರಜ್ ಚೋಪ್ರಾ (ಭಾರತ, 89.45 ಮೀ.)–2, ಆ್ಯಂಡರ್ಸನ್ ಪೀಟರ್ಸ್ (ಗ್ರೆನೆಡಾ, 88.54 ಮೀ.)–3.

200 ಮೀ. ಓಟ: ಲೆಸ್ಟಿಲೆ ಟೆಬಾಗೊ (ಬೋಟ್ಸ್‌ವಾನಾ, 19.46 ಸೆ.)–1, ಕೆನೆತ್ ಬೆಡ್ನಾರೆಕ್ (ಅಮೆರಿಕ, 19.62 ಸೆ.)–2, ನೋವಾ ಲೈಲ್ಸ್ (ಅಮೆರಿಕ, 19.70 ಸೆ.)–3.;

ಮಹಿಳೆಯರು: 400 ಮೀ. ಹರ್ಡಲ್ಸ್: ಸಿಡ್ನಿ ಮೆಕ್‌ಲಾಫ್ಲಿನ್ ಲೆವ್ರೊನ್ (ಅಮೆರಿಕ, 50.37 ಸೆ., ವಿಶ್ವದಾಖಲೆ, ಹಳೆಯದು, 50.65, 2024ರ ಜೂನ್‌ನಲ್ಲಿ)–1, ಅನ್ನಾ ಕಾಕ್ರೆಲ್ (ಅಮೆರಿಕ, 51.87 ಸೆ.)–2, ಫೆಮ್ಕೆ ಬೋಲ್ (ನೆದರ್ಲೆಂಡ್ಸ್, 52.15 ಸೆ.).

ಲಾಂಗ್‌ಜಂಪ್: ತಾರಾ ಡೇವಿಸ್ ವುಡ್‌ಹಾಲ್ (ಅಮೆರಿಕ, 7.10 ಮೀ.)–1, ಮಲೈಕಾ ಮಿನಾಂಬೊ (ಜರ್ಮನಿ, 6.98 ಮೀ.)–2, ಜಾಸ್ಮಿನ್ ಮೂರ್ (ಅಮೆರಿಕ, 6.96 ಮೀ)–3.



92.97 ಮೀ
ಅರ್ಷದ್ ನದೀಂ (ಪಾಕಿಸ್ತಾನ)

ಚಿನ್ನದ ಪದಕ ಗೆದ್ದ ಸಂಭ್ರಮದಲ್ಲಿ ಪಾಕಿಸ್ತಾನ ಅರ್ಷದ್ ನದೀಮ್ ಪ್ರಜಾವಾಣಿ ಚಿತ್ರ: ಕೆ.ಎನ್. ಶಾಂತಕುಮಾರ್

89.45 ಮೀ.
ನೀರಜ್ ಚೋಪ್ರಾ (ಭಾರತ)

88.54 ಮೀ
ಕಂಚು ಗೆದ್ದ ಆ್ಯಂಡರ್ಸನ್ ಪೀಟರ್ (ಗ್ರೆನೆಡಾ)

ಜಾವೆಲಿನ್ ಎಸೆಯಲು ಸಜ್ಜಾಗಿರುವ ಭಾರತದ ನೀರಜ್ ಚೋಪ್ರಾ ಪ್ರಜಾವಾಣಿ ಚಿತ್ರ:ಕೆ.ಎನ್. ಶಾಂತಕುಮಾರ್

ಕಂಚಿನ ಪದಕಕ್ಕಾಗಿ ಭಾರತ ಸ್ಪೇನ್ ಮಣಿಸಿ, ಒಲಿಂಪಿಕ್ಸ್ ಗೇಮ್ಸ್‌ನಲ್ಲಿ ಯಶಸ್ವೀ ಪದಕ ಪಡೆದಿದೆ!

ಅರ್ಷದ್‌ಗೆ ₹10 ಕೋಟಿ ಬಹುಮಾನ

ಕರಾಚಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ ಸ್ವರ್ಣ ಗೆದ್ದ ಅರ್ಷದ್ ನದೀಂ ಅವರಿಗೆ ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿ ಮರಿಯಮ್ ನವಾಜ್ ಅವರು ₹10 ಕೋಟಿ ಬಹುಮಾನ ಪ್ರಕಟಿಸಿದ್ದಾರೆ. ಸ್ವರ್ಣ ಗೆಲ್ಲುವ ಹಾದಿಯಲ್ಲಿ ಅವರು ಒಲಿಂಪಿಕ್ ದಾಖಲೆ ಸ್ಥಾಪಿಸಿದ್ದರು.

ಕ್ರೀಡೆಗಳ ಆರಂಭಕ್ಕೆ ಕೆಲವೇ ತಿಂಗಳ ಮೊದಲು ಅವರು ದೇಣಿಗೆ ಸಂಗ್ರಹಿಸಿ ನೂತನ ಜಾವೆಲಿನ್ ಖರೀದಿಸಿದ್ದರು. ನದೀಮ್ ಅವರ ತವರೂರಾದ ಖಾನೆವಾಲ್‌ನಲ್ಲಿ ನಿರ್ಮಿಸಲಾಗುವ ಕ್ರೀಡಾನಗರಿಗೆ ಅವರ ಹೆಸರನ್ನೇ ಇಡುವುದಾಗಿಯೂ ನವಾಜ್ ಹೇಳಿದ್ದಾರೆ.

ಪಾಕಿಸ್ತಾನದಲ್ಲಿ ಕ್ರಿಕೆಟ್ ಬಿಟ್ಟು ಇತರೆ ಕ್ರೀಡೆಗಳ ಆಟಗಾರರು ಹಣಕಾಸಿನ ಬಿಕ್ಕಟ್ಟು ಎದುರಿಸುವುದು ಸಾಮಾನ್ಯ.

ಕಾಮನ್ವೆಲ್ತ್ ಗೇಮ್ಸ್‌ನಲ್ಲಿ (2022) ಚಿನ್ನ ಮತ್ತು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದಿದ್ದ ಅರ್ಷದ್ ನದೀಮ್ ಅವರು ತಮ್ಮ ಜಾವೆಲಿನ್ ಹಳೆಯದಾಗಿದ್ದು ಬಳಕೆಯೋಗ್ಯವಾಗಿಲ್ಲದ ಕಾರಣ ಹೊಸ ಜಾವೆಲಿನ್ ಖರೀದಿಗೆ ನೆರವು ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದರು.

ತಾವು ಹುಟ್ಟಿ ಬೆಳೆದ ಗ್ರಾಮದ ಸುತ್ತಮುತ್ತಲ ಅಥ್ಲೀಟುಗಳಿಗೆ ನೆರವಾಗಲು ತಾವು ಅಕಾಡೆಮಿಯೊಂದನ್ನು ಸ್ಥಾಪಿಸಲು ತಾವು ದೃಢನಿಶ್ಚಯ ಮಾಡುವುದಾಗಿ ಚಿನ್ನ ಗೆದ್ದ ನಂತರ ಮೊದಲ ಸಂದೇಶದಲ್ಲಿ ನದೀಮ್ ಪ್ರಕಟಿಸಿದ್ದರು.

'ಈಗ ಮೊದಲ ಒಲಿಂಪಿಕ್ ಸ್ವರ್ಣ ಗೆದ್ದಿರುವ ಕಾರಣ ಗ್ರಾಮೀಣ ಭಾಗದ ಅಥ್ಲೀಟುಗಳಿಗೆ ಕ್ರೀಡಾ ಅಕಾಡೆಮಿ ಮಾಡುವ ವಿಶ್ವಾಸ ಹೊಂದಿರುವುದಾಗಿ ನದೀಮ್ ಹೇಳಿದ್ದಾರೆ' ಎಂದು ಅವರ ತಂದೆ ಮುಹಮ್ಮದ್ ಅರ್ಷದ್ ಪಿಟಿಐಗೆ ತಿಳಿಸಿದ್ದಾರೆ.

ನೀರಜ್ ಚೋಪ್ರಾ ಚಿನ್ನ ಗೆದ್ದಾಗ ಭಾರತದಲ್ಲಿ ಕ್ರಿಕೆಟೇತರ ಕ್ರೀಡೆಗಳ ಮೇಲೂ ಅದು ಪ್ರಭಾವ ಬೀರಿತು. ಪಾಕಿಸ್ತಾನದಲ್ಲೂ ಇಂಥದ್ದೇ ನಡೆಯಬಹುದು ಎಂದು ಅವರ ಸೋದರ ಮುಹಮ್ಮದ್ ಅಶ್ರಫ್ ಹೇಳಿದರು.

ಅರ್ಷದ್ ನದೀಮ್ ಅವರಿಗೆ ಇನ್ನೂ ಕೆಲವರು ನಗದು ಬಹುಮಾನ ಘೋಷಿಸಿದ್ದಾರೆ.

'ದಾಖಲೆಗೆ ಪಾತ್ರರಾದ ಅವರ ಥ್ರೊ ನಂಬಲಸಾಧ್ಯವಾದುದು. ಇದು ಸಿಲೆಬಸ್‌ನಿಂದ ಹೊರತಾದುದು' ಎಂದು ಅವರ ಕೋಚ್ ಸಲ್ಮಾನ್ ಬಟ್ಟ ಬಣ್ಣಿಸಿದ್ದಾರೆ.

ಚಿನ್ನ ಗೆದ್ದ ಪಾಕಿಸ್ತಾನದ ಅರ್ಷದ್ ನದೀಮ್ ಅವರನ್ನು ಅಭಿನಂದಿಸಿದ ಭಾರತದ ನೀರಜ್ ಚೋಪ್ರಾ ಪ್ರಜಾವಾಣಿ ಚಿತ್ರ:ಕೆ.ಎನ್. ಶಾಂತಕುಮಾರ್

'ನದೀಮ್ ಸಹ ನನ್ನ ಮಗನ ಹಾಗೇ...'

ನವದೆಹಲಿ (ಪಿಟಿಐ): ಪುತ್ರ ನೀರಜ್ ಚೋಪ್ರಾ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಗುರುವಾರ ಬೆಳ್ಳಿ ಪದಕ ಗೆದ್ದಿರುವುದಕ್ಕೆ ಹರ್ಷ ವ್ಯಕ್ತಪಡಿಸಿರುವ ತಾಯಿ ಸರೋಜ್ ದೇವಿ ಅವರು, ಪಾಕಿಸ್ತಾನದ ಅರ್ಷದ್ ನದೀಮ್ ದಾಖಲೆಯೊಡನೆ ಚಿನ್ನ ಗೆದ್ದಿರುವುದಕ್ಕೂ ಸಂತಸಪಟ್ಟಿದ್ದಾರೆ. ಅವರೂ ಕೂಡ ತನ್ನ ಮಗನ ಹಾಗೆ ಎಂದು ಹೇಳಿದ್ದಾರೆ.

'ನಮಗೆ ಬೆಳ್ಳಿ ಪದಕದಿಂದ ತುಂಬ ಸಂತಸವಾಗಿದೆ. ಚಿನ್ನ ಗೆದ್ದವನೂ ನನ್ನ ಮಗನ ಹಾಗೆ. ಎಲ್ಲರೂ ಅಥ್ಲೀಟುಗಳು. ಪರಿಶ್ರಮ ಪಟ್ಟಿರುತ್ತಾರೆ' ಎಂದು ಸರೋಜ್ ಅವರು ಪಾನಿಪತ್‌ನ ಖಂಡ್ರಾ ದಿಂದ ಪಿಟಿಐಗೆ ತಿಳಿಸಿದ್ದಾರೆ. ನೀರಜ್ ಕುಟುಂಬ ಇಲ್ಲಿ ನೆಲೆಸಿದೆ.

ಸರೋಜ್ ದೇವಿ

'ನದೀಮ್ ಒಳ್ಳೆಯವನೇ. ಚೆನ್ನಾಗಿ ಆಡುತ್ತಾನೆ. ನೀರಜ್ ಮತ್ತು ನದೀಮ್ ಮಧ್ಯೆ ಹೆಚ್ಚಿನ ವ್ಯತ್ಯಾಸವಿಲ್ಲ. ನಮಗೆ ಚಿನ್ನ ಅಥವಾ ಬೆಳ್ಳಿ ಬಂದರೆ ಅಂಥ ವ್ಯತ್ಯಾಸವಾಗುವುದಿಲ್ಲ' ಎಂದು ಗುರುವಾರ ರಾತ್ರಿ ಸಂದರ್ಶನದಲ್ಲಿ ತಿಳಿಸಿದ್ದಾರೆ. ಕ್ರೀಡಾಂಗಣದಲ್ಲಿ ಪ್ರತಿಸ್ಪರ್ಧಿಗಳಾದರೂ, ಅದರಾಚೆಗೆ ನದೀಮ್ ಮತ್ತು ಚೋಪ್ರಾ ಒಳ್ಳೆಯ ಗೆಳೆಯರಾಗಿದ್ದಾರೆ.

ಕಾದಿದೆ ಚೂರ್ಮಾ: ರಾಜಸ್ತಾನ, ಹರಿಯಾಣ, ಅವಧಿ ಭಾಗದಲ್ಲಿ ಹೆಚ್ಚು ಜನಪ್ರಿಯ ಖಾದ್ಯವಾಗಿರುವ ಚುರ್ಮಾ ಎಂದರೆ ನೀರಜ್‌ಗೆ ಅಚ್ಚುಮೆಚ್ಚು. ಅದನ್ನೇ ಮಾಡಿ ಬಡಿಸಲು ತಾಯಿ ಸರೋಜ್ ಸಜ್ಜಾಗಿದ್ದಾರೆ. ಗೋಧಿಹಿಟ್ಟಿಗೆ, ತುಪ್ಪ, ಬೆಲ್ಲ ಸೇರಿಸಿ ತಯಾರಿಸುವ ಸಿಹಿ ಖಾದ್ಯ ಇದು.

ಚೋಪ್ರಾಗೆ ತೊಡೆಯ ಸ್ನಾಯು ಶಸ್ತ್ರಚಿಕಿತ್ಸೆ ಶೀಘ್ರ

ಪ್ಯಾರಿಸ್ (ಪಿಟಿಐ): 'ತಾನು ತೊಡೆಯ ಸ್ನಾಯುಗಳಿಗೆ ಸಂಬಂಧಿಸಿ ತೀವ್ರ ಸಮಸ್ಯೆಯನ್ನು ಎದುರಿಸುತ್ತಿದ್ದು, ಶೀಘ್ರದಲ್ಲೇ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗಬಹುದು' ಎಂದು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದ ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಹೇಳಿದ್ದಾರೆ.

'ನನ್ನ ಮನಸ್ಸಿನಲ್ಲಿ ಬಹಳಷ್ಟು ಇದೆ. ನಾನು ಜಾವೆಲಿನ್ ಎಸೆಯುವಾಗ ನನ್ನ ಶೇ 60 ರಷ್ಟು ಗಮನ ನೋವಿನ ಮೇಲೆ ಇರುತ್ತಿತ್ತು. ನಾನು ಗಾಯ ಉಲ್ಬಣಗೊಳ್ಳಲು ಬಯಸುವುದಿಲ್ಲ. ನಾನು ಜಾವೆಲಿನ್ ಎಸೆಯಲು ಹೋದಾಗಲೆಲ್ಲಾ ನನ್ನ ವೇಗವು ಕಡಿಮೆಯಾಗಿರುವುದನ್ನು ನೀವು ನೋಡಿದ್ದೀರಿ. ನಾನು ಎಸೆತಗಳಿಗೆ ಕಷ್ಟಪಡಬೇಕಾಯಿತು' ಎಂದು ಅವರು ತಿಳಿಸಿದ್ದಾರೆ.

'ಶಸ್ತ್ರಚಿಕಿತ್ಸೆಗೆ ಒಳಗಾಗಲು ವೈದ್ಯರು ನನಗೆ ಸಲಹೆ ನೀಡಿದ್ದರು. ಆದರೆ, ವಿಶ್ವ ಚಾಂಪಿಯನ್‌ಷಿಪ್‌ಗೆ ಮೊದಲು ಅಥವಾ ನಂತರ ಆ ನಿರ್ಧಾರವನ್ನು ತೆಗೆದುಕೊಳ್ಳಲು ನನಗೆ ಹೆಚ್ಚು ಸಮಯವಿರಲಿಲ್ಲ. ಈ ಒಲಿಂಪಿಕ್ಸ್‌ಗೆ ತಯಾರಿ ಮಾಡಲು ಬಹಳ ಸಮಯತೆಗೆದುಕೊಳ್ಳಬೇಕಾಯಿತು' ಎಂದು ಚೋಪ್ರಾ ಹೇಳಿದ್ದಾರೆ.

'ಚಿನ್ನ ಕಳೆದುಕೊಂಡ ಮತ್ತು ನೋವಿನ ಹತಾಶೆಯಲ್ಲಿದ್ದ ನೀರಜ್, 'ನಾನು ಶಸ್ತ್ರಚಿಕಿತ್ಸೆಯನ್ನು ದೂಡುತ್ತಲೇ ಬಂದಿದ್ದೇನೆ. ಅದು ಒಳ್ಳೆಯ ಬೆಳವಣಿಗೆಯಲ್ಲ. ಕ್ರೀಡೆಯಲ್ಲಿ ಸುದೀರ್ಘವಾಗಿ ಮುಂದುವರಿಯಲು ಫಿಟ್ ಮತ್ತು ಸ್ವಸ್ಥರಾಗಿರಬೇಕು. ಆದರೆ, ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗದಷ್ಟು ಸ್ಪರ್ಧೆಗಳಿದ್ದವು. ಈಗ ಸಮಯ ಬಂದಿದ್ದು, ನನ್ನ ತಂಡದೊಂದಿಗೆ ಮಾತನಾಡಿ ನಿರ್ಧಾರ ಕೈಗೊಳ್ಳುತ್ತೇನೆ' ಎಂದು ಹೇಳಿದರು.

26 ವರ್ಷದ ನೀರಜ್ ಅವರು ಸತತ ಎರಡು ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಭಾರತದ ಮೂರನೇ ಕ್ರೀಡಾಪಟುವಾಗಿದ್ದಾರೆ. ಈ ಹಿಂದೆ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಮತ್ತು ಕುಸ್ತಿಪಟು ಸುಶೀಲ್ ಕುಮಾರ್ ಎರಡು ಪದಕ ಗೆದ್ದಿದ್ದಾರೆ.

'ಗಡಿಯನ್ನು ಮೀರಿದ ಒಡನಾಟ'

ನವದೆಹಲಿ (ಪಿಟಿಐ): 'ನೀರಜ್ ಚೋಪ್ರಾ ಮತ್ತು ಅರ್ಷದ್ ನದೀಮ್ ನಡುವಿನ ಒಡನಾಟ ಎಲ್ಲಾ ಗಡಿ ಮೀರಿದೆ' ಎಂದು ಮಾಜಿ ಕ್ರಿಕೆಟಿಗ ಹರ್ಭಜನ್ ಸಿಂಗ್ ಹೇಳಿದ್ದಾರೆ.

'ಸ್ಪರ್ಧೆಯ ಬಳಿಕ ನೀರಜ್ ಮತ್ತು ನದೀಂ ಅವರು ಪರಸ್ಪರ ಮಾತನಾಡುತ್ತಿದ್ದ ಕೆಲವು ಚಿತ್ರಗಳನ್ನು ನಾವು ನೋಡಿದ್ದೇವೆ. ಇಬ್ಬರೂ ತಮ್ಮ ದೇಶದ ಧ್ವಜಗಳನ್ನು ಹಿಡಿದು ಒಬ್ಬರನ್ನೊಬ್ಬರು ಕ್ರೀಡಾಪಟುವಾಗಿ ಗೌರವಿಸುತ್ತಾರೆ. ಕ್ರೀಡೆಗೆ ಗಡಿಯಿಲ್ಲ, ಅದು ಎಲ್ಲರನ್ನೂ ಒಂದುಗೂಡಿಸುತ್ತದೆ ಎಂಬುದನ್ನು ತೋರಿಸಿದ್ದಾರೆ. ಆದ್ದರಿಂದ ಅವರಿಬ್ಬರೂ ಉತ್ತಮ ಸಂದೇಶ ರವಾನಿಸಿದ್ದಾರೆ' ಎಂದು ಹರ್ಭಜನ್ ತಿಳಿಸಿದ್ದಾರೆ.

ಒಲಿಂಪಿಕ್ಸ್ ಸಮಾರೋಪ ಸಮಾರಂಭ ನಾಳೆ

ಮನು ಜೊತೆ ಧ್ವಜಧಾರಿಯಾಗಿ ಶ್ರೀಜೇಶ್

ಪ್ಯಾರಿಸ್ (ಪಿಟಿಐ): ಕಂಚಿನ ಪದಕ ಗೆದ್ದ ಭಾರತ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅವರು ಭಾನುವಾರ ನಡೆಯಲಿರುವ ಒಲಿಂಪಿಕ್ ಕ್ರೀಡೆಗಳ ಸಮಾರೋಪ ಸಮಾರಂಭದಲ್ಲಿ ಮನು ಭಾಕರ್ ಅವರೊಂದಿಗೆ ಭಾರತದ ಧ್ವಜಧಾರಿ ಆಗಲಿದ್ದಾರೆ.

ಸುಮಾರು ಎರಡು ದಶಕ ಭಾರತ ತಂಡದ ಗೋಲ್ ಕೀಪರ್ ಆಗಿದ್ದ ಶ್ರೀಜೇಶ್, ಒಲಿಂಪಿಕ್ಸ್ ತಮ್ಮ ಕೊನೆಯ ಹಾಕಿ ಸ್ಪರ್ಧಾಕಣ ಎಂದು ಆರಂಭದಲ್ಲೇ ಘೋಷಿಸಿದ್ದರು.

'ಪ್ಯಾರಿಸ್ 2024 ಒಲಿಂಪಿಕ್ ಕ್ರೀಡೆಗಳಿಗೆ ಮನು ಭಾಕರ್ ಜೊತೆ ಜಂಟಿ ಧ್ವಜಧಾರಿಯಾಗಿ ಪಿ.ಆರ್.ಶ್ರೀಜೇಶ್ ಅವರನ್ನು ನಾಮನಿರ್ದೇಶನ ಮಾಡಲು ಭಾರತ ಒಲಿಂಪಿಕ್ ಸಂಸ್ಥೆ ಸಂತಸಪಡುತ್ತಿದೆ' ಎಂದು ಐಒಎ ಪ್ರಕಟಣೆಯಲ್ಲಿ ತಿಳಿಸಿದೆ.

ಪಿ.ಆರ್. ಶ್ರೀಜೇಶ್

ಶ್ರೀಜೇಶ್ ಅವರನ್ನು ಈ ಗೌರವಕ್ಕೆ ಆಯ್ಕೆ ಮಾಡುವ ಮೊದಲು ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಅವರು ಜಾವೆಲಿನ್ ಥ್ರೋವರ್ ನೀರಜ್ ಚೋಪ್ರಾ ಅವರೊಂದಿಗೆ ಚರ್ಚಿಸಿದ್ದರು. ಅವರೂ ನಿವೃತ್ತರಾಗಲಿರುವ ಶ್ರೀಜೇಶ್ ಅವರನ್ನೇ ಧ್ವಜದಾರಿಯಾಗಿ ನೋಡಲು ಇಷ್ಟಪಡುವುದಾಗಿ ಹೇಳಿದರು.

ಗುರುವಾರ ತಡರಾತ್ರಿ ನಡೆದ ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ ನೀರಜ್ ಬೆಳ್ಳಿ ಪದಕ ಗೆದ್ದಿದ್ದರು. ಮೂರು ವರ್ಷ ಹಿಂದೆ ನಡೆದ ಟೋಕಿಯೊ ಕ್ರೀಡೆಗಳಲ್ಲಿ ಅವರು ಚಾರಿತ್ರಿಕ ಚಿನ್ನದ ಪದಕ ಜಯಿಸಿದ್ದರು.

18 ವರ್ಷಗಳಷ್ಟು ದೀರ್ಘ ಕಾಲ ಭಾರತ ತಂಡದಲ್ಲಿ ಆಡಿರುವ ಶ್ರೀಜೇಶ್ ಒಲಿಂಪಿಕ್ಸ್‌ನಲ್ಲಿ ನಾಲ್ಕು ಬಾರಿ ಭಾಗವಹಿಸಿದ್ದಾರೆ. ಈ ಒಲಿಂಪಿಕ್ಸ್‌ನ ಕಂಚಿನ ಪದಕದ ಪ್ಲೇ ಆಫ್ ಪಂದ್ಯದಲ್ಲಿ ಭಾರತ 2–1 ಗೋಲುಗಳಿಂದ ಸ್ಪೇನ್ ತಂಡವನ್ನು ಸೋಲಿಸಿತ್ತು. ಈ ಒಲಿಂಪಿಕ್ಸ್‌ನಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡಿರುವ ಮನು ಭಾಕರ್ ಈ ಮೊದಲೇ ಮಹಿಳಾ ಧ್ವಜಧಾರಿಯಾಗಿ ನಾಮನಿರ್ದೇಶನಗೊಂಡಿದ್ದರು.

ಒಲಿಂಪಿಕ್ಸ್‌ನಲ್ಲಿ ಇಂದು
(ಭಾರತದ ಸ್ಪರ್ಧೆ)

ಗಾಲ್ಫ್

ಮಹಿಳೆಯರ ವೈಯಕ್ತಿಕ ಫೈನಲ್: ಅದಿತಿ ಅಶೋಕ್, ದೀಕ್ಷಾ ದಾಗರ್, ಮಧ್ಯಾಹ್ನ 12.30

ಕುಸ್ತಿ

ಮಹಿಳೆಯರ ಫ್ರಿಸ್ಟೈಲ್ 76 ಕೆ.ಜಿ ಪ್ರಿ-ಕ್ವಾರ್ಟರ್ ಫೈನಲ್: ರಿತಿಕಾ ಹೂಡಾ ವಿರುದ್ಧ ಬೆರ್ನಾಡೆಟ್ ನ್ಯಾಗಿ (ಹಂಗೇರಿ) ಮಧ್ಯಾಹ್ನ 2.51

ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಹಾಕಿ ಆಟಗಾರನಿಗೆ ₹1 ಕೋಟಿ ಬಹುಮಾನ

ಭೋಪಾಲ್ (ಪಿಟಿಐ): ಪ್ಯಾರಿಸ್ ಕ್ರೀಡೆಗಳಲ್ಲಿ ಕಂಚಿನ ಪದಕ ಗೆದ್ದ ಭಾರತ ಹಾಕಿ ತಂಡದ ಸದಸ್ಯರಲ್ಲಿ ಒಬ್ಬರಾದ ವಿವೇಕ್ ಸಾಗರ್ ಪ್ರಸಾದ್ ಅವರಿಗೆ ಮಧ್ಯಪ್ರದೇಶ ಸರ್ಕಾರ ಶುಕ್ರವಾರ ₹1ಕೋಟಿ ಬಹುಮಾನ ಘೋಷಿಸಿದೆ.

52 ವರ್ಷಗಳ ನಂತರ ಭಾರತ ಹಾಕಿ ತಂಡ ಸತತ ಒಲಿಂಪಿಕ್ಸ್‌ಗಳಲ್ಲಿ ಕಂಚಿನ ಪದಕ ಗೆದ್ದುಕೊಂಡಿತ್ತು. ಗುರುವಾರ ಪ್ಲೇ ಆಫ್ ಪಂದ್ಯದಲ್ಲಿ 2–1 ಗೋಲುಗಳಿಂದ ಸ್ಪೇನ್ ಮೇಲೆ ಜಯಗಳಿಸಿತ್ತು.

ವಿವೇಕ್ ಮಧ್ಯಪ್ರದೇಶ ದವರು. ಅವರನ್ನು ಅಭಿನಂದಿಸಿರುವ ಸಿಎಂ ಮೋಹನ್ ಯಾದವ್ ಬಹುಮಾನ ಪ್ರಕಟಿಸಿದರು. ದೂರವಾಣಿಯಲ್ಲಿ ಅವರನ್ನು ಅಭಿನಂದಿಸಿದ ಯಾದವ್, ನಿಮಗೆ ಬಹುಮಾನವಾಗಿ ಮಧ್ಯಪ್ರದೇಶ ಸರ್ಕಾರ ₹1 ಕೋಟಿ ಮೊತ್ತವನ್ನು ನಿಮ್ಮ ಖಾತೆಗೆ ವರ್ಗಾಯಿಸಲಿದೆ ಎಂದಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ ಬೋಲ್ಡರ್ (ಶಿಲಾರೋಹಣ) ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಬ್ರಿಟನ್‌ನ ಟೋಬಿ ರಾಬರ್ಟ್ಸ್ ಅವರ ಸಂಭ್ರಮ –ಎಎಫ್‌ಪಿ ಚಿತ್ರ

ವಿವಾದದ ಬಳಿಕ ತವರಿಗೆ ಬಂದ ಕುಸ್ತಿಪಟು ಅಂತಿಮ್ ಪಂಘಲ್

ನವದೆಹಲಿ (ಪಿಟಿಐ): ತನ್ನ ಮಾನ್ಯತಾ ಪತ್ರದ ಮೂಲಕ ಸೋದರಿಯನ್ನು ಒಲಿಂಪಿಕ್ ಕ್ರೀಡಾ ಗ್ರಾಮಕ್ಕೆ ಕಳುಹಿಸಲು ಪ್ರಯತ್ನಿಸಿ ಮುಜುಗರಕ್ಕೆ ಕಾರಣರಾದ ಮಹಿಳಾ ಕುಸ್ತಿಪಟು ಅಂತಿಮ್ ಪಂಘಲ್ ಅವರು ಶುಕ್ರವಾರ ತವರಿಗೆ ಮರಳಿದ್ದಾರೆ.

ಅಂತಿಮ್ ಪಂಘಲ್ ಮೇಲೆ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಮೂರು ವರ್ಷಗಳ ನಿಷೇಧ ಹೇರುವ ಸಾಧ್ಯತೆಯಿದೆ.

ಶಿಸ್ತುಕ್ರಮದ ಭಾಗವಾಗಿ ಅಂತಿಮ್ ಮತ್ತು ಅವರ ನೆರವು ಸಿಬ್ಬಂದಿಯನ್ನು ಭಾರತಕ್ಕೆ ತೆರಳಲು ಐಒಎ ಸೂಚಿಸಿತ್ತು.

ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಅಂತಿಮ್, ವಿವಾದದ ಕುರಿತಾಗಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಲು ನಿರಾಕರಿಸಿದರು.

ಮಹಿಳೆಯರ 53 ಕೆ.ಜಿ ವಿಭಾಗದಲ್ಲಿ ಟರ್ಕಿಯ ಯೆಟ್ಗಿಲ್ ಝೆನೆಪ್ ವಿರುದ್ಧ ಅಂತಿಮ್ 0-10ರ ಅಂತರದಲ್ಲಿ ಸೋಲು ಕಂಡಿದ್ದರು.

ಅಂತಿಮ್ ಪಂಘಲ್

'ನಾನು ಉದ್ದೇಶಪೂರ್ವಕವಾಗಿ ತಪ್ಪು ಮಾಡಿಲ್ಲ. ಅನಾರೋಗ್ಯದಿಂದ ಬಳಲುತ್ತಿದ್ದೆ, ಗೊಂದಲದಿಂದಾಗಿ ಹೀಗಾಯಿತು' ಎಂದು ಈ ಮೊದಲು ವಿಡಿಯೊ ಸಂದೇಶದಲ್ಲಿ ಹೇಳಿದ್ದರು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	32	25	22	79
ಅಮೆರಿಕ	31	39	39	109
ಆಸ್ಟ್ರೇಲಿಯಾ	18	16	14	48
ಬ್ರಿಟನ್	14	20	23	57
ಫ್ರಾನ್ಸ್	14	20	22	56
ಜಪಾನ್	14	8	13	35
ದ.ಕೊರಿಯಾ	13	8	7	28
ಜರ್ಮನಿ	12	9	8	29
ನೆದರ್‌ಲೆಂಡ್ಸ್	12	6	9	27
ಇಟಲಿ	11	11	12	34
ಕೆನಡಾ	7	5	11	23
ನ್ಯೂಜಿಲೆಂಡ್	6	7	2	15
ಹಂಗೇರಿ	4	5	5	14
ಐರ್ಲೆಂಡ್	4	0	3	7
ಭಾರತ	0	1	5	6

ಪಟ್ಟಿಯಲ್ಲಿ ಭಾರತ 66ನೇ ಸ್ಥಾನದಲ್ಲಿದೆ

ರಿಲೆ: ಭಾರತ ತಂಡಗಳಿಗೆ ನಿರಾಸೆ

ಪ್ಯಾರಿಸ್ (ಪಿಟಿಐ): ಭಾರತ ಪುರುಷರ 4x400 ಮೀ. ರಿಲೆ ತಂಡವು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ತನ್ನ ಮೇಲಿದ್ದ ನಿರೀಕ್ಷೆಗೆ ತಕ್ಕ ಪ್ರದರ್ಶನ ನೀಡಲು ವಿಫಲವಾಯಿತು. ಶುಕ್ರವಾರ ನಡೆದ ಹೀಟ್ ರೇಸ್‌ನಲ್ಲಿ ಒಟ್ಟಾರೆ 10ನೇ ಸ್ಥಾನ ಪಡೆದ ತಂಡಕ್ಕೆ ಅಂತಿಮ ಸುತ್ತಿಗೇರಲು ಸಾಧ್ಯವಾಗಲಿಲ್ಲ.

ಮೊಹಮ್ಮದ್ ಅನಾಸ್ ಯಾಹಿಯಾ, ಮೊಹಮ್ಮದ್ ಅಜ್ಮಲ್, ಅಮೊಜ್ ಜೇಕಬ್ ಮತ್ತು ರಾಜೇಶ್ ರಮೇಶ್ ಅವರನ್ನೊಳಗೊಂಡ ತಂಡವು ಈ ಋತುವಿನ ಶ್ರೇಷ್ಠ 3 ನಿಮಿಷ 0.58 ಸೆಕೆಂಡುಗಳಲ್ಲಿ ಗುರಿ ತಲುಪಿತು. ಆದರೆ ಇದರಿಂದ ಹೀಟ್ 2ರಲ್ಲಿ ನಾಲ್ಕನೇ ಸ್ಥಾನ ಮತ್ತು ಒಟ್ಟಾರೆ 16 ತಂಡಗಳಲ್ಲಿ 10ನೇ ಸ್ಥಾನ ಪಡೆಯಲು ಮಾತ್ರ ಸಾಧ್ಯವಾಯಿತು. ಎರಡೂ ಹೀಟ್‌ಗಳಲ್ಲಿ ಅಗ್ರಸ್ಥಾನ ಪಡೆದ ಮೂರು ತಂಡಗಳ ಜೊತೆಗೆ ವೇಗವಾಗಿ ಗುರಿ ತಲುಪಿದ ಮತ್ತೆರಡು ತಂಡಗಳು ಫೈನಲ್‌ಗೆ ಅರ್ಹತೆ ಪಡೆಯುತ್ತವೆ.

ಹೀಟ್ ಎರಡರಲ್ಲಿ ಬೋಟ್ಸ್‌ವಾನಾ, ಬ್ರಿಟನ್, ಅಮೆರಿಕ ತಂಡಗಳು ಅಗ್ರಸ್ಥಾನ ಪಡೆದವು. ಜಪಾನ್ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಬುಡಾಪೆಸ್ಟ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 2 ನಿಮಿಷ 59.05 ಸೆಕೆಂಡುಗಳಲ್ಲಿ ಗುರಿ ತಲುಪಿದ್ದ ಭಾರತ ತಂಡ ಏಷ್ಯನ್ ದಾಖಲೆಯನ್ನು ಹೊಂದಿದೆ. ಈ ಕೂಟದಲ್ಲಿ ಭಾರತ ತಂಡ ಅಸಾಧಾರಣ ದಾಖಲೆ ಹೊಂದಿರುವ ಅಮೆರಿಕದ ರಿಲೆ ತಂಡದೊಂದಿಗೆ ಪೈಪೋಟಿ ನಡೆಸಿತ್ತು.

ಪುರುಷರ ತಂಡ ಅಂತಿಮ ಸುತ್ತಿಗೆ ಅರ್ಹತೆ ಪಡೆಯುತ್ತದೆ ಎಂದು ಭಾರತೀಯ ಅಥ್ಲೆಟಿಕ್ಸ್ ಫೆಡರೇಷನ್ ಹೆಚ್ಚಿನ ನಿರೀಕ್ಷೆ ಹೊಂದಿತ್ತು. ಆದರೆ ಅಂತಿಮವಾಗಿ ಅದು ಸಾಧ್ಯವಾಗಲಿಲ್ಲ.



ಹೀಟ್ ರೇಸ್‌ನಲ್ಲಿ ಗುರಿಯತ್ತ ಮುನ್ನುಗ್ಗುತ್ತಿರುವ ಜ್ಯೋತಿಕಾ ದಂಡಿ –ಪಿಟಿಐ ಚಿತ್ರ

ಮಹಿಳೆಯರ 4x400 ಮೀ ರಿಲೆ ತಂಡ ಕೂಡಾ ಅಂತಿಮ ಸುತ್ತಿಗೆ ಪ್ರವೇಶಿಸುವಲ್ಲಿ ವಿಫಲವಾಯಿತು. ಮೊದಲ ಸುತ್ತು ಹೀಟ್ಸ್‌ನಲ್ಲಿ ಸ್ಪರ್ಧಿಸಿದ್ದ ತಂಡ ಒಟ್ಟಾರೆ 16 ತಂಡಗಳ ಪೈಕಿ 15ನೇ ಸ್ಥಾನ ಪಡೆಯಿತು. ವಿದ್ಯಾ ರಾಮರಾಜ್, ಜ್ಯೋತಿಕಾ ಶ್ರೀದಂಡಿ, ಎಂ.ಆರ್.ಪೂವಮ್ಮ ಮತ್ತು ಶುಭಾ ವೆಂಕಟೇಶನ್ ಅವರನ್ನೊಳಗೊಂಡ ತಂಡ ಹೀಟ್‌ನಲ್ಲಿ 3 ನಿಮಿಷ 32.51 ಸೆಕೆಂಡುಗಳಲ್ಲಿ ಗುರಿ ತಲುಪಿ ಕೊನೆಯ 8ನೇ ಸ್ಥಾನ ಪಡೆಯಿತು.

ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ 110 ಮೀಟರ್ ಹರ್ಡಲ್ಸ್ ಫೈನಲ್‌ನಲ್ಲಿ ಚಿನ್ನದ ಪದಕ ಗೆದ್ದ ಅಮೆರಿಕದ ಗ್ರಾಂಟ್ ಹಾಲೋವೆ (ಮಧ್ಯ). ಜಮೈಕಾದ ಒರ್ಲ್ಯಾಂಡೊ ಬೆನೆಟ್ ಮತ್ತು ರಶೀದ್ ಬ್ರಾಡ್‌ಬೆಲ್ ಚಿತ್ರದಲ್ಲಿದ್ದಾರೆ –ಎಎಫ್‌ಪಿ ಚಿತ್ರ

ಈಜು: ರಾಜ್ಯ ರಿಲೆ ತಂಡದಿಂದ ಕೂಟ ದಾಖಲೆ

ಬೆಂಗಳೂರು: ಕರ್ನಾಟಕದ ರಿಷಿತ್ ರಂಗನ್, ಸಮರ್ಥ್ ಗೌಡ ಬಿ.ಎಸ್., ಶರಣ್ ಎಸ್., ಅಕ್ಷಜ್ ಠಾಕುರಿಯಾ ಅವರನ್ನೊಳಗೊಂಡ ತಂಡ ಒಡಿಶಾದ ಭುವನೇಶ್ವರದಲ್ಲಿ ನಡೆಯುತ್ತಿರುವ 40ನೇ ಸಬ್ ಜೂನಿಯರ್ ಮತ್ತು 50ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ರಿಲೇ ಸ್ಪರ್ಧೆಯಲ್ಲಿ ಕೂಟ ದಾಖಲೆ ನಿರ್ಮಿಸಿದೆ.

ಬಾಲಕರ ಗುಂಪು-2ರ 4x100 ಮೀ.ಫ್ರೀಸ್ಟೈಲ್ ರಿಲೆ ಸ್ಪರ್ಧೆಯಲ್ಲಿ 3 ನಿಮಿಷ 45.86 ಸೆಕೆಂಡುಗಳಲ್ಲಿ ಗುರಿ ತಲುಪಿದ ಕರ್ನಾಟಕ ತಂಡ ಹೊಸ ದಾಖಲೆ ಬರೆಯುವ ಮೂಲಕ ಚಿನ್ನದ ಪದಕ ತಮ್ಮದಾಗಿಸಿಕೊಂಡಿತು.

ಕರ್ನಾಟಕದ ಸ್ಪರ್ಧಿಗಳ ಫಲಿತಾಂಶಗಳು: ಬಾಲಕರ ಗುಂಪು-1: 200 ಮೀ ಬಟರ್ ಫ್ಲೈ: ದರ್ಶನ್ ಎಸ್.(2ನಿ 05.89ಸೆ)-1, ನಿರಂಜನ್ ಕಾರ್ತಿಕ್ ಭೀಮರಾಜ್ (2ನಿ 09.06ಸೆ)-3. 50 ಮೀ.ಫ್ರೀಸ್ಟೈಲ್: ಚಿಂತನ್ ಎಸ್.ಶೆಟ್ಟಿ (23.91ಸೆ)-1. ಗುಂಪು-2: 200 ಮೀ.ಬಟರ್‌ಫ್ಲೈ: ಅಕ್ಷಜ್ ಠಾಕೂರಿಯಾ (2ನಿ 12.31ಸೆ)-1, 50 ಮೀ.ಫ್ರೀಸ್ಟೈಲ್: ವೇದಾಂತ್ ರಾಕೇಶ್ ಮೆಹ್ರಾ (25.88ಸೆ)-2. 1500 ಮೀ. ಫ್ರೀಸ್ಟೈಲ್: ಶರಣ್ ಎಸ್. (16ನಿ 48.40ಸೆ)-1, ಅಕ್ಷಜ್ ಪಿರಿಗಿ (17ನಿ 25.00ಸೆ)-3. ಗುಂಪು-3: 100 ಮೀ.ಬಟರ್‌ಫ್ಲೈ: ಅಮಿತ್ ಎಚ್. ಪವನ್ (1ನಿ.10.29ಸೆ)-1.

ಗುಂಪು-1: ಬಾಲಕಿಯರ 400 ಮೀ. ಫ್ರೀಸ್ಟೈಲ್: ಶಿರಿನ್ (4ನಿ.29.07ಸೆ)-1, ಶ್ರೀ ಚರಣಿ ತುಮು (4ನಿ 35.62ಸೆ)-2. 200 ಮೀ. ಫ್ರೀಸ್ಟೈಲ್: ಹಷಿಕಾ ರಾಮಚಂದ್ರ (2ನಿ.23.68ಸೆ)-1, ಸುಹಾಸಿನಿ ಘೋಷ್ (2ನಿ 24.45ಸೆ)-2.

ಗುಂಪು-2: 400 ಮೀ. ಫ್ರೀಸ್ಟೈಲ್: ಧೀನಿಧಿ ದೇಸಿಂಗು (4ನಿ.32.76ಸೆ)-1, ನೈಶಾ (4ನಿ 34.31ಸೆ)-3. ಗುಂಪು-3: 100 ಮೀ.ಬಟರ್‌ಫ್ಲೈ: ಶ್ರಿತಿ ದಿವಾಕರ್ ಸುವರ್ಣ (1ನಿ.12.05ಸೆ)-1. 50 ಮೀ ಫ್ರೀಸ್ಟೈಲ್: ಶ್ರಿತಿ ದಿವಾಕರ್ ಸುವರ್ಣ (31.08ಸೆ)-2, ಶ್ರೇಯಾ ಸುರೇಶ್ ಪೂಜಾರ್ (31.28ಸೆ)-3.

ಕೂಟ ದಾಖಲೆ ನಿರ್ಮಿಸಿದ ಕರ್ನಾಟಕದ (ಎಡದಿಂದ) ಸಮರ್ಥ್ ಗೌಡ, ಶರಣ್ ಎಸ್, ಅಕ್ಷಜ್ ಠಾಕೂರಿಯಾ ಮತ್ತು ರಿಷಿತ್ ರಂಗನ್

ಫುಟ್‌ಬಾಲ್: ಕರ್ನಾಟಕ ತಂಡ ರನ್ನರ್ ಅಪ್

ಬೆಂಗಳೂರು: ಕರ್ನಾಟಕ ತಂಡವು ಜೂನಿಯರ್ ಬಾಲಕಿಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ (ಎರಡನೇ ಶ್ರೇಣಿ) ಟೂರ್ನಿಯಲ್ಲಿ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಬೆಳಗಾವಿಯ ಸ್ಪೋರ್ಟಿಂಗ್ ಪ್ಲಾನೆಟ್ ಲವ್‌ಡೇಲ್ ಶಾಲೆಯ ಮೈದಾನದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ 1-3ರ ಅಂತರದಲ್ಲಿ ರಾಜಸ್ತಾನ ತಂಡದ ವಿರುದ್ಧ ಸೋಲನುಭವಿಸಿತು. ರಾಜಸ್ತಾನದ ಪರ ಮಂಜು ಕನ್ವರ್, ಸಂಜು ಕನ್ವರ್ ಗೋಲು ದಾಖಲಿಸಿದರು. ರಾಜ್ಯದ ಪರ ರುತುಶ್ರೀ ನಂದನ್ ಏಕೈಕ ಗೋಲು ದಾಖಲಿಸಿದರು.

ಪುಣೆ ರೇಸ್

ರಾಯಲ್ ಮೈಸೂರ್ ಗೆಲ್ಲುವ ನಿರೀಕ್ಷೆ

ಯೊಹನ್ ಜೆಡ್ ಪೂನಾವಾಲ ಟರ್ಫ್ ಕ್ಲಬ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾಯಲ್ ಮೈಸೂರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪ್ರೀಸಿಯೊಸೊ 8, ಪ್ರಿನ್ಸ್ ಇಗೋರ್ 6, ಅಡೊನಿಸ್ 1
2ನೇ ರೇಸ್: ವಿನ್ಸೆಂಟ್ ವ್ಯಾನ್ ಗೋಗ್ 6, ಸೀ ದಿ ಸನ್ 2, ಕಿಂಗ್ ಲೂಯಿಸ್ 1
3ನೇ ರೇಸ್: ಸ್ನೋ ಫಾಲ್ 2, ಸನ್ ಆಫ್ ಎ ಗನ್ 1, ಕೆಲ್ಲಿನಿ 4
4ನೇ ರೇಸ್: ಜುಕ್ಕಾರೊ 2, ಮದ್ರಾಸ್ ಚೆಕ್ 3, ಯುಲ್‌ಟೈಡ್ 10
5ನೇ ರೇಸ್: ಅಪ್ಲಾಸ್ 1, ರೆಜಿನ ಮೆಮೊರಬಿಲ್ಲೀಸ್ 7, ಮಿಸ್ಟೀರಿಯಸ್ ಸ್ಟ್ರೇಂಜರ್ 5
6ನೇ ರೇಸ್: ರಾಯಲ್ ಮೈಸೂರ್ 9, ನಾಟಿ ಚಾರ್ಮರ್ 1, ಸೀರಿಯಸ್ ಕರೇಜಿಯಸ್ 5
7ನೇ ರೇಸ್: ಫೈಟಾನ್ 1, ಕ್ರಿಸ್ಟೊಫಾನಿ 6, ಆರ್ಟ್ ಕಲೆಕ್ಟರ್ 3
8ನೇ ರೇಸ್: ಕನ್ಯಾ ರಾಶಿ 6, ಗ್ಯಾಲಪಿಂಗ್ ಅಹೆಡ್ 4, ಶೋ ಮ್ಯಾನ್ 10

ಉತ್ತಮ ಬೆಟ್: ಫೈಟಾನ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	5,6,7